ಆದಿ ಬುಡ ಮೂಲ ಸಮುದಾಯ

ಕೊರಗರು

ಸಮಗ್ರ ಚಿತ್ರಣ



ಪಾಂಗಾಳ ಬಾಬು ಕೊರಗ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು

66.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಗ್ರಂಥಾಲಯ
ಮಂಗಳೂರು - 575 006

ಆದಿ ಬುಡ ಮೂಲ ಸಮುದಾಯ

ಕೊರಗರು

(ಸಮಗ್ರ ಚಿತ್ರಣ)

K
301.4
KOR

ಪಾಂಗಾಳ ಬಾಬು ಕೊರಗ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್
ಮಂಗಳೂರು – 575 006

AADHI BUDA MOOLA SAMUDAAYA KORAGARU

(Samagra Chithrana)

(Koraga's:- Comprehensive Image)

By

Pangala Babu Koraga

S/o. Kundu Koraga

"GURUMERU"

Innaa Village and Post – 576 146

Karkala Taluke, UDUPI

Phone: 9481750407

Publisher

Chandrahasa Rai B.

Registrar, Karnataka Tulu Sahitya Academy

Published By

Karnataka Tulu Sahitya Academy

Urwa Store, Mangaluru – 575 006

Phone: 0824 2459389

Email: tulu.academy@yahoo.co.in

© Karnataka Tulu Sahitya Academy

First Impression: 2019

Size : Demy 1/8

Paper used : 70 GSM

No. of copies : 300

Pages : 140

Price : 175

Cover Design : **Kallur Nagesh**

Designed & printed at

Aakrithi Prints

Light House Hill Road, Mangaluru - 1

Phone : 0824 2443002

ಅಧ್ಯಕ್ಷೆರೆನ ಪಾತೆರ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ತುಳುನಾಡಿನ ಸಮುದಾಯವೊಂದರ ವಿವರಗಳನ್ನೊಳಗೊಂಡ ಪುಸ್ತಕವನ್ನು ಹೊರತರಲು ಹೆಮ್ಮೆ ಪಡುತ್ತೇವೆ. ಈ ಕೃತಿಯನ್ನು ರಚಿಸಿ ಅಕಾಡೆಮಿಯಲ್ಲಿ ಪ್ರಕಟಿಸಲು ನೀಡಿದ ಲೇಖಕರಿಗೆ ಕೃತಜ್ಞತೆಗಳು.

ಇತ್ತೀಚೆಗಿನ ದಿನಗಳಲ್ಲಿ ಸಮುದಾಯಗಳ ಬಗ್ಗೆ ಸಂಶೋಧನೆಗಳು ಬರವಣಿಗೆಗಳು ನಿರಂತರವಾಗಿ ನಡೆಯುತ್ತದೆ. ತುಳುನಾಡಿನ ಸಮುದಾಯಗಳ ಹಲವಾರು ದಾಖಲೆಗಳು ವಿದೇಶಿ ಬರವಣಿಕೆಗಳಲ್ಲಿ ಸಿಗುತ್ತವೆ. ಅಲ್ಲದೇ ದೇಶೀಯರ ಹಲವಾರು ಸಂಶೋಧನೆಗಳು, ಕೃತಿಗಳು ಪ್ರಕಟಗೊಂಡಿದೆ. 'ಆದಿ ಬುಡ ಮೂಲ ಸಮುದಾಯ ಕೊರಗರು' (ಸಮಗ್ರ ಚಿತ್ರಣ) ಎಂಬ ಕೃತಿಯನ್ನು ಪಾಂಗಾಳ ಬಾಬು ಕೊರಗರವರು ದಾಖಲಿಸುವುದರ ಮೂಲಕ ಒಂದು ಹೊಸ ಆಯಾಮವೇ ಇಲ್ಲಿ ಸೃಷ್ಟಿಯಾಗಿದೆ ಎನ್ನಬಹುದು. ಇವರು ಇದೇ ಸಮುದಾಯದವರಾಗಿದ್ದು ತುಳುನಾಡಿನಾದ್ಯಂತ ತಮ್ಮ ಸಂಘಟನೆಗಳ ಮೂಲಕ, ತಮ್ಮ ಸಂಸ್ಕೃತಿಗಳ ಮೂಲಕ ಒಡನಾಟ ಇಟ್ಟುಕೊಂಡವರಾಗಿದ್ದವರು. ಕೊರಗ ಸಮುದಾಯದ ಬಗ್ಗೆ ತಾನು ಹಿರಿಯರಿಂದ ಕೇಳಿ, ತಾನು ಸ್ವತಃ ಅನುಭವಿಸಿದ ಚಿತ್ರಣಗಳೊಂದಿಗೆ ಮಾತ್ರವಲ್ಲದೆ ಪ್ರಕಟವಾಗಿರುವ ಹಲವಾರು ಆಕರಗಳನ್ನು ಪರಿಶೀಲಿಸಿ ತನ್ನ ಸಮುದಾಯದ ಒಂದು ವಿಭಿನ್ನ ಚಿತ್ರಣವನ್ನು ತೆರೆದಿಟ್ಟು ಸಮುದಾಯಕ್ಕೆ ಸಂಶೋಧಕರಿಗೆ ಒಂದು ಹೊಸಚಿತ್ರಣವನ್ನು ದಾಖಲಿಸಿದ್ದಾರೆ.

ಚರಿತ್ರೆಯಲ್ಲಿ ಸಮುದಾಯಗಳ ಪಾತ್ರ ಬಹು ಪ್ರಾಮುಖ್ಯವಾದದ್ದು. ಸಮುದಾಯಗಳ ಬದುಕು, ಬವಣೆ, ಸಂಪ್ರದಾಯಗಳ ಚಿತ್ರಣಗಳನ್ನು ದಾಖಲಿಸುವುದರಿಂದ ಚರಿತ್ರೆಯನ್ನು ಕಟ್ಟಬಹುದು. ಹಾಗೆಯೇ ಒಂದು ಸಮುದಾಯದ ಬೆಳವಣಿಗೆಗೆ ಎಲ್ಲಿ ಅಡ್ಡಿಯಾಗಿದೆ ಎನ್ನುವ ಕಾಳಜಿಯೂ ಬೆಳಕಿಗೆ ಬರುತ್ತವೆ. ಈ ನಿಟ್ಟಿನಲ್ಲಿ ಸಮುದಾಯಗಳ ಬಗ್ಗೆ ನಿರಂತರವಾಗಿ ಸಂಶೋಧನೆ ನಡೆಯಬೇಕಾಗಿದೆ. ತನ್ನ ಸಮುದಾಯದ ಒಂದು ಚಿತ್ರಣವನ್ನು ಕೃತಿಗಿಳಿಸಿ ಪ್ರಕಟಿಸಲು ನೀಡಿದ ಪಾಂಗಾಳ ಬಾಬು ಕೊರಗರವರಿಗೆ ಅಕಾಡೆಮಿಯ ಪರವಾಗಿ ಧನ್ಯವಾದಗಳು. ಇವರಿಂದ ಇಂತಹ ಇನ್ನಷ್ಟು ಚಿತ್ರಣಗಳು ದಾಖಲೆಗೊಂಡು ಬೆಳಕಿಗೆ ಬರಲಿ ಎಂಬುದೇ ನಮ್ಮ ಹಾರೈಕೆ.

6-6-2019

ಎ.ಸಿ. ಭಂಡಾರಿ

ಅಧ್ಯಕ್ಷರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮನದಾಳದ ಮಾತು

ಆದಿಮೂಲ ಬುಡಕಟ್ಟು ಕೊರಗರ ಸಮುದಾಯದ ಬಗ್ಗೆ ಕಳೆದೆರಡು ಶತಮಾನ ಗಳಿಂದಲೂ ವಿದ್ವಾಂಸರಲ್ಲಿ ಒಂದು ರೀತಿಯ ಕುತೂಹಲ ಇದ್ದೇ ಇದೆ. ಆಯಾ ಕಾಲಕ್ಕೆ ಸರಿಹೊಂದುವಂತೆ ಮಾಡಿಕೊಂಡು ಹಲವಾರು ಚಿಂತಕರು, ತಮ್ಮ ತಮ್ಮ ಅಧ್ಯಯನಗಳಲ್ಲಿ ಈ ಸಮುದಾಯದ ಕುರಿತಾಗಿ ಬೆಳಕು ಚೆಲ್ಲುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದಾರೆ. ಅವರಲ್ಲಿ ಕೆಲವು ವಿದ್ವಾಂಸರನ್ನು ಸ್ಮರಿಸಿಕೊಳ್ಳುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಅಂದಿನ ದಿನಗಳಲ್ಲಿ ಆ ಪ್ರಾಮಾಣಿಕತೆ ಇಲ್ಲದಿರುತ್ತಿದ್ದರೆ ಯಾವುದೇ ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸುವುದು ತ್ರಾಸದಾಯಕವೇ ಆಗಿರುತ್ತಿತ್ತು. ಸಂಶೋಧಕ ಅಯ್ಯಪ್ಪನ್, ವಿದೇಶಿ ಬರಹಗಾರರಾದ ಬುಕಾನನ್, ಎಚ್.ಸಿ. ಸ್ಟುವರ್ಟ್, ಕ್ಯಾಂಬೆಲ್, ಶೆರ್ರಿಂಗ್, ವಾಲ್‌ಹೌಸ್ ಮೊದಲಾದ ಗಣ್ಯರು ಕೊರಗ ಸಮುದಾಯದ ಬಗ್ಗೆ ಒಂದಷ್ಟು ಮಾಹಿತಿ ಗಳನ್ನು ಕಲೆ ಹಾಕಿದ್ದಾರೆ. 'ಲ್ಯಾಂಡ್ ಕಾಲ್ಡ್ ಸೌತ್ ಕೆನರಾ' ಎಂಬ ಪುಸ್ತಕ ಬರೆದ ವಿಲಿಯಂ ಪಾಯಸ್ ಮತ್ತು ವಿನ್ಸೆಂಟ್ ಮೆಂಡೊನ್ಸ, ಕೊರಗರು ಪಾರಿವಾಳದಂತೆ ವಿಧೇಯರೂ, ಕುರಿಯಂತೆ ಶಾಂತಗುಣದವರೂ ಆಗಿರುತ್ತಾರೆ ಎಂದಿರುವ, ಉಳ್ಳಾಲ ರಾಘವೇಂದ್ರ ರಾವ್, ಜಾನಪದ ವಿದ್ವಾಂಸರಾದ ಪ್ರೊಫೆಸರ್ ಅಮೃತ ಸೋಮೇಶ್ವರ ಅವರಲ್ಲದೆ ವೆಂಕಟರಾಮನ್, ಡಾ। ಒಡೆಯರ್ ಡಿ. ಹೆಗ್ಗಡೆ, ಡಾ। ಅರವಿಂದ ಮಾಲಗತ್ತಿ ಮೊದಲಾದವರ ಪ್ರಯತ್ನಗಳೂ ಶ್ಲಾಘನೀಯವಾಗಿದೆ. ಡಾ। ಎಂ. ವೀರಪ್ಪ ಮೊಯ್ಲಿ (ಕೊಟ್ಟ ಕಾದಂಬರಿ), ಡಾ। ನಾಗವೇಣಿ ಮೊದಲಾದ ಸಾಹಿತಿಗಳು ಕೊರಗರ ಬಗ್ಗೆ ಮಾಹಿತಿಗಳನ್ನು ಕೆದಕಿದ್ದಾರೆ. ಭಾಷಾ ವಿಜ್ಞಾನಿಗಳಾದ ಡಾ। ಡಿ.ಎನ್. ಶಂಕರ ಭಟ್, ರಾಮಕೃಷ್ಣ ಶೆಟ್ಟಿ. ಸರಕಾರೇತರ ಸಂಸ್ಥೆಗಳ ಡಾ। ಲಾರೆನ್ಸ್ ಡಿ'ಸೋಜ (ಯುನೆಸ್ಕೋ ಲರ್ನಿಂಗ್ ಸೆಂಟರ್), ಗುಣಪಾಲ ಶೆಟ್ಟಿ(ಸಮಗ್ರ ಗ್ರಾಮೀಣ ಆಶ್ರಮ) ಹಾಗೂ ಇನ್ನೂ ಹಲವು ಮಂದಿ ಈ ಸಮುದಾಯದ ಬಗ್ಗೆ ಆಸಕ್ತರಾಗಿ ಉಪಯುಕ್ತ ಮಾಹಿತಿಗಳನ್ನು ದಾಖಲಿಸಿದ್ದಾರೆ. ಒಂದು ಹಂತಕ್ಕೆ ಇವರೆಲ್ಲರ ಆಸಕ್ತಿ ಮತ್ತು ಶ್ರಮವು ಸಾರ್ಥಕ್ಯವನ್ನು ಪಡೆಯುತ್ತದೆ. ಆದರೆ ಅಧ್ಯಯನ ಸಂದರ್ಭದಲ್ಲಿ ಈ ವಿದ್ವಾಂಸರ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಕೊರಗರು ಎಡವಿದ್ದರೋ ಅಥವಾ ಕೊರಗರು ನೀಡಿದ ಮಾಹಿತಿ ಗಳನ್ನು ಅರ್ಥೈಸುವುದರಲ್ಲಿ ವಿದ್ವಾಂಸರು ಎಡವಿದ್ದರೋ ಒಟ್ಟಿನಲ್ಲಿ ಸಂಗ್ರಹಿಸಿ ದಾಖಲಿಸಿದ ಮಾಹಿತಿಗಳಲ್ಲಿ ಹಲವಾರು ಅಪರಾತಪರಾಗಳಿರುವುದಂತೂ ನಿಜ! ಮುಖ್ಯವಾಗಿ ಕೊರಗರ ಒಳಪಂಗಡ, ಬಳಿ ಪದ್ಧತಿ, ಭಾಷೆ ಹಾಗೂ ಸಂಪ್ರದಾಯ ಆಚರಣೆ ವಿವರಣೆಗಳಲ್ಲಿ

ಬಹಳಷ್ಟು ಗೊಂದಲಗಳು, ತಪ್ಪು ಮಾಹಿತಿಗಳು ಕಂಡು ಬರುತ್ತವೆ. ಸ್ವತಃ ಕೊರಗ ಸಮುದಾಯದ ವ್ಯಕ್ತಿಯಾಗಿ, ಅದರ 'ಒಳಹೊರ'ಗಳನ್ನು ಸ್ವಲ್ಪಮಟ್ಟಿಗೆ ಬಲ್ಲವನಾಗಿ ಸದ್ರಿ ತಪ್ಪು ಮಾಹಿತಿಗಳನ್ನು ಒಪ್ಪಿಕೊಳ್ಳುವುದು ನನಗೆ ಮುಜುಗರವೆನಿಸುತ್ತದೆ. ಆ ನಿಟ್ಟಿನಲ್ಲಿ ನೈಜಸಂಗತಿಯನ್ನು ಈಗಲಾದರೂ ತೆರೆದಿಡಬೇಕೆಂಬ ಹಂಬಲ ನನ್ನದು. ಅದಕ್ಕೀಗ ಕಾಲ ಪಕ್ವವಾಗಿದೆ ಎಂದು ಭಾವಿಸುತ್ತೇನೆ. ಹಿರಿಯರ ಮಾರ್ಗದರ್ಶನ ಪಡೆದು ಈ ಕಾರ್ಯಕ್ಕೆ ಕೈ ಹಾಕಿದ್ದೇನೆ. ಸಮುದಾಯದ ಇನ್ನೊಂದಷ್ಟು ವಿಚಾರಗಳ ಬಗ್ಗೆಯೂ ಬರೆಯಬೇಕೆಂದುಕೊಂಡು ಇತಿಹಾಸ, ಅಜಲು ಪದ್ಧತಿ, ನ್ಯಾಯಪದ್ಧತಿ, ಸಂಸ್ಕೃತಿ, ಸಂಪ್ರದಾಯ, ಧಾರ್ಮಿಕ ವಿಚಾರ, ಆಟೋಟಗಳು, ಮನೋರಂಜನೆಗಳು, ಆಹಾರ, ಔಷಧೀಯ ಜ್ಞಾನ ಇತ್ಯಾದಿ ವಿಚಾರಗಳನ್ನೂ ಸೇರಿಸಿಕೊಂಡಿರುತ್ತೇನೆ. ಒಟ್ಟಾರೆಯಾಗಿ ನನ್ನ ಸೀಮಿತ ತಿಳುವಳಿಕೆಯಲ್ಲಿ ಈ ಜನಾಂಗದ ಸಮಗ್ರ ಚಿತ್ರಣವನ್ನು ತೆರೆದಿಡುವ ಕಿರು ಪ್ರಯತ್ನ ಇದಾಗಿದೆ.

ನನ್ನ ಈ ಪ್ರಯತ್ನದಲ್ಲಿ ನನಗೆ ಹಲವು ಮಂದಿ ಹಿತೈಷಿಗಳು ಸಲಹೆ ಸಹಕಾರಗಳನ್ನು ನೀಡಿದ್ದಾರೆ. ಹಿರಿಯರಾದ ಪಳ್ಳಿ ಗೋಕುಲ್‌ದಾಸ್, ಕೊರಗ ಸಂಘದ ಎಂ.ಸುಂದರ ಕಡಂದಲೆ, ಸ್ನೇಹಿತ ಮಂಚಕಲ್ಲು ರಮೇಶ, ಬೊಗ್ರ ಕೊಕ್ಕರ್ಣೆ, ಸಾಹಿತಿ ಹಾಗೂ ಅಧ್ಯಾಪಕ ಬೆಳ್ಮಣ್ಣು ಜನಾರ್ದನ ಭಟ್, ಸಹೋದರಿ ಗೌರಿ ಕೆಂಜೂರುರವರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಸಹಕರಿಸಿದ್ದಾರೆ. ಸಮುದಾಯದ ನೂರಾರು ಮಂದಿ ಹಿರಿಯರು ಮಾಹಿತಿಗಳನ್ನು ಒದಗಿಸಿದ್ದಾರೆ. ಮೇಲೆ ಹೆಸರಿಸಿದ ಎಲ್ಲಾ ಹಿತೈಷಿ ಬಂಧುಗಳಿಗೆ ನಾನು ಮನಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎ.ಸಿ. ಭಂಡಾರಿಯವರಿಗೆ ಹಾಗೂ ರಿಜಿಸ್ಟ್ರರ್ ಚಂದ್ರಹಾಸ ರೈ ಬಿ.ಯವರಿಗೆ, ಬೆನ್ನುಡಿ ಬರೆದು ತಿದ್ದಲು ಸಹಾಯ ಮಾಡಿದ ಬೆನೆಟ್ ಅಮ್ಮನ್ನರಿಗೆ, ಮುಖಪುಟ ವಿನ್ಯಾಸ ಮಾಡಿದ ಕಲ್ಲೂರು ನಾಗೇಶರವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಆಕೃತಿ ಪ್ರಿಂಟ್ಸ್‌ನವರಿಗೂ ವಂದನೆಗಳು.

ಮುಂದಕ್ಕೆ ಈ ಪುಸ್ತಕವನ್ನು ಓದಿ, ವಿಮರ್ಶಿಸಿ, ಅನಿಸಿಕೆ-ಅಭಿಪ್ರಾಯಗಳನ್ನು ಹೇಳಲಿರುವ ಸಹೃದಯಿ ಓದುಗರಿಗೆಲ್ಲರಿಗೂ ಮುಂಗಡವಾಗಿ ಧನ್ಯವಾದಗಳು.

ಪುಸ್ತಕವನ್ನು ವಿಮರ್ಶಿಸಿ ಇನ್ನೂ ಒಂದು ಹೆಜ್ಜೆ ಮುಂದೆ ಇಡಲು ಪ್ರಯತ್ನಿಸುವ ಚಿಂತನಾಶೀಲರನ್ನು ಸಂಭ್ರಮದಿಂದ ಸ್ವಾಗತಿಸುತ್ತಾ, ಅವರಿಗೆ ಶುಭಾಶಯಗಳನ್ನು ಕೋರುತ್ತೇನೆ.

10-6-2018

ಪಾಂಗಾಳ ಬಾಬು ಕೊರಗ

ಪುಟನೋಟ

1. ‘ಕೊರಗ’ ಪದೋತ್ಪತ್ತಿ ಹಾಗೂ ಅರ್ಥ 9
2. ಕೊರಗರು ಯಾರು? 11
3. ಕೊರಗ ಸಮುದಾಯದಲ್ಲಿ ಒಳ ಪಂಗಡಗಳು 19
4. ‘ಬರಿ’ ಅಥವಾ ‘ಬಳಿ’ ಪದ್ಧತಿ 21
5. ಬಳಿ ಮೂಲಗಳು 24
6. ಇತಿಹಾಸದಲ್ಲಿ ಕೊರಗರು 26
7. ಕೊರಗರ ಅಜಲು ಪದ್ಧತಿ 28
8. ಕೊರಗರ ಕುಟುಂಬ ವ್ಯವಸ್ಥೆ 32
9. ಸಂಸ್ಕೃತಿ ಸಂಪ್ರದಾಯಗಳು (ಕಟ್ಟುಕಟ್ಟಲೆ) 34
10. ಆರಾಧನೆ ಮತ್ತು ನಂಬಿಕೆಗಳು 54
11. ಕೊರಗ ತನಿಯ – ಬದುಕು ಬವಣೆ 57
12. ಗುರಿಕಾರ ಮತ್ತು ನ್ಯಾಯ ಪದ್ಧತಿ 69
13. ಕೊರಗರ ಧರ್ಮ 73
14. ಕೊರಗರ ಭಾಷೆ 74
15. ಕುಲಕಸುಬು 80
16. ಆಹಾರ ಪದ್ಧತಿ 82
17. ಕೊರಗರ ವೈದ್ಯ ಪದ್ಧತಿ 84
18. ಸಾಂಸ್ಕೃತಿಕ ಕಲೆಗಳು / ಮನೋರಂಜನೆಗಳು 90
19. ಕೊರಗರ ಡೋಲು – ಹಿನ್ನೆಲೆ ಮತ್ತು ತಯಾರಿ 96
20. ಪ್ರಸ್ತುತ ಶಿಕ್ಷಣ ಮತ್ತು ಆರೋಗ್ಯ 107
21. ಬುಡಕಟ್ಟು ಅನನ್ಯತೆ / ಚಹರೆಗಳು 110
22. ಮತಾಂತರ 111
23. ವಿಧಿ ನಿಷೇಧಗಳು 113
24. ಸಂಘಟನೆ ಮತ್ತು ಚಳುವಳಿಗಳು 115
25. ಅಸಮಾದಾನದ ಅಲೆಗಳು 129
26. ಮುಂದೆ ಏನು? ಕೆಲವು ಸಲಹೆಗಳು 131
27. ಸಮುದಾಯದ ಸಂಘಟನೆಯ ಪ್ರಸಕ್ತ ಮುಂಚೂಣಿ ನಾಯಕರು 135
28. ಭಾರತದಲ್ಲಿರುವ ಪ್ರಿಮಿಟಿವ್ ಟ್ರೈಬ್ಸ್ ಗ್ರೂಪ್ 137

'ಕೊರಗ' ಪದೋತ್ಪತ್ತಿ ಹಾಗೂ ಅರ್ಥ

ಕೊರಗ ಸಮುದಾಯದ ಹಿರಿಯ ಚಿಂತಕ, ನಾಯಕ ಬಾಲ್‌ರಾಜ್ ಕೋಡಿಕಲ್‌ರವರ ಪ್ರಕಾರ 'ಕೊರ್ರು' ಎಂಬ ಪದವು 'ಕುರೆ' ಎಂಬ ಮೂಲ ಪದದಿಂದ ಉತ್ಪತ್ತಿಯಾಗಿರುತ್ತದೆ. 'ಕುರೆ' ಎಂದರೆ ಕೊರಗ ಭಾಷೆಯಲ್ಲಿ 'ಬುಟ್ಟಿ' ಎಂದರ್ಥ. ಆದುದರಿಂದ ಕುರೆ(ಬುಟ್ಟಿ) ಮಾಡುವವರು ಕೊರ್ರು ಆದರು. ಕ್ರಮೇಣ ಕೊರ್ರುಗ – ಕೊರಗ ಆಗಿ ಪರಿವರ್ತನೆಯಾಗಿದೆ.

ಇದೇ ಅಭಿಪ್ರಾಯವನ್ನು ಸಮಗ್ರ ಗ್ರಾಮೀಣ ಆಶ್ರಮದ ಹಿರಿಯ ಕಾರ್ಯಕರ್ತರಾದ ಗುಣಪಾಲ ಶೆಟ್ಟಿಯವರು ತಮ್ಮ 'ಮೌನ ಮಾತಾದಾಗ' ಕೃತಿಯಲ್ಲಿ ವಿಶ್ಲೇಷಿಸಿ ದಾಖಲಿಸಿದ್ದಾರೆ. (ಪು.ಸಂ: 108–109)

ಗುಣಪಾಲ ಶೆಟ್ಟಿಯವರು, 'ಕೊರಗ' ಎಂಬ ಕನ್ನಡ ಪದವು 'ಕರ್‍ರಗಳ್'(ಕಪ್ಪು ಜನರು) ಎಂಬ ಹಳೆಗನ್ನಡ ಪದದಿಂದಲೂ ಬಂದಿರಬಹುದು, ಎಂದೂ ಅಂದಾಜಿಸಿದ್ದಾರೆ. ಕರ್‍ರಗಳ್ ಪದದಿಂದ ಅಗಳ್ ಪದವು ಮರೆಯಾಗಿ ಕ್ರಮೇಣ ಕರ್‍ರಗ ಕೊರಗ ಎಂದಾಗಿರಲೂ ಸಾಧ್ಯವಿದೆ ಎಂಬುವುದು ಗುಣಪಾಲ ಶೆಟ್ಟಿಯವರ ಅನಿಸಿಕೆ.

ಸಮುದಾಯದ ಇನ್ನೊಬ್ಬ ಹಿರಿಯ ಚಿಂತಕ ಪಳ್ಳಿ ಗೋಕುಲ್‌ದಾಸ್‌ರವರ ಪ್ರಕಾರ 'ಕೊರಗ' ಪದವು 'ಕೋರಗ' ಎಂಬ ಪದದಿಂದ ಸೃಷ್ಟಿಯಾಗಿದೆ. 'ಕೋರಗ' ಎಂದರೆ ಕೊರಗ ಭಾಷೆಯಲ್ಲಿ 'ಕೊಟ್ಟಿದ್ದೇವೆ' ಎಂಬ ಅರ್ಥವನ್ನು ನೀಡುತ್ತದೆ. ಅಂದರೆ ನಾವು ಎಲ್ಲವನ್ನು ಕೊಟ್ಟವರು(ಬಿಟ್ಟು ಕೊಟ್ಟವರು) ಎಂದವರು ವಿವರಿಸುತ್ತಾರೆ.

ಸಂಶೋಧಕ ಅಯ್ಯಪ್ಪನ್‌ರವರ ಪ್ರಕಾರ 'ಕೊರಗ' ಎಂಬ ಕನ್ನಡ ಪದವು 'ಕುರವರ್' ಎಂಬ ಪದದಿಂದ ಉತ್ಪತ್ತಿಯಾಗಿದೆ. ಇಲ್ಲಿ 'ಕುರವರ್' ಎಂದರೆ ಬೆಟ್ಟದಲ್ಲಿ ವಾಸಿಸುವ ಜನರು ಎಂಬ ಅರ್ಥವಿದೆ.

ಅದೇ ರೀತಿ 'ಕೊರ' ಎಂದರೆ 'ಸೂರ್ಯ'. ಕೊರಗರು ಸೂರ್ಯನ ಆರಾಧಕರಾಗಿರುವುದರಿಂದ ಆ ಹೆಸರು ಬಂದಿದೆ ಎಂಬ ವಾದವೂ ಇದೆ. ಜೊತೆಗೆ 'ಕೊರಗ' ಎಂದರೆ 'ನಾಗ' ಅಥವಾ 'ಕಾಳಿಂಗ ಸರ್ಪ'. ಇವರು ನಾಗನ ಆರಾಧಕರಾಗಿ ಆ ಹೆಸರು ಬಂದಿರಬಹುದು ಎಂಬ ಅಭಿಪ್ರಾಯವೂ ಇದೆ. ಕೊರಗರು ಪ್ರಕೃತಿಯ ಆರಾಧಕರು ಎನ್ನುವುದು ನಿಜವಾದರೂ, ನಿರ್ದಿಷ್ಟವಾಗಿ ನಾಗನ ಆರಾಧಕರು ಎಂಬುದಾಗಿ ಗುರುತಿಸುವುದು ಸಾಧ್ಯವಿಲ್ಲ. ಆದುದರಿಂದ ಈ ವಾದಕ್ಕೆ ಹೆಚ್ಚಿನ ಮಹತ್ವವಿಲ್ಲ.

'ಕೊರಗ' ಎನ್ನುವ ಕನ್ನಡ ಪದವು 'ಕೊರಗೆ' ಎಂಬ ತುಳು ಪದದ ಅನುವಾದಿತ ಪದ ಎನ್ನುವುದರಲ್ಲಿ ಅನುಮಾನವಿಲ್ಲ. ಆದುದರಿಂದ 'ಕೊರಗೆ' ಎಂಬ ತುಳು ಪದವು

ಇವರಿಗೆ ಹೇಗೆ ಅನ್ವಯಿಸಿತು ಎಂಬುವುದು ಮುಖ್ಯ ಪ್ರಶ್ನೆ. ಸದ್ರಿ ಸಮುದಾಯವು ತನ್ನದೇ ಆಡು ನುಡಿಯಲ್ಲಿ 'ಕೊರ್ರು', 'ಕ್ವರ್ರ್' ಹಾಗೂ 'ಕೊರೆರ್' ಎಂಬುವುದಾಗಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತದೆ. ಉದಾಹರಣೆಗೆ ಕೊರ್ರು ಬಕ್ಕೆರು(ಕೊರಗರು ಬಂದರು), ಕ್ವರ್ರ್ ಕೊಪ್ಪ (ಕೊರಗರ ಮನೆ), ಕೊರೆರ್ ಅಜ್ಜೆ ಜಾವುತನೇರ್ (ಕೊರಗರು ಮಾತನಾಡುತ್ತಾರೆ) ಇತ್ಯಾದಿ. ಈ ಬುಡಕಟ್ಟು ಸಮುದಾಯದ ಮೂಲ ಹೆಸರು 'ಕೊರಗ ಸಮುದಾಯ' ಅಥವಾ 'ಕೊರಗೆರ್' ಅಲ್ಲ! ಬದಲಾಗಿ ಇವರು 'ಕೊರ್ರು' ಅಥವಾ 'ಕೊರೆರ್' ಆಗಿರುತ್ತಾರೆ. ಆದುದರಿಂದ ಈ ಪದಗಳು ಎಲ್ಲಿಂದ ವ್ಯುತ್ಪನ್ನಗೊಂಡಿದೆ ಹಾಗೂ ಇದರ ಅರ್ಥವೇನು ಎಂಬುವುದೇ ಇಲ್ಲಿ ಪ್ರಮುಖವಾಗುತ್ತದೆ. ಅಂದಿನ ಆಫ್ರಿಕಾ ಮೂಲದ 'ಕೊರ' ಎಂಬ ಆದಿಮೂಲ ಪಂಗಡದ ಹೆಸರೇ ಈ ಪದಗಳ ಮೂಲವೂ ಆಗಿರಬಹುದು. ಇಲ್ಲಿ 'ಕೊರು' ಅಂದರೆ 'ಕೊಲ್ಲು' ಮತ್ತು 'ಕೊರೆರ್' ಅಂದರೆ ಕೊಂದವರು ಎಂಬುವುದು ಶಬ್ದಾರ್ಥಗಳಾಗಿವೆ. ಅಂದರೆ ಇವರು ಆಫ್ರಿಕಾ ಖಂಡದಲ್ಲಿ ಬಹಳ ಕಾಲ ಇದ್ದಾಗ ಅಲ್ಲಿ ಅಂತಃಕಲಹಗಳು ಉಂಟಾಗಿ ಹೊಡೆದಾಟ, ಬಡಿದಾಟಗಳು ಸಾಮಾನ್ಯವಾಗಿತ್ತು. ಒಂದು ಹಂತದಲ್ಲಿ ಅದು ಮಿತಿಮೀರಿ ಕೊಲೆಗಳೂ ನಡೆದು ಹೋದವು. ಹಾಗೇ ತಮ್ಮವರನ್ನೇ ಕೊಲೆ ಮಾಡಿ ಅಲ್ಲಿಂದ ಅಲೆಮಾರಿ ಹೊರಟು ಭರತ ಖಂಡ ಪ್ರವೇಶಿಸಿದ ಆದಿಮೂಲ ಜನಾಂಗವೇ ಈ 'ಕೊರ್ರು' ಅಥವಾ 'ಕೊರೆರ್'! ಕ್ರಮೇಣ ಈ ಪ್ರದೇಶಕ್ಕೆ ವಲಸೆ ಬಂದ ತುಳುವರು ಕೊರ್ರುಗೆರ್ ಎನ್ನುತ್ತಲೇ 'ಕೊರಗೆರ್' ಎಂದಾಯಿತು. ಅದೇ ಮುಂದೆ ಕನ್ನಡದಲ್ಲಿ 'ಕೊರಗರು' ಎಂಬುವುದಾಗಿ ಅನುವಾದಿಸಲ್ಪಟ್ಟಿತು.

ಕೊರಗರು ಯಾರು?

ಆದಿವಾಸಿ ಎಂದರೆ ಮೂಲ ನಿವಾಸಿ ಎಂದರ್ಥ. ಊಹಿಸಲಾಗದ ಕಾಲದಿಂದಲೇ ಈ ಭೂಮಿಯ ಮೇಲೆ ವಾಸಿಸುತ್ತಿದ್ದವರು. ಸ್ವತಂತ್ರ ಭಾಷೆ ಮತ್ತು ಸಾಮಾಜಿಕ ಆಚರಣೆಗಳನ್ನು ಹೊಂದಿದ್ದು ಬೇಟೆ, ಆಹಾರ ಮತ್ತು ಕಾಡುತ್ಪತ್ತಿಗಳ ಸಂಗ್ರಹಣೆ ಇವರ ಮುಖ್ಯ ಕಸುಬು ಆಗಿತ್ತು. ಭಾರತದ ಇತಿಹಾಸದ ಪ್ರಕಾರ ಈ ಆದಿವಾಸಿ ಬುಡಕಟ್ಟು ಜನಾಂಗಗಳು ಬ್ರಿಟಿಷರ ಆಳ್ವಿಕೆಯಲ್ಲಿ ಎಲ್ಲೂ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ದಟ್ಟವಾದ ಕಾಡುಗಳಲ್ಲಿ ಅಲೆದಾಟದೊಂದಿಗಿನ ಜೀವನವನ್ನು ನಡೆಸುತ್ತಿದ್ದರು. ಬುಡಕಟ್ಟು ಎಂಬುವುದಕ್ಕೆ ಪ್ರತ್ಯೇಕ ವ್ಯಾಖ್ಯೆಗಳಿಲ್ಲ. ನಿರ್ದಿಷ್ಟವಾದ ಮಿತಿಗಳಿಲ್ಲದೆ ತಮ್ಮದೇ ಆದ ಭಾಷೆ ಆಚಾರ ವಿಚಾರಗಳೊಂದಿಗೆ ಬದುಕುವವರೇ ಈ ಬುಡಕಟ್ಟು ಜನಾಂಗಗಳು. 'ನಾನು' ಎಂಬ ಭಾವನೆ ಇಲ್ಲದೆ 'ನಾವು ಸಮುದಾಯ' ಎಂಬ ಭಾವನೆಯೇ ಈ ಆದಿವಾಸಿಗಳ ಮುಖ್ಯ ಲಕ್ಷಣವಾಗಿದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಆದಿ ಕಾಲದಿಂದಲೂ ವಾಸವಿರುವ ಕೊರಗರು ಅಥವಾ ಕೊರ್ರು ಈ ಪ್ರದೇಶದ ಮೂಲನಿವಾಸಿಗಳಾಗಿದ್ದಾರೆ. ಪ್ರತ್ಯೇಕವಾದ ಸ್ವತಂತ್ರ ಭಾಷೆ, ಸಂಸ್ಕೃತಿ, ಆಚರಣೆಗಳನ್ನು ಹೊಂದಿರುವ ಈ ಕೊರಗರು ಆದಿಮೂಲ ಬುಡಕಟ್ಟು ಜನಾಂಗದವರಾಗಿರುತ್ತಾರೆ. ಕರಾವಳಿ ಪ್ರದೇಶವು ದಟ್ಟ ಅರಣ್ಯವಾಗಿದ್ದ ಆ ಕಾಲದಲ್ಲಿ ಇವರು ಇಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರಬಹುದು. ಮೇಲ್ನೋಟಕ್ಕೆ ಆಫ್ರಿಕಾ ಖಂಡದ ನೀಗ್ರೋ ಸಮುದಾಯದ ಚಹರೆಯಂತೆ ಗುಂಗುರು ಕೂದಲು, ಹೊಳೆಯುವ ಕಪ್ಪು ಮೈಬಣ್ಣ, ಅಗಲವಾದ ಹಣೆ, ದಪ್ಪ ತುಟಿ, ಚಪ್ಪಟೆ ಮೂಗು ಹಾಗೂ ಬಲಿಷ್ಟ ಕಾಯವನ್ನು ಹೊಂದಿದ್ದರು. ಆದರೆ ಈಗ ಪ್ರಕೃತಿಗೆ ಅನುಗುಣವಾಗಿ ಇವರು ಇತರ ಭಾರತೀಯರಂತೆ ದೈಹಿಕ ಲಕ್ಷಣಗಳನ್ನು ಹೋಲುತ್ತಿರುವುದು ಗೋಚರಿಸುತ್ತದೆ.

ಜಗತ್ತಿನಲ್ಲಿ ಜನ ಸಮುದಾಯವನ್ನು ಮುಖ್ಯವಾಗಿ ಐದು ವರ್ಗಗಳಾಗಿ ವಿಭಾಗಿಸಲಾಗಿದೆ. ಅವುಗಳನ್ನು ಮಂಗೋಲಿಯನ್; ಆಸ್ಟ್ರೇಲಿಯನ್; ಕಾರಿಗೋ; ಕಪೋ ಹಾಗೂ ಕಕೇಷಿಯನ್ (ಕಕೆಷಾಯ್ಡ್) ಎಂದು ಗುರುತಿಸಲಾಗಿದೆ. ಭಾರತದ ಮೂಲನಿವಾಸಿಗಳನ್ನು ಕಕೇಷಿಯನ್ ಜನಾಂಗ ಎಂದು ಗುರುತಿಸಲಾಗಿದೆ. ಕರ್ನಾಟಕದ ಎಲ್ಲಾ ಬುಡಕಟ್ಟುಗಳು ಈ ಜನಾಂಗಕ್ಕೆ ಸೇರಿದೆ. ಇವರನ್ನು ದ್ರಾವಿಡ ಮೂಲದವರು ಎನ್ನಲಾಗುತ್ತದೆ.

– ಪ್ರೊಫೆಸರ್। ಕೇಶವನ್ ಪ್ರಸಾದ್ ಕೆ. ಮರವಟ್ಟೆ

(ಬುಡಕಟ್ಟು ಅಧ್ಯಯನ – ಸಂಪುಟ–6)

೩೩

ಹಸಿವು, ಬಡತನ, ಅಸ್ಪೃಶ್ಯತೆ, ಅವಮಾನ ಎಂಬುವುದು ಆತ್ಮವಿಶ್ವಾಸ, ಅಂತಃಶಕ್ತಿ, ವಿವೇಚನಾ ಶಕ್ತಿ, ಚೈತನ್ಯವನ್ನು ಉದುಗಿಸಿ, ನಿಸ್ತೇಜರನ್ನಾಗಿಸಿ, ನೇರ ದಾಸ್ಯಕ್ಕೆ ತಳ್ಳಬಹುದು. ಕರಾವಳಿ ಕರ್ನಾಟಕದಲ್ಲಿ ಅತ್ಯಂತ ಘೋರವಾದ ಬಡತನ, ಹಸಿವು, ಹೀನಾಯವಾದ ಅಸ್ಪೃಶ್ಯತೆ ಶೋಷಣೆಯನ್ನು ಉಂಡು ಸಾಮಾಜಿಕ ದಾಸ್ಯಕ್ಕೆ ತಳ್ಳಲ್ಪಟ್ಟ ಕುಲವೆಂದರೆ ಅದು ಕೊರಗರು ಮಾತ್ರ.

– **ಡಾ। ಎಚ್. ನಾಗವೇಣಿ**

(ಬುಡಕಟ್ಟು ಅಧ್ಯಯನ – ಸಂಪುಟ–4)

“ಘನವಾದ ಸಾಂಸ್ಕೃತಿಕ ಕಲಾ ಸಂಪನ್ನತೆಯನ್ನು ಹೊಂದಿದ್ದರೂ ಸಮಾಜದಲ್ಲಿ ಋಣಾತ್ಮಕ ನೆಲೆಯಲ್ಲಿಯೇ ಗುರುತಿಸಲ್ಪಟ್ಟು ಇನ್ನು ಶೋಷಿಸಲ್ಪಟ್ಟು ತುಳಿತಕ್ಕೆ ಒಳಗಾದ ಭಾರತದ ಏಕಮಾತ್ರ ಬುಡಕಟ್ಟು ಜನಾಂಗವಿದ್ದರೆ, ಅದು ಕೊರಗರು ಮಾತ್ರ”.

– **ಸಂಜು**

(ಕೊರಗ ಸಮುದಾಯದಲ್ಲಿ ಶಿಕ್ಷಣ)

ಇವು ಕೊರಗ ಸಮುದಾಯವನ್ನು ಪರಿಚಯಿಸಲು ಗಣ್ಯ ಲೇಖಕರು ದಾಖಲಿಸಿದ ಕೆಲವು ಸಾಲುಗಳು! ಬಹುಶಃ ಈ ವಾಕ್ಯಗಳೇ ಈ ಜನಾಂಗದ ಬಗ್ಗೆ ಅರ್ಧದಷ್ಟು ಪರಿಚಯವನ್ನು ಮಾಡಿಕೊಡುತ್ತದೆ. ಇನ್ನು ಈ ಜನಾಂಗದ ಬಗ್ಗೆ ಇನ್ನೊಂದಷ್ಟು ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡೋಣ.

ಅ. ಆದಿವಾದ

ಶ್ರೀ ಬುಧಾನಂದ ಶಿವಳ್ಳಿಯವರ “ತುಳು ಪಾತೆರೋ” ಎಂಬ ಗ್ರಂಥಕ್ಕೆ ಸಂಪಾದಕೀಯ ಪ್ರಬಂಧವನ್ನು (ತುಳು ನಡತ್ ಬತ್ತಿನ ಸಾದಿ) ಬರೆದ ಡಾ॥ ಬಿ.ಎಂ. ರವೀಂದ್ರರವರು ಭೌಗೋಳಿಕ ಅಧ್ಯಯನದ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ವಿವರಣೆ ನೀಡುತ್ತಾರೆ (ಕನ್ನಡಕ್ಕೆ ಅನುವಾದಿಸಿಕೊಳ್ಳಲಾಗಿದೆ).

“ವೈಜ್ಞಾನಿಕ ಗಣನೆಯ ಪ್ರಕಾರ ಈ ಭೂಮಿ ಸೃಷ್ಟಿಯಾಗಿ ಸುಮಾರು 450 ಕೋಟಿ ವರ್ಷಗಳು ಸಂದಿವೆ. ಈ ಸುದೀರ್ಘ ಅವಧಿಯಲ್ಲಿ ಭೂಮಿಯ ಮೇಲೆ ಸಾವಿರಾರು ರೀತಿಯ ಬದಲಾವಣೆಗಳೂ ಆಗಿವೆ. ಈ ಭೂಮಿಯ ಮೇಲೆ ಸರಳ ಜೀವ ರಾಶಿಗಳಿಂದ ಆರಂಭವಾಗಿ ಸಂಕೀರ್ಣ ಜೀವಿಗಳಾಗಿ ಸುಮಾರು ಇನ್ನೂರ ಐವತ್ತು ಕೋಟಿ ವರ್ಷಗಳ ಕಾಲವಧಿಯಲ್ಲಿ ಜೀವ ವಿಕಾಸಗೊಳ್ಳುತ್ತಲೇ ಬಂದಿವೆ. ಈ ಅದ್ಭುತ ಸೃಷ್ಟಿಯಲ್ಲಿ ಮಾನವನ ಸೃಷ್ಟಿಯಾಗಿರುವುದು ಅಂದಾಜು ಇಪ್ಪತ್ತು ಲಕ್ಷ ವರ್ಷಗಳ ಹಿಂದೆಯಷ್ಟೆ!

ಮಂಗನಿಂದ ಮಾನವನ ವಿಕಾಸವಾಯಿತು ಎಂದು ಸಂಶೋಧಕ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಹೇಳಿದ್ದಾರೆ. “ಹೋಮೋ ಹೆರಕ್ಟಸ್ ಎಂಬುವುದು ಮಾನವನ ಆದಿ

ರೂಪವಾಗಿದೆ. ಆನಂತರ ಹೋಮೋ ಸೇಪಿಯನ್ಸ್ ಎಂಬ ನೇರವಾಗಿ ನಿಲ್ಲುವ ಮಾನವ ಹುಟ್ಟಿಕೊಂಡಿರುವುದು ಹದಿನೆಂಟು ಲಕ್ಷ ವರ್ಷಗಳ ಹಿಂದೆ ಎಂಬುವುದಾಗಿ ಜೀವ ವಿಜ್ಞಾನಿಗಳು ತೀರ್ಮಾನಿಸಿದ್ದಾರೆ. ಹೀಗೆ ಆಫ್ರಿಕಾ ಖಂಡದಲ್ಲಿ ವಿಕಾಸಗೊಂಡ ಆದಿ ಮಾನವನ ಮೂಲ ಕುಟುಂಬಗಳು ಸುಮಾರು ಮೂವತ್ತರಿಂದ ನಲ್ವತ್ತು ಸಾವಿರ ವರ್ಷಗಳ ಹಿಂದೆ ಏಷ್ಯಾ ಹಾಗೂ ಬೇರೆಬೇರೆ ಪ್ರದೇಶಗಳಿಗೆ ವಲಸೆ ಹೋಗಿವೆ. ಹೆಚ್ಚು ಕಡಿಮೆ ಅದೇ ಸಮಯಕ್ಕೆ ಭರತಖಂಡಕ್ಕೂ ಮಾನವ ಜೀವಿಯ ಆಗಮನ ಆಗಿರಬಹುದು. ಹಾಗೆ ಬಂದವರಲ್ಲಿ ಇಂದಿನ ತುಳುನಾಡ ಕರಾವಳಿಯಲ್ಲಿ ಮೊಟ್ಟ ಮೊದಲು ನೆಲೆಸಿದವರೇ 'ಕೊರು' ಅಥವಾ ಇಂದಿನ ಕೊರಗರು. ಕೇರಳದ ಸಂದರ್ಭದಲ್ಲಿ ಜಕಾರಿಯಸ್ ತುಂಡಿಯವರು ಹೇಳುವಂತೆ 'ಕೊರಗರು' ಮುಗೇರರು ಹಾಗೂ ಮುಂಡಾಲರು ತುಳುನಾಡಿನ ಮೂಲ ನಿವಾಸಿಗಳಾಗಿದ್ದಾರೆ. ಇತರ ಸಮುದಾಯಗಳು ಇಲ್ಲಿಗೆ ಬಂದು ನೆಲೆಯಾದ ಬಳಿಕ ಕಾಡು ನಾಶವಾಯಿತು. ಕಾಡನ್ನೇ ನಂಬಿಕೊಂಡಿದ್ದ ಮೂಲನಿವಾಸಿಗಳು ಆಧುನಿಕ ಜೀವನ ಶೈಲಿಗೆ ಒಗ್ಗಿಕೊಳ್ಳಲಾರದೆ ಅತಂತ್ರ ಸ್ಥಿತಿಗೆ ಬಂದಿದ್ದಾರೆ" ಎಂದು ತುಂಡಿ ವಿಷಾದಿಸುತ್ತಾರೆ. ಕೊರಗರು ಇತರ ತುಳುವರಿಗಿಂತ ಅದೆಷ್ಟೋ ಹಿಂದೆಯೇ ಭಾರತದಲ್ಲಿ ನೆಲೆಸಿರುವ ಬಗ್ಗೆ ಸೂಚನೆಗಳು ಸಿಕ್ಕಿವೆ.

ಆ. ಪ್ರಳಯ ಪುರಾಣ

ಪರದೇಶಿ ವೈದಿಕಶಾಹಿ ವಿರಚಿತ ವರ್ಣವ್ಯವಸ್ಥೆಯಲ್ಲಿ ಕೊರಗರನ್ನು ಅಂತ್ಯಜರೆಂದು ಕರೆಯಲ್ಪಡುವ ಚಾಂಡಾಲ ಗುಂಪಿಗೆ ಸೇರಿಸಲಾಗಿದೆಯಂತೆ! ಆದರೆ ತಮ್ಮ ಸೃಷ್ಟಿ ಪುರಾಣ ಹಾಗೂ ಮೂಲ, ಇತಿಹಾಸಗಳನ್ನು ಕಟ್ಟಿಕೊಳ್ಳುವುದಕ್ಕೆ ಪೂರಕವಾದ ಮೌಖಿಕ ಪುರಾಣಗಳು ಕೊರಗರಲ್ಲೂ ಬಲಿಷ್ಟವಾಗಿವೆ. ಇವರ ಸೃಷ್ಟಿ ಮೂಲವನ್ನು ತಿಳಿಸುವ ಜಲಪ್ರಳಯದ ಕತೆಯೊಂದು ಸಮುದಾಯದಲ್ಲಿ ಜನಜನಿತವಾಗಿದೆ.

"ಒಂದಾನೊಂದು ಕಾಲದಲ್ಲಿ ಈ ಭೂಮಿಯ ಮೇಲೆ ಭಾರೀ ಜಲಪ್ರಳಯ ಒಂದು ಸಂಭವಿಸುತ್ತದೆ. ಎತ್ತ ನೋಡಿದರೂ ಬರೀ ನೀರೇ ನೀರು. ಸಕಲ ಜೀವರಾಶಿಗಳೂ ಮುಳುಗಿ ನಾಶವಾಗುವುದರಲ್ಲಿತ್ತಂತೆ. ಆದರೆ ಅದೇ ವೇಳೆ ಅದೆಲ್ಲಿಂದಲೋ ಒಂದು ಡೋಲು ನೀರಿನಲ್ಲಿ ತೇಲುತ್ತಾ ಬರುತ್ತದೆ. ಆ ಡೋಲಿನ ಒಳಗಡೆ ಒಂದು ಗಂಡು ಒಂದು ಹೆಣ್ಣು ಆಶ್ರಯ ಪಡೆಯುತ್ತಿದ್ದರಂತೆ. ಆಗ ಅವರಿಗೆ ಅಶರೀರ ವಾಣಿಯೊಂದು ಕೇಳಿ ಬಂತು. ಅವರಿಬ್ಬರೂ ಪರಸ್ಪರ ಲೈಂಗಿಕ ಕ್ರಿಯೆಗೆ ಒಳಗಾಗುವಂತೆ ಆ ದೇವರ ವಾಣಿ ತಿಳಿಸಿತಂತೆ. ಅದರಂತೆಯೇ ಅವರಿಬ್ಬರೂ ದೈಹಿಕ ಸಂಪರ್ಕ ಹೊಂದಿದರು. ನೀರು ಇಳಿದು ಕ್ರಮೇಣ ಇವರು ಮಕ್ಕಳನ್ನು ಪಡೆದರು. ಮುಂದೆ ಈ ಮಕ್ಕಳೇ ಬೇರೆ ಬೇರೆ ಉದ್ಯೋಗಗಳನ್ನು ಪಡೆದು, ಬೇರೆ ಬೇರೆ ಜಾತಿಗಳಾದರು. ಇದೊಂದು ಕೊರಗರ ಬಾಯಿಯಿಂದ ಬಾಯಿಗೆ ಹರಿದು ಬಂದಿರುವ ಕತೆ.

ಆದರೆ, ಈ ದಂತಕತೆಯನ್ನು ವಾಸ್ತವತೆಗೆ ಭಟ್ಟಳಿಸಿ ನೋಡಿದಾಗ ಅಂದು ಅರಬ್ಬೀ

ಸಮುದ್ರದಲ್ಲಿ ಭಾರೀ ಸುನಾಮಿಯೊಂದು ಕರಾವಳಿಗೆ ಅಪ್ಪಳಿಸಿ ಜಲಪ್ರಳಯ ದಂತಹ ಸನ್ನಿವೇಶ ಸೃಷ್ಟಿಯಾಗಿರಬಹುದು ಎಂದೆನಿಸುತ್ತದೆ. ಪೂರ್ತಿ ಪ್ರಪಂಚದ ಅರಿವಿರದ ಈ ಭಾಗದ ಆದಿವಾಸಿ ಕೊರ್ರು(ಕೊರಗರು) ಇಡೀ ಭೂಮಿಯೇ ಮುಳುಗಿದೆ ಎಂದು ಭಾವಿಸಿರಬಹುದು. ಅಲ್ಲದೆ, ಆಗ ಪ್ರಾಣ ಭಯದಿಂದ ನೀರಲ್ಲಿ ಮುಳುಗೇಳುತ್ತಿದ್ದ ಆ ಇಬ್ಬರಿಗೆ ತಮ್ಮವರದ್ದೇ ಆದ ಡೋಲು ಆಸರೆಯಾಗಿ ಸಿಕ್ಕಿರಬಹುದು. ಅವರಿಬ್ಬರೇ ಹಲವು ದಿನಗಳ ಕಾಲ ಡೋಲಿನ ಅಂಡೆಯ ಒಳಗೆ ಇದ್ದಾಗ ಮನಸ್ಸಿನ ನಿಯಂತ್ರಣ ಕಳೆದುಕೊಳ್ಳುವುದು ಸಹಜವೇ ಆಗಿರಬಹುದು. ಕ್ಷಣಕಾಲ ಎಲ್ಲವನ್ನೂ ಮರೆತು ಸಹಜ ಲೈಂಗಿಕ ವಾಂಛೆಗೆ ಒಳಗಾಗಿರಬಹುದು. ನೀರೆಲ್ಲ ಇಳಿದ ಮೇಲೆ ಇವರು ಹೊಸದಾಗಿ ಸಂಸಾರ ನಡೆಸಿ ಮಕ್ಕಳನ್ನು ಪಡೆದರು. ಕ್ರಮೇಣ ಬೇರೆ ಬೇರೆ ದಿಕ್ಕುಗಳಿಂದ ಶೂದ್ರ, ದ್ರಾವಿಡರು ಪ್ರಳಯ ಪೀಡಿತ ಕರಾವಳಿ ಪ್ರದೇಶಕ್ಕೆ ಬಂದು ನೆಲೆಸಿದರು. ಈ ಪ್ರಚಂಡ ಜಲಪ್ರಳಯದ ವಿಚಾರವನ್ನು ಕಾರ್ಕಳದ ಇರ್ವತ್ತೂರು ಗೋವಿಂದ ಭಂಡಾರಿಯವರೂ ಅನುಮೋದಿಸುತ್ತಾರೆ. ('ಜಯಕಿರಣ' ಸಂಜೆ ಪತ್ರಿಕೆಯ ಚಾವಡಿ ಅಂಕಣದಲ್ಲಿ ಪ್ರಕಟಗೊಂಡ ಲೇಖನಗಳು)

ಇ. ಬದಲಾದ ಕಾಲಮಾನದಲ್ಲಿ

ಇಂದು ಈ ಕೊರಗ ಜನಾಂಗವು ಕರ್ನಾಟಕ ರಾಜ್ಯದ ಕರಾವಳಿಯ ಉತ್ತರಕನ್ನಡ, ಉಡುಪಿ, ದಕ್ಷಿಣ ಕನ್ನಡ, ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳಲ್ಲಿ ವಾಸವಾಗಿದ್ದಾರೆ. ಊರ ಹೊರಗಿನ ಬೆಟ್ಟ, ಗುಡ್ಡ, ಕಾಡು, ಮೇಡುಗಳ ತಪ್ಪಲಲ್ಲಿ ಒಂದಷ್ಟು ಮಂದಿ ಸೇರಿ, ಗುಂಪಾಗಿ ಅಲ್ಲಲ್ಲಿ ವಾಸವಿರುವ ಈ ಆದಿವಾಸಿ ಸಮುದಾಯವು ಇಂದು ವಿನಾಶದ ಅಂಚಿನಲ್ಲಿದೆ. ಅಲೆಮಾರಿ ಜನಾಂಗಕ್ಕೆ ಸೇರಿದ ಇವರ ವಿಶಿಷ್ಟವಾದ ವಾದ್ಯ ಪರಿಕರಗಳ ವಾದನದ ಇಂಪಿಗೆ ಮನಸೋತ ಊರವರು ಅಜಲ್ ಸೇವೆಯ ಹೆಸರಲ್ಲಿ ಇವರನ್ನು ಕಾಡಿನಿಂದ ನಾಡಿಗೆ ಪರಿಚಯಿಸಿದ್ದೇ ಇವರ ಇಂದಿನ ದುರಂತ ಅಂತ್ಯಕ್ಕೆ ಕಾರಣವಾಗಿದೆ. ತುಳುವರು ತಮ್ಮ ಸಹಜ ಆಡುಭಾಷೆ ಯಲ್ಲಿ ಇವರನ್ನು 'ಕಾಡಿನಕುಲ್'(ಕಾಡಿನವರು) ಎಂದೇ ಕರೆಯುತ್ತಿದ್ದರು. ಅಲ್ಲದೆ ಇವರು ಕೂಡಾ ತಮ್ಮನ್ನು ಹಾಗೆಯೇ ಪರಿಚಯಿಸುತ್ತಿದ್ದರು ಎಂದು ಸಮುದಾಯದ ಹಿರಿಯ ನಾಯಕ ಕಡಂದಲೆಯ ಎಂ. ಸುಂದರರವರು ಮಾಹಿತಿ ನೀಡುತ್ತಾರೆ.

ಭಾರತದಲ್ಲಿ ಇಂದು ಒಟ್ಟು 705 ಬುಡಕಟ್ಟು ಸಮುದಾಯಗಳಿವೆ. ಅವುಗಳಲ್ಲಿ 75 ಅತೀ ಹಿಂದುಳಿದ(ಪಿ.ಟಿ.ಜಿ) ಪಂಗಡಗಳಾಗಿವೆ. ಕರ್ನಾಟಕದಲ್ಲಿ 12 ಅರಣ್ಯ ಮೂಲ ಬುಡಕಟ್ಟುಗಳಿದ್ದು ಅವುಗಳಲ್ಲಿ ಕೊರಗರು ಮತ್ತು ಜೇನುಕುರುಬರು ಪಿ.ಟಿ.ಜಿ ಗಳಾಗಿರುತ್ತಾರೆ.

1931ರ ಜನಗಣತಿಯಲ್ಲಿ ಇವರನ್ನು Depressed Class (ಹಿಂದುಳಿದ ವರ್ಗ) ಎಂದು ಪರಿಗಣಿಸಲಾಗಿತ್ತು. ಭಾರತ ಸರಕಾರದ ಆದೇಶ 1936 ಮತ್ತು ಸಂವಿಧಾನದ

ಆದೇಶದಲ್ಲಿ 1950 ಕೊರಗರನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪಟ್ಟಿ ಆದೇಶದ ಪ್ರಕಾರ, ಕೊರಗ ಪಂಗಡವನ್ನು ಪರಿಶಿಷ್ಟ ಪಂಗಡ (Scheduled Tribe) ಎಂದು ಪರಿಗಣಿಸಲಾಯಿತು. 1972ರಲ್ಲಿ ಮೂಲನಿವಾಸಿಗಳು ಎಂಬುವುದಾಗಿ ಗುರುತಿಸ ಲಾಯಿತು. ಹಾಗೂ 1986ರಲ್ಲಿ ಪ್ರಿಮಿಟಿವ್ ಟ್ರೈಬ್ಸ್ ಎಂದು ಗುರುತಿಸಲಾಗಿದೆ. ಇದೀಗ ಪಿ.ವಿ.ಟಿ.ಜಿ (Perticularly Volnerable Tribal Group) ಎಂದು ಪರಿಗಣಿಸಿದೆ.

1961ರಿಂದ 2011ರವರೆಗಿನ ಜನಗಣತಿಯಲ್ಲಿ ಕೊರಗರ ಗಣತಿಯನ್ನು ಸೇರಿಸ ಲಾಗಿದೆ. ಅದರ ಕೋಷ್ಟಕವನ್ನು ಇಲ್ಲಿ ನೀಡಲಾಗಿದೆ. (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ)

ವರ್ಷ	ಗಂಡು	ಹೆಣ್ಣು	ಒಟ್ಟು ಸಂಖ್ಯೆ
1961	3336	3046	6382
1971	3789	3831	7620
1981	4713	4726	9439
1991	5818	5838	11656
2001	6652	6856	13508
2011	8031	7960	15991

2001 ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಕೊರಗ ಒಟ್ಟು ಜನಸಂಖ್ಯೆ : 16071 ಆಗಿರುತ್ತದೆ. ಅದರ ಜಿಲ್ಲಾವಾರು ಜನಸಂಖ್ಯೆ ವಿಂಗಡಣೆಯು ಹೀಗಿದೆ.

ಕ್ರ. ಸಂ	ಜಿಲ್ಲೆಯ ಹೆಸರು	ಗಂಡು	ಹೆಣ್ಣು	ಒಟ್ಟು ಜನ ಸಂಖ್ಯೆ
1	ಬಾಗಲಕೋಟೆ	45	40	85
2	ಬೆಂಗಳೂರು(ಗ್ರಾ)	14	18	32
3	ಬೆಂಗಳೂರು(ನಗರ)	159	148	307
4	ಬಳ್ಳಾರಿ	7	8	15
5	ಬೆಳಗಾವಿ	39	38	77
6	ಬೀದರ್	4	5	9
7	ಬಿಜಾಪುರ	17	11	28
8	ಚಿಕ್ಕಮಗಳೂರು	92	83	175
9	ದಕ್ಷಿಣ ಕನ್ನಡ	2552	2290	4542
10	ದಾವಣಗೆರೆ	2	1	3
11	ಧಾರವಾಡ	54	47	101

12	ಗದಗ	3	4	7
13	ಗುಲ್ಬರ್ಗ	39	36	75
14	ಹಾಸನ	6	6	12
15	ಹಾವೇರಿ	415	384	799
16	ಕೊಡಗು	20	28	48
17	ಕೋಲಾರ	4	1	5
18	ಮಂಡ್ಯ	5	3	8
19	ಮೈಸೂರು	3	4	7
20	ರಾಯಚೂರು	20	29	49
21	ಶಿವಮೊಗ್ಗ	170	184	354
22	ತುಮಕೂರು	–	2	2
23	ಉಡುಪಿ	4400	4566	8966
24	ಉತ್ತರಕನ್ನಡ	181	180	361
ಕೊರಗರ ಒಟ್ಟು ಜನಸಂಖ್ಯೆ		16071		

2011 ರ ಜನಗಣತಿ – ಕೊರಗರ ಒಟ್ಟು ಜನಸಂಖ್ಯೆ 14794 ಅದರಲ್ಲಿ 7210 ಪುರುಷರು ಹಾಗೂ 7584 ಮಹಿಳೆಯರು

ಕ್ರ.ಸಂ.	ಜಿಲ್ಲೆ	ಜನಸಂಖ್ಯೆ
1.	ಬೆಳಗಾವಿ	8
2.	ಬಾಗಲಕೋಟೆ	9
3.	ವಿಜಯಪುರ	1
4.	ಬೀದರ್	1
5.	ರಾಯಚೂರ್	10
6.	ಕೊಪ್ಪಳ	3
7.	ಗದಗ	2
8.	ಧಾರವಾಡ	35
9.	ಉತ್ತರಕನ್ನಡ	66
10.	ಹಾವೇರಿ	496
11.	ಬಳ್ಳಾರಿ	9
12.	ಚಿತ್ರದುರ್ಗ	12

13.	ದಾವಣಗೆರೆ	37
14.	ಶಿವಮೊಗ್ಗ	197
15.	ಉಡುಪಿ	8966
16.	ಚಿಕ್ಕಮಗಳೂರು	80
17.	ತುಮಕೂರು	9
18.	ಬೆಂಗಳೂರು	119
19.	ಮಂಡ್ಯ	4
20.	ಹಾಸನ	18
21.	ದಕ್ಷಿಣಕನ್ನಡ	4631
22.	ಕೊಡಗು	32
23.	ಮೈಸೂರು	12
24.	ಚಾಮರಾಜನಗರ	4
25.	ಕಲಬುರಗಿ	4
26.	ಯಾದಗಿರಿ	7
27.	ಕೋಲಾರ	3
28.	ಚಿಕ್ಕಬಳ್ಳಾಪುರ	3
29.	ಬೆಂಗಳೂರು(ಗ್ರಾ)	5
30.	ರಾಮನಗರ 11	

ಆಧಾರ :

1. ಬುಡಕಟ್ಟು ಅಧ್ಯಯನ ಸಂಪುಟ – 3
ಸಂಚಿಕೆ : 2 – ಪ್ರೊ. ಕೆಂ.ಎಂ. ಮೇತ್ರಿ

2. ಸೂಕ್ಷ್ಮ ಆದಿವಾಸಿಗಳು – ಪ್ರೊ. ಕೆಂ. ಮೇತ್ರಿ

ಇದು ಸರಕಾರದ ಜನಗಣತಿಯ ಅಂಕೆ ಸಂಖ್ಯೆಗಳು. ವಾಸ್ತವಿಕವಾಗಿ ನೋಡಿದರೆ ಈ ಗಣತಿಯು ಕೆಲವೊಂದು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಮಾಹಿತಿದಾರರ ಅಸಮರ್ಪಕ ಹೇಳಿಕೆ, ಉಚ್ಚಾರಣೆ ದೋಷಗಳು ಹಾಗೂ ಮಾಹಿತಿ ಸಂಗ್ರಹಕಾರರ ಅವಸರ, ಗೊಂದಲಗಳು ಗಣತಿ ಕಾರ್ಯದಲ್ಲಿ ಪ್ರಮುಖ ಎಡವಟ್ಟುಗಳಿಗೆ ಕಾರಣ ಗಳಾಗಿರುತ್ತದೆ. ದೂರದ ಬೀದರ್, ಗುಲ್ಬರ್ಗ, ರಾಯಚೂರು, ರಾಮನಗರ, ಬಳ್ಳಾರಿ ಗಳಲ್ಲೂ ಕೊರಗರು ಇರುವುದು ಅನುಮಾನಾಸ್ಪದವಾಗಿದೆ. 2001ರ ಗಣತಿಯಲ್ಲಿ ಹಾವೇರಿಯಲ್ಲಿ ಎಂಟುನೂರರಷ್ಟು ಹಾಗೂ 2011ರಲ್ಲಿ ಐನೂರರಷ್ಟು ಮಂದಿ ಕೊರಗರು ಇರುವುದು ಕೂಡಾ ಡೌಟೆ!

ಕೊರಗ ಸಮುದಾಯದ ಸಂಘಟನೆಗಳು ಮತ್ತು ಸರಕಾರೇತರ ಸಂಸ್ಥೆಗಳು

ಇವರ ಜನಸಂಖ್ಯೆ ಕ್ಷೀಣಿಸುತ್ತಿದೆ, ಸಮುದಾಯ ವಿನಾಶದೆಡೆಗೆ ಸಾಗುತ್ತಿದೆ ಎಂಬುವುದಾಗಿ ಮೊದಲಿನಿಂದಲೂ ವಾದಿಸುತ್ತಿದೆ. ಆದರೆ 2001ರವರೆಗೂ ಸರಕಾರದ ಗಣತಿಯ ಅಂಕೆ ಸಂಖ್ಯೆಗಳು ಇದಕ್ಕೆ ವಿರುದ್ಧವಾಗಿ ಜನಸಂಖ್ಯೆ ಏರುಗತಿಯಲ್ಲಿರುವುದನ್ನು ಸೂಚಿಸುತ್ತದೆ. ಹತ್ತು ವರ್ಷಗಳ ಹಿಂದೆ ನೂರಾರು ಮಂದಿ ಇದ್ದ ಕೊರಗರ ಬಲೆಪುಗಳಲ್ಲಿ ಇಂದು ಹತ್ತು ಹನ್ನೆರಡು ಜನ ಇದ್ದಾರೆ ಎಂಬ ವಾಸ್ತವ ವಿಚಾರವನ್ನು ಸಂಘಟನೆಗಳು ಮನದಟ್ಟು ಮಾಡಿದ ನಂತರ ಸ್ಥಳೀಯ ಜಿಲ್ಲಾ ಪಂಚಾಯತ್ ಈ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿತು. ಈ ಸಮೀಕ್ಷೆ ಕೂಡಾ ಕೊರಗ ಸಂಘಟನೆಗಳ ವಾದವನ್ನು ದೃಢಪಡಿಸಿತು. 2011ರ ಜನಗಣತಿಯಲ್ಲಿ ಕೊರಗರ ಸಂಖ್ಯೆಯಲ್ಲಿ 1297 ಮಂದಿ ಕಡಿಮೆಯಾಗಿರುವುದನ್ನು ತೋರಿಸುತ್ತದೆ. ವಿಶೇಷವೆಂದರೆ 2001 ಹಾಗೂ 2011ರ ಗಣತಿಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಯಾವುದೇ ಬದಲಾವಣೆಯಾದಂತೆ ಕಾಣುವುದಿಲ್ಲ. ಹತ್ತು ವರ್ಷಗಳ ನಂತರವೂ ಮೊದಲಿನ ಸಂಖ್ಯೆಯೇ ಮುಂದುವರಿಯುತ್ತದೆ!!

ಕೊರಗ ಸಮುದಾಯದಲ್ಲಿ ಒಳ ಪಂಗಡಗಳು

ಸಾಮಾನ್ಯವಾಗಿ ಎಲ್ಲಾ ಜಾತಿ, ಸಮುದಾಯಗಳಲ್ಲಿಯೂ ಅನೇಕ ಒಳಪಂಗಡ ಗಳಿರುವುದನ್ನು ಗಮನಿಸುತ್ತೇವೆ. ಆದರೆ ಕೆಲವು ಇತಿಹಾಸ ಸಂಶೋಧಕರು ಹೇಳಿರುವಂತೆ ಕೊರಗ ಸಮುದಾಯದಲ್ಲಿ ಹತ್ತಾರು ಒಳಪಂಗಡಗಳು ಇಲ್ಲ. ಥರ್ಸ್ಟನ್, ವಾಲ್‌ಹೌಸ್, ಸ್ಟರಕ್, ಸ್ಟುವರ್ಟ್ ಮುಂತಾದ ವಿದ್ವಾಂಸರು ಕೊರಗರ ಮೇಲ್ನೋಟದ ವೈಯಕ್ತಿಕ ಚಹರೆಗಳನ್ನು ಪರಿಗಣಿಸಿ, ಅದೇ ಒಂದು ಪಂಗಡ ಎಂಬುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಉದಾಹರಣೆಗೆ ಯಾರೋ ಒಬ್ಬ ಕೊರಗ, ಊರವರ ಭಯಕ್ಕೆ ಬಿದ್ದು, ದಾರಿಯಲ್ಲಿ ಉಗುಳಬಾರದೆಂಬ ಉದ್ದೇಶದಿಂದ ಕುತ್ತಿಗೆಯಲ್ಲೋ, ಹೆಗಲಲ್ಲೋ ಸಣ್ಣದೊಂದು ಬಿದಿರಿನ ಅಂಡೆಯನ್ನು ಇಟ್ಟು(ಕಟ್ಟಿ) ಕೊಂಡಿದ್ದರೆ ಅವನನ್ನು ಅಂಡೆಕೊರಗ ನೆಂದೂ, ತೆಂಗಿನ ಗೆರಟೆಯನ್ನು ಕಟ್ಟಿಕೊಂಡಿದ್ದರೆ ತಿಪ್ಪಿ ಕೊರಗನೆಂದೂ, ಮಾನಮುಚ್ಚಲು ಮುಂಡು (ಬಟ್ಟೆ) ಕಟ್ಟಿದ್ದರೆ ಮುಂಡು ಕೊರಗನೆಂದೂ ಹೆಸರಿಸಿರುವುದು ಕಂಡುಬರುತ್ತದೆ. ಇವು ಅಂದಿನ ಕಾಲಕ್ಕೆ ವೈಯಕ್ತಿಕ ಅನಿವಾರ್ಯತೆಗಳೇ ಹೊರತು ಅವೇ ಒಳಪಂಗಡದ ದ್ಯೋತಕಗಳಲ್ಲ! ಇನ್ನು ಕೆಲವರು ತಮ್ಮದೇ ಆದ ವಾದಗಳನ್ನು ಮುಂದೊಡ್ಡಿ ಬಾಕುಡ ಕೊರಗ, ಒಂಟಿ(ವಂಟಿ) ಕೊರಗ ಮುಂತಾದ ಒಳಪಂಗಡಗಳನ್ನೂ ಸೃಷ್ಟಿಸಿದ್ದಾರೆ. ಇವು ಯಾವುವೂ ನೈಜ ವಿಚಾರಗಳಲ್ಲ.

ಅದಾಗ್ಯೂ ಕೊರಗ ಜನಾಂಗದಲ್ಲಿ ಕೆಲವೊಂದು ಆಚರಣೆ, ನಂಬಿಕೆ, ಭಾಷೆಹಾಗೂ ಪ್ರಾದೇಶಿಕ ವೈಶಿಷ್ಟ್ಯತೆಗಳಿಗೆ ಅನುಗುಣವಾಗಿ ನಾಲ್ಕು ಒಳಪಂಗಡಗಳಿರುವುದು ಮಾತ್ರ ನಿಜ. ಇವುಗಳಲ್ಲಿ ಮೂರು ಪಂಗಡಗಳು ಪ್ರತ್ಯೇಕ ಭೂಭಾಗಗಳಲ್ಲಿ ಭರತ ಖಂಡವನ್ನು ಪ್ರವೇಶಗೈದವು. ಆಫ್ರಿಕಾ ಮೂಲದ 'ಕೊರ' ಎಂಬ ಆದಿವಾಸಿ ಜನಾಂಗವೇ ಕೊರ್ರು, ಕ್ವರ್ರ್ ಅಥವಾ ಈಗಿನ ಕೊರಗರು. ಇಂದಿನ ತುಳುನಾಡು ಎಂಬ ಪರಿಕಲ್ಪನೆಗೆ ಮೊದಲೇ ಮಾನವ ವಾಸರಹಿತ ಖಾಲಿ ಖಾಲಿ ಕರಾವಳಿ ಭೂಪ್ರದೇಶವನ್ನು ಈ ಬುಡಕಟ್ಟು ಜನರು ಪ್ರವೇಶ ಮಾಡಿದ್ದರು. ಮೊದಲನೆಯ ಗುಂಪು ಕೇರಳ ರಾಜ್ಯದ ಕರಾವಳಿಯಲ್ಲಿ ಭರತಖಂಡವನ್ನು ತಲುಪಿತು. ಕ್ರಮೇಣ ಈ ಗುಂಪು ಪೂರ್ವೋತ್ತರ ದಿಕ್ಕಿಗೆ ಪಯಣಿಸಿ ಅಲ್ಲಲ್ಲಿ ನೆಲೆಯೂರಿತು. 'ಕೊರ' ಸಮುದಾಯದ ಈ ಗುಂಪನ್ನು ಕುಂಟು ಕುರಗ್ಗೆರು ಎಂದು ನಂತರ ಕರೆಯಲಾಯಿತು. ಇವರೇ ಮುಂದೆ 'ಕುಂಟು' ಕೊರಗರಾದರು.

ಎರಡನೆಯದ್ದಾಗಿ ಇಂದಿನ ತುಳುನಾಡ ಕರಾವಳಿಯಲ್ಲಿ ಇನ್ನೊಂದು ಗುಂಪು ಭೂಪ್ರವೇಶ ಮಾಡಿತ್ತು. ಈ ಜನರು ಸೊಂಟಕ್ಕೆ ಆಗಲೇ ಎಲೆಗಳನ್ನು ಕಟ್ಟಿಕೊಂಡಿದ್ದರು. 'ಕೊರ್ರು' ಎಂಬುದಾಗಿ ಗುರುತಿಸಿಕೊಂಡ ಈ ಗುಂಪನ್ನು ತಪ್ಪು ಕೊರಗರು ಎಂದು

ಮುಂದಿನ ದಿನಗಳಲ್ಲಿ ಕರೆಯಲಾಯಿತು.

ಮೂರನೆಯ ಗುಂಪು ಇನ್ನೂ ಸ್ವಲ್ಪ ಮುಂದೆ ಹೋಗಿ ಇಂದಿನ ಗೋವಾ ಕಡಲ ತೀರದಲ್ಲಿ ಕರಾವಳಿ ಪ್ರದೇಶ ತಲುಪಿತು. ಇವರು ತಮ್ಮನ್ನು 'ಕ್ವರ್ರ್' ಎಂದೇ ಕರೆಸಿಕೊಂಡರು. ಮುಂದೆ ಇವರನ್ನು ಕೊಂಕಣಿ ಮಿಶ್ರಿತ ಭಾಷೆಯಲ್ಲಿ 'ಕಪುಡ ಕ್ವರ್ರ್' ಎಂದು ಗುರುತಿಸಲಾಯಿತು. ಕ್ರಮೇಣ ಇವರು ದಕ್ಷಿಣ ದಿಕ್ಕಿಗೆ ಅಲೆಮಾರಿ ಹೊರಟರು.

ದಕ್ಷಿಣದಲ್ಲಿ ಮೊದಲೇ ತಳವೂರಿದ್ದ ಸೊಪ್ಪು ಕೊರಗರು(ತಪ್ಪು ಕೊರಗರು) ಇವರನ್ನು ಗೋವೆತ್ತ ಕೊರೆರ್(ಗೋವಾದ ಕೊರಗರು) ಎಂದೂ ಕರೆಯಲಾರಂಭಿಸಿದರು. ಕ್ರಮೇಣ ಕುಂದಾಪುರ ಕನ್ನಡದವರು 'ಮ್ಯಾಕೆತ್ತಾರ್' (ಮೇಲಿನವರು) ಎಂದೂ ಕರೆದರು.

ನಾಲ್ಕನೆಯದ್ದಾಗಿ ತಪ್ಪು ಕೊರಗ ಪಂಗಡದಿಂದ ಬೇರೆ ಬೇರೆ ಸಾಮಾಜಿಕ ಕಾರಣಗಳಿಗಾಗಿ ಒಡೆದು ಹೋಗಿ ಪ್ರತ್ಯೇಕವಾದ ಒಳಪಂಗಡವೊಂದು ಹುಟ್ಟಿಕೊಂಡಿತು. ಅದೇ ಮುಂದಕ್ಕೆ ಕನ್ನಡ ಬಳಕೆಯೊಂದಿಗೆ 'ಸೊಪ್ಪು ಕೊರಗ' ಎಂಬುವುದಾಗಿ ಗುರುತಿಸಿಕೊಂಡಿತು. ಈ ಗುಂಪು ನಡ್ಸಾಲಿನಿಂದ ಪೂರ್ವಕ್ಕೆ ಗುಳೆ ಹೊರಟಿದ್ದು ಇತಿಹಾಸ! ಈ ರೀತಿಯಾಗಿ ಆದಿಮೂಲ ಕೊರ್ರು ನಾಲ್ಕು ಒಳಪಂಗಡಗಳಾಗಿ ಈ ನೆಲದಲ್ಲಿ ಸಾವಿರಾರು ವರ್ಷಗಳ ಬಿಸಿಲು, ಮಳೆ, ಗಾಳಿಯನ್ನು ಕಂಡವರಾಗಿರುತ್ತಾರೆ.

ಪ್ರಮುಖ ಅಂಶಗಳು

ಕೊರಗರಲ್ಲಿರುವುದು ನಾಲ್ಕು ಒಳಪಂಗಡಗಳು

1. ಕುಂಟು ಕೊರಗ
2. ತಪ್ಪು ಕೊರಗ
3. ಕಪುಡ ಕೊರಗ
4. ಸೊಪ್ಪು ಕೊರಗ

ಪ್ರಸ್ತುತ ಕುಂಟು ಕೊರಗ ಪಂಗಡದ ಜನರು, ಕೇರಳದ ಕಾಸರಗೋಡು ಜಿಲ್ಲೆ ಹಾಗೂ ಕರ್ನಾಟಕದ ಪುತ್ತೂರು, ಸುಳ್ಯ, ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲೂಕುಗಳಲ್ಲಿ ಅಲ್ಲಲ್ಲಿ ಚದುರಿದಂತೆ ವಾಸವಾಗಿದ್ದಾರೆ. ತಪ್ಪು ಕೊರಗರು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮೂಡಬಿದ್ರೆ, ಮೂಲ್ಕಿ ಸುತ್ತಮುತ್ತ ಹಾಗೂ ಉಡುಪಿ ಜಿಲ್ಲೆಯ ಉಡುಪಿ ನಗರ, ಕಾಪು, ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳ, ಬಾರ್ಕೂರು, ಕೋಟಾ ಪರಿಸರದಲ್ಲಿ ದಟ್ಟವಾಗಿ ಹರಡಿದ್ದಾರೆ. ಇನ್ನು ಕಪುಡ ಕೊರಗರು ಕುಂದಾಪುರ ತಾಲೂಕಿನ ನಾಡಾ, ಕೊಲ್ಲೂರು, ಬೈಂದೂರು, ಶಂಕರ ನಾರಾಯಣ, ಉತ್ತರಕನ್ನಡ ಜಿಲ್ಲೆಯ ಶಿರ್ಶಿ, ಭಟ್ಕಳ, ಹೊನ್ನಾವರ, ಕುಮಟಾ ಹಾಗೂ ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ ಸುತ್ತಲೂ ಜೀವಿಸುತ್ತಿದ್ದಾರೆ. ಅದೇ ರೀತಿ ಸೊಪ್ಪು ಕೊರಗರು ಮಂದಾರ್ತಿ, ಕೊಕ್ಕರ್ಣೆ, ಹಾಲಾಡಿ, ಹೆಬ್ರಿ, ಅಜೆಕಾರು, ಬಜಗೋಳಿ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಆಜುಬಾಜಿನಲ್ಲಿ ವಾಸವಿದ್ದಾರೆ.

‘ಬರಿ’ ಅಥವಾ ‘ಬಳಿ’ ಪದ್ಧತಿ

ಕೊರಗ ಸಮುದಾಯದ ‘ಬರಿ’ ಅಥವಾ ‘ಬಳಿ’ ಪದ್ಧತಿಯ ಬಗ್ಗೆಯೂ ಮೊದಲಿನಿಂದಲೂ ವಿದ್ವಾಂಸರಲ್ಲಿ ಕುತೂಹಲ ಇದ್ದೇ ಇದೆ. ತುಳುನಾಡಿನ ಇತರ ಮಾತೃಮೂಲ ಸಮುದಾಯಗಳಲ್ಲೂ ಈ ರೀತಿಯ ಬಳಿಗಳು ಚಾಲ್ತಿಯಲ್ಲಿವೆ. ಇದೇ ಬಳಿ ಪದ್ಧತಿಯನ್ನು ಹೋಲುವ ಒಳ ನಿಯಮಗಳು ಅಥವಾ ಗೋತ್ರಗಳು. ಪಿತೃಪ್ರಧಾನ ಜಾತಿ ವ್ಯವಸ್ಥೆಯಲ್ಲಿಯೂ ಇದೆ. ಆದಿವಾಸಿ ಬುಡಕಟ್ಟು ಕೊರಗ ಸಮುದಾಯದ ಒಳಪಂಗಡಗಳಲ್ಲಿ ಒಟ್ಟಾಗಿ ಇಪ್ಪತ್ತೈದರಿಂದ ಮೂವತ್ತರಷ್ಟು ಬಳಿಗಳನ್ನು ಗುರುತಿಸಲು ಸಾಧ್ಯವಿದೆ. ಕೊರಗರ ಜನ ಸಂಖ್ಯೆಯು ಕ್ಷೀಣಿಸಿದಂತೆ ಕೆಲವೊಂದು ಬಳಿಗಳೂ ಕಣ್ಮರೆಯಾಗಿರುವುದು ಕಂಡು ಬರುತ್ತದೆ. ಈ ಬಳಿಗಳ ಬಗ್ಗೆ ಹಲವು ವಿದ್ವಾಂಸರು ನಡೆಸಿದ ಅಧ್ಯಯನಗಳಲ್ಲಿ ಬಹಳಷ್ಟು ವ್ಯತ್ಯಯಗಳು ಎದ್ದು ಕಾಣುತ್ತವೆ. ಇಲ್ಲಿ ಮಾಹಿತಿ ನೀಡುವುದರಲ್ಲಿ ಕೊರಗರು ಎಡವಿದರೋ, ಅಥವಾ ಕೊರಗರ ಭಾಷೆ(ಮಾತುಗಳನ್ನು) ಅರ್ಥೈಸುವುದರಲ್ಲಿ ಅಧ್ಯಯನಕಾರರು ಎಡವಿದರೋ.. ಒಟ್ಟಿನಲ್ಲಿ ಅಧ್ಯಯನದಲ್ಲಿ ಎಡವಟ್ಟುಗಳಂತೂ ಆಗಿರುವುದು ಸ್ಪಷ್ಟ! ಕೆಲವರು ಯಾವುದೋ ಒಂದು ಒಳಪಂಗಡದಲ್ಲಿನ ಬಳಿಗಳನ್ನು ಗುರುತಿಸಿ ಅದೇ ಕೊರಗ ಸಮುದಾಯದ ಬಳಿಗಳು ಎಂದು ದಾಖಲಿಸಿದ್ದಾರೆ. ಇನ್ನು ಕೆಲವರು ಒಂದೇ ಬಳಿಗೆ ಎರಡು ಮೂರು ಹೆಸರು ಕೊಟ್ಟು ಬಳಿಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ. ಇನ್ನೂ ಕೆಲವರು ಊರಿನ ಹೆಸರುಗಳನ್ನೇ ಬಳಿಗಳ ಹೆಸರುಗಳಾಗಿ ದಾಖಲಿಸಿದ್ದಾರೆ.

ವಾಸ್ತವವಾಗಿ ಕಪುಡ ಕೊರಗರಲ್ಲಿ ಹೆಚ್ಚು ಅಂದರೆ ಒಂಭತ್ತು ಬಳಿಗಳಿದ್ದರೆ, ಕುಂಟು ಕೊರಗರಲ್ಲಿ ಪ್ರಸ್ತುತ ನಾಲ್ಕು ಬಳಿಗಳು ಮಾತ್ರ ಉಳಿದಿವೆ. ಅದರಂತೆ ಸೊಪ್ಪು ಕೊರಗರಲ್ಲಿ ಆರು ಮತ್ತು ತಪ್ಪು ಕೊರಗರಲ್ಲಿ ಐದು ಬಳಿಗಳು ಚಲಾವಣೆಯಲ್ಲಿವೆ. ತಪ್ಪು ಕೊರಗರಲ್ಲಿನ ಕೊರಗ ತನಿಯನ ತಂದೆ ‘ಕುರುವ’ನ ‘ಸೋಮನ್ನಾಯ’ ಬಳಿಯಲ್ಲಿ ಇಂದು ಯಾರೊಬ್ಬರೂ ಉಳಿದಿಲ್ಲ. ಆದರೆ ತನಿಯನ ತಾಯಿಯ ‘ಬಂಗೇರನ್ನಾಯ’ ಅಥವಾ ‘ಪಾಡ್ದನಾರ್’ ಬಳಿಯಲ್ಲಿ ಇಂದಿಗೂ ಹೆಚ್ಚಿನ ಜನಸಂಖ್ಯೆ ಹೊಂದಿರುವುದನ್ನು ಕಾಣುತ್ತೇವೆ.

1. ಕುಂಟು ಕೊರಗರ ನಾಲ್ಕು ಬಳಿಗಳು

1. ಬಾಥೆರ್
2. ಮಾನ್ಯದ್‌ನಾರ್
3. ಕುರ್ಮೆದ್‌ನಾರ್
4. ಮುಂಡದ್‌ನಾರ್

2. ತಪ್ಪು ಕೊರಗರ ಐದು ಬಳಿಗಳು

1. ಪಾಡ್ದನಾರ್ (ಬಂಗೇರನ್ನ ಬಳಿ/ಆಯಿಕಲ, ಅಲೆವೂರು ಬಳಿ)
2. ತಡ್ಪೆನಾರ್ (ತಾಲ್ಯನ ಬಳಿ/ಸಾಲ್ಯಾನ್/ಬಳೆಕುಂಜ, ಚೇರ್ಕಾಡಿ ಬಳಿ)
3. ಮೂಕೆನಾರ್ (ಕೋಟ್ಯಾನ್/ಕಾಪು, ಪಡ್ಡಮ ಬಳಿ)
4. ತಿರ್ಗೆನಾರ್ (ಸೆರಿಗೆನ್ನಾರ್/ಮಡುಂಬು, ಸುರ್ಗೆನಾರ್ ಬಳಿ)
5. ಕುಂದರನ ಬಳಿ (ಕುಂದರ್/ಮಜಿಲೊಟ್ಟು, ಉಪ್ಪೂರ್ ಬಳಿ)

3. ಕಪುಡ ಕೊರಗರಲ್ಲಿನ ಒಂಭತ್ತು 'ಬಳಿ'ಗಳು

1. ಬಿಜಿಗಾರ್	2. ಬಾಜರ್	3. ತಡಿಯಾರ್
4. ಕೊನಾರ್	5. ಹಾತಾರ್(ಸಿರಿನ್ ಬಳಿ)	6. ಎಲ್ಕಿಜಿಯಾರ್
7. ಕುಳಾರ್	8. ಗುಟಾರ್	9. ಕಡ್‌ಬಾರ್

4. ಸೊಪ್ಪು ಕೊರಗರ ಆರು ಬಳಿಗಳು

1. ಬಿಜಿತ್ತಾರ್	2. ಬಾಜೆಲ್‌ತ್ತಾರ್	3. ಮೂಂಕುತಾರ್
4. ಕುರ್ನಿತಾರ್	5. ಹರ್ಕಜೆತ್ತಾರ್	6. ಎಲ್ಕಡ್‌ತ್ತಾರ್

ಪ್ರಸ್ತುತ ನಡ್ಸಾಲಿನ ತಪ್ಪು ಕೊರಗರ ಬಳಿಗಳ ಕೆಲವು ಬಲೆಪುಗಳು

ಪಾಡ್ದನಾರ್ (ಬಂಗೇರನ್ನ) ಬಳಿ

ಆಯಿಕಲ (ಐಕಲ)–ಮೂಲ	ಪುನರೂರು
ಪೊಳಲಿ (ಕೊಡಿಬೆಟ್ಟು)	ಪಡುಶೆಡ್ಡೆ
ಪಂಚಕಾಡು (ಪಡುಬಿದ್ರೆ)	ಎರ್ಮಾಳ್
ಸಾಣೂರು	ಪಾಂಗಾಳ
ಪಾಂಬೂರು	ಬಂಟಕಲ್ಲು
ಪಡುಬೆಳ್ಳೆ	ಮುಳಿಕಂಬ್ಲ (ಮೂಡುಬೆಳ್ಳೆ)
ಕಂಗುರಿ (ಕಡಂದಲೆ)	ಮೈಕೋಡಿ (ಮುದರಂಗಡಿ)
ಅಲೆವೂರು	ಎಕ್ಕಾರು, ಕೆಲ್ಲ ಪುತ್ತಿಗೆ

ಮೂಕೆನಾರ್ (ಕೋಟ್ಯಾನ್) ಬಳಿ

ಕಾಪು – ಮೂಲ	ಪಾದೂರು	ಎಲ್ಲೂರು
ಕುತ್ಯಾರ್	ಕಳತ್ತೂರು	ಇನ್ನ
ಸಾಂತೂರು ಕೊಪ್ಲ	ಪಣಿಯೂರು	ಬಂಡಸಾಲೆ
ಪೆರ್ಮುದೆ	ತೋಕೂರು	ಮುಚ್ಚೂರು

ಪೆರ್ರಾ	ಬೆಳುವಾಯಿ	ವರಂಗ
ತಡಂಬೈಲು

ತಡ್ಪೆನಾರ್ (ತಾಲ್ಯನ / ಸಾಲಿಯಾನ್) ಬಳಿ

ಬಳೆಕುಂಜ - ಮೂಲ, ಪಲಿಮಾರು	ಮುಂಡ್ಕೂರು (ಮುಲ್ಲಡ್ಕ)
ಸಚ್ಚೇರಿಪೇಟೆ	ಬೋಳಾ
ಪಳ್ಳಿ	ನಿಂಜೂರು
ವರ್ವಾಡಿ	ಕಾಟಿಪಳ್ಳ
ಮಿಜಾರು	ತೋಡಾರು
ದಡ್ಡಿ	ಕಲ್ಲಮುಂಡ್ಕೂರು
ಕೇಂಜ (ಕಾಟಿಪಳ್ಳ)	ಮಾಸ್ತಿಕಟ್ಟೆ (ಮೂಡಬಿದ್ರೆ)

ತಿರ್ಗೆನಾರ್ (ಸೆರಿಗೆನ್ನಾರ್)

ಮಡುಂಬು - ಮೂಲ, ಕುರ್ಕಾಲು	ಪಡುಬಿದ್ರೆ (ಬೀಡು ಬಳಿ)
ಅಡ್ವೆ	ಕಡಂದಲೆ (ಗೋಳಿದಡಿ)
ಮಜೂರು	ಕರ್ನಿರೆ
ಕವತ್ತಾರು	ಕಾಂತಾವರ
ಬೆಳ್ಕಳ	ಕೋಡು (ಶಿರ್ವ)
ಪಂಜಿಮಾರು	ಬೊಳ್ಬಾರ್ (ಶಿಬರೂರು)
ಕಂದಾವರ (ಬೈಲು)	

ಕುಂದರನ್ನ (ಕುಂದರ್) ಬಳಿ

ಮಜಿಲೊಟ್ಟು - ಮೂಲ	ಜಂತ್ರ
ನಂದಳಿಕೆ	ಪಂಜಿಮಾರು
ಶಿರ್ವಪದವು	ಗುತ್ತಕಾಡು
ಕಕ್ವ	ಕಿಲ್ಪಾಡಿ
ಸೂಡಾ	ಉರ್ಕಿ (ಮೂಡಬಿದ್ರೆ)
ಕೈಲಜ (ಕುರ್ಮಿಲ್‌ಗುಡ್ಡೆ)	ಪಾದೆಬೆಟ್ಟು

ಬಳಿ ಮೂಲಗಳು

ಕೊರಗರ ಪ್ರತಿಯೊಂದು ಬಳಿಗಳಿಗೂ ಒಂದೊಂದು 'ಮೂಲ'(ಸ್ಥಾನ)ಗಳಿರುತ್ತವೆ. ಈ ಬಳಿ ಮೂಲಗಳು ಹೇಗೆ ಹುಟ್ಟಿಕೊಂಡವು ಎಂಬುವುದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಆದರೆ ಅಲೆಮಾರಿ ಜೀವನದ ಬಳಿಕ ಇವರು ಹಲವು ಗುಂಪುಗಳಾಗಿ ಅಲ್ಲಲ್ಲಿ ನೆಲೆಯಾದರು. ಮುಂದೆ ಈ ಸ್ಥಳಗಳೇ ಮೂಲಗಳಾಗಿರುವ ಸಾಧ್ಯತೆಗಳಿವೆ. ಉದಾಹರಣೆಗೆ ತಪ್ಪು ಕೊರಗ ಪಂಗಡದ ಪಾಡ್ದನಾರ್ ಅಥವಾ ಬಂಗೇರನ್ನಾಯ ಬಳಿಯವರು ಆಯಿಕಾಲ (ಈಗಿನ ಐಕಳ) ಮೂಲದವರಾಗಿರುತ್ತಾರೆ. ತಡ್ಪೆನಾರ್ ಅಥವಾ ತಾಲ್ಯನ(ಸಾಲ್ಯಾನ್) ಬಳಿಯವರು ಬಳೆಕುಂಜ ಮೂಲದವರಾದರೆ ಮೂಕೆನಾರ್ ಅಥವಾ ಕೋಟ್ಯಾನ್ ಬಳಿಯವರು ಮಡುಂಬು ಮೂಲದವರು. ಕುಂದರ್ ಅಥವಾ ಕುಂದರನ್ನಾರು ಬಳಿಯವರು ಮಜಿಲೊಟ್ಟು ಮೂಲದವರಾಗಿರುತ್ತಾರೆ. ಇವರು ಈ ಮೂಲಸ್ಥಾನಗಳಿಂದ ಅದು ಯಾವುದೋ ಕಾರಣಗಳಿಗಾಗಿ ಬೇರೆ ಬೇರೆ ಕಡೆ ಹೋಗಿ ನೆಲೆ ನಿಂತಿರುವುದು ಸ್ಪಷ್ಟವಾಗುತ್ತದೆ.

ಉದಾಹರಣೆಗೆ ಪಾಡ್ದನಾರ್ (ಬಂಗೇರನ್ನಾಯ) ಬಳಿಯ ಪಾಂಗಾಳದ ಕೊರಗರು ಎಲ್ಲಿಂದ ಬಂದವರು ಎನ್ನುವುದು ಸ್ಪಷ್ಟ ಇಲ್ಲದಿದ್ದರೂ ಪಾಂಗಾಳದಿಂದ ಒಡೆದು ಹೋದ ಒಂದು ಕವಲು ಕಡಂದಲೆಯ ಕಂಗುರಿಗೂ ಇನ್ನೊಂದು ಕವಲು ಅಲೆವೂರಿಗೂ ಹೋಗಿರುವುದು ಸ್ಪಷ್ಟವಾಗಿದೆ. ಅದು ಇಂದಿಗೂ ಜನುಮನದಲ್ಲಿ ಉಳಿದುಕೊಂಡಿದೆ. ಅದರಲ್ಲೂ ಕಂಗುರಿಯ ಕೊರಗರು ಮತ್ತೆ ಮಾತೃ ಕುಟುಂಬ ಪಾಂಗಾಳಕ್ಕೆ ಮರು ಸೇರ್ಪಡೆಗೊಂಡಿರುತ್ತಾರೆ.

ಒಂದು ಅಂದಾಜಿನ ಪ್ರಕಾರ ಈ ಪಾಡ್ದನಾರ್(ಬಂಗೇರ) ಬಳಿಯವರು ತಮ್ಮ ಮೂಲ ಸ್ಥಾನ ಆಯಿಕಾಲದಿಂದ ಬೇರೆ ಬೇರೆ ಸಾಮಾಜಿಕ ಕಾರಣಗಳಿಂದ ಒಡೆದುಹೋಗಿ, ಅದರಲ್ಲಿ ಒಂದು ಬಣವು ಪುನಾರು(ಪುನರೂರು)ಗೆ ಆಗಮಿಸಿತು. ಅಲ್ಲಿಂದ ಒಂದು ಹೆಣ್ಣು ಮಗಳನ್ನು ಪಂಚಕಾಡಿಗೆ ಮದುವೆ ಮಾಡಿಕೊಡಲಾಗಿ ಆಕೆಯ ಸಂಸಾರ ಬೆಳೆಯಿತು. ಅಲ್ಲಿಂದ ಮುಂದಕ್ಕೆ ಅಜಲಿನ ಕಾರಣಕ್ಕಾಗಿ ಒಡೆದುಹೋದ ಒಂದು ಗುಂಪು ಎರ್ಮಾಳಿನತ್ತ ಧಾವಿಸಿ ಅಲ್ಲಿ ನೆಲೆ ಕಂಡಿತು. ಅಲ್ಲಿಂದಲೂ ಸಿಡಿದು ಹೋದ ಮತ್ತೊಂದು ಗುಂಪು ಪಾಂಗಾಳಕ್ಕೆ ಹೋಗಿ ನೆಲೆಸಿತು. ಪಂಚಕಾಡಿನಿಂದ ಸಿಡಿದುಹೋದ ಇನ್ನೊಂದು ಗುಂಪು ಕಾರ್ಕಳದ ಸಾಣೂರಿನಲ್ಲಿ ವಾಸವಾಗತೊಡಗಿತು. ಇದೇ ತರದಲ್ಲಿ ಎಲ್ಲಾ ಪಂಗಡಗಳ ಬಳಿ ಮೂಲಗಳಿಂದಲೂ ಒಡೆದು, ಸಿಡಿದು ಬೇರೆ ಬೇರೆ ದಿಕ್ಕುಗಳಲ್ಲಿ ಸಂಚರಿಸಿ ಯೋಗ್ಯ ಎನಿಸಿದ ಸ್ಥಳಗಳಲ್ಲಿ ನೆಲೆನಿಂತವು. ಈ ರೀತಿಯ ಪ್ರಕ್ರಿಯೆಗೆ ಹಲವು

ಸಹಸ್ರಮಾನಗಳೇ ಕಳೆದಿರಬಹುದು!!

ಒಂದು ಮಾದರಿ :

ಆಯಿಕಾಲ (ಮೂಲ)	ಪಡುಶೆಡ್ಡೆ	ಪುನಾರು
ಪಂಚಕಾಡು	ಸಾಣೂರು	ಎರ್ಮಾಳ್
ಪಾಂಗಾಳ	ಕಂಗುರಿ	ಮೂಡಬೆಟ್ಟು
ಅಲೆವೂರು	ಕೆಮ್ಮಣ್ಣು	

ಮುಖ್ಯಾಂಶ

ಐದು ಬಳಿ ಮೂಲಗಳು (ತಪ್ಪು ಕೊರಗರು)

1. ಪಾಡ್ದನಾರ್ (ಬಂಗೇರ) – ಆಯಿಕಾಲ
2. ತಡ್ಪೆನಾರ್ (ಸಾಲ್ಯಾನ್) – ಬಳೆಕುಂಜ
3. ಮೂಕೆನಾರ್ (ಕೋಟ್ಯಾನ್) – ಕಾಪು
4. ತಿರ್ಗೆನಾರ್ (ಸೆರಿಗೆನ್ನಾರ್) – ಮಡುಂಬು
5. ಕುಂದರನ್ನಾರ್ (ಕುಂದರ್) – ಮಜಿಲೊಟ್ಟು

ಇತಿಹಾಸದಲ್ಲಿ ಕೊರಗರು

ಇತಿಹಾಸವೆಂದರೆ ಗತಕಾಲದ ರಾಜಕೀಯ ಚಟುವಟಿಕೆಗಳು ಅಥವಾ ಘಟನಾವಳಿಗಳು ಎಂಬುವುದು ತಜ್ಞರ ಅಭಿಪ್ರಾಯ. ಆದರೆ ಕಾಡಾಡಿ ಬುಡಕಟ್ಟು ಕೊರಗರ ಇತಿಹಾಸ ವೆಂದರೇನು? ಉತ್ತರ ಭಾರತದ ಆದಿವಾಸಿ ನಾಯಕ ಬಿರ್ಸಾ ಮುಂಡನ ಬಗ್ಗೆ ಈಗಷ್ಟೇ ಕೇಳಿ ತಿಳಿದುಕೊಂಡಿದ್ದೇವೆ. ಹಲಗಲಿಯ ಬೇಡರು ಬ್ರಿಟಿಷ ರೊಂದಿಗೆ ಹೋರಾಡಿದ ಬಗ್ಗೆಯೂ ತಿಳಿದಿದ್ದೇವೆ. ಈ ಕೊರಗರು ಸ್ವಾತಂತ್ರ್ಯ ಪೂರ್ವದಲ್ಲಿ ಹೇಗಿದ್ದರು, ಏನು ಮಾಡುತ್ತಿದ್ದರು ಎಂಬುವುದರ ಬಗ್ಗೆ ಖಚಿತ ಮಾಹಿತಿಗಳು ದೊರೆಯುವುದಿಲ್ಲ. ಕ್ಯಾಂಬೆಲ್, ಬುಕಾನನ್, ಸ್ಟರಕ್, ವಾಲ್‌ಹೌಸ್ ಮೊದಲಾದ ವಿದೇಶಿ ಇತಿಹಾಸಕಾರರು ಈ ಸಮುದಾಯದ ಇತಿಹಾಸದ ಬಗ್ಗೆ ಒಂದಷ್ಟು ಬೆಳಕು ಚೆಲ್ಲುವ ಪ್ರಯತ್ನಗಳನ್ನೂ ಮಾಡಿದ್ದಾರೆ. ಇವರ ಒಟ್ಟು ಅನಿಸಿಕೆ, ಅಭಿಮತಗಳನ್ನು ಅವಲೋಕಿಸಿದಾಗ, ಮಲೆನಾಡಿನ ಅನಂತಪುರ ಅರಣ್ಯ ಪ್ರದೇಶದಲ್ಲಿ ಕ್ರಿ.ಶ.450ರ ಸುಮಾರಿಗೆ ಉಬಸ್(ಹುಬಾಷ್) ಅಥವಾ ಉಬಸಿಕ (ಹುಭಾಶಿಕ?) ಎನ್ನುವ ಕೊರಗರ ಒಬ್ಬ ಬಲಿಷ್ಟ ಗುರಿಕಾರ(ನಾಯಕ) ಇದ್ದನು. ಕ್ರಮೇಣ ಆತ ಕರಾವಳಿಯ ಅಂದಿನ ಪ್ರಬಲ ಕೊರಗ ತಾಣ ವಾರಕನೂರು(ಬಾರಕೂರು) ಬಲೆಪಿಗೆ ಬಂದು ಅಲ್ಲಿನ ಕೊರಗರೊಂದಿಗೆ ಒಪ್ಪಂದ ಮಾಡಿಕೊಂಡನು. ಹಾಗೂ ಕೆಲವು ಕಾಲ ಕೊರಗರ ನಾಡನ್ನು(ಕಾಡನ್ನು) ಆಳಿದ್ದನು. ಈ ಸಂದರ್ಭದಲ್ಲಿ ಉತ್ತರದ ಬನವಾಸಿ ಕಡೆಯಿಂದ ಕದಂಬರು ಸಾಮ್ರಾಜ್ಯವನ್ನು ವಿಸ್ತರಿಸುವ ಪ್ರಯತ್ನದಲ್ಲಿದ್ದರು. ಬೈಂದೂರು ದಾಟಿ ಬಾರ್ಕೂರಿಗೆ ದಾಳಿ ಮಾಡುವ ಸೂಚನೆ ನೀಡಿದ್ದರು. ಸ್ವತಃ ಮಯೂರವರ್ಮನೇ ದಂಡೆತ್ತಿಬಂದನು. ಆಗ ಉಬಸಿಕನ ನಾಯಕತ್ವದಲ್ಲಿ ಕೊರಗರು ಒಗ್ಗೂಡಿ ಹೋರಾಡಿದರು. ಪರಿಣಾಮವಾಗಿ ಮಯೂರವರ್ಮ ಸೋತುಸೈನ್ಯ ಸಮೇತ ಹಿಂದಿರುಗಿದನು. ಈ ಘಟನೆಯ ಬಳಿಕ ಕೊರಗರು ಅರಣ್ಯದ ಎತ್ತರದಪ್ರದೇಶದಲ್ಲಿ(ಈಗಿನ ಅಂಪಾರು ಗ್ರಾಮ) ಒಂದು ಕಣ್ಗಾವಲು ಕೋಟೆಯನ್ನು ನಿರ್ಮಿಸಿದರು. ಇದೇ ಕೋಟೆ ಮುಂದೆ 'ಕ್ವರ್ರ ಕೋಟೆ'(ಕೊರಗರ ಕೋಟೆ) ಎಂದು ಪ್ರಸಿದ್ಧಿಯಾಯಿತು.

ಬಳಿಕ ಉಬಸಿಕನು ದಕ್ಷಿಣ ಕಡೆಯ ಕೊರಗರ ಯೋಗಕ್ಷೇಮ ವಿಚಾರಿಸುವುದಕ್ಕಾಗಿ ಯಾತ್ರೆ ಕೈಗೊಂಡನು. ಆದರೆ ಅದೇ ವೇಳೆ ಅವನಿಗೆ ಮಾರಕ ಹಳದಿಕಾಯಿಲೆ ಕಾಣಿಸಿ ಕೊಂಡಿತು. ಆದುದರಿಂದ ಅವನು ಮಂಗಳೂರಿನಲ್ಲಿ (ಈಗಿನ ಪಣಂಬೂರು) ಕೆಲವು ಸಮಯ ತಂಗಿ ಅಲ್ಲಿನ ಕೊರಗರಿಂದ ಆರೈಕೆ ಪಡೆದನು. ಕೊನೆಗೆ ಮಂಜೇಶ್ವರದ ಕಡೆಗೆ ಪಾದಯಾತ್ರೆ ಮಾಡಿದನು. ಮಂಜೇಶ್ವರದಲ್ಲಿ ತನ್ನ ಸೋದರಳಿಯ ಸಿದ್ಧ ಬೈರುವನ್ನು ಗುರಿಕಾರನನ್ನಾಗಿ ನೇಮಕ ಮಾಡಿದನು. ಸಿದ್ಧ ಬೈರು ಹನ್ನೆರಡು ವರ್ಷಗಳ ಕಾಲ

ಗುರ್ಕಾಮೆ(ಆಳ್ವಿಕೆ) ನಡೆಸಿದನು. ಅತ್ತ ಉಬಸಿಕನನ್ನು ಮುಗಿಸಲು ಅವಮಾನಿತ ಬನವಾಸಿಯ ಬ್ರಾಹ್ಮಣರು ಉಪಾಯ ಮಾಡುತ್ತಲೇ ಇದ್ದರು. ಅವರು ವೀರವರ್ಮನ ಮಗ ಅಂಗಾರವರ್ಮನನ್ನು ಸಂಧಾನಕ್ಕೆಂದು ಕಳುಹಿಸಿ ಉಬಸಿಕನಿಗೆ ಬ್ರಾಹ್ಮಣ ಕನ್ಯೆಯೊಂದಿಗೆ ಮದುವೆ ಮಾಡುವ ಆಮಿಷ ತೋರಿಸಿದರು. ಬ್ರಾಹ್ಮಣರ ಕುಟಿಲತೆಯನ್ನು ಅರಿಯದ ಕಾಡಿನ ಕೊಡ್ತಯಿ ಉಬಸಿಕ ಮದುವೆಗೆ ಒಪ್ಪಿಕೊಂಡನು. ಆತ ಮದುವೆಯ ದಿನ ದಿಬ್ಬಣದೊಂದಿಗೆ ಮಂಜೇಶ್ವರಕ್ಕೆ ಬಂದಾಗ ಅಂಗಳದ ತುಂಬಾ ನೆಲ್ಲಿಕಾಯಿ ಹರಡಿ ಅದರ ಮೇಲೆ ಚಾಪೆ ಹಾಸಿದ್ದರು. ಅದನ್ನರಿಯದ ಮದುಮಗ ಚಾಪೆಯ ಮೇಲೆ ಕಾಲಿಟ್ಟು ಮುನ್ನಡೆದಾಗ ಎಡವಿ ಬಿದ್ದನು. ಅದನ್ನೇ ಕಾಯುತ್ತಿದ್ದ ಅಂಗಾರವರ್ಮನ ಸೈನಿಕರು ಆತನನ್ನು ಬಂಧಿಸಿ ಸಾರ್ವಜನಿಕವಾಗಿ ಥಳಿಸಿ ಮರದ ಕೊಂಬೆಗೆ ನೇಣು ಹಾಕಿದರು. ದಿಬ್ಬಣದೊಂದಿಗೆ ತೆರಳಿದ್ದ ನೂರಾರು ಕೊರಗರನ್ನು ವಿವಸ್ತ್ರಗೊಳಿಸಿ ಥಳಿಸಿದರು. ಕೆಲವರನ್ನು ಕೊಂದರು. ಚಿತ್ರಹಿಂಸೆ ನೀಡಿ ಕಾಡಿಗಟ್ಟಿದರು. ಬಡಗಣ ಬನವಾಸಿಯಿಂದ ತೆಂಕಣ ನೀಲೇಶ್ವರದವರೆಗಿನ ಅರಣ್ಯದಲ್ಲಿದ್ದ ಕೊರಗರನ್ನು ಹುಡುಕಿ ಹುಡುಕಿ ಕೊಂದರು. ಅವರ ಕಣ್ಣು ತಪ್ಪಿಸಿ ಉಳಿದ ಕೊರಗರು ಕಂಗೆಟ್ಟು ದಿಕ್ಕಾಪಾಲಾಗಿ ಓಡಿದರು. ಇಲ್ಲಿಂದ ಮುಂದೆ ಕೊರಗರ ಅವನತಿಯ ಕಾಲ ಆರಂಭವಾಯಿತು. ಅಂದು ಬ್ರಾಹ್ಮಣರು ನೀಡಿದ ಹಿಂಸೆ, ಹೊಡೆತಗಳನ್ನು ಕೊರಗರು ಇಂದಿಗೂ ಮರೆಯಲು ಸಾಧ್ಯವಾಗಿಲ್ಲ. ಈಗಲೂ ಆಗಾಗ ಬೆಚ್ಚಿ ಬೀಳುತ್ತಾರೆ. ಯವುದೇ ಕೆಲಸವನ್ನು ಮುಂದುವರಿಸಲು ಅಳುಕುತ್ತಾರೆ. ಹಾಗಿದ್ದರೆ ಅಂದಿನ ಆ ದೃಶ್ಯ ಹೇಗಿದ್ದಿರಬಹುದು? ಊಹಿಸಲೂ ಸಾಧ್ಯವಿಲ್ಲ. ಮುಂದೆ ಈ ಕೊರಗರು ಹಲವು ಪಂಗಡಗಳಾಗಿ ಅಲೆಮಾರಿ ಜೀವನ ಆರಂಭಿಸಬೇಕಾಯಿತು. ಈ ಅಲೆದಾಟದ ನಂತರ ಒಂದೊಂದು ಗುಂಪು ಒಂದೊಂದು ಕಡೆ ನೆಲೆನಿಂತು ಕೃಷಿ ಬದುಕು ಆರಂಭವಾಯಿತು. ಹೀಗೆ ಎಲ್ಲೆಲ್ಲಿ ನಿಂತು ಕೃಷಿಗೆ ತೊಡಗಿಕೊಂಡರೋ ಅದೇ ಸ್ಥಳ ಅವರ 'ಮೂಲ' ಅಥವಾ ಮನೆತನ(ಜಮ್ಮ)ಗಳಾದವು. ನಂತರ ಈ ಕಾಡಿನ ಮಕ್ಕಳು ಮತ್ತೆ ನಾಡಲ್ಲಿ ಪ್ರತ್ಯಕ್ಷವಾಗಿರುವುದು ಹನ್ನೊಂದನೇ ಶತಮಾನದ ಅಂತ್ಯದಲ್ಲಿ! ಅದಷ್ಟು ಸಮಯ ಕಾಡು ಬೆಟ್ಟಗಳಲ್ಲಿ ಅದೃಶ್ಯರಾಗಿ ಪ್ರಾಣಿ ಪಕ್ಷಿಗಳೊಂದಿಗೆ ಸಹಜೀವನ ನಡೆಸುತ್ತಿದ್ದ ಇವರನ್ನು ಅಂದಿನ ಅಲೂಪ ಹಾಗೂ ಸಮಕಾಲೀನ ಅರಸರ ಕಾಲದಲ್ಲಿ ಮತ್ತೆ ಹೊರ ಜಗತ್ತಿಗೆ ಪರಿಚಯಿಸಲಾಯಿತು. ಊರಿನ ಸ್ವಚ್ಛತೆಗಾಗಿ ಹಾಗೂ ಇವರ ಇಂಪಾದ ಸಂಗೀತ ಪರಿಕರಗಳ ನಾದಸ್ವರಕ್ಕಾಗಿ ನಾಡಿಗೆ ಕರೆತರಲಾಯಿತು. ಅದೇ ಮುಂದೆ ಅಜಲು ಚಾಕಿರಿ(ಸೇವೆ)ಯಾಗಿ ಗಟ್ಟಿಯಾಯಿತು. ಹನ್ನೆರಡನೇ ಶತಮಾನದ ಮಧ್ಯ ಕಾಲದಲ್ಲಿ ನಡ್ಪಾಲಿನ ತಪ್ಪು ಕೊರಗ ಪಂಗಡದ ಪಾಡ್ದನಾರ್(ಬಂಗೇರನ್ನಾಯ) ಬಳಿ ಮೂಲ (ಆಯಿಕಾಲ)ದಲ್ಲಿ ಹುಟ್ಟಿದ ಕೊರಗ ತನಿಯ ಅಥವಾ ನೀಚನು ಕೆಲವು ಕಾಲ ಪವಾಡ ಪುರುಷನಾಗಿ ಮೆರೆದನು. ಕೊನೆಗೆ ಆತನೂ ಅಜಲು ಅಸ್ಪೃಶ್ಯತೆಗೆ ಸಿಲುಕಿ ದೈವತ್ವಕ್ಕೆ ಬಲಿಯಾದನು. ಕೊರಗ ತನಿಯನ ಮೊದಲ ಸಾಕು ತಾಯಿ ಬೈಕಾಡ್ತಿ ಹಾಗೂ ಮಂಜ ಮೊದಲಾದವರ ಪಾಡೂ ಇದೇ ಆಯಿತು.

ಕೊರಗರ ಅಜಲು ಪದ್ಧತಿ

ಶತಮಾನಗಳ ತರುವಾಯ ಮತ್ತೆ ನಾಡಿಗೆ ಪರಿಚಯವಾದರೂ ಇವರಲ್ಲಿ ಅಂದಿನ ಭಯ, ಕೀಳರಿಮೆಗಳು ಮಾಯವಾಗಿರಲಿಲ್ಲ. ಸಾಲದ್ದಕ್ಕೆ ಇವರನ್ನು ಬಲಾಢ್ಯರು ಕಾಡಿನಿಂದ ಎಳೆದುಕೊಂಡು ತಂದು ಅಸ್ಪೃಶ್ಯತೆಯ ಭೀಕರ ಬಂಧನದಲ್ಲಿ ತಮ್ಮ ಸೇವೆಯನ್ನು ಮಾಡಿಸಿಕೊಳ್ಳತೊಡಗಿದರು. ಊರಿನ ನೈರ್ಮಲ್ಯದ ಜೊತೆಗೆ ದೌರ್ಜನ್ಯ, ದಬ್ಬಾಳಿಕೆ ನಡೆಸಿ ಮನೋರಂಜನೆ ಪಡೆಯಲಾರಂಭಿಸಿದರು. ತಮ್ಮ ಅನಿಷ್ಟಗಳನ್ನೆಲ್ಲಾ ಕೊರಗರಿಗೆ ವರ್ಗಾಯಿಸಿ, ವಿಕೃತಸುಖ ಅನುಭವಿಸಿದರು. ಪ್ರತೀ ಊರಿಗೂ ಒಂದೊಂದು ಕೊರಗ ಕುಟುಂಬಗಳನ್ನು ನಿಯೋಜಿಸಿಕೊಂಡು ಖಾಯಂ ಆಗಿ ಈ ತರದ ಸೇವೆಗಳನ್ನು ಪಡೆಯ ತೊಡಗಿದರು. ಈ ರೀತಿಯಾಗಿ ಕೊರಗರ ಅಜಲು ಪದ್ಧತಿ ಆರಂಭವಾಯಿತು. ನಿಗದಿತ ಪ್ರಾದೇಶಿಕ ವ್ಯಾಪ್ತಿಯೊಳಗೆ ನಿಯೋಜಿತ ವ್ಯಕ್ತಿ ಯಾ ಕುಟುಂಬ ಈ ಸೇವೆಯನ್ನು ಮಾಡುವುದು ಕಡ್ಡಾಯವಾಗಿತ್ತು.

ಅಜಲು ಚಾಕರಿಯನ್ನು ಧಿಕ್ಕರಿಸಿ, ಶಿಕ್ಷಣಕ್ಕೆ ಮೊರೆಹೋದ ಉಡುಪಿ ಅಡ್ವೆಯ ಮೋಹನ್ ಅಡ್ವೆ (ಬಿ.ಎಸ್.ಎನ್.ಎಲ್. ಅಧಿಕಾರಿಯವರು) ಈ ಅಜಲು ಸೇವೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ.

“ಕೊರಗರ ಆತ್ಮ ಗೌರವ, ಸ್ವಾಭಿಮಾನ, ಸ್ವಾವಲಂಬನೆಯನ್ನು ಬಲಿ ತೆಗೆದುಕೊಂಡು, ಅವರಲ್ಲಿ ಪರಾವಲಂಬನೆ, ಕೀಳರಿಮೆ, ಮೂಢನಂಬಿಕೆ, ಜಡತ್ವ, ನಿಷ್ಕ್ರೀಯತೆ, ಭೀತಿ ಹುಟ್ಟಿಸಿ, ಬೆಳೆಸಿ, ಅವರನ್ನು ಅಂತರ್‌ಮುಖಿಗಳನ್ನಾಗಿ ಮಾಡಿ, ತಮ್ಮ ಬಗೆಗೆ ನಕಾರಾತ್ಮಕ ಧೋರಣೆ, ಮತ್ತು ದುಶ್ಚಟಗಳಿಗೆ ಒಲವು ಮೂಡಿಸಿ ಸಾಮಾಜಿಕ ಅಂತರವನ್ನು ಹೆಚ್ಚಿಸಿರುವ ಒಂದು ಅಮಾನವೀಯ, ಅವಮಾನಕರ ಕಾರ್ಯನಿಬಂಧನಾ ವ್ಯವಸ್ಥೆಯೇ ಕೊರಗರ ಅಜಲು”

ಸಮಾಜಶಾಸ್ತ್ರವನ್ನು ಅಭ್ಯಾಸ ಮಾಡಿರುವ ಇನ್ನೊಬ್ಬ ಕೊರಗರ ನಾಯಕ ಮತ್ತಡಿ ಕಾಯರ್‌ಪಲ್ಕೆ (ಎಂ.ಎ., ಎಂ.ಫಿಲ್)ಯವರು ಈ ಪದ್ಧತಿಯನ್ನು ಈ ಕೆಳಗಿನಂತೆ ವಿವರಿಸುತ್ತಾರೆ. “ಮನುಷ್ಯರನ್ನು ಪ್ರಾಣಿಗಳನ್ನಾಗಿಸಿ, ಜಡತ್ವ, ಅಪನಂಬಿಕೆ, ಅಗೌರವವನ್ನು ತುಂಬಿಸಿ, ಆತ್ಮಗೌರವನಿರತ ಸ್ವಾಭಿಮಾನವನ್ನು ಕಳೆದು, ಇತರರ ಹಿತಕ್ಕಾಗಿ ತಮ್ಮ ಸುಖವನ್ನು ಮರೆತು, ನಂಬಿಕೆ, ದಬ್ಬಾಳಿಕೆ, ದೌರ್ಜನ್ಯಗಳಿಗಾಗಿ ತನ್ನ ಮೈಮರೆತು, ಅಪಾಯದ ಅವಹೇಳನದ ಊರಿನ ಚಾಕರಿ ಮಾಡಿಸುವ ಪದ್ಧತಿಯನ್ನು ಕೊರಗರ ಅಜಲು ಎನ್ನಬಹುದು”. ಒಟ್ಟಾರೆಯಾಗಿ ಬಹುಸಂಖ್ಯಾತ ಸಮಾಜಗಳು ಊರಿನ ನೈರ್ಮಲ್ಯದ ಕೆಲಸಗಳಿಗಾಗಿ ಹಾಗೂ ಸ್ವ-ಪ್ರತಿಷ್ಠೆಗಾಗಿ ಅಸ್ಪೃಶ್ಯತೆ ಮತ್ತು ಧಾರ್ಮಿಕ ಕಟ್ಟುಪಾಡುಗಳ

ಚೌಕಟ್ಟಿನೊಳಗೇ ಮುಗ್ಧ ಕೊರಗ ಜನಾಂಗವನ್ನು ಪೂರ್ಣ ಗುಲಾಮರನ್ನಾಗಿಯೇ ಉಳಿಸಿಕೊಂಡ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಕೊರಗರ ಅಜಲು ಎನ್ನಬಹುದು.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ ಇವರ ತುಳುನಿಘಂಟು ಸಂಪುಟ ಒಂದರ ಪ್ರಕಾರ " 'ಅಜಲು' ಅಂದರೆ ಧಾರ್ಮಿಕ, ಸಾಮಾಜಿಕ ಆಚರಣೆಗಳಲ್ಲಿ ವಿಶಿಷ್ಟ ಕರ್ತವ್ಯಗಳನ್ನು ಮಾಡುವ ವಂಶಪಾರಂಪರ್ಯದಿಂದ ಬಂದ ಅಧಿಕಾರ ವಲಯ" ಎಂದಿದೆ. ಅಜಲು ಎಂಬುವುದು ಸೇವಾ ನಿಬಂಧನಾ ಪ್ರದೇಶವಾಗಿದೆ. ಒಂದು ಪ್ರದೇಶದಲ್ಲಿ ನಿರ್ದಿಷ್ಟ ಪಂಗಡ ಯಾ ಗುಂಪಿನವರ ಸೇವೆಯ ಹಕ್ಕು ಅಥವಾ ಹೊಣೆಗಾರಿಕೆ.

ಬಲಿಷ್ಟ ವರ್ಗಗಳು ಕೊರಗರಿಂದ ಊರಿನ ಕೆಲಸಗಳಾದ ಗ್ರಾಮ ಸ್ವಚ್ಛತೆ, ಸತ್ತ ಪ್ರಾಣಿಗಳನ್ನು ತೆಗೆಸುವುದು, ಎಂಜಲೆಲೆ ತೆಗೆಸುವುದು ಇತ್ಯಾದಿಗಳನ್ನು ಮಾಡಿಸುತ್ತಾರೆ. ಸತ್ತವರ ಹೆಣ ಸುಡುವಾಗ, ಭೂತದ ನೇಮ, ಜಾತ್ರೆ, ಕಂಬಳ ಮುಂತಾದ ಧಾರ್ಮಿಕ, ಸಾಂಸ್ಕೃತಿಕ ಕೆಲಸಗಳಲ್ಲಿ ಕೊರಗರಿಂದ ಉಚಿತ ಡೋಲು ವಾದನ ಮಾಡಿಸಿ ಮನರಂಜನೆ ಪಡೆಯುತ್ತಾರೆ. ಧಾರ್ಮಿಕ ಕೇಂದ್ರಗಳೇ ಅಜಲಿನ ಮುಖ್ಯ ಭಾಗಗಳಾಗಿದ್ದರೂ ಅಲ್ಲಿ ಕೊರಗರಿಗೆ ಒಳ ಪ್ರವೇಶವಿಲ್ಲ. ಅಜಲಿನ ಎಲ್ಲಾ ಆಯಾಮಗಳಲ್ಲೂ ಅಸ್ಪೃಶ್ಯತೆಯನ್ನು ಜೀವಂತವಾಗಿರಿಸಿಕೊಳ್ಳಲಾಗಿದೆ. ಮಡಿ, ಮೈಲಿಗೆ ಎಂಬ ಕಲ್ಪನೆಗಳನ್ನು ಸೃಷ್ಟಿಸಲಾಗಿದೆ.

ಅಜಲು ಪದ್ಧತಿಯಲ್ಲಿ ಬರುವ ಸೇವೆಗಳು

1. ಊರಿನ ಸ್ವಚ್ಛತೆ

ಊರಿನಲ್ಲಿ ದನ, ನಾಯಿ, ಬೆಕ್ಕು, ಹಾವು ಇತ್ಯಾದಿಗಳು ಸತ್ತು ಬಿದ್ದರೆ ಅವುಗಳನ್ನು ತೆಗೆದು ವಿಲೇವಾರಿ ಮಾಡುವುದು, ಮದುವೆ ಮುಂತಾದ ಕಾರ್ಯಗಳಲ್ಲಿ ಊರವರು ಉಂಡು ಬಿಸಾಕಿದ ಎಂಜಲೆಲೆಯನ್ನು ತೆಗೆಯುವುದು ಇತ್ಯಾದಿ ಕೆಲಸಗಳನ್ನು ಮಾಡಬೇಕು.

2. ಅನಿಷ್ಟ ಹೊರುವುದು

ಊರಿನ ದಣಿಗಳ ಗರ್ಜನೆಗೆ ಬೆದರಿ, ಕೊರಗರು ಎಲ್ಲವನ್ನೂ ತಮ್ಮದೆಂದು ಸ್ವೀಕರಿಸುತ್ತಾರೆ. ರಾತ್ರಿಯಿಡೀ ಓಡಿ ಊರಿನ ಮಾರಿ (ಅನಿಷ್ಟ ಶಕ್ತಿಗಳು)ಯನ್ನು ತಲೆಯ ಮೇಲೆ ಹೊತ್ತು ಹೋಗುತ್ತಾರೆ. ರಾತ್ರಿಯಿಡೀ ಕಂಬಳ ಗದ್ದೆಯಲ್ಲಿ ಡೋಲುವಾದನ ಮಾಡಿ, ದುಷ್ಟಶಕ್ತಿಗಳು ಕಂಬಳದ ಗದ್ದೆಗೆ ಪ್ರವೇಶ ಮಾಡದಂತೆ ತಡೆಯಬೇಕು. ಪಂಚಮರೆಂಬ ಆರೋಪ ಹೊತ್ತು, ಪಂಚಮದಾನವನ್ನು ಸ್ವೀಕರಿಸಬೇಕು. ಆ ಮೂಲಕ ಊರವರ ಕಾಯಿಲೆಗಳನ್ನು ತಮಗೆ ವರ್ಗಾಯಿಸಿಕೊಳ್ಳಬೇಕು. ಈ ದಾನದಲ್ಲಿ ಅರೆಬೆಂದ ಅನ್ನದೊಂದಿಗೆ ಬೂದುಗುಂಬಳದ ನೀರು ಸಾರು, ರೋಗಿಯ ಒಂದಿಷ್ಟು ತಲೆಗೂದಲು, ಉಗುರುಗಳನ್ನು ಬೆರೆಸಿರುತ್ತಾರೆ.

3. ಊರಿನ ಪ್ರತಿಷ್ಠೆ

ಗ್ರಾಮದ ದೈವ, ಭೂತಗಳ ನೇಮ, ಆಯನ, ರಥೋತ್ಸವ ಮುಂತಾದ ಜಾತ್ರೆಗಳಲ್ಲಿ ಡೋಲುವಾದನ ಮಾಡಿ ಕಳೆ ತುಂಬಬೇಕು. ಕೆಲವೊಮ್ಮೆ ಈ ಜಾತ್ರೆಗಳು ಏಳೆಂಟು ದಿನಗಳವರೆಗೂ ಮುಂದುವರಿಯುತ್ತದೆ. ಆ ಸಂದರ್ಭಗಳಲ್ಲಿ ಕೊರಗರ ಅಸನ, ವ್ಯಸನಗಳೆಲ್ಲವೂ ಅದೇ ಗದ್ದೆ ಬದಿಯ ಮರದ ಅಡಿಯಲ್ಲಿ ನಡೆಯಬೇಕು.

4. ಖದಿನ (ಸ್ಫೋಟಕ) ಸಿಡಿಸುವುದು

ಗ್ರಾಮದ ಜಾತ್ರೆಗಳಲ್ಲಿ ಒಂದೂವರೆ ಅಡಿ ಎತ್ತರದ ಕಬ್ಬಿಣ ಸಿಲಿಂಡರಿಗೆ ರಾಸಾಯನಿಕ ಪುಡಿ ತುಂಬಿಸಿ, ಬೆಂಕಿಕೊಟ್ಟು ಸ್ಫೋಟಿಸುವ ಕಾರ್ಯಕ್ಕೂ ಅಜಲಿನ ಕೊರಗರು ಬೇಕು. ಈ ಸ್ಫೋಟಕಗಳು ಸಿಡಿದು ಅದೆಷ್ಟೋ ಪ್ರಾಣ ಹಾನಿಗಳೂ ಸಂಭವಿಸಿವೆ.

ಅಜಲು ಪದ್ಧತಿಯ ಪರಿಣಾಮಗಳು

ಅಜಲು ಪದ್ಧತಿ ಆಚರಣೆಯಿಂದಾಗಿ ಕೊರಗ ಸಮುದಾಯದಲ್ಲಿ ಸಾಮೂಹಿಕವಾಗಿ ಸಾಮಾಜಿಕ ಕೀಳರಿಮೆ ಉಂಟಾಗುತ್ತದೆ. ತಾವು ಇಷ್ಟಕ್ಕೇ ಲಾಯಕ್ಕು ಎನ್ನುವ ಭಾವನೆಯಿಂದಾಗಿ ಕುಗ್ಗಿ ಹೋಗುತ್ತಾರೆ ಹಾಗೂ ಈ ಪದ್ಧತಿಯಿಂದಾಗಿ ಮೂಢನಂಬಿಕೆ ಗಟ್ಟಿಗೊಳ್ಳುತ್ತಲೇ ಹೋಗುತ್ತವೆ. ಗುಲಾಮತನ, ದಾಸ್ಯ ಪ್ರವೃತ್ತಿ ಹೆಚ್ಚುತ್ತದೆ. ಶಿಕ್ಷಣದ

ಬಗ್ಗೆ ಪರಿವೆಯೇ ಇಲ್ಲದಂತಾಗುತ್ತದೆ. ಇವೆಲ್ಲದರ ಪರಿಣಾಮವಾಗಿ ಒಂದು ಅನಾರೋಗ್ಯ ಸಮುದಾಯ ನಿರ್ಮಾಣವಾಗುತ್ತದೆ. ಮಾನಸಿಕವಾಗಿಯೂ, ದೈಹಿಕವಾಗಿಯೂ ಕುಗ್ಗಿರುವ ಇವರು ಯಾವುದೇ ಕಾಯಿಲೆ ಬಂದರೂ ಅದನ್ನು ನಿರ್ಲಕ್ಷಿಸುತ್ತಾರೆ. ಪರಿಣಾಮವಾಗಿ ಇವರ ಆಯುಷ್ಯವೇ ಕುಂಠಿತಗೊಳ್ಳುತ್ತದೆ. ಆರ್ಥಿಕ ಪರಿಸ್ಥಿತಿಯಂತೂ ಋಣ ಬಾಧೆಯಲ್ಲೇ ಮುಂದುವರಿಯುತ್ತದೆ.

ಆದುದರಿಂದ ಕೊರಗರ ಈ ಅಜಲು ಪದ್ಧತಿಯು ಜೀತದ ಪ್ರತಿರೂಪವೇ ಆಗಿರುತ್ತದೆ. ದೇವರ ಭಯವನ್ನು ಸೃಷ್ಟಿಸಿ, ಪ್ರಬಲ ಸಮುದಾಯಗಳು ತಮ್ಮ ಜಾತಿ ಬಲ ಮತ್ತು ಜನ ಬಲದಿಂದ ಇಂತಹ ಅಮಾಯಕ ಜೀವಿಗಳನ್ನು ಕಸದಂತೆ ಕಾಣುವ ಪ್ರಮೇಯವು ಮಾನವ ಕುಲಕ್ಕೇ ಕಳಂಕವಾಗಿದೆ. ಇಂತಹ ಅಮಾನವೀಯ ಪದ್ಧತಿಯನ್ನು ಕೊರಗ ಸಮುದಾಯದ ಸಂಘಟನೆಗಳು 1997ರಿಂದಲೇ ಖಂಡಿಸುತ್ತಾ ಬಂದಿವೆ. ಹಲವಾರು ಪ್ರತಿಭಟನೆಗಳನ್ನು ಮಾಡಿವೆ. ಸರಕಾರಕ್ಕೆ, ಜನ ಪ್ರತಿನಿಧಿಗಳಿಗೆ ಮನವಿಗಳನ್ನು ಸಲ್ಲಿಸಿವೆ. ಕೊನೆಗೂ ಸತತ ಮೂರು ವರ್ಷಗಳ ಹೋರಾಟದ ಫಲವಾಗಿ 2000ನೇ ಇಸವಿಯಲ್ಲಿ ಈ ಅಜಲು ಪದ್ಧತಿಯನ್ನು ಕಾನೂನು ರೀತಿಯಲ್ಲಿ ನಿಷೇಧಿಸುವ ಕುರಿತು, ಸರಕಾರ ಒಂದು ಹೆಜ್ಜೆ ಮುಂದೆ ಇಟ್ಟಿತು. 2000ನೇ ಇಸವಿ ಆಗಸ್ಟ್ 17ರಂದು ಅಂದಿನ ರಾಜ್ಯಪಾಲರಾದ ವಿ.ಎಸ್. ರಮಾದೇವಿಯವರು ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ, ಸಾವಿರಾರು ವರ್ಷಗಳ ಅನಿಷ್ಟವೊಂದು ಕಾನೂನು ರೀತಿಯಲ್ಲಿ ನಿಷೇಧ ಗೊಂಡಿತು. ಆದರೆ ಅದರ ಪ್ರೇತ ಕಳೆ ಮಾತ್ರ ಇಂದಿಗೂ ಅಲ್ಲಲ್ಲಿ ಕಿರಿಕ್ ಮಾಡುತ್ತಿರುವುದು ತಪ್ಪಿಲ್ಲ. ಇಂದಿಗೂ ಕೆಲವು ಕಡೆ ಅಜಲು ಪದ್ಧತಿ ನಿರಾತಂಕವಾಗಿ ಸಾಗಿವೆ. ಪ್ರಾಯೋಗಿಕ ನೆಲೆಯಲ್ಲಿ ಅಜಲು ಮಾಡಿಸುವ ಜನರ ಮನಪರಿವರ್ತನೆ ಮಾಡಲು ಈ ಕಾನೂನಿನಿಂದ ಇಂದಿಗೂ ಸಾಧ್ಯವಾಗಿಲ್ಲ. ಕಾನೂನು ಪಾಲಕರ ಕಾರ್ಯಲೋಪದಿಂದ ಕಾನೂನಿನ ಭಯ ಯಾರಿಗೂ ಇಲ್ಲದಂತಾಗಿದೆ. ದೇವರ ಮೇಲಿನ ನಂಬಿಕೆಯಿಂದಾಗಿ ಕೆಲವು ಕಡೆ ಕೊರಗರು ಕೂಡಾ ಈ ಸೇವೆಯನ್ನು ನಿಲ್ಲಿಸಲು ಹಿಂಜರಿಯುತ್ತಾರೆ. ಕೊರಗ ಸಂಘಟನೆಗಳು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ, ಅವರ ನಂಬಿಕೆಗಳು ಯಾವುದೋ ಒಂದು ಅವ್ಯಕ್ತ ಭಯದೊಂದಿಗೆ ಮಿಳಿತಗೊಂಡು ಸಂಕೀರ್ಣಮಯ ಸ್ಥಿತಿಗೆ ತಲುಪಿದೆ. ಜೀತ ಮುಕ್ತ ಕರ್ನಾಟಕದ ಕನಸು ಸಾಕಾರಗೊಳ್ಳಬೇಕಾದರೆ ಕೊರಗರಲ್ಲಿನ ಈ ಭಯ ಮಿಶ್ರಿತ ನಂಬಿಕೆಗಳನ್ನು ದೂರ ಮಾಡಲೇಬೇಕು. ಮೂಢನಂಬಿಕೆಗಳ ಆಗರವಾಗಿರುವ ಈ ಅಜಲು ಪದ್ಧತಿಯಿಂದ ಕೊರಗರು ಹೊರಬರಲೇ ಬೇಕು. ಅದಕ್ಕಾಗಿ ಇನ್ನೇನು ಮಾಡಬೇಕು ಎಂಬುವುದನ್ನು ಸಮುದಾಯದ ನಾಯಕರ ಜೊತೆ, ಸರಕಾರ, ಕಾನೂನ ತಜ್ಞರು ಹಾಗೂ ಬುದ್ಧಿಜೀವಿಗಳು ಚರ್ಚಿಸಿ ತೀರ್ಮಾನಿಸಬೇಕಾಗಿದೆ.

ಕೊರಗರ ಕುಟುಂಬ ವ್ಯವಸ್ಥೆ

ಕೊರಗರು ಮೂಲತಃ ಮಾತೃಮೂಲೀಯ ಕುಟುಂಬ ವ್ಯವಸ್ಥೆಯನ್ನು ಹೊಂದಿರುವವರು. ತಾಯಿ ಮೂಲವೇ ಕುಟುಂಬದ ಮೂಲವಾಗಿರುತ್ತದೆ. ಆರಾಧನೆ ಆಚರಣೆಗಳೆಲ್ಲವೂ ಮಾತೃ ಮೂಲಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಮಾತೃಮೂಲದ ಹಿರಿಯರ ಅಭಿಪ್ರಾಯ, ಆದೇಶ ಪಾಲನಾ ಕಾರ್ಯಗಳಾಗಿರುತ್ತವೆ. ಪ್ರಮುಖ ಸಂಬಂಧಗಳೂ ತಾಯಿ ಕಡೆಯಿಂದಲೇ ನಿರ್ಧರಿಸಲ್ಪಡುತ್ತದೆ. ಕೊರಗರ ಕುಟುಂಬ ಎಂಬುವುದು ಒಂದು ದೈವವನ್ನು ಒಂದೇ ಜಾಗದಲ್ಲಿ, ಒಂದೇ ಕಲ್ಲಿನಲ್ಲಿ ಆರಾಧಿಸುವ, ಒಂದೇ ಮಾತೃ ಮೂಲದ ಹಲವು ಕವಲುಗಳು ಸಂಬಂಧವರ್ದಿತ ಸಂಸಾರ ವಿಧಾನವಾಗಿರುತ್ತದೆ. ಇಲ್ಲಿ ಆಸ್ತಿ ಅಂತಸ್ತಿನ ಕಲ್ಪನೆಗೆ ಅವಕಾಶವಿಲ್ಲ. ಸಂಬಂಧದ ಎಳೆಗಳೇ ಕುಟುಂಬದ ಆಸ್ತಿ ಪಾಸ್ತಿ. ಒಂದು ಮನೆಯು ಅವಿಭಜಿತ ಕುಟುಂಬವಾಗಿದ್ದು, ಒಂದು ತಾಯಿಗೆ ಏಳೆಂಟು ಮಂದಿ ಹೆಣ್ಣು ಮಕ್ಕಳಿದ್ದರೂ, ಅವರ ಮಕ್ಕಳೂ, ಮೊಮ್ಮಕ್ಕಳೂ, ಮರಿಮಕ್ಕಳೂ ಕೂಡಿ, ಒಟ್ಟಾಗಿ ಬದುಕುವ ದೊಡ್ಡ ಸಂಸಾರವಾಗಿರುತ್ತದೆ. ಈ ಸಂಸಾರಗಳ ಕೂಡಾಟವೇ ಕೊರಗರ ಕುಟುಂಬ!

ಕುಟುಂಬದ ದೈವಗಳ ನಿತ್ಯ ಯಾ ವಾರ್ಷಿಕ ಆಚರಣೆಗಳ ಹಕ್ಕು ಮತ್ತು ಅಧಿಕಾರವು ಕುಟುಂಬ ನಿರ್ಧರಿಸಿದ ನಿರ್ದಿಷ್ಟ ವ್ಯಕ್ತಿಗೆ ಹೋಗುತ್ತದೆ. ಆ ನಿರ್ದಿಷ್ಟ ವ್ಯಕ್ತಿಯನ್ನು ಕೊಡ್ತಾಯಿ ಅಥವಾ ಗುರ್ಕಾರೆ ಎನ್ನುತ್ತಾರೆ. ಕುಟುಂಬದ ಹಿರಿತಲೆಗಳ ಅಭಿಪ್ರಾಯ ಪಡೆದು ಕೊಡ್ತಾಯಿ ಕುಟುಂಬದ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾನೆ. ಮನೆ ನಿರ್ವಹಣೆಯು ಮನೆಯ ಹಿರಿಯ ವ್ಯಕ್ತಿಗಳಾದ ತಾಯಿ ಅಥವಾ ಸೋದರಮಾವನ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಮನೆಯಲ್ಲಿರುವವರು ಎಲ್ಲರೂ ದುಡಿಯಬೇಕು ಎಂಬ ಅಲಿಖಿತ ನಿಯಮವಿದ್ದರೂ, ಸಮರ್ಥರು ನಿಯತ್ತಾಗಿ ದುಡಿದು ಮನೆ ನಿರ್ವಹಣೆ ಮಾಡುತ್ತಾರೆ. ತಮ್ಮ, ತಂಗಿ, ಅವರ ಮಕ್ಕಳು ಎಂಬ ಸಂಬಂಧಗಳ ನಡುವೆ ಪ್ರೀತಿಯ ಸೆಳೆತವು ಕರ್ತವ್ಯ ನಿಷ್ಠೆಗೆ ಪ್ರೇರಣೆಯಾಗುತ್ತದೆ.

ಒಬ್ಬ ವ್ಯಕ್ತಿ ಮದುವೆಯಾಗಿ ತನ್ನ ಹೆಂಡತಿಯ ಮನೆ ಸೇರಿದರೂ ಮಾತೃಕುಟುಂಬದ ದೈವದ ಅಥವಾ ಇತರ ಕಾರ್ಯಗಳು ನಡೆದಾಗ ಆತ ಅಲ್ಲಿಗೆ ಹೋಗುತ್ತಾನೆ. ಜೀವನ ಪೂರ್ತಿ ಹೆಂಡ್ತಿ ಮನೆಯಲ್ಲೇ ಕಾಲಕಳೆದರೂ ಸತ್ತ ನಂತರ ಆತನ ತಾಯಿ ಮೂಲವೇ ಉತ್ತರಕ್ರಿಯಾದಿಗಳನ್ನು, ಕುಟುಂಬ ಸೇರ್ಪಡೆಯನ್ನೂ ನಡೆಸಬೇಕಾಗುತ್ತದೆ. ಹೆಂಡತಿಯು ಗಂಡನ ಮನೆಗೆ ಹೋದರೂ ಗಂಡ ಸತ್ತ ಬಳಿಕ ತನ್ನ ತಾಯಿ ಮನೆಗೇ ಹಿಂದಿರುಗಬೇಕು. ವೈವಾಹಿಕ ಜೀವನದಲ್ಲಿ ಗಂಡನೆನಿಸಿಕೊಂಡವನು ಕೇವಲ ಪುನರುತ್ಪಾದಕ ಹಾಗೂ

ಹೆಂಡ್ತಿ ಮಕ್ಕಳ ಪೋಷಕ ಮಾತ್ರ! ಮಕ್ಕಳು ಕೂಡಾ ತಾಯಿಯ ಪರವಾಗಿರುತ್ತಾರೆ. ಯಾಕೆಂದರೆ ತಂದೆ ಸತ್ತ ಬಳಿಕ ಅವನ ಮನೆಯವರು ಮಕ್ಕಳಿಗೆ ಪರಿಚಿತರೇ ಹೊರತು ಸಂಬಂಧಿತರಾಗುವುದಿಲ್ಲ. ಹಾಗಾಗಿ ಈ ಸಮುದಾಯದಲ್ಲಿ ಸಂಬಂಧದ ಎಳೆಗಳು ತಾಯಿ ಮೂಲದಲ್ಲೇ ನಿರ್ಮಾಣಗೊಂಡಿರುತ್ತದೆ. ಆದರೂ ಕೌಟುಂಬಿಕ ಸಂಬಂಧಗಳ ಹೊರತಾಗಿಯೂ, ಇವರಲ್ಲಿ ಒಮ್ಮೆ ಪರಿಚಿತರಾದರೆ ಮತ್ತೆಂದೂ ಮರೆಯದ ಜಾತಿ ಬಾಂಧವ್ಯಗಳಿಗೆ, ಮಾನವ ಸಂಬಂಧಗಳಿಗೆ ಎಂದೂ ಎಳ್ಳು ನೀರು ಬಿಡುವುದಿಲ್ಲ. ಇದೇ ಈ ಮಣ್ಣಿನ ಮಕ್ಕಳ ವೈಶಿಷ್ಟ್ಯತೆ.

ಅದಾಗ್ಯೂ ಸಾಮಾಜಿಕ ಸನ್ನಿವೇಶಗಳು ಬದಲಾಗುತ್ತಿರುವಂತೆಯೇ ಈ ಸಮುದಾಯದಲ್ಲೂ ಕೌಟುಂಬಿಕ ಸ್ಥಿತ್ಯಂತರಗಳಾಗುತ್ತಿವೆ. ಮಾತೃ ಮೂಲ ಸಮುದಾಯವೇ ಆದರೂ ಸ್ತ್ರೀಪ್ರಧಾನ ವ್ಯವಸ್ಥೆಯಿಂದ ಪುರುಷ ಪ್ರಧಾನ ಪದ್ಧತಿಗೆ ನಿಧಾನವಾಗಿ ವಾಲುತ್ತಿರುವುದು ಸ್ಪಷ್ಟವಾಗುತ್ತಿದೆ. ಒಂದು ಕಾಲದಲ್ಲಿ ಮಹಿಳೆಯರೂ ಗುರಿಕಾರರಾಗಬಹುದಿತ್ತಾದರೂ ಇಂದು ಪುರುಷರೇ ಈ ಕೆಲಸ ನಿರ್ವಹಿಸಲು ಸಮರ್ಥರು ಎಂಬ ಭಾವನೆ ಗಟ್ಟಿಗೊಳ್ಳುತ್ತಿದೆ. 2017ರಲ್ಲಿ ಉಡುಪಿ ಜಿಲ್ಲಾಡಳಿತ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯು ನಡೆಸಿರುವ ಕೊರಗ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ ಬಗ್ಗೆ ಅಧ್ಯಯನ ವರದಿಯಲ್ಲಿಯೂ ಇದನ್ನು ಗಮನಿಸಬಹುದು. ಜಿಲ್ಲೆಯ ಬ್ರಹ್ಮಾವರ, ಬೈಂದೂರು, ಕಾರ್ಕಳ, ಕುಂದಾಪುರ ಹಾಗೂ ಉಡುಪಿ ಶಿಕ್ಷಣ ವಲಯಗಳಲ್ಲಿ 1830 ಕುಟುಂಬಗಳನ್ನು ಸಂದರ್ಶಿಸಿದ್ದು ಅದರಲ್ಲಿ ಶೇಕಡಾ 54ರಷ್ಟು ಕುಟುಂಬಗಳು ಸ್ತ್ರೀ ಪ್ರಧಾನವಾಗಿದ್ದರೆ ಶೇಕಡಾ 46ರಷ್ಟು ಕುಟುಂಬಗಳು ಪುರುಷಪ್ರಧಾನ ಕುಟುಂಬಗಳೆಂದು ಗುರುತಿಸಲಾಗಿದೆ.

ಸಂಸ್ಕೃತಿ ಸಂಪ್ರದಾಯಗಳು (ಕಟ್ಟುಕಟ್ಟಳೆ)

ಕೊರಗರು ಪ್ರಕೃತಿಯೊಂದಿಗೆ ಅನ್ಯೋನ್ಯವಾಗಿ ಬಾಳಿ ಬದುಕಿದವರು. ಅಲೆಮಾರಿ ಜೀವನವಿದ್ದಾಗಲೂ, ಆಹಾರ ಸಂಗ್ರಹಣೆಯ ಹಂತ ಹಾಗೂ ಆ ನಂತರದ ದಿನಗಳಲ್ಲಿ ಬುಟ್ಟಿ, ಹೆಡಿಗೆ ಮಾಡಲು ಬೀಳಲು, ಬಳ್ಳಿಗಳನ್ನು ಕಡಿದು ತೆಗೆಯಬೇಕಾದ ಸಂದರ್ಭದಲ್ಲೂ ಅಗತ್ಯವಿದ್ದಷ್ಟೇ ಗಾತ್ರದ ತುಂಡನ್ನು ಕತ್ತರಿಸಿ, ಉಳಿದ ಬುಡಭಾಗವನ್ನು ಅಲ್ಲೇ ಬೆಳೆಯಲು ಬಿಡುತ್ತಿದ್ದರು. ಜೇನುತುಪ್ಪ ಸಂಗ್ರಹಣೆ ಮಾಡುವಾಗಲೂ ಇಡೀ ಜೇನು ಗೂಡನ್ನು ತೆಗೆದು ಹಾಳು ಮಾಡುವುದಿಲ್ಲ. ಜೇನು ನೊಣಗಳಿಗೂ ನೋವಾಗದಂತೆ ತಮಗೆ ಬೇಕಾದಷ್ಟೇ ಜೇನು ತೆಗೆದು ಗೂಡನ್ನು ಹಾಗೇ ಬಿಡುತ್ತಿದ್ದರು. ಬೇಟೆಯ ಸಮಯದಲ್ಲಿ ಆಮೆಗಳು ಗುಹೆಗಳಲ್ಲಿ ಇರುವ ಸುಳಿವು ಸಿಕ್ಕಿದರೂ ಗುಹೆಯ ಒಳಗೆ ಒಬ್ಬ ವ್ಯಕ್ತಿ ಮಾತ್ರ ನುಸುಳ ಬಹುದಾದಷ್ಟು ದೊಡ್ಡದಾಗಿ ಗುಹೆಯ ಬಾಯಿಯನ್ನು ಅಗಲಗೊಳಿಸಿ, ಅದರೊಳಗೆ ಹೋಗಿ ಆಮೆಯನ್ನು ತೆಗೆಯುತ್ತಾರೆ. ಯಾವತ್ತೂ ಗುಹೆಯನ್ನು ಪೂರ್ತಿ ಅಗೆದು, ಹಾಳು ಗೆಡವಿ ಮತ್ತೆಂದೂ ಆಮೆ ಆಕಡೆ ಸುಳಿಯದಂತೆ ಮಾಡುವುದಿಲ್ಲ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಇವರೆಂದೂ ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ. ತಮಗೆ ಬೇಕಾದಷ್ಟನ್ನು ಪ್ರಕೃತಿಯಿಂದ ಪಡೆದು ಅದರೊಂದಿಗೆ ಹೊಂದಾಣಿಕೆಯ ಜೀವನ ನಡೆಸುತ್ತಾರೆ. ಇದೇ ಕೊರಗರ ಸಂಸ್ಕೃತಿ. ಇವರು ಮಾತೃ ಮೂಲೀಯ ಸಂಸ್ಕೃತಿಯನ್ನು ಹೊಂದಿದ್ದು ಹೆಣ್ಣಿಗೆ ಪ್ರಾಧಾನ್ಯತೆಯನ್ನು ನೀಡುತ್ತಾರೆ. ಹೆಣ್ಣು ಹುಟ್ಟಿದರೆ ಸಂಭ್ರಮಿಸುವ ಸಮಾಜವಿದು. ಹೆಣ್ಣು ಮುಂದಿನ ಪೀಳಿಗೆಯ ಕುಡಿ ಎಂಬ ವಾಸ್ತವದ ಅರಿವು ಅವರಲ್ಲಿತ್ತು. ಮದುವೆಯೂ ಹೆಣ್ಣಿನ ಮನೆಯಲ್ಲೇ ನಡೆಯುತ್ತಿದೆ. ಆಸ್ತಿ, ಅಧಿಕಾರಗಳೆಲ್ಲಾ ತಾಯಿ ಮೂಲಕ್ಕೆ ವರ್ಗಾವಣೆಯಾಗುತ್ತಿತ್ತು.

ಹೆರಿಗೆ : ಕೊರಗ ಸಮುದಾಯದಲ್ಲಿ ತಮ್ಮ ಕೊಪ್ಪದಲ್ಲಿಯೇ ಹೆರಿಗೆಯಾಗುತ್ತಿದ್ದ ಆ ದಿನಗಳಲ್ಲಿ ಹೆರಿಗೆ ಮಾಡಿಸುವವರೂ ಸಾಕಷ್ಟು ಮಂದಿ ಇರುತ್ತಿದ್ದರು. ಇಂದಿನ ಎಕ್ಸ್‌ಪರ್ಟ್ ದಾದಿಯರಿಗಿಂತಲೂ ಚೆನ್ನಾಗಿ ಹೆರಿಗೆ ಮಾಡಿಸುತ್ತಿದ್ದರು. ಮಹಿಳೆಗೆ ಹೆರಿಗೆನೋವು ಕಾಣಿಸಿಕೊಳ್ಳುತ್ತಿದ್ದಂತೆಯೇ ಹೆರಿಗೆ ತಜ್ಞರು ಪ್ರತ್ಯಕ್ಷರಾಗುತ್ತಿದ್ದರು. ಅಲ್ಲೇ ಒಂದು ಮಣೆಯನ್ನು ಇಟ್ಟು ಮಣ್ಣಿನ ಹಣತೆಯಲ್ಲಿ ದೀಪ ಹಚ್ಚಿ ಆಪ್ತ ದೈವ ಬೈಕಾಡ್ತಿಯನ್ನು ನೆನೆಯುತ್ತಾರೆ. ಸುಲಭವಾಗಿ ಹೆರಿಗೆಯಾಗಲೀ ಎಂದು ಪ್ರಾರ್ಥಿಸುತ್ತಾರೆ. ಬಳಿಕ ಗುಡಿಸಲಿನ ಮೇಲ್ಛಾವಣಿಗೆ ಗಟ್ಟಿಯಾದ ಹಗ್ಗ ಅಥವಾ ಸೀರೆಯನ್ನು ಕಟ್ಟಿ ನೇತು ಬಿಡುತ್ತಾರೆ, ಈ ಹಗ್ಗವನ್ನು ನೇಲದ ಬಲ್ಲು ಎನ್ನುತ್ತಾರೆ. ಮಹಿಳೆಯನ್ನು ಮುದ್ರಾಸನ ಭಂಗಿಯಲ್ಲಿ ಕೂರಿಸಿ ನೇತಾಡಿಸಿದ ಹಗ್ಗವನ್ನು ಭದ್ರವಾಗಿ ಹಿಡಿದುಕೊಳ್ಳುವಂತೆ ಆದೇಶಿಸುತ್ತಾರೆ. ಎಷ್ಟೇ ನೋವು

ಬಂದರೂ ಹಗ್ಗವನ್ನು ಬಿಡದಂತೆ ನೋಡಿಕೊಳ್ಳುತ್ತಾರೆ. ಜೊತೆಗೆ ಬೆನ್ನು ಸವರುತ್ತಾ, ತಟ್ಟುತ್ತಾ ಹೆರಿಗೆ ನೋವು ಬರುವಂತೆ ಮಾಡುತ್ತಾರೆ. ನಿರ್ದಿಷ್ಟ ಸ್ಥಳದಲ್ಲಿ ಮಗು ಕೆಳಗೆ ಜಾರುವಂತೆ ಮಾಡಿ ಸಲೀಸಾಗಿ ಕೆಲಸ ಮುಗಿಸುತ್ತಾರೆ. ಹಿಂದೆ ಇದೇ ರೀತಿಯ ಹೆರಿಗೆಗಳಾಗುತ್ತಿದ್ದರೂ ಹಲವಾರು ತಾಯಿ ಮಕ್ಕಳ ಸಾವುಗಳನ್ನು ಅಲ್ಲಗಳೆಯುವಂತಿಲ್ಲ. ಆದರೂ ಈ ಗರ್ಭಿಣಿ ಮಹಿಳೆ ಹಾಗೂ ಸೂಲಗಿತ್ತಿಯ ಮನೋಸ್ಥೈರ್ಯವನ್ನು ಯಾರಾದರೂ ಮೆಚ್ಚಲೇಬೇಕು. ಅದು ಅಂದಿನ ಅನಿವಾರ್ಯವೂ ಆಗಿತ್ತು ಬಿಡಿ!(ಈಗ ಯಾರೂ ಮನೆಯಲ್ಲಿ ಹೆರುವುದಿಲ್ಲ.) ಮಹಿಳೆ ಹೆರುವ ದಿನವೇ ಅಮೆಗುರಿಯನ್ನು ಮಾಡುತ್ತಾರೆ. ಇದು ಹೆರಿಗೆಯ ಸಂದರ್ಭ ದಲ್ಲಿನ ತಾಯಿ ಮಾಸುವನ್ನು ಹೂಳಲು ಮಾಡುವ ಗುಂಡಿಯಾಗಿರುತ್ತದೆ. ತಾಯಿಯ ಗರ್ಭದಲ್ಲಿ ಮಗು ಬೆಳೆದ ಮಾಂಸದ ಚೀಲವನ್ನು ಹೊರಗಡೆ ಬೇಕಾಬಿಟ್ಟಿ ಎಸೆಯದೆ ಈ ಹೊಂಡದಲ್ಲಿ ಹೂಳುತ್ತಿದ್ದರು. ಹಾಗೂ ಇದೇ ಜಾಗದಲ್ಲಿ ಏಳು ದಿನಗಳ ಕಾಲ ತಾಯಿ, ಮಗುವನ್ನು ಸ್ನಾನ ಮಾಡಿಸುತ್ತಾರೆ. ಹೆರಿಗೆಯಾದ ಮನೆಯ ಬಾಗಿಲಲ್ಲಿ ಮತ್ತು ಅಮೆ ಗುರಿಯ ಬಚ್ಚಲು ಮನೆಯ ಬಾಗಿಲಿಗೆ ಕಾಸರಕನ ಮರದ ಹೆಗ್ಗೆಗಳನ್ನು ತೂರಿಸುತ್ತಾರೆ. ಇದು ಸೂತಕದ ಸಂಕೇತ!

ನಾಮಕರಣ : ಮಗು ಹುಟ್ಟಿದ ಏಳನೇ ದಿನಕ್ಕೆ ನಾಮಕರಣದ ವಿಧಿಗಳನ್ನು ನಡೆಸಲಾಗುತ್ತದೆ. ಏಳನೇ ದಿನ ಬೆಳಗ್ಗಿನ ಹೊತ್ತಿಗೆ ಮಗುವಿನ ತಂದೆ, ಆತನ ಕಡೆಯ ಗುರ್ಕಾರ ಹಾಗೂ ಇತರ ಒಂದಿಬ್ಬರು ಜೊತೆಗೂಡಿ ನಾಮಕರಣದ ಮನೆಗೆ ಬರುತ್ತಾರೆ. ಈ ದಿನವನ್ನು 'ಅಮೆ' ಎನ್ನುತ್ತಾರೆ. ಅಮೆ ಎಂದರೆ ಸೂತಿಕೆ ಕಳೆಯುವ ದಿನ. ಮಗುವಿನ ಕಡೆಯ ಗುರಿಕಾರ ನೆಂಟರನ್ನು ಆತ್ಮೀಯವಾಗಿ ಸ್ವಾಗತಿಸುತ್ತಾನೆ. ಕುಶಲೋಪಚಾರಗಳು ನಡೆದ ಬಳಿಕ ನೆಂಟರು ತಾವು ತಂದಿರುವ ಹೊರೆಯನ್ನು ಗುರಿಕಾರನಿಗೆ ಒಪ್ಪಿಸುತ್ತಾರೆ. ಹುಟ್ಟಿರುವ ಮಗು ಹೆಣ್ಣಾದರೆ ಹದಿನಾಲ್ಕು ಸೇರು ಅಕ್ಕಿ, ಹದಿನಾಲ್ಕು ತೆಂಗಿನಕಾಯಿ, ಒಂದು ಕಟ್ಟು ಓಲೆಬೆಲ್ಲ, ಅರ್ಧಸೇರು ಕಾಳುಮೆಣಸು, ಹದಿನಾಲ್ಕು ಅರಸಿನ ಕೋಡು, ಒಂದು ಕುಡ್ತೆ ತೆಂಗಿನ ಎಣ್ಣೆ, ಅರ್ಧ ಸೇರು ಕಾಳಜೀರಿಗೆ, ಹೀಗೆ ಏಳು ಬಗೆಯ ಆಹಾರ ವಸ್ತುಗಳನ್ನು ಹೊರೆಯಾಗಿ ಮಗುವಿನ ತಂದೆ ಕೊಡಬೇಕು. ಮಗುವು ಗಂಡಾದರೆ ಹದಿನಾಲ್ಕರ ಬದಲಿಗೆ ಹನ್ನೆರಡರ ಸಂಖ್ಯೆಯಲ್ಲಿ, ಉಳಿದಂತೆ ಯಥಾ ಪ್ರಕಾರ ನೀಡುವುದು ಕಡ್ಡಾಯವಾಗಿರುತ್ತದೆ.

ಮಧ್ಯಾಹ್ನ ಸೂರ್ಯ ನೆತ್ತಿಗೇರುವ ಮುನ್ನ ಮನೆಯ ಒಳಗಡೆ, ಒಂದು ಮಣೆಹಾಕಿ ಬೈಕಾಡ್ತಿ ದೇವರಿಗೆ ದೀಪ ಹಚ್ಚಿ ಪ್ರಾರ್ಥಿಸುತ್ತಾರೆ. ಗುರ್ಕಾರನ ನೇತೃತ್ವದಲ್ಲಿ ಹೊರಗಡೆ ಕುಲದೈವ ಕೊರಗ ತನಿಯನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಆ ಬಳಿಕ ಒಂದು ಗೆರಸೆಯಲ್ಲಿ ಬಾಳೆ ಎಲೆ ಹಾಕಿ ಅದಕ್ಕೆ ಅನ್ನ ಮತ್ತು ಅಂದಿನ ಅಡುಗೆಯನ್ನು ಬಡಿಸುತ್ತಾರೆ. ಅದನ್ನು ಅಂಗಳದ ಪೂರ್ವ ಭಾಗದಲ್ಲಿ ಮಂಜ ದೇವರನ್ನು ನೆನೆದು ಒಪ್ಪಿಸುತ್ತಾರೆ. ತೆಂಗಿನ ಕಾಯಿಯನ್ನು ಒಡೆದು ಅದರ ಎರಡೂ ಹೋಳುಗಳನ್ನು ಗೆರಸೆಯಲ್ಲಿ ಇಡುತ್ತಾರೆ. ಹುಟ್ಟಿದ ಮಗುವು ಹೆಣ್ಣಾದರೆ ಒಂದು ತುಂಡು ಕಪ್ಪು ಉಡುದಾರವನ್ನು ಕಾಯಿಯ

ನಾಮಕರಣಕ್ಕೆ ಮೊದಲು 'ಮಂಜ' ದೇವರಿಗೆ ಪ್ರಾರ್ಥನೆ ಮಾಡುತ್ತಿರುವುದು

ತೂತು(ಕಣ್ಣು) ಇರುವ ಹೋಳಿಗೆ ಹಾಕುತ್ತಾರೆ. ಗಂಡಾದರೆ ಇನ್ನೊಂದು ಹೋಳಿಗೆ ಹಾಕುತ್ತಾರೆ. ಗೆರೆಸೆಯಲ್ಲಿ ಹಣತೆಯ ದೀಪ ಹಚ್ಚುತ್ತಾರೆ. ಆ ನಂತರ ಮಂಜ ದೇವರನ್ನು ಪ್ರಾರ್ಥಿಸುತ್ತಾರೆ. ಈ ವಿಧಿಯನ್ನು 'ಮಂಜಕ್ಕೆ ಇಡುವುದು' ಎನ್ನುತ್ತಾರೆ. ಈ ಕ್ರಮದ ಬಳಿಕ ಗುರಿಕಾರ ಮಗುವಿನ ತಂದೆಯ ಗುರಿಕಾರನಿಗೆ ಒಂದು ಹೆಸರು ಸೂಚಿಸುವಂತೆ ಕೇಳಿಕೊಳ್ಳುತ್ತಾರೆ. ಮಗುವಿನ ತಂದೆ ಹೇಳಿದ ಹೆಸರನ್ನು ಗುರಿಕಾರ ಸೂಚಿಸುತ್ತಾರೆ. ಉಡುದಾರ ಇರುವ ಕಾಯಿಯ ಹೋಳನ್ನು ಮಗುವಿನ ಕಡೆ ಗುರಿಕಾರ ತೆಗೆದು ಒಬ್ಬ ಬಾಲಕನ ಕೈಗೆ ಕೊಡುತ್ತಾರೆ. ಆ ಬಾಲಕ ಕಾಯಿ ಹೋಳುಗಳನ್ನು ಕಚ್ಚಿ ತಿನ್ನುತ್ತಾ,

ಮಗುವಿಗೆ ಗುರಿಕಾರ ಸೂಚಿಸಿದ ಹೆಸರನ್ನು ಕೂಗುತ್ತಾ, "ಓ ಹೆಂಗಸರೇ ಮಗುವಿನ ಹೆಸರು ತೋಮು" ಎಂದು ಹೇಳುತ್ತಾನೆ. ಹೀಗೆ ಮೂರು ಬಾರಿ ಕೂಗುತ್ತಾ ಮನೆಯ ಒಳಗಿರುವ ಹೆಂಗಸರ ಬಳಿ ತೆರಳಿ ತಿಂದುಳಿದ ಕಾಯಿ ಮತ್ತು ಉಡುದಾರವನ್ನು ನೀಡುತ್ತಾನೆ. ಹೆಂಗಸರು ಉಡುದಾರವನ್ನು ಮಗುವಿನ ಸೊಂಟಕ್ಕೆ ಕಟ್ಟುತ್ತಾರೆ. ಅಲ್ಲಿಗೆ ನಾಮಕರಣ ಕ್ರಿಯೆಯು ಪೂರ್ಣಗೊಳ್ಳುತ್ತದೆ. ನಂತರ ಹಾಡು, ಕುಣಿತಗಳು ನಡೆದು ಬಾಡೂಟದ ಸಿದ್ಧತೆ ನಡೆಯುತ್ತದೆ.

ಸಾಮಾನ್ಯವಾಗಿ ಹಿಂದಿನ ದಿನಗಳಲ್ಲಿ ಇವರು ಪ್ರಾಣಿ, ಪಕ್ಷಿ, ಮರ, ಹಣ್ಣು ಹಾಗೂ ಕೀಟಗಳ ಹೆಸರುಗಳನ್ನೇ ಇಡುವುದು ಸಂಪ್ರದಾಯವಾಗಿತ್ತು. ಉದಾಹರಣೆಗೆ– ಪಿಜಿನ (ಇರುವೆ), ತಬುರ(ಕೆಂಪಿರುವೆ), ನಕ್ಕುರ(ಎರೆಹುಳ), ಚರಂಟು(ಚೇಟೆ ಹುಳು), ಮೆನ್ಪ (ಮಿಂಚುಳ್ಳಿ), ಕೊರ್ಂಗ(ಕೊಕ್ಕರೆ), ಗುರ್ಬಿ(ಗುಬ್ಬಿ), ಯಾಮೆ(ಆಮೆ), ಮೊದರ (ಮೊಸಳೆ), ಮುಂಗಿಲ(ಮುಂಗುಸಿ), ಕೂಕ್ರ(ನಾಯಿ ಮರಿ), ಚನಿಲ(ಅಳಿಲು), ಬೊಗ್ರ (ಗಂಡು ನಾಯಿ), ನಾಯಿ(ನಾಯಿ), ಬೊಗ್ಗಿ(ಹೆಣ್ಣು ನಾಯಿ), ಏಡು(ಆಡು),ಕುದುಕ(ನರಿ), ನರೇತಿ(ನಳ್ಳಿ), ಮುಜುಕ್ರ(ಮುಸಿ ಸಿಂಗಳಿಕ), ಮತ್ತಡಿ(ಮರದಡಿ), ಬಳ್ಳು(ಬಳಲು), ಬಟ್ಯ(ಬುಟ್ಟಿ), ಕುಡುಪ(ತಟ್ಟಿ ಕುಡುಪು), ತಾರಿ(ತಾಳೆಮರ), ಜಾರಿಗೆ(ಜಾರಿಗೆ ಹುಳಿ), ಕರ್ಂಡೆ(ಕರಂಡೆ ಹುಳಿ), ಬಿಜಕ್ರೆ(ತರಗೆಲೆ), ಬಿಜಿಲು(ಬಿಸಿಲು), ಸೋಮು, ಅಂಗಾರೆ, ಬೂದ, ಗುರುವ, ಸುಕ್ರ, ತನಿಯ... ಇತ್ಯಾದಿ! ಆದರೆ ಇದೀಗ ರಮೇಶ, ಸುರೇಶ, ಗೀತಾ, ರೇಖಾ ಮುಂತಾದ ಹೊಸ ಹೆಸರುಗಳನ್ನು ಇಡುವ ಕ್ರಮ ಬೆಳೆದು ಬಂದಿದೆ. ಸುಮಂತ್, ಲೇಖ್‌ರಾಜ್, ಸೂರಜ್, ಸೃಜನ್, ಶೋಧನ್ ಮುಂತಾದ ಆಧುನಿಕ ಹೆಸರುಗಳೂ ಈಗ ಚಾಲ್ತಿಗೆ ಬಂದು ಹಳೆಯ ಹೆಸರುಗಳು ತೆರೆಮರೆಗೆ ಸರಿದಿವೆ.

ನೀರ ಮದುವೆ : ಹನ್ನೆರಡು ಹದಿಮೂರು ವರ್ಷ ಪ್ರಾಯವಾದಾಗ ಸಾಮಾನ್ಯವಾಗಿ ಹುಡುಗಿಯರು ಮೈನೆರೆಯುತ್ತಾರೆ. ಮಗಳಿಂದ ತಾಯಿಗೆ ಇದು ತಿಳಿದು ಮನೆಮಂದಿ ಹಾಗೂ ಇತರ ಬಂಧುಗಳಿಗೂ ತಿಳಿಯುತ್ತದೆ. ಅಂದಿನಿಂದ ಹುಡುಗಿ ತಾಯಿಯ ವಿಶೇಷ ಆರೈಕೆಯಲ್ಲಿ ಇರುತ್ತಾಳೆ. ಪ್ರತಿದಿನ ಸ್ನಾನ ಮಾಡಿಸುತ್ತಾರೆ. ಮೆಂತೆ, ಕಾಯಿ, ಬೆಲ್ಲ ಹಾಕಿದ ಗಂಜಿ ಅಥವಾ ಪಾಯಸ ಮಾಡಿ ಕೊಡುತ್ತಾರೆ. ದಿನಾ ತಲೆಗೆ ಎಣ್ಣೆ ಹಾಕುತ್ತಾರೆ. ಆಕೆಗೆ ಯಾವುದೇ ಕೆಲಸ ನೀಡದೆ ವಿಶ್ರಾಂತಿ ನೀಡಲಾಗುತ್ತದೆ. ಹದಿನಾಲ್ಕನೇ ದಿನ ಪೆರತ (ಕರಪತ್ತಿನದು) ಅಥವಾ ನೀರ ಮದುವೆಯನ್ನು ನೆರವೇರಿಸಲಾಗುತ್ತದೆ. ಅಂದು ಹುಡುಗಿಯ ತಂದೆಯ ಕಡೆಯವರು ಹಾಗೂ ತಾಯಿ ಕಡೆಯ ಬಂಧುಗಳೆಲ್ಲ ಬೆಳಗ್ಗೆ ಸೇರಿ ಸಂಭ್ರಮವನ್ನು ಆಚರಿಸುತ್ತಾರೆ. ಹೊತ್ತೇರುವ ವೇಳೆಗೆ ಗುರಿಕಾರನ ನೇತೃತ್ವದಲ್ಲಿ ಮಂಜದೇವರಿಗೆ ಗೆರಸೆಯಲ್ಲಿ ಎಲೆ ಅಡಿಕೆ ಇಟ್ಟು, ದೀಪ ಬೆಳಗಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ. ಕೊರಗ ತನಿಯ ಹಾಗೂ ಬೈಕಾಡ್ತಿಗೂ ಪ್ರಾರ್ಥನೆ ಸಲ್ಲಿಸಲಾಗುತ್ತದೆ.

ಬಳಿಕ ಹತ್ತಿರದ ಸಂಬಂಧಿ ಮಹಿಳೆಯರು ಹುಡುಗಿಯನ್ನು ಫಲ ನೀಡುವ ತೆಂಗಿನ ಮರದ ಬುಡಕ್ಕೆ ಕರೆತಂದು ತಲೆಗೆ ನೀರೆರೆದು ಸ್ನಾನ ಮಾಡಿಸುತ್ತಾರೆ. ಕೆಲವು ಮಹಿಳೆಯರು

ಹುಡುಗಿಯ ತಲೆಗೆ ಸಣ್ಣ ಬುಟ್ಟಿಯನ್ನು ಕವಚ ಹಾಕಿ ಅವಳ ಮುಖ ಇತರರಿಗೆ ಕಾಣದಂತೆ ಅಡ್ಡಮಾಡುತ್ತಾರೆ. ಸ್ನಾನ ಮುಗಿಸಿ ಶೃಂಗಾರ ಆಗುವವರೆಗೆ ಆಕೆಯ ಮುಖವನ್ನು ಗಂಡಸರು ನೋಡಬಾರದೆಂದು ನಿಯಮ ಹಿಂದೆ ಇದ್ದಿರಬಹುದು. ಈಗ ಸ್ನಾನದ ಕೋಣೆಯೊಳಗೆ ಸ್ನಾನ ಮಾಡಿಸುತ್ತಾರೆ. ಇಲ್ಲಿ ಸ್ನಾನ ಮಾಡಲು ಅತ್ತಿಗೆ, ಸೋದರಮಾವನ ಹೆಂಡತಿ ಮೊದಲಾದ ನೆಂಟರೇ ಆಗಬೇಕು ಹಾಗೂ ಪ್ರಮುಖ ಬಳಿಯವರಿಗೂ ನೀರು ಹಾಕುವ ಗೌರವ ಸಿಗಬೇಕು. ಹೀಗೆ ಸ್ನಾನ ಮಾಡಿಸುವಾಗ ಹಾಡುವುದು, ತಮಾಷೆ ಮಾಡುವುದು ಹಾಗೂ ಡೋಲು ವಾದನ ನಡೆಯುತ್ತಿರುತ್ತದೆ. ಸ್ನಾನ ಮುಗಿಸಿಕೊಂಡು ಬರುವವರೆಗೂ ತಲೆಗೆ ಹಾಕಿದ ಬುಟ್ಟಿಯನ್ನು ತೆಗೆಯುವುದಿಲ್ಲ. ಅಂಗಳದಲ್ಲಿ ಗುರಿಕಾರನ ಸಮ್ಮುಖದಲ್ಲಿ ಬುಟ್ಟಿಯನ್ನು ತೆಗೆದು ಶೃಂಗಾರಕ್ಕೆ ಅಣಿಗೊಳಿಸುತ್ತಾರೆ. ಗುರಿಕಾರ ಹುಡುಗಿಗೆ ಹೊಸ ಸೀರೆಯನ್ನು ಕೊಡುತ್ತಾನೆ. ಮಹಿಳೆಯರೆಲ್ಲ ಸಂಭ್ರಮದಿಂದ ಹಾಡುತ್ತಾ, ಕುಣಿಯುತ್ತಾ ಆಕೆಯನ್ನು ಶೃಂಗರಿಸುತ್ತಾರೆ. ಮದುಮಗಳ ದುತ್ತೈತದಲ್ಲಿ ಶೃಂಗಾರಗೊಂಡ ಬಾಲಕಿಗೆ ಕಿಷ್ಕಾರ ಹೂವು ಹಾಗೂ ಇತರ ಹೂವುಗಳನ್ನು ತಲೆತುಂಬಾ ಮುಡಿಸುತ್ತಾರೆ. ಅವರ ಹಾಡು ಕುಣಿತಗಳಿಗೆ ಈ ಬಾಲೆ ನಾಚಿ ನೀರಾಗಿರುತ್ತಾಳೆ. ನೆರೆದ ಪಡ್ಡೆಗಳೆಲ್ಲಾ ಕದ್ದುಕದ್ದು ಆಕೆಯನ್ನು ನೋಡುವ ಪರಿಯು ಎಣಿಕೆಗೆ ಬಾರದವು. ಸಿಂಗರಿಸಿದ ಹುಡುಗಿ ಕೈಗೆ ಒನಕೆಯನ್ನು ಕೊಟ್ಟು ಭತ್ತ ಕುಟ್ಟುವಂತೆ ಸೂಚಿಸಲಾಗುತ್ತದೆ. ಆಕೆಯಿಂದ ಭತ್ತ ಕುಟ್ಟುವುದು, ಅನ್ನ ಬಸಿಯುವುದು ಮಾಡಿಸಲಾಗುತ್ತದೆ. ಇವೆಲ್ಲ ಸಾಂಕೇತಿಕವಾಗಿ ನಡೆದರೂ, ಆಕೆ ಇದೀಗ ದೊಡ್ಡವಳಾಗಿದ್ದು ಮುಂದೆ ಇವನ್ನೆಲ್ಲಾ ಮಾಡಲು ಸಮರ್ಥಳು ಎನ್ನುವುದನ್ನು ತೋರಿಸುವುದೇ ಈ ಕ್ರಿಯೆಗಳ ಉದ್ದೇಶವಾಗಿರುತ್ತದೆ. ಕೆಲವು ಕಡೆ ಹುಡುಗಿಯನ್ನು ಕತ್ತಿಯ ಮೇಲೆ ನಡೆಸಲಾಗುತ್ತದೆಯಂತೆ. ಇದು ಆಕೆಗೆ ಭವಿಷ್ಯದ ಬದುಕಿನ ಚಿತ್ರಣದ ದರ್ಶನವಾಗಿರುತ್ತದೆ. ಇದೆಲ್ಲ ಮುಗಿದ ಬಳಿಕ ನೆರೆದ ಬಂಧುಗಳಿಂದ ಉಡುಗೊರೆ ನೀಡುವ ಕ್ರಮ ನಡೆಯುತ್ತದೆ. ನಂತರ ಎಂದಿನಂತೆ ಬಾಡೂಟದ ಏರ್ಪಾಡು! ಇದು ನಡ್ಸಾಲಿನ ತಪ್ಪು ಕೊರಗ ಪಂಗಡದ ಕ್ರಮವಾದರೆ, ಕಾಸರಗೋಡು ಜಿಲ್ಲೆಯ ಕುಂಟು ಕೊರಗ ಪಂಗಡದ ಸಂಪ್ರದಾಯದಂತೆ ಹುಡುಗಿ ಮೈ ನೆರೆತ ದಿನದಿಂದ ಮೂರು ದಿನಗಳವರೆಗೆ ಮನೆಯಿಂದ ಹೊರಗೆ ಇರಬೇಕಾಗುತ್ತದೆ. ಆ ವೇಳೆ ಆಕೆಯೊಂದಿಗೆ ತಾಯಿ ಅಥವಾ ಸಂಬಂಧಿ ಮಹಿಳೆಯರು ಇರುತ್ತಾರೆ. ಏಳನೇ ದಿನ ನೀರ ಮದುವೆ ಮಾಡುತ್ತಾರೆ. ಆಕೆ ದೊಡ್ಡವಳಾಗಿರುವುದರ ಸಂಕೇತವಾಗಿ ಒನಕೆಯಾಕಾರದ ಬಿದಿರಿನಿಂದ ತೆಂಗಿನಕಾಯಿಯನ್ನು ಒಡೆಯುವ ಸಂಪ್ರದಾಯವಿದೆ.

ಮದುವೆ

ವಿವಾಹ ಅಥವಾ 'ಮದುವೆ' ಎಂಬುವುದು ಒಂದು ಸಾಮಾಜಿಕ ಸಂಸ್ಥೆ. ಕೆಲವೊಂದು ನಂಬಿಕೆಗಳೊಂದಿಗೆ ನಡೆಯುವ ಆಚರಣೆ ಮತ್ತು ಅದೊಂದು ಸಾಮಾಜಿಕ ಒಪ್ಪಂದವೂ ಹೌದು. ಗಂಡು ಮತ್ತು ಹೆಣ್ಣಿನ ಲೈಂಗಿಕ ಸ್ವೇಚ್ಛಾಚಾರವನ್ನು ನಿರ್ಬಂಧಿಸಿ, ಅಪರಿಮಿತ

ಮದುಮಗಳಿಗೆ ಮುರ್ತದ ಸೀರೆ ನೀಡುತ್ತಿರುವ ಗುರ್ಕಾರ.

ಬಯಕೆಯನ್ನು ನಿಯಂತ್ರಿಸಲು ಜನಸಮುದಾಯಗಳೇ ಕಾಲಾನುಕ್ರಮದಲ್ಲಿ ಕಂಡುಕೊಂಡ ಒಂದು ಜೀವನ ವಿಧಾನವೂ ಆಗಿರುತ್ತದೆ. ಕೆಲವು ಸಮುದಾಯಗಳಲ್ಲಿ 'ವಿವಾಹ' ಎನ್ನುವುದು ಪವಿತ್ರ ಬಂಧನ ಎನ್ನುವ ನಂಬಿಕೆ, ಸಂಪ್ರದಾಯಗಳಿದ್ದರೆ, ಇನ್ನು ಕೆಲವರಲ್ಲಿ ಈ ಬಗ್ಗೆ ಅಷ್ಟೇನೂ ಕಠಿಣವಾದ ನಿಯಮಗಳಿಲ್ಲ. ಆದಿವಾಸಿ ಪಂಗಡಗಳಲ್ಲಿ ಈ ರೀತಿಯ ಮದುವೆಯ ಕಲ್ಪನೆ ಇತ್ತೀಚಿಗಿನದ್ದಾಗಿರಬಹುದು. ಹೆಣ್ಣು ಮತ್ತು ಗಂಡಿನ ಪರಸ್ಪರ ಆಕರ್ಷಣೆಗಳೇ ಈ ಜನರ ಸಂತಾನಭಿವೃದ್ಧಿಗೆ ಪ್ರೇರಣೆಯಾಗಿರುತ್ತದೆ. ಅದೇ ಸಂಪ್ರದಾಯ ಬಹುತೇಕ ಮುಂದುವರಿದಿತ್ತು. ಅಲ್ಲಿ ನೀತಿ ನಿಯಮಗಳೇನೂ ಕಡ್ಡಾಯವಾಗಿರಲಿಲ್ಲ. ಬುಡಕಟ್ಟು ಕೊರಗ ಸಮುದಾಯವೂ ಇದರಿಂದ ಹೊರತಾಗಿರಲಿಲ್ಲ. ಇದರ ಕುರುಹುಗಳು

ಇಂದಿಗೂ ಅಲ್ಲಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. ಆದರೂ ಕಾಡಿನಿಂದ ನಾಡಿಗೆ ಪರಿಚಯವಾದ ನಂತರ ಇವರೂ ಸಹಜವಾಗಿಯೇ ಇತರರಿಂದ ಆಕರ್ಷಿತರಾಗಿ, ಅನುಕರಣೆಗೊಳಗಾಗಿರುವುದು ಕಂಡುಬರುತ್ತದೆ. ಸಮುದಾಯದೊಳಗೆ ಕೆಲವೊಂದು ಕಟ್ಟುಪಾಡುಗಳನ್ನು ಅಳವಡಿಸಿಕೊಂಡಿದ್ದಾರೆ. ತಮ್ಮದೇ ಆದ ವಿಧಿವಿಧಾನಗಳನ್ನು ರೂಢಿಸಿಕೊಂಡಿದ್ದಾರೆ. ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಇವರು ಪ್ರಾದೇಶಿಕವಾಗಿ ಸ್ಥಳೀಯ ಸಂಸ್ಕೃತಿ, ಸಂಪ್ರದಾಯಗಳ ಪ್ರಭಾವಕ್ಕೆ ಬಹುಬೇಗನೆ ಒಳಗಾಗಿರುತ್ತಾರೆ. ಇವರ ಆಚಾರ ವಿಚಾರಗಳು ಪ್ರಾದೇಶಿಕವಾಗಿ ನಾಲ್ಕು ರೀತಿಯಲ್ಲಿ ವಿಂಗಡಿಸಲ್ಪಟ್ಟಿದ್ದು ವೈವಿಧ್ಯತೆಗಳಿಂದ ಕೂಡಿದೆ. ವಿವಾಹ ಪದ್ಧತಿಯೂ ವೈವಿಧ್ಯತೆಗಳಿಂದ ಕೂಡಿರುತ್ತದೆ. ಇಡೀ ಸಮುದಾಯದಲ್ಲಿ ಒಂದೇ ರೀತಿ ಆಚರಣೆಗಳಿಲ್ಲ.

ಕಾಸರಗೋಡು ಜಿಲ್ಲೆಯ ದರ್ಬೆತಡ್ಕ ಗುಂಪಿನ ದಿವಂಗತ ಬಲ್ಲುರವರ ಮಗ ಬಟ್ಟ(76 ವರ್ಷ)ರವರು ಬದಿಯಡ್ಕ ಪರಿಸರದ ಮದುವೆಗಳ ಬಗ್ಗೆ ವಿವರಿಸಿದ್ದಾರೆ.

ಹುಡುಗ ತನ್ನ ಸಂಬಂಧಿಕರೊಂದಿಗೆ ಹುಡುಗಿ ನೋಡಲು ಹೋಗುತ್ತಾನೆ. ಹುಡುಗ ಮತ್ತು ಹುಡುಗಿಗೆ ಪರಸ್ಪರ ಒಪ್ಪಿಗೆಯಾದರೆ ಅಂದೇ ಒಪ್ಪಿಗೆ ವೀಳ್ಯ ವಿನಿಮಯ ಮಾಡಿಕೊಳ್ಳುತ್ತಾರೆ. ಪ್ರತ್ಯೇಕವಾಗಿ ಉಂಗುರ ಹಾಕುವ ಅಥವಾ ನಿಶ್ಚಿತಾರ್ಥ ಎಂಬ ಕ್ರಮ ಇಲ್ಲ. ಬದಲಾಗಿ ಎರಡೂ ಕಡೆಗಳಲ್ಲಿ 'ಚಮ್ಮನ'(ಔತಣ) ನಡೆಯುತ್ತದೆ. ಕೊನೆಗೆ ನಾಲ್ಕು ಬಳಿಗಳವರ ಉಪಸ್ಥಿತಿಯಲ್ಲಿ ಕಾಲಜಿ(ಕಾಲಾವಧಿ)ಯ ದೈವ ಕಾರ್ಯ ನಡೆಯುವ ದಿನದಂದು ವಿಧಿವತ್ತಾಗಿ ಮದುವೆ ಸಂಪ್ರದಾಯ ನಡೆಸಲಾಗುತ್ತದೆ. ಹುಡುಗಿಯ ಮನೆಗೆ ಮದುವೆಯ ದಿಬ್ಬಣ ಬರುವುದು. ತೆಂಗಿನಮರದ ಬುಡದಲ್ಲಿ ಮದುಮಕ್ಕಳ ತಲೆಗೆ ನಾಲ್ಕೂ ಬಳಿಯವರ ಸಮ್ಮುಖದಲ್ಲಿ ಹೆತ್ತವರು ಧಾರೆನೀರು ಹೊಯ್ಯುವುದು ಸಂಪ್ರದಾಯವಾಗಿದೆ. ಆದರೆ ಹುಡುಗ ಹುಡುಗಿಗೆ ಕರಿಮಣಿ ಕಟ್ಟುವ ಕ್ರಮವಿಲ್ಲ. ಬದಲಿಗೆ ಮದುಮಗಳನ್ನು ಸಿಂಗರಿಸುವಾಗಲೇ ಅತ್ತಿಗೆಯಾಗುವವಳು ಅಥವಾ ಮಹಿಳೆಯರು ಈ ಕೆಲಸ ಮಾಡುತ್ತಾರೆ. ದೇಸ ಹಾಕುವಾಗಲೂ ಬಳಿಗಳು ಪ್ರಮುಖವಾಗುತ್ತವೆ. ಮದುವೆಯ ಮರುದಿನ ಗಂಡನ ಮನೆಗೆ ಹುಡುಗಿಯನ್ನು ಕರೆದುಕೊಂಡು ಹೋಗುತ್ತಾರೆ. ಒಂದೇ ರಾತ್ರಿ ಮದುವೆಯ ವಿಧಿಗಳು ಮುಕ್ತಾಯಗೊಳ್ಳುತ್ತದೆ. ಬಟ್ಯರವರ ನೆನಪಿನಲ್ಲಿರುವಂತೆ ಒಂದೇ ಬಾರಿಗೆ ಒಂದೇ ಕಡೆ ಮೂರು ಮದುವೆಗಳು ಒಟ್ಟಿಗೆ ನಡೆದಿವೆ. ಆದರೆ ಕಾಲಜಿಯ ದಿನವೇ ಮದುವೆ ನಡೆಯುವುದು ವಾಡಿಕೆ. ದುರಂತವೆಂದರೆ ಆ ವಯೋವೃದ್ಧ ಬಟ್ಯರವರಿಗೆ ಕಳೆದ ಇಪ್ಪತ್ತು ವರ್ಷಗಳಿಂದ ಕಾಸರಗೋಡು, ಬದಿಯಡ್ಕ ಪರಿಸರದಲ್ಲಿ ಮದುವೆ ನಡೆದ ಬಗ್ಗೆ ಮಾಹಿತಿಯೇ ಇಲ್ಲವಂತೆ! ಈಗ ಮದುವೆಗಳೇ ನಡೆಯುತ್ತಿಲ್ಲ ಎನ್ನುತ್ತಾರೆ, ಬಟ್ಯ ಕೊರಗ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಸುಮತಿ ಮತ್ತು ಅಮರನಾಥರ ಮದುವೆಯ ಬಳಿಕ ಈ ಪರಿಸರದಲ್ಲಿ ಮದುವೆ ನಡೆದಿಲ್ಲವಂತೆ. ಈಗ ಮದುವೆ ಆಗದೆ ಹುಡುಗಿಯನ್ನು ಇಟ್ಟುಕೊಳ್ಳುವುದರ ಬಗ್ಗೆ ನಿಮಗೇನು ಅನಿಸುತ್ತದೆ? ಎಂದು ಬಟ್ಯರವರನ್ನು ಕೇಳಿದರೆ "ನನಗೆ ಮತ್ತು ನನ್ನ

ಮುರ್ತದ ದಿನ ಪೇರ್ ಮಂಜೆಲು ಹಚ್ಚುವುದು

ಅಣ್ಣನಿಗೆ ಇಬ್ಬರಿಗೂ ಮದುವೆ ಆಗಿದೆ. ಅದೇ ರೀತಿ ಈಗಿನವರಿಗೂ ಮದುವೆಯ ಕ್ರಮ ಆದರೆ ಒಳ್ಳೆಯದು. ಆದರೆ ನಮ್ಮ ಮಾತನ್ನು ಯಾರೂ ಕೇಳುವವರಿಲ್ಲ" ಎಂದು ಎರಡೂ ಕೈಗಳನ್ನು ಮೇಲೆತ್ತಿ ಆಕಾಶದತ್ತ ನೋಡುತ್ತಾರೆ. ಇದೇ ಅಭಿಪ್ರಾಯವನ್ನು ಪೆರಡಾಲದ ಎಪ್ಪತ್ತು ವರ್ಷ ಪ್ರಾಯದ ಚನಿಯಾರು ಕೂಡಾ ಹೇಳುತ್ತಾರೆ. ಇತ್ತೀಚೆಗೆ ಕಾಸರಗೋಡು ಜಿಲ್ಲೆಯಲ್ಲಿ ಮದುವೆ ಸಂಪ್ರದಾಯಗಳು ಕಡಿಮೆಯಾಗಿ ಇಷ್ಟವಾದ ಜೋಡಿಗಳು ಗಂಡ ಹೆಂಡತಿಯಂತೆ ಬದುಕುವ ಪದ್ಧತಿ ಹೆಚ್ಚಾದಂತೆ ಕಂಡುಬರುತ್ತದೆ.

ಇನ್ನು ನಡುಸಾಲಿನ ಮದುವೆ ಕ್ರಮಗಳ ಬಗ್ಗೆ ಕಡಂದಲೆ ಗೋಳಿದಡಿ ಬಲಿಪಿನ ಒತ್ತು ಕೊಡ್ತರು ಸುಂದರರವರು ಹೀಗೆ ಮಾಹಿತಿ ನೀಡುತ್ತಾರೆ. ನಡುಸಾಲು ಎಂದರೆ ಉತ್ತರದಲ್ಲಿ ಉದ್ಯಾವರ ಹೊಳೆ, ದಕ್ಷಿಣದಲ್ಲಿ ಹಾವಂಜೆ (ಹಳೆಯಂಗಡಿ) ಹೊಳೆಯ ನಡುವಿನ ಪೂರ್ವದಲ್ಲಿ ಕಾರ್ಕಳ ಪೇಟೆವರೆಗಿನ ಪ್ರದೇಶ. ಹಿಂದೆ ಈ ಪರಿಸರದಲ್ಲಿ ಕೊರಗರ ಮದುವೆ ಎಂದರೆ ಐದು ದಿನಗಳ ಆಚರಣೆ ಆಗಿತ್ತು. ಹುಡುಗಿ ನೋಡಲು ತನ್ನ ಸಂಬಂಧಿಕರೊಂದಿಗೆ ಹುಡುಗ ಹೋಗುವುದು ಪದ್ಧತಿಯಾಗಿತ್ತು. ಹುಡುಗಿಯನ್ನು ನೋಡಿದ ಹುಡುಗನ ಕಡೆಯವರು ಒಪ್ಪಿಗೆ ತಿಳಿಸುವುದಕ್ಕಾಗಿ ಒಂದಿಷ್ಟು ಸಮಯ

ಕೇಳಿ ಹಿಂದಿರುಗುತ್ತಿದ್ದರು. ಅದರಂತೆ ಹುಡುಗಿ ಒಪ್ಪಿಗೆಯಾದರೆ ಒಂದೆರಡು ತಿಂಗಳಲ್ಲಿ ನಿಘಂಟು ಅಥವಾ ನಿಶ್ಚಯದ ವೀಳ್ಯ ವಿನಿಮಯ ಕಾರ್ಯ ನಡೆಯುತ್ತದೆ. ಎರಡೂ ಕಡೆಯ ಗುರಿಕಾರರು ಪರಸ್ಪರ ವೀಳ್ಯ ಬದಲಿಸಿಕೊಂಡು ಒಪ್ಪಿಗೆ ಸೂಚಿಸುತ್ತಾರೆ.

ಇನ್ನು ಮದುವೆಯ ಮೊದಲನೇ ದಿನ ಸಂಜೆ, ಕೂಡದಕಲು ಅಂದರೆ ಕುಟುಂಬಿಕರು ಮತ್ತು ಹತ್ತಿರದ ನೆಂಟರಿಷ್ಟರು ಮದುವೆ ಮನೆಯಲ್ಲಿ ಸೇರುತ್ತಾರೆ. ಆದಿನ ಯಾವುದೇ ವಿಧಿಗಳಿರುವುದಿಲ್ಲ. ಕ್ಷೇಮ ಸಮಾಚಾರ, ಲೋಕಾಭಿರಾಮದ ಮಾತುಕತೆಗಳು ಹಾಗೂ ಸಾಮಾನ್ಯ ಗಂಜಿ ಊಟ! ಮರುದಿನ ಬೆಳಿಗ್ಗೆ ಕುಟುಂಬದ ಗುರಿಕಾರನ ನೇತೃತ್ವದಲ್ಲಿ ನೆಂಟರಿಷ್ಟರು ತಂದಿರುವ 'ಹೊರೆ' ಸ್ವೀಕರಿಸುವ ಕ್ರಮ ನಡೆಯುತ್ತದೆ. ಪುದೆ(ಹೊರೆ) ತಂದವರಿಗೆ ಬಾಯಿ ಮಾತಿನ ಉಪಚಾರ(ಗೌರವ) ಹಾಗೂ ಕಳ್ಳು(ಹೆಂಡ) ಕುಡಿಯಲು ಕೊಡುತ್ತಾರೆ. ಅಂದು ರಾತ್ರಿ 'ಮುರ್ತ' ಅಥವಾ ಮುಹೂರ್ತ ಕ್ರಮಗಳು ನಡೆಯುತ್ತದೆ. ಗುರಿಕಾರನ ನೇತೃತ್ವದಲ್ಲಿ ಕುಲದೈವ ಕೊರಗತನಿಯ ಹಾಗೂ ಅಂಜಮಂಜ(ಮಂಜ ದೇವರು)ರಿಗೆ ಪ್ರಾರ್ಥನೆ ಸಲ್ಲಿಸಿ, ಮದುವೆ ಕಾರ್ಯ ಸುಸೂತ್ರವಾಗಿ ನೆರವೇರಿಸಿ ಕೊಡುವಂತೆ ಕೇಳಿಕೊಳ್ಳುತ್ತಾರೆ. ರಾತ್ರಿ ಸುಮಾರು 7 ರಿಂದ 8 ಗಂಟೆಯ ವೇಳೆಗೆ ಹುಡುಗಿಯನ್ನು ಅಂಗಳಕ್ಕೆ ಕರೆತಂದು ಪೂರ್ವಾಭಿಮುಖವಾಗಿ ನಿಲ್ಲಿಸುತ್ತಾರೆ. ಮೊದಲೇ ಸಿದ್ಧಪಡಿಸಿದ ತೆಂಗಿನಕಾಯಿಯ ಹಾಲು ಹಾಗೂ ಕಲಸಿದ ಅರಶಿನಪುಡಿಯನ್ನು ಗುರಿಕಾರನ ಮಾರ್ಗದರ್ಶನದಂತೆ ನೆಂಟರು, ಮೊದಲಾಗಿ ಹುಡುಗಿಯ ಮುಖ, ಕೈ ಕಾಲುಗಳಿಗೆ ಹಚ್ಚುತ್ತಾರೆ. ಇಲ್ಲಿ 'ಬಳಿ'ಗಳು ಪ್ರಮುಖವಾಗುತ್ತದೆ. ಬಾರ್ಕೂರು ಕಡೆಯ ನೆಂಟರಿಗೆ ಮೊದಲ ಗೌರವ ಹಾಗೂ ಮಂಗಳೂರು ಕಡೆಯವರಿಗೆ ನಂತರದ ಸ್ಥಾನ! ಹುಡುಗಿಯ ತಂದೆಯ ಕಡೆಯವರಿಗೂ ಗೌರವ ಸಲ್ಲಬೇಕು. ಈ ವಿಧಿಯನ್ನು 'ಪೇರ್ ಮಂಜೆಲ್' ಎನ್ನುತ್ತಾರೆ. ಕುಟುಂಬದ ಕೊಡ್ತುರು(ಗುರಿಕಾರೆ) ಕ್ರಿಯೆಯನ್ನು ಪೂರೈಸಿ ಅಂತಿಮ ಗೊಳಿಸುತ್ತಾರೆ. ನಂತರ ಹುಡುಗಿಯನ್ನು ಸ್ನಾನ ಮಾಡಿಸಲಾಗುತ್ತದೆ. ಇದನ್ನು ಮುರ್ತದ ನೀರು ಹೊಯ್ಯುವುದು ಎನ್ನುತ್ತಾರೆ. ಇಲ್ಲಿ ಹುಡುಗಿಯ ಸಂಬಂಧಿಕರಿಗೆ ಗೌರವ ಸ್ಥಾನ ಸಿಗುತ್ತದೆ. ಇದಾದ ಬಳಿಕ ಗುರಿಕಾರ ಹುಡುಗಿಗೆ ಮುರ್ತದ ಕುಂಟು(ಸೀರೆ) ಕೊಡುವ ಕ್ರಮ ಜರಗುತ್ತದೆ. ಸಿಂಗರಿಸಿದ ಹುಡುಗಿಗೆ ಮುರ್ತದ ಮಣಿ ಹಾಕುವ ಕಾರ್ಯ ಮುಂದೆ ನಡೆಯುತ್ತದೆ. ಈಗಲೂ ಬಾರ್ಕೂರು, ಮಂಗಳೂರು ಹಾಗೂ ತಂದೆಯ ಕಡೆಗೆ ಪ್ರಧಾನ ಆದ್ಯತೆಯಲ್ಲಿ ಗೌರವ ಸಿಗಬೇಕು. ಇಲ್ಲಿ ಮದುವೆ ಆಗಿರುವವರು ಮಾತ್ರ ಮುರ್ತದ ಮಣಿ ಹಾಕಲು ಅರ್ಹರಾಗಿರುತ್ತಾರೆ. ಉಳಿದವರಿಗೆ ಅವಕಾಶವಿಲ್ಲ. ಕ್ರಮವಾಗಿ ಎಲ್ಲರೂ ಮುರ್ತದ ಮಣಿ ಹಾಕಿದ ಮೇಲೆ ಕೊನೆಗೆ ಎಂದಿನಂತೆ ಗುರ್ಕಾರೆ ಹಸಿರು ಮಣಿಯನ್ನು ಹುಡುಗಿಯ ಕತ್ತಿಗೆ ಕಟ್ಟುತ್ತಾನೆ. ಅಲ್ಲಿಗೆ ಮುರ್ತಕ್ರಿಯೆ ಪೂರ್ಣ ಗೊಳ್ಳುತ್ತದೆ. ರಾತ್ರಿ ಊಟದ ಬಳಿಕ ಮದುಮಗಳಿಗೆ ಮೆಹಂದಿ ಇಡುತ್ತಾರೆ. ಇಲ್ಲಿಯೂ ಯಾವುದೇ ಅಧಿಕೃತ ನಿಯಮಗಳಿಲ್ಲ. ಇದೇ ರೀತಿಯ ಕಾರ್ಯಕ್ರಮಗಳು ಗಂಡಿನ ಮನೆಯಲ್ಲಿಯೂ ನಡೆಯುತ್ತದೆ.

ಮುರ್ತದ ಮಣಿ ಹಾಕುತ್ತಿರುವುದು

ಮೂರನೇ ದಿನ ಬಿರ್ದು ಅಥವಾ ಮದುವೆ! ಮಧ್ಯಾಹ್ನದ ನಂತರ ಗಂಡಿನ ಕಡೆಯ ದಿಬ್ಬಣವು ಹುಡುಗಿಯ ಮನೆಯ ಕಡೆಗೆ ಬರುತ್ತದೆ. ದೂರದಿಂದಲೇ ನಡೆದುಕೊಂಡು ಬರುವಾಗ ದಣಿವಾರಿಸಲು ಇಂಪಾದ ದಿಬ್ಬಣದ ಕೊರಲ್(ಕೊಳಲು) ಇವರೊಂದಿಗೆ ಇರುತ್ತದೆ. ಕೊಳಲಿನ ಧ್ವನಿ ಕೇಳುತ್ತಿದ್ದಂತೆಯೇ ಮದುವೆ ಮನೆಯಲ್ಲೂ ಕೊಳಲು ಕೇಳಲಾರಂಭಿಸುತ್ತದೆ. ಜೊತೆಗೆ ಡೋಲಿನ ಅಬ್ಬರದ ಧ್ವನಿಯೂ ದಿಬ್ಬಣವನ್ನು ಸ್ವಾಗತಿಸುತ್ತದೆ. ದಿಬ್ಬಣ ಮನೆ ತಲುಪುತ್ತಿದ್ದಂತೆಯೇ ಬಲೆಪಿನ ಹಿರಿಯ ಮಹಿಳೆಯೊಬ್ಬರು ಎದುರುಗೊಳ್ಳುತ್ತಾರೆ. ಬಟ್ಟಲಿನಲ್ಲಿ ಮಸಿ ಹಾಕಿದ ಅನ್ನದ ನೀರನ್ನು (ತಿಳಿ; ತೆಲಿ) ಮದುಮಗನಿಗೆ ನಿವಾಳಿಸಿ ತೆಗೆಯುತ್ತಾರೆ. ಹುಡುಗನಿಗೆ ದಾರಿಯಲ್ಲಿ ಯಾವುದೇ ವಕ್ರದೃಷ್ಟಿ ತಾಗಿದ್ದರೆ ಅದನ್ನು ತೆಗೆಯುವುದೇ ಇದರ ಉದ್ದೇಶವಾಗಿರುತ್ತದೆ. ಕುಶಲೋಪಚಾರ ವಿನಿಮಯ, ಆಯಾಸ ಪರಿಹಾರ ಆದ ಮೇಲೆ ಗುರಿಕಾರನು ನೆಂಟರಿಗೆ ಒಂದು ಕೋಳಿ ಮತ್ತೊಂದು ತೆಂಗಿನಕಾಯಿಯನ್ನು ತೋರಿಸುವ ಪದ್ಧತಿಯಿದೆ. ಇದು ಮದುವೆಯ ಊಟವು ಮಾಂಸಾಹಾರದ್ದಾಗಿರುತ್ತದೆ ಎಂಬುದನ್ನು ಸಂಕೇತಿಸುತ್ತದೆ ಎಂದು ಸುಂದರ ಕೊಡ್ತರು ವಿವರಿಸುತ್ತಾರೆ. ಜೊತೆಗೆ ಗುರ್ಕಾರ ನೀಡಿದ ಕಾಯಿಯನ್ನು ದಿಬ್ಬಣದಲ್ಲಿ ಬಂದ ಯಾರಾದರೊಬ್ಬರು ಕೈಯಲ್ಲಿ ಒಡೆದು ಕೊಡಬೇಕು. ಕಾಯಿ ಒಡೆಯಲು ಸಾಧ್ಯವಾಗದಿದ್ದರೆ ಬಂದವರಿಗೆ ಅದೊಂದು ಅವಮಾನ ಎಂಬ ನಂಬಿಕೆ ಇತ್ತು. ಇದು ನೆಂಟರಿಗೊಂದು ಸವಾಲೂ ಹೌದು; ಮನರಂಜನೆಯೂ ಹೌದು; ಆದರೂ ಇದು ಸೌಹಾರ್ದವಾಗಿಯೇ ನಡೆಯುತ್ತಿತ್ತು. ಕೈಗೆ ಬಟ್ಟೆ ಸುತ್ತಿ; ತಾಳೆ ಗರಿಯಿಂದ ಮಾಡಿದ ಉಂಗುರದ ಮೇಲೆ ತೆಂಗಿನಕಾಯಿಯನ್ನು ಇಟ್ಟು ಯುವಕನೊಬ್ಬ ಮೊಣ



ಮದುವೆಯ ಒಪ್ಪಂದದ ವೀಳ್ಯ ವಿನಿಮಯ ಅನುಮತಿ ಪಡೆಯುವುದು

ಕಾಲೂರಿ ನೆಲದ ಮೇಲೆ ಕೂರುತ್ತಾನೆ. ತನ್ನೆಲ್ಲ ಶಕ್ತಿಯನ್ನು ಬಳಸಿ ಉಂಗುರದ ಮೇಲಿನ ಕಾಯಿಯನ್ನು ಒಂದೇ ಒಡೆತಕ್ಕೆ ಒಡೆದಾಗ ಎಲ್ಲರಿಗೂ ಸಂತೃಪ್ತಿ, ಸಮಾಧಾನ! ಒಂದು ವೇಳೆ ನೆಂಟರಲ್ಲಿ ಯಾರಿಗೂ ಕಾಯಿ ಒಡೆಯಲಾಗದಿದ್ದರೆ ಮನೆಯವರೂ ಪ್ರಯತ್ನಿಸಿ, ಕಾರ್ಯ ಪೂರ್ತಿಗೊಳಿಸುತ್ತಾರೆ. ಇದಾದ ಬಳಿಕ ಮದುವೆಯ ಅಧಿಕೃತ ಒಪ್ಪಂದಕ್ಕೆ ಏರ್ಪಾಡಾಗುತ್ತದೆ. ಎರಡೂ ಕಡೆಯ ಗುರಿಕಾರರು, ಮದುಮಕ್ಕಳ ಹೆತ್ತವರು, ಸೋದರಮಾವ ದಂಪತಿಗಳು, ಸಂಗಡಿಗರು ಎರಡು ಪ್ರತ್ಯೇಕ ಚಾಪೆಗಳಲ್ಲಿ ಎದುರು ಬದುರಾಗಿ ಕೂರುತ್ತಾರೆ. ಎರಡೂ ಕಡೆಯವರ ವೀಳ್ಯ ಸಿದ್ಧಗೊಳ್ಳುತ್ತದೆ. ಎರಡು ಸಣ್ಣಸಣ್ಣ ಮುಚ್ಚಿಲ್ ತಡ್ಪೆ(ಗೆರಸೆ, ಮೊರ)ಗಳಲ್ಲಿ ತಲಾ ಆರು ಕವುಳೆ ವೀಳ್ಯದೆಲೆ (ಒಂದು ಕವಳೆ ಅಂದರೆ 24 ಎಲೆ) ಹಾಗೂ ಹನ್ನೆರಡು ಹಸಿ ಅಡಿಕೆಗಳನ್ನು ನವಿರಾಗಿ

ಮದುವೆಯ ಪೂಸೀರೆ ಸ್ವೀಕರಿಸುವುದು

ಜೋಡಿಸಲಾಗುತ್ತದೆ. ಇದನ್ನು ಗೆರಸೆ ಸಮೇತ ಹೆಣ್ಣು ಮತ್ತು ಗಂಡಿನ ಕಡೆಯವರು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಮೂರು ಮೂರು ಬಾರಿ ಆ ವೇಳ್ಯದ ಗೆರಸೆ ವಿನಿಮಯಗೊಳ್ಳುತ್ತದೆ. ಮೂರು ಬಾರಿಯೂ "ಹುಡುಗನ ಕಡೆಯಿಂದ ಯಾವುದೇ ಅನಾಹುತ ನಡೆದರೂ ನಾವಿದ್ದೇವೆ" ಎಂದು ಗುರಿಕಾರ ಧೈರ್ಯದ ಭರವಸೆ ನೀಡುತ್ತಾನೆ. ಅದೇ ರೀತಿ ಹುಡುಗಿಯ ಕಡೆಯ ಗುರಿಕಾರನೂ ಭರವಸೆ ನೀಡುತ್ತಾನೆ. ಇದೇ ಸಂದರ್ಭದಲ್ಲಿ ಮದುಮಗ ಅರ್ಥದ ಪನವು(ತೆರ) ಸಂದಾಯ ಮಾಡುತ್ತಾನೆ. ಇತರ ಜಾತಿ ಸಮುದಾಯಗಳಲ್ಲಿ ಹೆಣ್ಣು ಗಂಡಿಗೆ ಹಣ ಅಥವಾ ವಸ್ತುರೂಪದಲ್ಲಿ ವರದಕ್ಷಿಣೆ ಪಾವತಿಸಿದರೆ ಕೊರಗರಲ್ಲಿ ಗಂಡು ಹೆಣ್ಣಿಗೆ ಖರ್ಚಿನ ಹಣವನ್ನು ಸಾಂಕೇತವಾಗಿ ಪಾವತಿಸುವುದು ರೂಢಿಯಾಗಿದೆ. ಬಹಳ ಹಿಂದೆ ನಾಲ್ಕಾಣೆ, ಎಂಟಾಣೆ ಮೊತ್ತದ ಪನವು ನೀಡುತ್ತಿದ್ದರೆ, ಇದೀಗ ಹುಡುಗನ ಅನುಕೂಲಕ್ಕೆ ತಕ್ಕಂತೆ ಐನೂರು; ಸಾವಿರದ

ಗಡಿಯನ್ನೂ ದಾಟುತ್ತಿದೆ. ಹುಡುಗನ ಕಡೆಯ ಗುರಿಕಾರ ಈ ಮೊತ್ತವನ್ನು ವೀಳ್ಯ ಸಮೇತವಾಗಿ ಹುಡುಗಿ ಕಡೆಯ ಗುರಿಕಾರನಿಗೆ ನೀಡಬೇಕು. ಇದೇ ಸ್ಥಳದಲ್ಲಿ ಮದುಮಕ್ಕಳಿಗೆ ಸಹಾಯಕರನ್ನು(ಸಂಗದಕುಲ್) ಹಾಗೂ ಸಂಗಡಿಗರನ್ನು(ಕೈ ಕಾರ್ಲು) ಆರಿಸಿಕೊಳ್ಳಲಾಗುತ್ತದೆ. ಕ್ರಮವಾಗಿ ಹುಡುಗಿಯ ತಂದೆಯ ಕಡೆಯವರನ್ನು ಹಾಗೂ ಹತ್ತಿರದ ನೆಂಟರನ್ನು ಆಯ್ಕೆ ಮಾಡಲಾಗುತ್ತದೆ. ಮದುಮಕ್ಕಳ ಕಾಲಿಗೆ ನೀರು ಹಾಕುವುದು, ಆಚೆ ಈಚೆ ಹೋಗಬೇಕಾದಾಗ, ಖಾಸಗಿ ಕೆಲಸಗಳಿಗೆ ನೆರವಾಗುವುದು ಇವರ ಜವಾಬ್ದಾರಿಗಳಾಗಿರುತ್ತವೆ. ಅದೊಂದು ಮರ್ಯಾದೆ ಕೂಡಾ ಆಗಿರುತ್ತದೆ.

ಗುರಿಕಾರ ಮದುಮಕ್ಕಳಿಗೆ ಧಾರೆ ಸೀರೆ ಒಪ್ಪಿಸಿದ ನಂತರ ಸಂಗಡಿಗರ ಸಹಕಾರದಲ್ಲಿ ಮಕ್ಕಳನ್ನು ಶೃಂಗಾರ ಮಾಡುತ್ತಾರೆ. ಶೃಂಗಾರದ ಬಳಿಕ ಇಬ್ಬರನ್ನು ಅಂಗಳಕ್ಕೆ ಕರೆತಂದು ಪೂರ್ವಕ್ಕೆ ಮುಖಮಾಡಿಸಿ ಅಕ್ಕಪಕ್ಕ ನಿಲ್ಲಿಸುತ್ತಾರೆ. ಪಕ್ಕದಲ್ಲಿ ಹೆತ್ತವರು, ಸಂಗಡಿಗರೂ ಇರುತ್ತಾರೆ. ಹಿಂದಿನ ದಿನಗಳಲ್ಲಿ ಬಾಲ್ಯ ವಿವಾಹಗಳೇ ನಡೆಯುತ್ತಿದ್ದುದರಿಂದ ಬಾಲಕನಿಗೆ ಸಹಾಯಕನಾಗಿ ಹಾಗೂ ಜವಾಬ್ದಾರಿಕೆಯ ದೃಷ್ಟಿಯಿಂದ ಹುಡುಗನ ಕಡೆಯ ಗುರಿಕಾರನೇ ಹುಡುಗಿಗೆ ಕಪ್ಪುದ ಮಣಿ ಹಾಕುವ ಸಂಪ್ರದಾಯವಿತ್ತು. ಆದರೆ ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದೀಚೆಗೆ ಹುಡುಗನೇ ಕರಿಮಣಿ ಅಥವಾ ದಾರವನ್ನು ಕಟ್ಟುವ ಕ್ರಿಯೆ ನಡೆಯುತ್ತದೆ. ಆ ಕ್ಷಣದಿಂದ ಅವರಿಬ್ಬರೂ ಗಂಡ ಹೆಂಡ್ತಿ ಎಂಬುದಾಗಿ ಪರಿಗಣಿಸಲ್ಪಡುತ್ತಾರೆ. ಬಳಿಕ ಮದುಮಕ್ಕಳ ಕೈಗೆ ಹೆತ್ತವರು ಧಾರೆ ನೀರು ಎರೆಯುತ್ತಾರೆ. ಇಬ್ಬರನ್ನೂ ತೆಂಗಿನಮರದ ಬುಡಕ್ಕೆ ಕರೆತಂದು, ಅಲ್ಲಿ ಒಬ್ಬರ ಕೈಯ ಮೇಲೆ ಇನ್ನೊಬ್ಬರ ಕೈಗಳನ್ನು ಇರಿಸಿ, ಮೊದಲಾಗಿ ಹೆಣ್ಣಿನ ಹೆತ್ತವರು ದೇವರ ನೀರು(ತೆಂಗಿನಕಾಯಿಯ ನೀರು ಬೆರಸಿದ್ದ ಶುದ್ಧ ನೀರನ್ನು) ಧಾರೆ ಎರೆಯುತ್ತಾರೆ. ಬಳಿಕ ಅದೇ ಪ್ರಕಾರ ಗಂಡಿನ ಹೆತ್ತವರು ನೀರು ಸುರಿಯುತ್ತಾರೆ. ಇಲ್ಲಿಯೂ ಬಳಿಗಳು ಹಾಗೂ ಬಾರ್ಕೂರು, ಮಂಗಳೂರು ಕಡೆಯ ನೆಂಟರು ಗೌರವ ಉಪಸ್ಥಿತಿ ಇರುತ್ತಾರೆ. ಅವರಲ್ಲಿ ಕೇಳಿಕೊಂಡೇ ಎಲ್ಲಾ ಕಾರ್ಯಗಳನ್ನು ಮುಂದುವರಿಸಲಾಗುತ್ತದೆ. (ಹಿಂದೆ ಮದುಮಕ್ಕಳನ್ನು ತೆಂಗಿನಮರದ ಬುಡದಲ್ಲಿ ಮಣೆ ಹಾಕಿ ಕೂರಿಸಿ ತಲೆಗೆ ಧಾರೆ ಎರೆದ ಬಳಿಕವೇ ಮದುಮಕ್ಕಳನ್ನು ಸಿಂಗರಿಸಿ, ಕರಿಮಣಿ ಕಟ್ಟುವ ರೂಢಿ ಇತ್ತು. ಈಗ ಅದರಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ.) ಧಾರೆ ಆದ ಮೇಲೆ ಚಾಪೆಯಲ್ಲಿ ಕೂರಿಸಿ, ಗುರಿಕಾರ ಒಂದು ಸೇರು ಅಕ್ಕಿ ಹಾಗೂ ಅದಕ್ಕೆ ಐದಾರು ಕಿಷ್ಕಾರ(ಕೇಪುಳ) ಹೂವಿನ ಎಸಳುಗಳನ್ನು ಇಟ್ಟು ಕುಲದೇವರು ಹಾಗೂ ಬಂದಂತಹ ನೆಂಟರಿಷ್ಟರನ್ನು ನೆನೆದು ಪ್ರಾರ್ಥನೆ ಸಲ್ಲಿಸುತ್ತಾನೆ. ಇದಕ್ಕೆ 'ಬಲ್ಲದ ಅರಿ' ಎನ್ನುತ್ತಾರೆ. ನಂತರ ಕ್ರಮವಾಗಿ ಬಾರ್ಕೂರು, ಮಂಗ್ಳೂರು ನೆಂಟರನ್ನು ದೇಸೆ ಹಾಕಲು ಕರೆಯಲಾಗುತ್ತದೆ. ಇಲ್ಲಿಯೂ ಮದುವೆ ಆಗಿರುವವರು ಮಾತ್ರ ಅಕ್ಕಿ ಕಾಳಿನ ದೇಸೆ ಹಾಕಲು ಅವಕಾಶವಿರುತ್ತದೆ. ಎಲ್ಲರೂ ದೇಸೆ ಹಾಕಿ, ಮುಯಿ ಇಟ್ಟು(ಉಡುಗೊರೆ) ಆದ ಮೇಲೆ ಹುಡುಗಿಯ ಗುರಿಕಾರ ದೇಸೆ ಹಾಕಿ ಕಾರ್ಯ ಸಮಾಪ್ತಿಗೊಳಿಸುತ್ತಾರೆ. ಇಲ್ಲಿ ಮುಯಿ ಬಂದ ಹಣದ ಲೆಕ್ಕವನ್ನು ಮರುದಿನ ಬೆಳಿಗ್ಗೆ

ಗಂಡಿನ ಕಡೆಯವರಿಗೆ ಕೊಡಬೇಕು ಎಂಬ ನಿಯಮವಿದೆ. ಆದರೆ ಈಗ ಅದು ಕಟ್ಟುನಿಟ್ಟಾಗಿಲ್ಲ. ಇಷ್ಟೆಲ್ಲಾ ವಿಧಿವಿಧಾನಗಳು ಸುಮಾರು ಎರಡು ಮೂರು ಗಂಟೆಗಳಷ್ಟು ಅವಧಿಯಲ್ಲಿ ಮುಗಿಯುತ್ತಿದ್ದು ರಾತ್ರಿ ಹನ್ನೆರಡರ ಸುಮಾರಿಗೆ ಮದುವೆಯ ಊಟದ ವ್ಯವಸ್ಥೆಯೂ ಆಗಿರುತ್ತದೆ. ಮದುಮಕ್ಕಳಿಗೆ ಅಂದೇ ಮೊದಲ ರಾತ್ರಿಯೂ ಆಗಿರುತ್ತದೆ. ಅದಕ್ಕೆ ವಿಶೇಷ ರೀತಿ ನೀತಿಗಳೇನೂ ಇಲ್ಲ.

ಮದುವೆಯ ಮರುದಿನ ಮಧ್ಯಾಹ್ನದ ಊಟವಾದ ಬಳಿಕ ಹುಡುಗಿಯನ್ನು ಗಂಡನ ಮನೆಗೆ ಕಳುಹಿಸಿ ಕೊಡುವ ಕಾರ್ಯ ನಡೆಯುತ್ತದೆ. ಗುರಿಕಾರ, ಹೆತ್ತವರು, ನೆಂಟರು, ಹಿರಿಯರ ಕಾಲು ಹಿಡಿದು ಆಶೀರ್ವಾದ ಪಡೆದ ಮದುಮಕ್ಕಳು ಹೊರಡುತ್ತಾರೆ. ಕಳೆಗುಂದಿದ ಮನೆಯವರು ಹುಡುಗಿಯನ್ನು ಗಂಡನ ಮನೆಗೆ ಕಳುಹಿಸಿಕೊಡುತ್ತಾರೆ. ಸಂಗಡಿಗರು, ಸಹಾಯಕರು ಜೊತೆಗೆ ತೆರಳುತ್ತಾರೆ. ಅಂದು ರಾತ್ರಿ ನೆಂಟರಿಷ್ಟರಿಗೆಲ್ಲ ಆಯಾಸ ಪರಿಹಾರದ ದಿನ! ಐದನೇ ದಿನ ಗಂಡಿನ ಮನೆಯಲ್ಲಿ ದೇಸೆಯ ಕಾರ್ಯಕ್ರಮವಿರುತ್ತದೆ. ಹೆಣ್ಣಿನ ಮನೆಯಿಂದ ಒಂದಿಷ್ಟು ಮಂದಿ ಗಂಡಿನ ಮನೆಗೆ ಬರುತ್ತಾರೆ. ಇಲ್ಲಿಯೂ ಮಾಂಸದೂಟದ ಸವಿ ಇರುತ್ತದೆ. ಈ ರೀತಿಯಾಗಿ ಐದು ದಿನಗಳ ಮದುವೆ ಮುಗಿಯುತ್ತದೆ. ಆದರೆ ಈಗ ಇಂತಹ ಮದುವೆಗಳು ನಡೆಯುವುದೇ ಇಲ್ಲ ಎಂದು ಸುಂದರ ಕೊಡ್ತರು ವಿಷಾದಿಸುತ್ತಾರೆ. ಮನೆಯಲ್ಲಿ ಸ್ಥಳದ ಕೊರತೆ, ಸಮಯ ವ್ಯರ್ಥ ಎಂಬ ಕುಂಟು ನೆಪಗಳನ್ನು ಮುಂದೆ ಮಾಡಿ, ಹಾಲ್, ಕಲ್ಯಾಣ ಮಂಟಪಗಳಲ್ಲಿ ಮದುವೆಯನ್ನು ನಡೆಸಲಾಗುತ್ತದೆ. ಮನೆಯಲ್ಲಿಯೇ ನಡೆದರೂ ಒಂದೆರಡು ದಿನಗಳಲ್ಲಿ ಮುಗಿದು ಹೋಗುತ್ತದೆ.

ಮದುಮಗಳ ಸಿಂಗಾರಕ್ಕೆ ಬಳಸುವ ಮಣಿಸರಗಳು

1. ಕಪ್ಪುದ ಮಣಿ (ಕರಿ ಮಣಿ)
2. ಸಂಕಮಾಲೆ (ಹಳದಿ, ಬಿಳಿ, ಹಸಿರು ಮಣಿಗಳ ಸರ)
3. ಮೊಂದರ ಮಣಿ (ಬೈತಲೆ – ಮಣಿ)
4. ದೆಕ್ಕಡೆ (ಅಡ್ಡ ಮಣಿ) – ಕಪ್ಪು, ಬಿಳಿ ಹಾಗೂ ನೀಲಿ ಮಣಿಗಳ ಸರ)

ಇಂದು ಬುಡಕಟ್ಟು ಸಮುದಾಯವೊಂದು ತನ್ನ ಇರುವಿನ ಅರಿವನ್ನು ಕಳಚಿಕೊಂಡು ಸಾರಾಸಗಟಾಗಿ ಇತರರ ಕ್ರಮಗಳನ್ನು ಕುರುಡಾಗಿ ಅನುಸರಿಸುತ್ತಿರುವುದು ಬೇಸರದ ವಿಚಾರವಾಗಿದೆ, ಇಂದು ಕೊರಗರ ಮದುವೆಗಳಿಗೂ ಪುರೋಹಿತರು ಬಂದು ವೈದಿಕ ಪದ್ಧತಿಯಂತೆ ವಿವಾಹ ನೆರವೇರಿಸುತ್ತಿರುವುದು ಸಾಂಸ್ಕೃತಿಕ ವಿಡಂಬನೆಯಾಗಿ ಕಂಡುಬರುತ್ತದೆ.

ಸಾಮಾನ್ಯ ಮಹಿಳೆಯರು ಧರಿಸುವ ಕೆಲವು ಆಭರಣಗಳು

1. ಕಪ್ಪುದ ಮಣಿ
2. ಸಂಕಮಾಲೆ

3. ಕನ್ನಡಿ ಮಣಿ (ಕೆಂಪು, ಬಿಳಿ, ಕಪ್ಪು ಮಣಿಗಳು)
4. ಕಿವಿಗೆ ಕೊಂಡ್ಲ
5. ಮೂಗಿಗೆ ಕೊಡಂಗೆ
6. ಕೈಗೆ ಮಣ್ಣಿನ ಗಡವು (ಮಣ್ಣಿನ ಬಳೆ)
7. ಕಾಲಿಗೆ ಗಡಗ (ಹಿತ್ತಾಳೆ ಕಡಗ)

ಗಂಡಸರ ಆಭರಣಗಳು

1. ಕಿವಿಗೆ ಉಂಗುರಾಕಾರ ರಿಂಗ್ – (ಕೊಡಂಗೆ ಅಥವಾ ವಂಟಿ)
2. ತಲೆಗೆ ಅಡಿಕೆ ಹಾಳೆಯ ಟೊಪ್ಪಿ (ಮೂಡೆ)
3. ಸೊಂಟಕ್ಕೆ – ಅಂಕೊಡಿ (ರಣ ಹದ್ದುಗಳ ರೆಕ್ಕೆ ಎಲುಬುಗಳನ್ನು ಕತ್ತರಿಸಿ ಅದನ್ನು ಪೋಣಿಸಿ ಮಾಡಿದ ಸೊಂಟದ ಪಟ್ಟಿ. ಅದರಲ್ಲಿ ಹಿಂದುಗಡೆ ಕತ್ತಿ ಸಿಕ್ಕಿಸಿಕೊಳ್ಳಲು ಮರದ ತುಂಡಿನಿಂದ ಮಾಡಿದ ಚಿಲಕ ಇತ್ತು)

ಪಾಟು – ಮದುವೆಯ ಸಂದರ್ಭದಲ್ಲಿ ಹಾಡುವ ಹಾಡು

ಲೇಲೇ ಲೆಲ್ಲೇಲೆ
ಲೆಲ್ಲರೇ ನಾನ ಲೆಲ್ಲೇರೇ, ಲೇಲೆ ಲೆಲ್ಲೆರೇನಾ ॥ ಪ ॥
ಪೊಸ ಕೊರಯಿನ ಪೊಸ ಕ್ವರ್ತಿನ ಕೊಟ್ಯಾಡ್ ಬೂರಗೆರ್,
ಕೊಟ್ಯದ ಮುಲಿ ಲಾಕುನ ಮುಟ್ಟ ಅಕುಲ್ ಲಾಕುಜೇರು ॥ಲೇಲೇ॥
ಕಾಯಿ ಕಾಯಿ ಕಂಚಲಯಾ ಕೈಯೆರುಗೆಡ್ಡೆತಾ
ಪೂ ಪೇ ಮಡ್ಯಲಚ್ಚಿ ಮುಡಿಯೆರೆಗೆಡ್ಡೆತ ॥ಲೇಲೇ॥

ಕೆಂಪನೆಗಕುಯಾ ಕೆಂಪನೆಗಕು
ಕೇಪುಲದ ಪೂತಲಕ್ಕ ಕೆಂಪನೆಗಕುಯಾ ॥ಲೇಲೇ॥

ಅಕುಲ್ ಇಕ್ಕೆಲ್ ಪುಕ್ಕರೆತಾಯ ತುದೆ ಕಡಪಲಾಯೆರೆ,
ನಕುಲ್ನಚ್ಚೆ ಪೊಯಿ ನನ್ಕ ಕುಂಟಲಪಾಡಿ ಮುಟ್ಟ ॥ ಲೇಲೇ॥

ನನ್ಕೆನ ಮೈತಿದಿನಾ ಮಾವು ಪಿಜ್ಜೆರೆ ಪುಕ್ಕೆರತಾ
ಮಾವುತ ಗೊರಂಟುಡಚ್ಚೆ ನೋಟ ಪುಡ್ಡುಗೆರ್‌ಯಾ ॥ ಲೇಲೇ ॥
ಆಯರಡೊಂಜಿ ದೇಯಿ ಮಾರಯಾ

ಈಯರ ಡೊಂಜಿ ದೇಯಿ ಮರಾ
ದೇಯಿ ಮರತ ಚಪ್ಪು ಕಡ್ಡುಗ್ ದೇಯಿ ಮದ್ಮಾಲ್ ॥ ಲೇಲೇ ॥

ಎತ್ತರೆತ್ತರ ಗುಡ್ಡೆಡ್ ಕೋದೋಲೆ ಚಳಿ ಕೈಪುಂಡ,
ನಕುಲ್ನಚ್ಚಿ ಚಳಿ ಕೈಪುಗನಾ, ಚೂವರೆ ಜನ ದೀಯೇರಾ ॥ ಲೇಲೇ ॥
ಬಾಲೆ ಪುಟುಜಿ, ಪುಟುಜಿ ನಡ, ಬಾಲೆ ಬಂಗುರಾಡುಗು
ಜೋಡು ಪೈಯೆಲ್ ಪುಟ್ಟುನ ಗಚ್ಚಿ ಮಿರೆ·ಕೋರನಗು ॥ ಲೇಲೇ ॥
ಮಾಮಿನಕುಲೆ ಮುಟ್ಟೆಲ್ಡ್ ಪರ್ಂದ್ ಬಜ್ಜೆಯಿ ನೇಲ್ಂಡ್,
ಮಾಮೆ ಬರಡ ಮಾಮ್ಯೆ ನಕುಲೆ ಒಡೆಪುಗನಾ ॥ ಲೇಲೇ ॥
ಮಾಮಿನಕ್ಲೆ ಮರಿ ಕೊಡಗು, ಪುಂಚದ ನರೂಟು,
ಗೆಂದೆ ಪೆತ್ತ ಪಿಲಿ ಪುಡ್ಡುಗು ಪಾದೆದ ರೂಟು ॥ ಲೇಲೇ ॥

ಮರುಮದುವೆ

ವಿಶೇಷವೆಂದರೆ ಈ ಸಮುದಾಯದಲ್ಲಿ ಮರುಮದುವೆ ಎಂಬ ಪದ್ಧತಿಯೂ ಇದೆ. ಹೆಂಡತಿ ಸತ್ತ ಗಂಡಸಿಗೆ ಅಥವಾ ಗಂಡ ಸತ್ತ ಹೆಂಗಸಿಗೆ ಮರುಮದುವೆ ನಡೆಯುತ್ತದೆ. ಇಲ್ಲಿ ವಿಧುರ ಅಥವಾ ವಿಧವೆ ಎಂಬ ಕಲ್ಪನೆಗೆ ಹೆಚ್ಚಿನ ಆದ್ಯತೆ ಇಲ್ಲ. ಗಂಡ ಸತ್ತ ಹುಡುಗಿಯೂ ಮದುವೆಯಾಗದ ಹುಡುಗನನ್ನು ವರಿಸಬಹುದು. ಅಥವಾ ಹೆಂಡತಿ ಸತ್ತ ಗಂಡಸೂ ಮದುವೆಯಾಗದ ಕನ್ಯೆಯನ್ನು ಮದುವೆಯಾಗಬಹುದು. ಆದರೆ ಇದು ಬಿರ್ದು ಅಥವಾ ಮದುವೆ ಎಂದು ಪರಿಗಣಿಸಲ್ಪಡುವುದಿಲ್ಲ. ಬದಲಾಗಿ "ಕೈ ಪತ್ತಿನದು" (ಕೈ ಹಿಡಿಸುವುದು) ಎಂಬುದಾಗಿ ಪರಿಗಣಿತವಾಗುತ್ತದೆ. ಯಾಕೆಂದರೆ ಇಲ್ಲಿ ಧಾರೆ ಎರೆಯುವ ಕ್ರಮವಿಲ್ಲ. ಗುರಿಕಾರರ ಮಾರ್ಗದರ್ಶನದಂತೆ ಇದು, ಅತಿ ಸರಳವಾಗಿ ಹೆಂಗಸಿನ ಕೊರಳಿಗೆ ಕರಿಮಣಿ ಕಟ್ಟಿಸುವ ಕ್ರಮ ಆಗಿರುತ್ತದೆ. ಉಳಿದಂತೆ ಮುರ್ತ, ಅರ್ಥದ ಪನವು ಹಾಗೂ ಇತರ ಕ್ರಮಗಳು ಮದುವೆಯ ಪ್ರಕಾರವೇ ಸರಳವಾಗಿ ನಡೆಯುತ್ತದೆ. ಜೊತೆಗೆ ಮದುವೆಯ ಕೊನೆಯಲ್ಲಿ ನಡೆಯುವ ಮದುಮಕ್ಕಳ ಎಂಜಲು ತಿನ್ನಿಸುವ ಹಾಗೂ ಅತ್ತೆ, ಭಾವ, ಅತ್ತಿಗೆಯರ ಹೆಸರು ಹೇಳುವ ಕ್ರಮಗಳೂ ಯಥಾವತ್ತಾಗಿ ನಡೆಯುತ್ತದೆ. ಹುಡುಗಿಯು ಮದುವೆಯಾಗಿ ಗಂಡನ ಮನೆಗೆ ಹೋದಾಗ ಅಲ್ಲಿ ಅತ್ತೆ, ಭಾವಂದಿರು, ಅತ್ತಿಗೆಯರ ಹೆಸರು ಹೇಳಿ ಕರೆಯುವಂತಿಲ್ಲ. ಯಾಕೆಂದರೆ ಹಾಗೆ ಮಾಡಿದರೆ ಅದು ಅವರಿಗೆ ಅವಮಾನ ಮಾಡಿದಂತಾಗುತ್ತದೆ. ಅವರನ್ನು ಗೌರವದಿಂದ ಕಾಣಬೇಕು. ತಪ್ಪಿಯೂ ಇವರುಗಳ ಹೆಸರು ಆಕೆಯ ಬಾಯಿಯಲ್ಲಿ ಬರಬಾರದು. ಅದಕ್ಕಾಗಿ ಮದುವೆಯ ದಿನವೇ ಈ ಹೆಸರುಗಳನ್ನು ಆಕೆಗೆ ತಿಳಿಸುತ್ತಾರೆ. ಅದು ಮರುಮದುವೆಯಲ್ಲೂ ಮರುಕಳಿಸುತ್ತದೆ.

ಸೀಮಂತ

ಕೊರಗರಲ್ಲಿ ಸೀಮಂತದ ಪರಿಕಲ್ಪನೆ ತೀರಾ ಇತ್ತೀಚಿನದು. ಸೀಮಂತ ಮಾಡುವುದಕ್ಕಿಂತ ಆಕೆಯ ಹೆರಿಗೆಯ ಕಡೆಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಆದರೂ ಗರ್ಭಿಣಿ ಹೆಣ್ಣಿಗೆ ಒಂದು ದಿನವಾದರೂ ತಾಯಿ ಮನೆಯಲ್ಲಿ ಹೊಟ್ಟೆ ತುಂಬಾ ಅನ್ನ ಹಾಕಬೇಕೆಂಬ ನಂಬಿಕೆ ಹಿಂದಿನಿಂದಲೂ ಬಂದಿತ್ತು. ಈಗ ಈ ಕಾರ್ಯಕ್ರಮವೂ ಅದ್ಧೂರಿಯಾಗಿಯೇ ನಡೆಯುತ್ತದೆ. ತಾಯಿ ಮನೆಯಲ್ಲಿ ಮೊದಲು ಸೀಮಂತ ಹಾಕಿದರೆ, ನಂತರ ಗಂಡನ ಮನೆಯಲ್ಲೂ ನಡೆಯುತ್ತದೆ. ಗರ್ಭಿಣಿ ಮಹಿಳೆಯ ಬಯಕೆ ತೀರಿಸುವ ಕ್ರಮವೆಂದೇ ಪರಿಗಣಿಸಲಾಗಿ ಹೆರಿಗೆ ಸಂದರ್ಭದಲ್ಲಿ ಖರ್ಚಿಗಾಗುವಷ್ಟು ಹಣ ಇಲ್ಲದಿದ್ದರೂ ಇದನ್ನು ಇತರ ಸಮುದಾಯಗಳಂತೆಯೇ ಆಚರಿಸುತ್ತಾರೆ. ಇದೀಗ ಅನುಕರಣೆಯ ಯುಗ!

ಸತ್ತವರ ಮದುವೆ (ಚೈಲೆಲೆ ಬಿರ್ದು)

ಇವರಲ್ಲಿ ಮದುವೆಯಾಗದೇ ಸತ್ತವರಿಗೂ ಮದುವೆ ಮಾಡಿಸುವ ಸಂಪ್ರದಾಯವಿದೆ. ಈ ಮದುವೆಯ ವಿಧಿಗಳು ಮಾತ್ರ ಬಲೆಪುನಿಂದ ಬಲೆಪುಗೆ ಭಿನ್ನವಾಗಿದ್ದು ಅವರವರಿಗೆ ಸರಿ ಎನಿಸುವ ರೀತಿಯಲ್ಲಿ ಮುಂದುವರಿಯುತ್ತದೆ. ಈ ಬಗ್ಗೆ ಇನ್ನಾ ಸಾಂತೂರು ಕೊಪ್ಲ ಬಲೆಪಿನ ಹಿರಿಯ ವ್ಯಕ್ತಿ ಬದ್ದು ಕೊರಗ ಮಾಹಿತಿ ನೀಡಿದ್ದಾರೆ. ನಡ್ಸಾಲಿನ ಬಹುತೇಕ ಎಲ್ಲಾ ಬಳಿಗಳ ಬಲೆಪುಗಳಲ್ಲಿ ಈ ಸಂಪ್ರದಾಯ ರೂಢಿಯಲ್ಲಿದೆ. ದೈವದ ಸೂಚನೆಯಂತೆ ಗುರಿಕಾರನ ನೇತೃತ್ವದಲ್ಲಿ ಇದು ನಡೆಯುತ್ತದೆ. ಸತ್ತ ವ್ಯಕ್ತಿಯ ಕುಟುಂಬದವರು ಗುರಿಕಾರರೊಡನೆ ಸಮಾಲೋಚಿಸಿ ಒಂದು ದಿನವನ್ನು ನಿಗದಿ ಮಾಡುತ್ತಾರೆ. ಹಾಗೂ ಸತ್ತಿರುವ ಹುಡುಗಿಯನ್ನು ಪ್ರಾರ್ಥಿಸಿ, ತನಗೆ ಬೇಕಾದ ಸಂಗಾತಿಯನ್ನು ಆರಿಸಿಕೊಳ್ಳುವಂತೆ ವಿನಂತಿಸುತ್ತಾರೆ. ನಿಗದಿತ ದಿನದಂದು ಎಲ್ಲಾ ಸಿದ್ಧತೆಗಳೊಂದಿಗೆ ಹಾಜರಾಗುವಂತೆ ಸೂಚಿಸುತ್ತಾರೆ. ಅದರಂತೆ ನಿಗದಿತ ದಿನದಂದು, ಕೆಲವೊಂದು ನೆಂಟರನ್ನು ಕೂಡಿಕೊಂಡು ಗುರಿಕಾರ ನಿರ್ದಿಷ್ಟ ಸ್ಥಳಕ್ಕೆ(ಮಸಣ) ತೆರಳಿ ಅಲ್ಲಿ ಎರಡು ಮಣ್ಣಿನ ಪ್ರತಿಮೆಗಳನ್ನು ಮಾಡುತ್ತಾರೆ. ಅದಕ್ಕೆ ಸಣ್ಣಪುಟ್ಟ ಬೆಣಚುಕಲ್ಲುಗಳನ್ನು(ಅಥವಾ ಮರುವಾಯಿ ಚಿಪ್ಪು) ಕಣ್ಣುಗಳಂತೆ ಅಂಟಿಸುತ್ತಾರೆ. ಬಳಿಕ ಗುರಿಕಾರ ನೆರೆದವರನ್ನು ಕುರಿತು, ಮದುಮಕ್ಕಳನ್ನು ಧಾರೆಗೆ ಕೂರಿಸುವುದಾಗಿ ತಿಳಿಸುತ್ತಾರೆ. ಅಂತೆಯೇ ಒಂದು ಹೆಣೆದ ಹಸಿ ತೆಂಗಿನ ಸೋಗೆಯನ್ನು ನೆಲದಲ್ಲಿ ಹರಡಿ ಅದರಲ್ಲಿ ಪ್ರತಿಮೆಗಳನ್ನು ಕೂರಿಸುತ್ತಾರೆ. ಎರಡು ತುಂಡು ಬಿಳಿ ಬಟ್ಟೆಯ ಚೂರುಗಳನ್ನು ಹಾಗೂ ತಂದೊಳಿಗೆ(ದೂಪದ) ಮರದ ನಾರಿ(ಸಿಪ್ಪೆ)ನಿಂದ ಮಾಡಿದ ಬಳೆಗಳನ್ನು ಪ್ರತಿಮೆಯ ಮುಂದೆ ಇಡುತ್ತಾರೆ.(ಇದು ಮದು ಮಕ್ಕಳ ವಸ್ತ್ರಾಭರಣ) ಮತ್ತು ಗುರಿಕಾರನೇ ಸ್ವತಃ ಒಂದು ತುಂಡು ಕಪ್ಪು ನೂಲು(ಕರಿಮಣಿ)ನ್ನು ಹುಡುಗಿಯ (ಪ್ರತಿಮೆಯ) ಕೊರಳಿಗೆ ಕಟ್ಟುತ್ತಾರೆ. ಉಳಿದೆಲ್ಲಾ ವಿಧಿಗಳನ್ನು ಗುರಿಕಾರ ಬಾಯಿಮಾತಿನಲ್ಲೆ ಪೂರೈಸಿ ಮದುವೆಯ ಕಾರ್ಯವನ್ನು ಮುಗಿಸುತ್ತಾರೆ. ಕೊನೆಗೆ ಒಂದಿಷ್ಟು ಹಲಸಿನ ಎಳೆಗಳನ್ನು ನೆಲದಲ್ಲಿ ಹರಡಿ ನೆರೆದವರನ್ನು(ಸತ್ತವರನ್ನು) ಊಟಕ್ಕೆ ಆಹ್ವಾನಿಸುತ್ತಾರೆ.

ನೀರು ಚುಮುಕಿಸಿ ಸಾಂಕೇತಿಕವಾಗಿ ಅನ್ನ ಸಾಂಬಾರು ಬಡಿಸುತ್ತಾರೆ. ನಂತರ ಒಂದೆರಡು ಗಳಿಗೆ ಅಲ್ಲಿದ್ದು ಅಲ್ಲಿಂದ ಮನೆಗೆ ಮರಳುತ್ತಾರೆ. ಇದು ಚೈಲೆಲೆ ಬಿರ್ದು ಅಥವಾ ಸತ್ತವರ ಮದುವೆ!

ಸಾವಿನ ಸಂದರ್ಭ

ಒಬ್ಬ ವ್ಯಕ್ತಿಯು ಮನೆಯೊಳಗೆ ಸತ್ತರೆ, ಮೊತ್ತಮೊದಲಾಗಿ ಗುರಿಕಾರನಿಗೆ ತಿಳಿಸಿ, ಆತನ ಸೂಚನೆಯಂತೆ ಹೆಣವನ್ನು ದಕ್ಷಿಣ ದಿಕ್ಕಿಗೆ ತಲೆ ಮಾಡಿಸಿ ಮಲಗಿಸುತ್ತಾರೆ. ಹಾಗೂ ಹೆಣದ ಮುಖಕ್ಕೆ ನೇರವಾಗಿ ಒಂದಷ್ಟು ಗಾಳಿ, ಬೆಳಕು ಬೀಳುವಂತೆ ಮೇಲ್ಛಾವಣಿಯ ಹುಲ್ಲು ಅಥವಾ ಹಂಚನ್ನು ಸರಿಸಿ ಸಣ್ಣ ಕಿಂಡಿಯನ್ನು ಮಾಡುತ್ತಾರೆ. ಸತ್ತ ವ್ಯಕ್ತಿಯ ಆತ್ಮವು ನೇರವಾಗಿ ಆಕಾಶದಲ್ಲಿ ಲೀನವಾಗಲೆಂಬ ಆಶಯದಿಂದ ಈ ಕಿಂಡಿಯನ್ನು ಮಾಡುತ್ತಾರೆ. ನಂತರ ಗುರಿಕಾರನ ಮಾರ್ಗದರ್ಶನದಂತೆ ಹೆಣದ ತಲೆಯ ಪಕ್ಕದಲ್ಲಿ ದೀಪ ಹಾಗೂ ತಟ್ಟೆಯಲ್ಲಿ ಅನ್ನದ ನೀರು ಇಡುತ್ತಾರೆ. ಸಂಬಂಧಿಕರಿಗೆ ಸುದ್ದಿ ಮುಟ್ಟಿಸಲು ಜನ ಕಳುಹಿಸುತ್ತಾರೆ. ಮಸಣ ಭೂಮಿಗೆ ತೆರಳಿ, ಹೆಣ ಹೂಳಲು ಸರಿಯಾದ ಸ್ಥಳವನ್ನು ಆರಿಸುತ್ತಾರೆ. ಅಂಗಳದಲ್ಲಿ ಮೂರು ಕಲ್ಲು ಇಟ್ಟು ಪಶ್ಚಿಮಕ್ಕೆ ಮುಖಮಾಡಿ ಒಂದು ತಾತ್ಕಾಲಿಕ ಒಲೆಯನ್ನು ಮಾಡುತ್ತಾರೆ. ಒಂದು ಮಣ್ಣಿನ ಮಡಕೆಯಲ್ಲಿ ನೀರು ತುಂಬಿಸಿ, ಅದಕ್ಕೆ ಹಲಸಿನ ಮರದ ತೊಗಟೆಯನ್ನು ಹಾಕಿ ನೀರು ಬಿಸಿ ಮಾಡುತ್ತಾರೆ. ಬಂಧುಬಳಗ, ನೆಂಟರಿಷ್ಟರೆಲ್ಲ ಸೇರಿದ ಮೇಲೆ ಸತ್ತ ವ್ಯಕ್ತಿಯ ಮಕ್ಕಳು ಹಾಗೂ ಸೋದರಳಿಯಂದಿರು ಹೆಣವನ್ನು ಚಾಪೆ ಸಮೇತ ಅಂಗಳಕ್ಕೆ ತರುತ್ತಾರೆ. ಮನೆಯ ಬಾಗಿಲಿಗೆ ನೇರವಾಗಿರುವಂತೆ ತೆಂಗಿನ ಗರಿ ಇಲ್ಲವೇ ಹಲಗೆಯ ಮೇಲೆ ಹೆಣವನ್ನು ಇರಿಸುತ್ತಾರೆ. ಅಲ್ಲಿಯೇ ಹೆಣಕ್ಕೆ (ಬಾಯಿಗೆ) ನೀರು ಕೊಡುವ ವಿಧಿ ನಡೆಯುತ್ತದೆ. ಇಲ್ಲಿ ಬಾರ್ಕೂರು, ಮಂಗಳೂರು ನೆಂಟರಿಗೆ ಕ್ರಮವಾಗಿ ಮೊದಲ ಗೌರವ ಸಲ್ಲುತ್ತದೆ. ಈ ವಿಧಿ ಮುಂದುವರಿಯುತ್ತಿರುವಂತೆಯೇ ಗುರಿಕಾರ ಭೂಮಿಗೆ ಗುದ್ದಲಿ ಹಾಕಲು, ಮಸಣದತ್ತ ಹೋಗುತ್ತಾರೆ. ಸತ್ತವನ ಹಿರಿಯ ಮಗನಿಗೆ ಗುದ್ದಲಿ(ಹಾರೆ/ಪಿಕ್ಕಾಸು)ಯನ್ನು ಕೊಡುತ್ತಾನೆ. ಅದರಂತೆ ಆತ ಭೂಮಿಗೆ ಮೂರು ಅಗೆತ ಅಗೆದು ಗುರುತು ಹಾಕುತ್ತಾನೆ. ನಂತರ ಅದೇ ಜಾಗದಲ್ಲಿ ಬೇರೆಯವರೆಲ್ಲಾ ಸೇರಿ ಆರು ಅಡಿ ಉದ್ದ, ಎರಡು ಅಡಿ ಅಗಲ ಹಾಗೂ ಆರು ಅಡಿ ಆಳದ ಹೊಂಡವನ್ನು ಅಗೆಯುತ್ತಾರೆ. ಗುರಿಕಾರ ಮತ್ತು ಮಕ್ಕಳು ಮತ್ತೆ ಮನೆಗೆ ಧಾವಿಸುತ್ತಾರೆ. ಹೆಣದ ಬಾಯಿಗೆ ಎಲ್ಲರೂ ನೀರು ಕೊಡುತ್ತಿದ್ದಂತೆ, ಮಕ್ಕಳು ಮತ್ತು ಹೆಂಡತಿ ನೀರು ಕೊಡುತ್ತಾರೆ. ಕೊನೆಗೆ ಗುರಿಕಾರ ತಾನೇ ನೀರು ಕೊಟ್ಟು ವಿಧಿ ಪೂರೈಸುತ್ತಾರೆ.(ಹಿಂದೆ ಇಡೀ ತೊಳೆಯುತ್ತಿದ್ದರಂತೆ) ಹೀಗೆ ಪ್ರತಿಯೊಬ್ಬರೂ ಮೀಯಿಸಿದ ನಂತರ ಕೊನೆಗೆ ಗುರಿಕಾರ ಕ್ರಿಯೆ ಸಮಾಪ್ತಿ ಮಾಡುತ್ತಾನೆ. ಅದಾದ ನಂತರ ಹೆಣಕ್ಕೆ ಗೌರವ ಸಲ್ಲಿಸುವ ಪದ್ಧತಿ ಮುಂದುವರಿಯುತ್ತದೆ. ನೆರೆದವರೆಲ್ಲಾ ತಾವು ತಂದಿರುವ ಹೊಸ ಬಟ್ಟೆ(ಬಿಳಿಬಟ್ಟೆ)ಯನ್ನು ಹೆಣಕ್ಕೆ ಹೊದಿಸಿ ಕಾಲು ಹಿಡಿದು ಗೌರವ ಸಲ್ಲಿಸುತ್ತಾರೆ.

ಬಳಿಕ ಬಟ್ಟೆ ಸಮೇತ ಮಕ್ಕಳು ಹೊತ್ತು ಸ್ಮಶಾನದ ಕಡೆಗೆ ನಡೆಯುತ್ತಾರೆ. ಅಲ್ಲಿ ಆಗಲೇ ಹೊಂಡ ಸಿದ್ಧವಾಗಿರುತ್ತದೆ. ಹೆಣವನ್ನು ಹಾಗೆ ಹೊತ್ತು ಹೊಂಡಕ್ಕೆ ಮೂರು ಸುತ್ತು ಎಡಗಡೆಯಿಂದ ಸುತ್ತು ಬಂದು (ಪೆದಮು ಸುತ್ತು) ಒಂದು ಬದಿಯನ್ನು ಇಳಿಸುತ್ತಾರೆ. ಎಲ್ಲರಿಗೂ ಒಂದೊಂದು ಹಿಡಿ ತರೋಳಿ(ಸರೋಳಿ ಮರದ ಎಲೆ) ಸೊಪ್ಪನ್ನು ನೀಡಲಾಗುತ್ತದೆ. ಗುರ್ಕಾರನ ಸೂಚನೆ ಮೇರೆಗೆ ನೆರೆದವರೆಲ್ಲರೂ ಸೊಪ್ಪನ್ನು ಹೊಂಡಕ್ಕೆ ಹಾಕುತ್ತಾರೆ. ಈ ವಿಧಿಯನ್ನು ಸಂಪು ಹಾಕುವುದು(ತಂಪು ಹಾಕುವುದು) ಎನ್ನುತ್ತಾರೆ. ಹೂತ ಮೇಲೂ ಹೆಣ ತಂಪಾಗಿರಲಿ ಎಂಬುವುದೇ ಇಲ್ಲಿನ ಆಶಯ. ಬಟ್ಟೆ ಸಮೇತ ಹೆಣವನ್ನು ಹಗ್ಗದ ಮೂಲಕ ನಿಧಾನವಾಗಿ ಹೊಂಡಕ್ಕೆ ಇಳಿಸುತ್ತಾರೆ. ಎಲ್ಲರೂಒಂದೊಂದು ಹಿಡಿ ಮಣ್ಣನ್ನು ಹೊಂಡಕ್ಕೆ ಹಾಕಿ ಸಂತೃಪ್ತಿಗೊಳ್ಳುತ್ತಾರೆ. ನಂತರ ನರಿ ನಾಯಿಗಳು ಹೆಣವನ್ನು ಹೊರಗೆಳೆಯದಂತೆ ಭದ್ರವಾಗಿ ಕಲ್ಲು ಮುಳ್ಳು ಇಟ್ಟು ಮಣ್ಣು ಎಳೆದು ಹೊಂಡವನ್ನು ಮುಚ್ಚುತ್ತಾರೆ. ಎಲ್ಲರೂ ಒಂದೊಂದು ವೀಳ್ಯ ಇಟ್ಟು ಕೊನೆಯ ನಮನ ಸಲ್ಲಿಸುತ್ತಾರೆ. ಗುರಿಕಾರ ಸತ್ತವನನ್ನು ಕುರಿತು ಒಂದೆರಡು ಬುದ್ಧಿ ಮಾತು ಹೇಳುತ್ತಾರೆ. "ದೇವರು ಕರೆಯುವಾಗ ಎಲ್ಲರೂ ಓಗೊಡಲೇಬೇಕು, ನಿನ್ನ ದಿನ ನೀನು ಹಿಡಿದುಕೊಂಡು ಹೋದೆ, ಇನ್ನು ಇಲ್ಲಿ ಬಾಳಿ ಬದುಕಬೇಕಾದವರಿಗೆ ನಿನ್ನಿಂದ ಯಾವುದೇ ತೊಂದರೆಯಾಗ ಬಾರದು, ನಾವು ನಿನ್ನನ್ನು ಉತ್ತರಕ್ರಿಯೆಯ ದಿನ ಕರೆಯುತ್ತೇವೆ. ಹಿರಿಯರೊಟ್ಟಿಗೆ ಸೇರಿಸುತ್ತೇವೆ. ಅಲ್ಲಿಯವರೆಗೆ ಶಾಂತವಾಗಿದ್ದು ನಮಗೆ ಸಹಕಾರ ನೀಡಬೇಕು. ನಿಗದಿತ ದಿನದಂದು ಕರೆದಾಗ ಬಂದು ಹಿರಿಯರನ್ನು ಕೂಡಿಕೊಳ್ಳಬೇಕು" ಎಂದು ವಿನಂತಿಸಿ ಕೊಳ್ಳುತ್ತಾರೆ. ಅಷ್ಟರಲ್ಲಿ ಸಣ್ಣ ಬೆಣಚುಕಲ್ಲು, ಒಂದಿಷ್ಟು ದನದ ಸೆಗಣಿ ಹಾಗೂ ಗುಮ್ಮ ಸೊಪ್ಪು ಸಿದ್ಧವಾಗಿರುತ್ತದೆ.(ಕೆಲವು ಕಡೆ ಇವುಗಳಲ್ಲಿ ಯಾವುದಾದರೂ ಒಂದನ್ನುಮಾತ್ರ ಬಳಸುತ್ತಾರೆ) ಹೆಣ ಹೂತ ಸ್ಥಳದಿಂದ ಹಿಂದಿರುಗುವಾಗ ಸಗತಿಯಲ್ಲಿ ಒಬ್ಬರಿಗೊಬ್ಬರು ಎಡಗೈಯಿಂದ ಹಿಂದಕ್ಕೆ ಕೊಡುತ್ತಾ ತೆರಳಬೇಕು. ಮುಂದುಗಡೆ ಗುರ್ಕಾರ ಇದನ್ನು ಹಿಂದಕ್ಕೆ ಕೊಡುತ್ತಾರೆ. ಕೊನೆಯ ವ್ಯಕ್ತಿ ಅದನ್ನು ಎಡಗೈಯಿಂದಲೇ ಹೆಣ ಹೂತಲ್ಲಿಗೆ ಬಿಸಾಕಿ ಕಬ್ಬಿಣದ ಆಯುಧದಿಂದ ಭೂಮಿಯಲ್ಲಿ ದಾರಿಗೆ ಅಡ್ಡವಾಗಿ ಮೂರುಗೆರೆ ಹಾಕಿ ತೆರಳುತ್ತಾರೆ. ಹೀಗೆ ಮಾಡುವುದರಿಂದ ಸತ್ತ ವ್ಯಕ್ತಿ ಉತ್ತರಕ್ರಿಯೆಯ ವರೆಗೆ ತಮ್ಮ ಜೊತೆಗೆ ಬಾರದೆ, ಹೂತಲ್ಲಿಯೇ ಇರುತ್ತಾನೆ. ಹಾಗೂ ಕುಟುಂಬಿಕರಿಗೆ ಯಾವುದೇ ಬಾಧೆ ಕೊಡುವುದಿಲ್ಲ ಎಂಬ ನಂಬಿಕೆ ಇದೆ. ಮನೆಗೆ ಮರಳಿ ಜನರು ಶುದ್ಧ ಕ್ರಿಯೆಗೆ ಸಿದ್ಧರಾಗುತ್ತಾರೆ. ಮನೆಯ ಹತ್ತಿರದ ನೆಂಟರೊಬ್ಬರಿಗೆ ಈ ಶುದ್ಧೀಕರಣ ಗೌರವ ಸಲ್ಲುತ್ತದೆ. ಒಂದು ಮಡಕೆ ತುಂಬಾ ನೀರು ತುಂಬಿಸಿ, ಅದಕ್ಕೆ ತೆಂಗಿನಕಾಯಿ ಒಡೆದು ಅದರ ನೀರು ಹಾಕುತ್ತಾರೆ. ಒಂದು ಗೆಲ್ಲು ಹಲಸಿನ ಸೊಪ್ಪು ಹಿಡಿದು ನೀರಲ್ಲಿ ನೆನೆಸಿ ಸಿಂಪಡಿಸುತ್ತಾರೆ. ಮೊದಲು ಮನೆಯ ಒಳಗೆ ಸಿಂಪಡಿಸಿ ನಂತರ ಅಂಗಳದಲ್ಲಿ ನೆರೆದವರಿಗೆ ಸಿಂಪಡಿಸುತ್ತಾರೆ. ಎಲ್ಲರೂ ಪೂರ್ವಾಭಿಮುಖವಾಗಿ ನಿಂತು, ಅವರ ಹಿಂದುಗಡೆಯಿಂದ ಸೊಪ್ಪಿನ ಮೂಲಕ ನೀರು ಹಾರಿಸುತ್ತಾರೆ. ಹೀಗೆ ಮೂರು ಮೂರು ಬಾರಿ ನೀರು

ಸಿಂಪಡಿಸುವ ಮೂಲಕ ಅಂದಿನ ಶುದ್ಧೀಕರಣ ಕ್ರಿಯೆ ನಡೆಯುತ್ತದೆ. ಒಂದೊಂದು ಬಾರಿ ನೀರು ಹಾರಿಸಿದಾಗಲೂ ಎಲ್ಲರೂ ಒಂದೊಂದು ಹೆಜ್ಜೆ ಮುಂದೆ ಇಡಬೇಕು. ಇದಕ್ಕೆ ಕಾರಣ ತಿಳಿದಿಲ್ಲ. ಆದರೂ ವಿಧಿಗಳು ಮುಂದುವರಿದಿದೆ. ಕೊನೆಗೆ, ನೆರೆದ ನೆಂಟರಿಷ್ಟರು "ಬೊಡೆ ಜಿಟ್ಟು ಕಟ್ಟಲ್ನ"(ಬಿಚ್ಚಿರುವ ಜುಟ್ಟು ಕಟ್ಟಿಕೊಳ್ಳುತ್ತೇವೆ) ಎನ್ನುತ್ತಾ ತಲೆ ಸವರಿಕೊಳ್ಳುತ್ತಾರೆ. ಅಲ್ಲಿಗೆ ಅಂದಿನ ವಿಧಿಗಳೆಲ್ಲ ಮುಗಿಯುತ್ತದೆ. ಹಿಂದಿನ ದಿನಗಳಲ್ಲಿ ಮಸಣದಲ್ಲಿ ಹೆಣ ಹೂತು ಬಂದು ಸುಸ್ತಾದ ಮಂದಿಗೆ "ಕಾಡಬಾಜೆಲ್" ಕೊಡುವ ಪದ್ಧತಿ ಇತ್ತು(ಶೇಂದಿ ಕುಡಿಯುವುದು). ಈಗ ಅದರ ಬದಲಿಗೆ ಎಲ್ಲರಿಗೂ ಚಹಾ ಮಾಡಿ ಕೊಡಲಾಗುತ್ತದೆ. ಅದೂ ಮುಂದುವರಿದು ಇಂದು ಬಾಟಲಿ ಬಾಜೆಲ್(ಸೋಡಾ, ಕೋಲ, ಇತ್ಯಾದಿ) ನಡೆಯುತ್ತಿದೆ. ಇದೆಲ್ಲ ಅನುಕೂಲ ಶಾಸ್ತ್ರ ಅಷ್ಟೇ ! ವಿಪರ್ಯಾಸವೆಂದರೆ ಇಂದು ಕೊರಗರಲ್ಲಿ ಹೆಣ ಹೂಳುವ ಬದಲಿಗೆ, ಸುಡುವ ಸಂಪ್ರದಾಯ ಬೆಳೆಯುತ್ತಿದೆ. ಸ್ಥಳದ ಕೊರತೆಯೂ ಇದಕ್ಕೆ ಕಾರಣವಾಗಿದೆ.

ಹೆಣ ಹೂತು ನಲ್ವತ್ತೆರಡನೇ ದಿನಕ್ಕೆ ಉತ್ತರಕ್ರಿಯೆ ನಡೆಸುವುದು ರೂಢಿ. ಗುರಿಕಾರನ ಮಾರ್ಗದರ್ಶನದಲ್ಲಿ ಮನೆ ಮಂದಿ ಮಾತ್ರ ಕೂಡಿ ನಲ್ವತ್ತೆರಡನೇ ದಿನದಂದು ಸತ್ತವನಿಗೆ ಕೆರೆ ಮೀನಿನ ಪದಾರ್ಥ(ಸಾಂಬಾರು) ಮಾಡಿ ಅಗೆಲ್ ಬಡಿಸಿ, ಹಿಂದೆ ಸತ್ತವರೊಂದಿಗೆ (ಹಿರಿಯರೊಂದಿಗೆ) ಸೇರಿಸುತ್ತಿದ್ದರು. ಬಳಿಕ ತಾವು ಮಾಂಸದಡುಗೆ ಮಾಡಿದಾಗಲೆಲ್ಲಾ ಆತನಿಗೂ ಒಂದೆಲೆ(ಚಟ್ಟಿಡು) ಹಾಕಿ ಅಗೆಲ್ ಬಡಿಸುತ್ತಾರೆ. ಆದರೆ ಈಗ ಹಿಂದಿನಷ್ಟು ಕಠಿಣ ಸ್ಥಿತಿ ಇಲ್ಲದಿರುವ ಕಾರಣ, ಇತರರ ಅನುಕರಣೆ ಮಾಡಿ ಹದಿಮೂರನೇ ದಿನವೇ ಕ್ರಿಯೆಯನ್ನು ಪೂರೈಸುತ್ತಾರೆ. ಉತ್ತರಕ್ರಿಯೆಯ ವಿಧಿಗಳೆಲ್ಲ ಈಗ ಸಂಪೂರ್ಣವಾಗಿ ಇತರ ಸಮಾಜದ(ಬಂಟರು, ಬಿಲ್ಲವರು) ಅನುಕರಣೆಯಾಗಿ ನಡೆಯುತ್ತಿದೆ. ಕುಂಬಳಕಾಯಿ, ಬಾಳೆಕಾಯಿ ಕಡಿಯುವ ಸಂಪ್ರದಾಯ; ದೂಪೆ(ಸ್ಮಾರಕ) ಕಟ್ಟುವುದು ಇತ್ಯಾದಿಗಳು ಯಾರಿಂದಲೋ ಎರವಲು ಪಡೆದುದಾಗಿದೆ. ಕಾಸರಗೋಡು ಕೊರಗರು ಮಾತ್ರ ಹಿಂದಿನ ಸಾಂಪ್ರದಾಯಿಕ ರೀತಿಯಲ್ಲಿಯೇ ನಡೆಸುತ್ತಾರೆ.

ಸಂಸ್ಕೃತಿ ಎಂದರೆ ನಿಂತ ನೀರಲ್ಲ. ಅದು ಸದಾ ಹರಿದು ಹೊಸತು ಸೇರಿಕೊಳ್ಳುವುದು ಎನ್ನುವುದು ಸರ್ವವಿಧಿತ. ಆದರೆ ಆ ಬದಲಾವಣೆಯ ಭರದಲ್ಲಿ ತನ್ನ ಮೂಲ ಸತ್ವವನ್ನು ಕಳೆದುಕೊಂಡು ಅಂಧಾನುಕರಣೆ ಮಾಡುವುದು ಸಮ್ಮತವಲ್ಲ. ಅನುಕರಣೆಗೂ ಅರ್ಥವಿರಲಿ. ಅಂದಿನ ಕಾಡಿನ ಸಂಸ್ಕೃತಿ ಇಂದು ಸಾಧ್ಯವಿಲ್ಲವಾದರೂ ಬದಲಾವಣೆ ಅಪಹಾಸ್ಯವಾಗದಿರಲಿ ಎನ್ನುವುದೇ ಹಳೇ ಕೊರಗರ ಆಶಯ!

ಆರಾಧನೆ ಮತ್ತು ನಂಬಿಕೆಗಳು

ಮೂಲತಃ ಕೊರಗರು ಪ್ರಕೃತಿಯ ಆರಾಧಕರು. ಸೂರ್ಯ, ಚಂದ್ರ, ಕಲ್ಲು ಮರಗಳನ್ನು ದೇವರೆಂದು ನಂಬಿ ಆರಾಧಿಸಿದವರು. ಇವರಲ್ಲಿ ದೈವದ ಪರಿಕಲ್ಪನೆ ತುಂಬಾ ಸರಳವಾದದ್ದು. ಕಾಟು ಮರದಡಿಯ ಪೊಟ್ಟು ಕಲ್ಲಿನಲ್ಲಿ ದೈವತ್ವವನ್ನು ಕಾಣುವ ಇವರಿಗೆ ಆಕಾಶವೇ ಚಪ್ಪರ, ನಿಂತ ನೆಲವೇ ವೇದಿಕೆ!

ಸಮುದಾಯದ ಸಾಂಪ್ರದಾಯಿಕ ವೀರ, ಕೊರಗ ತನಿಯನ ಬರ್ಬರ ಅವಸಾನದ ಬಳಿಕ ಅವನನ್ನೇ ತಮ್ಮ ಕುಲದೈವವೆಂದು ಸ್ವೀಕರಿಸಿ ಆರಾಧಿಸತೊಡಗಿದ್ದು ಒಂದು ಇತಿಹಾಸ. ಕುಂಟು ಕೊರಗರು 'ಅಜ್ಜೆರ್' ಎಂಬ ಹೆಸರಿನಲ್ಲಿ ಚನಿಯ(ತನಿಯ)ನನ್ನು ಆರಾಧಿಸುತ್ತಾರೆ. ವರ್ಷಕ್ಕೊಮ್ಮೆ ಕಾಲಾಜಿ(ಕಾಲಾವಧಿ)ದ ಆಚರಣೆ ನೆರವೇರಿಸುತ್ತಾರೆ. ಇನ್ನು ಉತ್ತರ ಉಡುಪಿಯ ಸೊಪ್ಪು ಕೊರಗರು ಗುರುವಜ್ಜ(ಅಜ್ಜ) ಹಾಗೂ ಮಂಜ ಎಂಬ ದೈವಗಳನ್ನು ಕುಲದೈವವೆಂದು ಪೂಜಿಸುತ್ತಾರೆ. ಕುಂದಾಪುರ ಕಡೆಯ ಕಪುಡ ಕೊರಗರು ಹಾಯ್‌ಗುಳಿ ಹಾಗೂ ಗ್ರಾಮ ದೈವಗಳನ್ನು ಕುಲದೈವವಾಗಿ ಆರಾಧನೆ ಮಾಡುತ್ತಾರೆ. ನಡುಸಾಲಿನ ತಪ್ಪು ಕೊರಗರಲ್ಲಿ ಬೈಕಾಡ್ದಿಯು ಮಹಿಳೆಯರ ಆಪ್ತ ದೈವವಾಗಿ ಆರಾಧಿಸಲ್ಪಡುತ್ತಾಳೆ. ಆದರೆ ಕೊರಗ ತನಿಯನ ಹೆತ್ತ ತಾಯಿ ಕೊರಪಲು ಮಾತ್ರ ಎಲ್ಲಿಯೂ ಆರಾಧನೆಗೆ ಒಳಪಟ್ಟಿರುವುದು ಗೋಚರಿಸುವುದಿಲ್ಲ. ತುಳುವರಲ್ಲಿ ಕೆಲವರು 'ಜಾಲಕೊರತಿ' (ಅಂಗಳದ ಕೊರಗ ಮಹಿಳೆ) ಎಂಬ ದೈವವನ್ನು ಪೂಜಿಸುತ್ತಾರೆ. ಮಂಗಳೂರು ಕಡೆ ಸಾರ್ವಜನಿಕರು ಕೊರಗ ತನಿಯನನ್ನು 'ಕೊರಗಜ್ಜ' ಎಂಬ ಹೆಸರಿನಲ್ಲಿ ಆರಾಧಿಸಿದರೆ, ಉಡುಪಿ ಕಡೆ 'ನೀಚೆ' ಎಂಬುವುದಾಗಿ ಕರೆಯುವುದು ರೂಢಿ. (ನೀಚೆ ಅಂದರೆ ಕೊರಗ ಭಾಷೆಯಲ್ಲಿ ಕಪ್ಪು ಅಥವಾ ಕತ್ತಲೆ ಎಂದು ಅರ್ಥ). ಕಾಲಾನುಕ್ರಮದಲ್ಲಿ ಕೊರಗರು ಘಟ್ಟದಿಂದ ಇಳಿದು ಬಂದ ತುಳುನಾಡಿನ ಇತರ ದೈವಗಳಾದ ಪಂಜುರ್ಲಿ, ಜುಮಾದಿ, ಗುಳಿಗ, ರಾವು, ವರ್ತೆ, ಜಟ್ಟಿಗ, ಚೌಂಡಿ, ಬಂಟ ಮುಂತಾದ ನೂರಾರು ದೈವಗಳನ್ನು ಕೊರಗ ತನಿಯ ಹಾಗೂ ಇತರ ಕುಲದೈವಗಳ ಅಕ್ಕಪಕ್ಕದಲ್ಲಿಟ್ಟು ಆರಾಧಿಸತೊಡಗಿದರು. ವರ್ಷಕ್ಕೊಮ್ಮೆ ತಾಯಿ ಮೂಲದ ಕೂಡು ಕುಟುಂಬದಲ್ಲಿ ಕುಲದೈವ ಹಾಗೂ ಇತರ ದೈವಗಳಿಗೆ ಅಗೆಲ್(ಅನ್ನ) ಬಡಿಸಿ ಕಾಲಾವಧಿ ಸೇವೆಸಲ್ಲಿಸುತ್ತಾರೆ.

ಅಗೆಲ್ ತಂಬಿಲ

ತಂಬಿಲ ಎಂಬುವುದು ತುಳುನಾಡಿನ ಒಂದು ಆರಾಧನಾ ಪದ್ಧತಿ. ಇಲ್ಲಿ ದೈವಗಳಿಗಲ್ಲದೆ ನಾಗಗಳಿಗೂ ತಂಬಿಲ ನಡೆಯುತ್ತದೆ. ಜೊತೆಗೆ ಸತ್ತವರಿಗೂ ಅಗೆಲ್

ಬಡಿಸುವ ಕ್ರಮವಿದೆ. ಆದರೆ ಕೊರಗರು ತಮ್ಮ ಕುಲದೈವ ಕೊರಗ ತನಿಯ ಹಾಗೂ ಇತರ ದೈವಗಳಿಗೆ ಅಗೆಲ್ ತಮ್ಮಿಲವನ್ನು ನೆರವೇರಿಸುವ ಸಂಪ್ರದಾಯವಿದೆ. ನಡುಸಾಲಿನಲ್ಲಿ ಕೊರಗತನಿಯ ಇವರಿಗೆ ಕುಲದೈವವೂ ಹೌದು, ತಮ್ಮೊಂದಿಗೆ ಬದುಕಿ ಕೊನೆಗೆ ತೀರಿ ಹೋದ ಹಿರಿಯವನೂ ಹೌದು. ಆರಂಭದಲ್ಲಿ ಇವನಿಗೆ ಅಗೆಲ್(ಅಡುಗೆ ಮಾಡಿ) ಬಡಿಸುವುದು ಮಾತ್ರ ಕ್ರಮವಾಗಿತ್ತು. ಕ್ರಮೇಣ ಕೋಳಿ ಕೊಯ್ದು ತಮ್ಮಿಲ ಮಾಡುವ ರೂಢಿ ಬೆಳೆಯಿತು.

ಈ ಅಗೆಲ್ ಬಡಿಸುವ ಹಿಂದಿನ ದಿನ ಸಂಜೆಯ ವೇಳೆಗೆ ಕುಟುಂಬದ ಗುರಿಕಾರ, ಇತರ ಕೆಲವು ಮಂದಿಯೊಂದಿಗೆ ಸೇರಿ ಕುಲದೈವ ಹಾಗೂ ಇತರ ದೈವಗಳನ್ನುಕುರಿತು ಪ್ರಾರ್ಥಿಸುತ್ತಾರೆ. ನಾಳಿನ ದಿನ ತಾವು ಕುಟುಂಬಿಕರೆಲ್ಲ ಸೇರಿ ದೈವಗಳ ವಾರ್ಷಿಕ ಅಗೆಲ್ ತಮ್ಮಿಲ ನಡೆಸುವವರಿದ್ದೇವೆ. ಆದ್ದರಿಂದ ನೀವು(ದೈವಗಳು) ಯಾವ ಲೋಕ(ದೇಶ) ದಲ್ಲಿದ್ದರೂ ನಾಳೆಯ ದಿನ ಇಲ್ಲಿಗೆ ಆಗಮಿಸಿ, ನಾವು ನೀಡುವ ಕಿಂಚಿತ್ ಸೇವೆಯನ್ನು ಮನಪೂರ್ವಕವಾಗಿ ಸ್ವೀಕರಿಸಬೇಕು ಹಾಗೂ ಕುಟುಂಬವನ್ನು ರಕ್ಷಿಸಬೇಕು, ಎಂಬುವುದಾಗಿ ದೈವಗಳನ್ನು ಆಹ್ವಾನಿಸುತ್ತಾರೆ. ಮರುದಿನ ಬೆಳಿಗ್ಗೆ ಗುರಿಕಾರನ ನೇತೃತ್ವದಲ್ಲಿ ಕೂಡು ಕುಟುಂಬಿಕರೆಲ್ಲ ಸೇರಿ ದೈವದ ಕಲವನ್ನು ಸ್ವಚ್ಛ ಮಾಡುತ್ತಾರೆ. ದೈವದ ಪ್ರತಿಕೃತಿ(ಮೂರ್ತಿ, ನಗ, ಪಾಪೆ)ಗಳನ್ನು ತೊಳೆದು ಶುಚಿಗೊಳಿಸುತ್ತಾರೆ. ನಂತರ ಕಲ ಸಿಂಗಾರ ನಡೆಯುತ್ತದೆ. ಸ್ವಚ್ಛವಾದ ದೈವದ ಕಲ್ಲುಗಳಲ್ಲಿ ಪ್ರತಿಕೃತಿ(ಬಿಂಬ)ಗಳನ್ನು ಇಡುತ್ತಾರೆ. ಕಿಷ್ಕಾರ (ಕೇಪುಳ) ಹೂವುಗಳಿಂದ ಅಲಂಕರಿಸುತ್ತಾರೆ. ಮಣ್ಣಿನ ಹಣತೆಯಲ್ಲಿ ದೀಪ ಹಚ್ಚುತ್ತಾರೆ. ಗುರಿಕಾರನೇ ನೆರವೇರಿಸುವ ಈ ವಿಧಿಯನ್ನು ಕಲ ಸಿಂಗಾರ ಅಥವಾ ನಗ ಒಪ್ಪಿಸುವುದು ಎನ್ನುತ್ತಾರೆ.

ಸಂಜೆಯ ಹೊತ್ತಿಗೆ ಮತ್ತೆ ಗುರಿಕಾರನ ನೇತೃತ್ವದಲ್ಲಿ ಕಲ ಪ್ರವೇಶ ಮಾಡುತ್ತಾರೆ. ದೈವದ ಕಲ್ಲುಗಳ ಎದುರಿಗೆ ಬಾಳೆ ಎಲೆಯ ಕೊಡಿ(ತುದಿ ಎಲೆ)ಯನ್ನು ಹಾಕುತ್ತಾರೆ. ಇದನ್ನು ಕೊಡಿ ಹಾಕುವುದು ಎನ್ನುತ್ತಾರೆ. ನಂತರ ಕೋಳಿ ಕೊಯ್ಯುವ ಕ್ರಮ ನಡೆಯುತ್ತದೆ. ಹಿಂದೆ ಗುರಿಕಾರ ಕೋಳಿ ಕತ್ತನ್ನು ಕೈಯಿಂದ ಹಿಚುಕಿ ಎಲೆಗೆ ರಕ್ತ ಬಿಡುವ ಪದ್ಧತಿ ಇದ್ದರೆ, ಈಗ ಕತ್ತಿಯಿಂದ ಕತ್ತು ಕೊಯ್ಯುತ್ತಾರೆ. ಒಬ್ಬ ಕೋಳಿಯನ್ನು ಎಳೆದು ಹಿಡಿದರೆ ಗುರಿಕಾರ ಕತ್ತು ಕತ್ತರಿಸಿ ಎಲೆಗೆ ರಕ್ತ ಬಿಡುತ್ತಾರೆ. ದೈವಗಳಿಗೆ ಕೋಳಿ ಬಲಿ ಆದ ನಂತರ ಕೋಳಿ ಅಡುಗೆಮನೆ ಸೇರುತ್ತದೆ, ಉಳಿದವರು ದೈವದರ್ಶನಕ್ಕೆ ಅಣಿಯಾಗುತ್ತಾರೆ. ನಿರ್ದಿಷ್ಟ ವ್ಯಕ್ತಿಯ ಮೇಲೆ ದೈವಾಹ್ವಾನ ಮಾಡಿಸುತ್ತಾರೆ. ಸಂಸಾರದ ಕಷ್ಟ, ಸಂಕಷ್ಟಗಳನ್ನುದೈವದ ಮುಂದೆ ಇಟ್ಟು ಪರಿಹಾರೋಪಾಯಗಳನ್ನು ಬೇಡುತ್ತಾರೆ. ದೈವ ಆಹ್ವಾನಿತ ವ್ಯಕ್ತಿ ಎಲ್ಲರಿಗೂ ಸಮಾಧಾನಕರವಾದ ಪರಿಹಾರಗಳನ್ನು ಸೂಚಿಸಿ ಅಭಯ ನೀಡುತ್ತಾನೆ. ಆತ ನೀಡುವ ಪರಿಹಾರದ ಭರವಸೆಗಾಗಿ ಕೈಲಾದ ಹರಕೆಯನ್ನು ಹೇಳುತ್ತಾರೆ. ದೈವಾನುಗ್ರಹವೇ ತಮ್ಮ ಮುಂದಿನ ಭವಿಷ್ಯವೆಂದು ಬಗೆಯುತ್ತಾರೆ. ಎಲ್ಲರಿಗೂ ಸಮಾನ ರಕ್ಷಣೆಯ ಭರವಸೆಯ ಬಳಿಕ, ಆಶೀರ್ವಾದ ಪಡೆದು ದೈವವನ್ನು ಪಿರಿಗೊಳಿಸುತ್ತಾರೆ (ವ್ಯಕ್ತಿಯಿಂದ ದೈವ ಮುಕ್ತಗೊಳಿಸುವುದು.) ಎಲ್ಲರಿಗೂ ಸಂತೃಪ್ತಿಯ ಭಾವ!

ರಾತ್ರಿ ಅಡುಗೆಯೆಲ್ಲಾ ಮುಗಿಯುತ್ತಿದ್ದಂತೆಯೇ ಗುರಿಕಾರನ ಮುಂದಾಳುತನದಲ್ಲಿ ಮೂರನೇ ಬಾರಿ ಕಲ ಪ್ರವೇಶವಾಗುತ್ತದೆ. ಕೋಳಿ ಕೊಯ್ದು ರಕ್ತಸಿಕ್ತವಾದ ಎಲೆಗಳನ್ನು ತೆಗೆದು ಶುಚಿಗೊಳಿಸುತ್ತಾರೆ. ಹೊಸತಾಗಿ ಕೊಡಿ ಎಲೆಗಳನ್ನು ಹಾಕುತ್ತಾರೆ. ಅದರಲ್ಲಿ ಗುರಿಕಾರ ಅನ್ನ, ಕೋಳಿ ಸಾಂಬಾರು(ಸುಕ್ಕ) ಅಗೆಲ್ ಬಡಿಸುತ್ತಾರೆ.(ಹಿಂದೆ ಕೊರಗ ತನಿಯನಿಗೆ ಏಳು ಸೇರು ಅಕ್ಕಿಯ ಅನ್ನ ಹಾಗೂ ಕೆರೆ/ತೋಡು ಮೀನಿನ ಸಾಂಬಾರು ಮಾಡಿ ದೊಡ್ಡದಾದ ಮೊರ(ಗೆರಸೆ)ದಲ್ಲಿ ಏಳು ಎಲೆಹಾಕಿ ಅಗೆಲ್ ಬಡಿಸುತ್ತಿದ್ದರು. ಈಗ ಸಾಂಕೇತಿಕವಾಗಿ ಒಂದೆರಡು ಕೈಲು(ಸೌಟು) ಅನ್ನ ಬಡಿಸಿ ಸುಧಾರಿಸುವುದು ರೂಢಿಯಾಗಿದೆ. ಮತ್ತೊಮ್ಮೆ ದೀಪ ಹಚ್ಚಿ, ಕೋಲು ನಿನೆ (ತೆಂಗಿನಮರದ ಹಿಂಗಾರದ ಒಣಗಿದ ಕವಚ(ಕೊಂಬು)ವನ್ನು ಸೀಳಿ ಅದರ ಕೋಲುಗಳನ್ನು ಮಾಡಿ, ತುದಿಗೆ ಬಟ್ಟೆ ಸುತ್ತಿ ಎಣ್ಣೆ ಹಾಕಿ ಮಾಡಿದ ದೀವಟಿಗೆ) ಇಟ್ಟು ಪ್ರಾರ್ಥನೆ ಸಲ್ಲಿಸುತ್ತಾರೆ. ತಾವು ಕೂಡು ಕುಟುಂಬಿಕರಾಗಿ ಸಲ್ಲಿಸಿದ ಈ ಅಗೆಲ್ ತಮ್ಮಿಲ ಸೇವೆಯಲ್ಲಿ ಯಾವುದೇ ಲೋಪವನ್ನು ಗಣನೆಗೆ ತೆಗೆದುಕೊಳ್ಳದೆ, ಕಿಂಚಿತ್ತು ಸೇವೆಯನ್ನು ಪರ್ವತವೆಂಬಂತೆ ಪರಿಗಣಿಸಿ ಅತೀ ಸಂತೃಪ್ತಿಯಿಂದ ಸ್ವೀಕರಿಸಬೇಕು, ಮತ್ತು ಕೂಡು ಕುಟುಂಬದವರಿಗೂ, ನೆಂಟರಿಷ್ಟರಿಗೂ ಬದುಕಿನಲ್ಲಿ ಸುಖ ಸಂತೋಷಗಳನ್ನು ದಯಪಾಲಿಸು ಎಂಬುವುದಾಗಿ ನಿವೇದಿಸಿ ಕೊಳ್ಳುತ್ತಾರೆ. ಬಡಿಸಿದ ಅನ್ನ ಆಹಾರಗಳನ್ನು ತೆಗೆದು ಶುಚಿಗೊಳಿಸುತ್ತಾರೆ. ಅಲ್ಲಿಗೆ ಅಗೆಲ್ ತಮ್ಮಿಲದ ವಿಧಿಗಳು ಮುಗಿಯುತ್ತದೆ. ನಂತರ ಸತ್ತವರಿಗೆ ಅಗೆಲ್ ಬಡಿಸುವ (ಎಡೆ ಹಾಕುವುದು) ಕ್ರಮ ನಡೆಯುತ್ತದೆ. ಆ ಬಳಿಕ ತಮ್ಮಿಲದ ವನಸು(ಊಟ) ಮಾಡುತ್ತಾರೆ. ಮರುದಿನ ಬೆಳಿಗ್ಗೆ ಗುರಿಕಾರನ ಮುಖಂಡತ್ವದಲ್ಲಿ ದೈವದ ಪ್ರತಿಕೃತಿಗಳನ್ನು ಕಲ್ಲಿನಿಂದ ತೆಗೆದು, ತೊಳೆದು ಮರು ವರ್ಷಕ್ಕಾಗಿ ಭದ್ರವಾಗಿ ಇಡುತ್ತಾರೆ.

ಈ ವಾರ್ಷಿಕ ಆಚರಣೆಯ ಹೊರತಾಗಿ ಕೊರಗರಿಗೆ ಅವರದ್ದೇ ಆದ ಪ್ರತ್ಯೇಕ ಹಬ್ಬಗಳಿಲ್ಲ. ಬೇಟೆಯ ಮಾಂಸದ ಅಡುಗೆ ಮಾಡಿದಾಗಲೆಲ್ಲಾ ಹಬ್ಬದ ವಾತಾವರಣವಿರುತ್ತದೆ. ಅದು ಬಿಟ್ಟರೆ ಇದೀಗ ಹಿಂದೂಗಳು ಆಚರಿಸುವ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಗಣೇಶ ಚೌತಿ, ಕೃಷ್ಣಾಷ್ಟಮಿ, ದೀಪಾವಳಿ, ಕದಿರು ಕಟ್ಟುವುದು, ಯುಗಾದಿ ಇತ್ಯಾದಿ ಹಬ್ಬಗಳಲ್ಲಿ ವಿಶೇಷ ಅಡುಗೆ ಮಾಡಿ ಉಣ್ಣುತ್ತಾರೆ. ಪೂಜೆ ಪುರಸ್ಕಾರಗಳೇನೂ ಇರುವುದಿಲ್ಲ. ಇತ್ತೀಚಿನ ಬೆಳವಣಿಗೆ ಎಂದರೆ ಕೆಲವೊಂದು ಕಡೆಗಳಲ್ಲಿ ಕ್ರಿಸ್‌ಮಸ್, ಸಾಂತುಮಾರಿ, ರಂಜಾನ್, ಬಕ್ರೀದ್ ಹಬ್ಬಗಳ ದಿನಗಳಲ್ಲೂ ವಿಶೇಷವಾದ ಅಡುಗೆ ಮಾಡುವುದು ಕಂಡುಬರುತ್ತದೆ. ಊರಿನ ಜಾತ್ರೆಗಳಲ್ಲೂ ಭಾಗವಹಿಸುವ ಕೊರಗರದ್ದು ಹೊಂದಾಣಿಕೆ ಬದುಕು ಆಗುತ್ತಿದೆ. ಆದರೂ ಕೊರಗ ತನಿಯನ ಆರಾಧನೆಗೆ ಹೆಚ್ಚಿನ ಮಹತ್ವ!

ಕೊರಗ ತನಿಯ – ಬದುಕು ಬವಣೆ

ಕೊರಗ ಸಮುದಾಯದ ಕುಲದೈವ ಕೊರಗ ತನಿಯನ ಕುರಿತಾದ ಲಿಖಿತ ಅಥವಾ ಖಚಿತ ಮಾಹಿತಿಗಳು ಲಭ್ಯವಿಲ್ಲ. ಆದರೆ ಬಾಯಿಯಿಂದ ಬಾಯಿಗೆ ಹರಿದುಬಂದ ಸಂಧಿ, ಪಾಡ್ದನ ಹಾಗೂ ದಂತಕತೆಗಳು ಪ್ರಮುಖ ಜಾನಪದೀಯ ಹಿನ್ನಲೆಯನ್ನು ಒದಗಿಸುತ್ತದೆ. ಈ ಸಂಧಿ ಪಾಡ್ದನಗಳು ಅನ್ಯ ಜನಾಂಗದವರ ಬಾಯಿಯಲ್ಲಿ ಹರಿದಾಡಿದ ಕಥಾನಕಗಳು. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಸಂಧಿಗಳು. ಪಾಡ್ದನಗಳು ಕಂಡುಬರುತ್ತವೆ. ಹಾಗಾಗಿ ಅವುಗಳು ಗೊಂದಲದ ಕತೆಗಳನ್ನು ಹೇಳುತ್ತವೆ. ಕೊರಗ ಸಮುದಾಯದ ಹಿರಿಯ ಜೀವಗಳು ಒಂದೊಂದು ರೀತಿಯ ಕತೆಯನ್ನು ಹೇಳುತ್ತಾರೆ. ಕೊರಗ ತನಿಯನ ಹುಟ್ಟುವಿನ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಫಲಿಮಾರುವಿನ ತಾರಿಕೊರಪಲು, ಮುಲ್ಕಿ ಕೆರೆಕಾಡಿನ ಬಾಡು ಕೊರಗ, ಶಿರ್ವ ಮಜಿಲೊಟ್ಟುವಿನ ಅಪ್ಪಿ, ಪಡುಬಿದ್ರೆ ಪಾದೆಬೆಟ್ಟುವಿನ ಬಡ್ಡೆಕೊರಪಲು, ಎಲ್ಲೂರಿನ ಚಲ್ಲ ಕೊರಗ ಹಾಗೂ ಮುಂಡ್ಕೂರು ಸಚ್ಚೇರಿಪೇಟೆಯ ಮಾನಿಗ ಕೊರಗರವರು ಹೇಳಿದ ಸಂಧಿ, ಕತೆಗಳನ್ನು ಆಧರಿಸಿ ತನಿಯನ ವೃತ್ತಾಂತವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ನಡುಸಾಲಿನ ತಪ್ಪು ಕೊರಗರು, ಅಲೆಮಾರಿ ಜೀವನದ ತರುವಾಯ ಒಂದೆಡೆ ನಿಂತು ಮೂಲ ನೆಲೆ ಕಂಡುಕೊಂಡು ಆರೇಳು ಕಡೆಗಳಲ್ಲಿ ವಾಸಿಸಲು ಆರಂಭಿಸಿದ್ದು ಒಂದು ಇತಿಹಾಸ! ಹನ್ನೊಂದನೆ ಶತಮಾನದ ಸುಮಾರಿಗೆ ಅಲೆಮಾರಿ ಕೊರಗರ ಒಂದು ಗುಂಪು 'ಆಯಿಕಲ' ಎಂಬಲ್ಲಿ ನೆಲೆಯನ್ನು ಪಡೆಯಿತು. ಈ ಆಯಿಕಲ ಮೂಲವು 'ಪಾಡ್ದನಾರ್' ಎಂಬ ಮೂಲ ಬಳಿ ಎಂದು ಪ್ರಸಿದ್ಧಿಯಾಯಿತು. 'ಪಾಡ್ದನಾರ್' ಎಂದರೆ ಹಾಡುವವರು ಎಂದರ್ಥ.

ಸರಿಸುಮಾರು ಒಂದು ಶತಮಾನದ ಬಳಿಕ, ಅಂದರೆ ಹನ್ನೆರಡನೇ ಶತಮಾನದಲ್ಲಿ ಈ ಆಯಿಕಲ ಬಲೆಪಿನಲ್ಲಿ ಪಾಡಿ ಮತ್ತು ಓಡಿ ದಂಪತಿಗಳಿಗೆ ಹೆಣ್ಣು ಕೂಸೊಂದು ಜನಿಸುತ್ತದೆ. ಆ ಮಗುವಿಗೆ ಕೊರಪಲು ಎಂದು ನಾಮಕರಣ ಮಾಡುತ್ತಾರೆ. ಹುಡುಗಿಗೆ ಏಳು ವರ್ಷ ತುಂಬುತ್ತಲೇ, ಅದಾಗಲೇ ಪಡುಕಡಲ ಕಿನಾರೆಯಲ್ಲಿ ನೆಲೆ ಕಂಡುಕೊಂಡಿದ್ದ ಕೊರಗರ ಇನ್ನೊಂದು ಗುಂಪಿನ ಸೋಮನ್ನಾಯ ಬಳಿ ಮೂಲದ ಕೋಡು ಕುರುವ ಎಂಬ ಒಂಭತ್ತು ವರ್ಷದ ಬಾಲಕನೊಂದಿಗೆ ಮದುವೆ (ಗಂಡ ಹೆಂಡತಿ ಎಂದು ಗುರುತಿಸಲಾಯಿತು) ಮಾಡಿ ಕೊಡಲಾಯಿತು.

ಏಳು ತಿಂಗಳ ಗರ್ಭಿಣಿ ಕೊರಪಲುಗೆ ಒಂದು ದಿನ ಸಂಜೆಯ ವೇಳೆಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಸೂರ್ಯದೇವರ ಅನುಗ್ರಹದಿಂದ ದೈವಾಂಶ ಸಂಭೂತನಾದ

ಅಭೂತಪೂರ್ವ ಶಿಶುವೊಂದು ಕೊರಪಲು ಗರ್ಭದಿಂದ ಧರೆಗೆರಗಿತು. ಮಗುವಿನ ಸ್ವಚ್ಛಂದ ಅಳುವು ನೀರವ ಸಂಜೆಯನ್ನು ಸೀಳಿ ಮಾರ್ದನಿಸಿತು. ಹಾಡಿಯ ಮಂದಿಯೆಲ್ಲ ಕುಪ್ಪಳಿಸಿದರು. ಅದೇ ರಾತ್ರಿ ಕುರುವ ಮತ್ತು ಬೈಕಾಡ್ದಿಯೂ ಕೊರ್ರೆ ಪಾಡಿ ಬಲೆಪು ತಲುಪಿದರು. ಅಷ್ಟು ಹೊತ್ತಿಗಾಗಲೇ ಕೊರಪಲುಗೆ ಹೆರಿಗೆ ಆಗಿ, ಮಗುವನ್ನು ಸ್ನಾನ ಮಾಡಿಸಿ, ಹಾಲುಣಿಸಿ ಮಲಗಿಸಿದ್ದರು. ತಂಗಿಯ ಹೆರಿಗೆ ಸುದ್ದಿ ಕೇಳಿ ಗುಡಿಸಲೊಳಗೆ ಬಾಗಿ ಹೋದ ಗುರುವನಿಗೆ ಕತ್ತಲಲ್ಲಿ ಮಗುವು ಸರಿಯಾಗಿ ಕಾಣಿಸಲಿಲ್ಲ. ಹಣತೆಯ ದೀಪ ಹಿಡಿದು ತಂಗಿಯ ಬಳಿ ಹೋಗಿ ನೋಡಿದಾಗ ಕತ್ತಲೆಯಲ್ಲಿ ಕಪ್ಪಾದ ಮಗುವು ಕೈಕಾಲು ಆಡಿಸುವುದು ಕಂಡಿತು. ಕಪ್ಪಾದ ಹಸುಗೂಸನ್ನು ಕಂಡ ಗುರುವ ಆಶ್ಚರ್ಯದಿಂದ ಹಾಗೂ ಅಷ್ಟೇ ಮುದ್ದಾಗಿ "ಇಕ್ಕೆ ಇಂತ ಈತು ನೀಚೆ? (ಇವನೇನು ಇಷ್ಟು ಕಪ್ಪು) ಎಂದು ಉದ್ಗರಿಸಿದರು. ನಂತರ ಎಲ್ಲರೂ ಮಗುವನ್ನು ನೀಚೆ ಎಂದು ಕರೆಯಲಾರಂಭಿಸಿದರು. ಮಗು ಹುಟ್ಟಿದ ಏಳನೇ ದಿನಕ್ಕೆ ಬಲೆಪಿನವರ ಸಹಕಾರದೊಂದಿಗೆ ನಾಮಕರಣದ ವಿಧಿಯನ್ನು ಅಧಿಕೃತವಾಗಿ ನಡೆಸಲಾಯಿತು. ಕುರುವ, ಮಗುವಿಗೆ ತನಿಯನೆಂದು ನಾಮಕರಣ ಮಾಡಿದನು. ಮುಂದೆ ಇದೇ ಹೆಸರು ಕೊರಗ ತನಿಯ ಎಂದು ಪ್ರಸಿದ್ಧಿ ಯಾಯಿತು. ದುರಂತವೆಂದರೆ ತನಿಯ ಹುಟ್ಟಿದ ಏಳನೇ ದಿನ ಬೆಳಿಗ್ಗೆ ನಾಮಕರಣ ಕ್ರಿಯೆ ನಡೆದರೆ ಸಂಜೆ ಸೂರ್ಯ ಮುಳುಗುವ ವೇಳೆಗೆ ತಾಯಿ ಕೊರಪಲು ಕೂತಲ್ಲಿಂದಲೇ ಬಿದ್ದು ಕೊನೆಯುಸಿರೆಳೆದಳು. ಏಳು ದಿನದ ಹಸುಗೂಸಿನ ಪಾಲನೆ ಸೋದರಮಾವನ ಮಡದಿ ಬೈಕಾಡ್ತಿಯ ಪಾಲಾಯಿತು. ತಾಯಿ ಸತ್ತು ಸರಿಯಾಗಿ ಮೂವತ್ತನೇ ದಿನಕ್ಕೆ ತಂದೆ ಕುರುವನೂ ಖಾಯಿಲೆಗೆ ಬಿದ್ದು ತೀರಿಕೊಂಡನು. ಇದರಿಂದ ಬೈಕಾಡ್ತಿ ಮತ್ತು ಗುರುವ ಕಂಗಾಲಾದರು. ಮಗು ಅತ್ತೆ ಮಾವರ ಆಸರೆಯಲ್ಲಿ ಬೆಳೆಯ ತೊಡಗಿತು. ಬೆಳೆಯುತ್ತಲೇ ಬಲೆಪಿನ ಇತರ ಮಕ್ಕಳೊಂದಿಗೆ ತುಂಟನೂ ಆದನು. ಜೊತೆಗೆ ಅತ್ತೆಯಿಂದ ಗಿಡಮೂಲಿಕೆ ಹಾಗೂ ಬಲ್ಮೆ ವಿದ್ಯೆಯ ಬಗ್ಗೆಯೂ ತಿಳಿದು ಕೊಳ್ಳುತ್ತಿದ್ದನು. ಮೂರು ವರ್ಷ ಪ್ರಾಯ ದಾಟುತ್ತಲೇ ತನಿಯನಿಗೆ ಕಂಟಕಗಳು ಆರಂಭವಾಯಿತು. ಓರಗೆಯ ಮಕ್ಕಳು ಆತನಿಂದ ದೂರವಿರಲು ಬಯಸಿದರು. ಈತ ಕಂಟಕಗಳನ್ನೇ ಹೊತ್ತು ತಂದಿದ್ದಾನೆಂದು ನೆರೆಕರೆಯವರು ಹಂಗಿಸಿದರು. ಈ ನಡುವೆ ಬಲೆಪಿನಲ್ಲಿ ಮಾರಕ ಖಾಯಿಲೆಯೊಂದು ಕಾಣಿಸಿಕೊಂಡಿತು, ಬಲೆಪಿನ ಒಬ್ಬೊಬ್ಬರೇ ಸಾಯತೊಡಗಿದರು. ಅದೊಂದು ದಿನ ತನಿಯನ ಸೋದರಮಾವನೂ ಖಾಯಿಲೆಗೆ ಬಲಿಯಾದನು. ತಾಯಿ ಬೈಕಾಡ್ತಿ ಈತನನ್ನು ಕರೆದುಕೊಂಡು ತನ್ನ ತಾಯಿ ಮನೆ ಮಡುಮ್ಮಗೆ ಹೋಗಲು ನಿರ್ಧರಿಸಿದರೂ, ತನಿಯ ಒಲ್ಲೆನೆಂದನು. ನೀನು ಬೇಕಾದರೆ ಹೋಗು, ನಾನು ಬರುವುದಿಲ್ಲವೆಂದು ಹಠ ಹಿಡಿದನು. ವಿಧಿಯಿಲ್ಲದೆ ಆಕೆಯೂ ತಾಯಿ ಮನೆಯ ದಾರಿ ಬದಲಿಸಿದಳು. ಬದುಕಿನ ಬಂಡಿ ಕೊರ್ರೆ ಪಾಡಿಯಲ್ಲಿ ಮುಂದೆ ಸಾಗುತ್ತಲೇ ಇತ್ತು. ಖಾಯಿಲೆಯಿಂದಾಗಿ ಕೊರ್ರೆಪಾಡಿ ಬಲೆಪು ಬರಿದಾಯಿತು. ಸಾಕು ತಾಯಿಯೊಂದಿಗೆ ತನಿಯ ಬೆರ್ಮರ ಬಳಿಯ ಬಿಲ್ಲವರ ಮನೆಯಲ್ಲಿ ಕೆಲಸಕ್ಕೆಂದು ಸೇರಿಕೊಂಡನು. ಆಗಾಗ ತಮ್ಮ ಮನೆಗೆ ಹೋಗಿ ಬರುತ್ತಿದ್ದರು.

ಒಮ್ಮೆ ತನಿಯನಿಗೆ ಮನೆಯಲ್ಲೇ ಇದ್ದು ಮಾವನ ಡೋಲು, ಕೊಳಲು ನುಡಿಸಬೇಕೆನಿಸಿತು. 'ತಾಯಿ ನೀನು ಕೆಲಸಕ್ಕೆ ಹೋಗಿ ಬಾ... ನಾನೊಬ್ಬನೇ ಮನೆಯಲ್ಲಿರುತ್ತೇನೆ' ಎಂದು ಕಳುಹಿಸಿದನು. ಆದರೆ ಅದು ತನಿಯನ ಬದುಕಿನ ಗತಿಯನ್ನೇ ಬದಲಿಸುತ್ತದೆ ಎಂದು ಆತ ತಿಳಿದಿರಲಿಲ್ಲ.

ಮನೆ ಬಿಟ್ಟು ಕೆಲಸಕ್ಕೆ ತೆರಳಿದ ಬೈಕಾಡ್ತಿ, ಬಿಲ್ಲವರ ಮನೆಯಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಅನ್ಯಾಯವಾಗಿ ಹತ್ಯೆಯಾದಳು(ಆಕೆಯನ್ನು ಹತ್ಯೆಗೈದ ಆ ಜಾಗೆಯು ಈಗ "ಬೈಕಾಡಿ" ಎಂಬ ಹೆಸರು ಪಡೆದಿದೆ. ಇಂದಿನ ಬ್ರಹ್ಮಾವರದಿಂದ ಎರಡು ಕಿ.ಮೀ ದಕ್ಷಿಣದಲ್ಲಿ,ಬೈಕಾಡಿ ಹೆಸರಿನ ಊರಿದೆ. ಇತ್ತೀಚೆಗೆ ಅಲ್ಲೊಂದು ಬೈಕಾಡ್ತಿ ದೈವಸ್ಥಾನವೂ ಸ್ಥಾಪನೆಗೊಂಡಿದೆ).

ರಾತ್ರಿಯೆಲ್ಲಾ ತಾಯಿ(ಅತ್ತೆ)ಗಾಗಿ ಕಾದು ಕುಳಿತ ತನಿಯನಿಗೆ ಮರುದಿನ ಬೆಳಿಗ್ಗೆ ಯಾರೋ ದಾರಿಹೋಕರು ವಿಷಯ ಮುಟ್ಟಿಸಿದರು. ಬಾಲಕನಿಗೆ ಆಕಾಶವೇ ತಲೆಮೇಲೆ ಬಿದ್ದಂತಾಯಿತು. ಬಲೆಪಿಗೆ ಕೆಂಡದ ಮಳೆ ಬಡಿದಂತಾಯಿತು. ಊರಿಗೆ ಊರೇ ಮಸಣದಂತೆ ಕಂಡಿತು. ಆತ ಹುಚ್ಚನಂತಾದನು. ಬರಿದಾದ ಬಲೆಪಲ್ಲಿ ಅತ್ತಿತ್ತ ಕಂಗೆಟ್ಟು ಓಡಾಡಿದನು. ಏಳು ಕೊಪ್ಪದ ಡೋಲು ತೆಗೆದು ಏಳು ಟಕ್ಕು ಬಾರಿಸಿದನು. ಮಾವನ ಬಿದಿರಿನ ಕೊಳಲು ತಂದು ಏಳು ಸ್ವರ ನುಡಿಸಿದನು, ಕುಣಿದನು, ಕುಪ್ಪಳಿಸಿದನು. ಏಳು ವರ್ಷ ಅನ್ನ ನೀಡಿ ಸಾಕಿದ ಅತ್ತೆ, ಆಸರೆ ನೀಡಿದ ಸೋದರಮಾವ, ಸಹಚರ್ಯ ಒದಗಿಸಿದ ಬಲೆಪನ್ನು ನೆನೆದು ಗೋಗರೆದು ಅತ್ತನು, ಜೋರಾಗಿ ನಕ್ಕನು, ತನ್ನನ್ನುತಾನೇ ಹುಚ್ಚನೆಂದು ಜರಿದನು, ಸಮಾಧಾನಪಡಿಸಿಕೊಂಡನು. ಕೊನೆಗೊಮ್ಮೆ ಅದೇ ಏಳು ವರ್ಷದ ಬಾಲಕ ಕೊರ್ರೆಪಾಡಿ ಬಲೆಪಿಗೆ ಬೆನ್ನು ಹಾಕಿ ವಾರಕೂರು ಬಿಟ್ಟು ಹೊರಟುನಿಂತನು. ತುಂಡರಿವೆಯೂ ಇಲ್ಲದೆ, ತನ್ನ ಪೀಂಚಿಲ್ ಕತ್ತಿ ಹಿಡಿದು ಕಡಲ ಕರೆಗೆ ಬಂದನು. ಬಡಗಣ ಬಿಟ್ಟು ತೆಂಕಣದಿಕ್ಕಿಗೆ ಹೆಜ್ಜೆ ಇಟ್ಟನು. ದಾರಿಯಲ್ಲಿ ಮರಳನ್ನೇ ಅನ್ನವೆಂದು ಮೆದ್ದನು. ದಡ್ಡಲದ ಕಾಯಿಯೊಂದಿಗೆ ಆಡಿದನು, ಓಡಿದನು, ಕೆಲವೊಮ್ಮೆ ಮೌನವಾಗಿ ನಡೆದನು. ರಾತ್ರಿ ಹಗಲಾಯಿತು, ಮತ್ತೆ ರಾತ್ರಿಯಾಯಿತು. ಕೈಪುಂಜಾಲು ದಾಟಿದಾಗ ದಾರಿಯಲ್ಲಿ ಏಳು ಹೆಡೆಯ(ತಲೆ) ಸಂಕಮಾಲೆ(ನಾಗರಹಾವು) ಯೊಂದು ಅಡ್ಡವಾಗಿ ನಿಂತಿತು. ತನಿಯ ಆತನ ನುಡಿಯಲ್ಲಿ ಹಾವನ್ನು ದಾರಿ ಬಿಡುವಂತೆ ವಿನಂತಿಸಿದನು. ಹಾವು ಕದಲಲಿಲ್ಲ. ಸಿಟ್ಟುಗೊಂಡ ಬಾಲಕ ತನಿಯ ಪೀಂಚಿಲ್ ಕತ್ತಿಯನ್ನು ಎಡಗೈಯಿಂದ ಬಲಗೈಗೆ ಬದಲಾಯಿಸಿಕೊಂಡು ಒಂದೇ ಹೊಡೆತಕ್ಕೆ ಹಾವಿನ ಏಳು ತಲೆಗಳನ್ನು ಕೊಚ್ಚಿ ಹಾಕಿದನು. ಎಡಗೈಯಲ್ಲಿ ಹಾವಿನ ದೇಹವನ್ನು ಎತ್ತಿ ಅರಬ್ಬಿ ಸಮುದ್ರಕ್ಕೆ ಬೀಸಿ ಎಸೆದನು. ಹಿಂದೆ ಮುಂದೆ ನೋಡದೆ ನಡೆದೇ ಬಿಟ್ಟನು. ಬಿತ್ತುಲ್ ದಾಟಿ, ತಾರೆ ತೋಟ ತಲುಪಿದನು. ತಂದೆಯ ಮೂಲ ಮನೆ ಹುಡುಕುತ್ತಾ ಪೊಸೋಡಿಗೆ ಹೊರಟನು. ಆದರೆ ಪೊಸೋಡಿಯ ಮಂದಿ ಪಡಂಬೂರು ತೋರಿಸಿದರು. ಅತ್ತ ಹೆಜ್ಜೆ ಹಾಕಿದ ಬಾಲಕ ಪಡಂಬೂರು ಬಲೆಪು ತಲುಪಿದಾಗ ನಡು ಬಿಸಿಲು. ಬಾಯಾರಿ ಬೆಂಡಾಗಿದ್ದ ಆತ ನೀರು ಕೇಳಿದನು. ನೀರು ಕೊಡಲು ನಿರಾಕರಿಸಿದ ಕುಲಬಾಂಧವರು ಪರಿಚಯ ಕೇಳಿದರು.

ವಿಚಾರ ತಿಳಿದು, ನೀನು ಅಡಬೆ ಮಗು, ನಮ್ಮವನನ್ನು ಮುಗಿಸಿದ್ದೀಯಾ, ನಿನಗಿಲ್ಲಿ ಜಾಗವಿಲ್ಲ, ಇಲ್ಲಿಂದ ತೊಲಗು ಎಂಬಿತ್ಯಾದಿ ನಿಂದನೆ, ಬೈಗುಳಗಳ ಸುರಿಮಳೆಗರೆದರು. ತಂದೆ ಮನೆಯವರ ಆಶ್ರಯವೂ ಸಿಗದೇ, ಕುಡಿಯಲು ನೀರೂ ಕೊಡದೆ ಬೈದು ನಿಂದಿಸಿದ ಮಂದಿಯನ್ನು ಮನಸ್ಸಿನಲ್ಲೇ ಶಪಿಸಿದ ಬಾಲಕ, ತಂದೆಯಂತೆ ಸೋಮಣ್ಣಾಯ ಬಳಿಯೂ ಹೆಚ್ಚು ಕಾಲ ಉಳಿಯದಿರಲಿ ಎಂದು ನೆಲಮುಟ್ಟಿ ಹೇಳಿದನು. ಅಂದು ನೋವಿನ ನುಡಿಯೇ ಮುಂದೆ ಈ ಸೋಮನ್ನಾಯ(ಸೋಮನಾರ್)ಬಳಿಯು ನಾಶವಾಗಲು ಕಾರಣ ಎನ್ನುವುದು ಕೆಲವರ ಅಭಿಪ್ರಾಯ! ಬಸವಳಿದ ಬಾಲಕ, ಆಸರೆ ಬೇಡಿ ಅಲೆಯುತ್ತಾ ತಾಯಿ ಮೂಲದ ನೆನಪಿಗೆ ಬಂದು ಅತ್ತ ನಡೆದರೆ ಕಲ್ಲಾಪು ದಾಟಿದಾಗ ಕಳ್ಳು ಮಾರುವ ಬಿಲ್ಲವ ಮಹಿಳೆ ಮೈರೆ ಬೈದೆದಿ ಎದುರಾದರು. ಕದಿರೆಯಿಂದ ಬಿದಿರೆಗೆ ಕಳ್ಳು(ಶೇಂದಿ) ಮಾರಲು ತಲೆಯಲ್ಲಿ ಕಳ್ಳಿನ ಗಡಿಗೆ(ಕಂದೆಲ್) ಹೊತ್ತು ಸಾಗುತ್ತಿದ್ದರು. ಜೊತೆಗೆ ಮೈರೆ ಬೈದೆಯ ಮಗ, ಚೆನ್ನಯ ಬೈದನೂ ಇದ್ದನು. ಇವರನ್ನು ಗಮನಿಸದೆ ಮುಂದೆ ನಡೆದ ಬಾಲಕನನ್ನು ನೋಡಿದ ಬೈದೆದಿಗೆ ಏನೋ ಸಂಚಲನವಾದ ಅನುಭವವಾಯಿತು. ಹಿಂತಿರುಗಿ ನೋಡಿದರು, ಹುಡುಗನನ್ನು ಕರೆದು ಮಾತಾಡಬೇಕೆನಿತು. 'ಎಲೇ... ಹುಡುಗ ಯಾರು ನೀನು?' ಎಂದರು. 'ನಾನು... ನಾ... ನು' ಎನ್ನುತ್ತಾ ಅಂಜಿದ ಆತ. "ಎದುರಿಗೆ ಬಾ... ಮುಖ ನೋಡಿ ಮಾತನಾಡು..." ಮೈರೆಕ್ಕ ಹೇಳಿದಾಗ, ಆತ ಮಾನಕ್ಕೆ ಕೈ ಹಿಡಿದು ತಿರುಗಿ ನೋಡಿದನು. ಹುಡುಗನ ಸೊಂಟದಲ್ಲಿ ಒಂದು ಅಂಕೊಡಿ, ಅದರಲ್ಲೊಂದು ಪೀಂಚಿಲ್ ಕತ್ತಿ ಬಿಟ್ಟರೆ, ತುಂಡರಿವೆಯೂ ದೇಹದಲ್ಲಿರಲಿಲ್ಲ. ಆಗ ಬೈದೆದಿ ತನ್ನ ಮಗನ ತಲೆಗೆ ಸುತ್ತಿದ್ದ ಬಟ್ಟೆಯನ್ನು ತೆಗೆದು ಆತನೆಡೆಗೆ ಚಾಚಿದರು. ಅದನ್ನು ಪಡೆದು ಸೊಂಟಕ್ಕೆ ಸುತ್ತಿಕೊಂಡನು. "ನಾನು ಕಾಡಿನವ... ಜಾತಿಯಲ್ಲಿ ಕೊರ್ರು, ನನ್ನವರು ಯಾರೂ ಇಲ್ಲ. ಹಾಗಾಗಿ ವ್ಯಥೆಪಟ್ಟು ಊರು ಬಿಟ್ಟು ಬಂದಿದ್ದೇನೆ. ಎಲ್ಲಿಗೆ ಹೋಗುತ್ತೇನೆಂದೂ ತಿಳಿದಿಲ್ಲ, ಮಾಡಲು ಕೆಲಸ, ಉಣ್ಣಲು ಗಂಜಿ ಯಾರು ಕೊಡುತ್ತಾರೋ ಎಂದು ಹುಡುಕುತ್ತಾ ಹೊರಟಿದ್ದೇನೆ" ಎಂದನು ತನಿಯ. ಈತನ ಮಾತುಗಳನ್ನು ಆಲಿಸಿದ ಮೈರೆ ಬೈದೆದಿಗೆ ಅತೀವ ವೇದನೆಯಾಯಿತು. ಕಣ್ಣುಗಳು ಒದ್ದೆಯಾದವು. ತಾಯಿ ಕರುಳು ಮರುಗಿತು. ಮಾನವೀಯತೆ ಗರಿಗೆದರಿತು(ಅಂದಿನ ದಿನಗಳಲ್ಲಿ ಕೊರಗರ ಬಗ್ಗೆ ಅಮಾನವೀಯತೆ, ಅಸ್ಪೃಶ್ಯತೆ, ದೌರ್ಜನ್ಯಗಳು ತಾಂಡವವಾಡುತ್ತಿದ್ದರೂ, ತಾಯಿ ಬೈದೆದಿ ಇವುಗಳಿಂದ ಹೊರತಾಗಿರಬಹುದು)

'ಮಾಡುವಷ್ಟು ಕೆಲಸ, ಉಣ್ಣುವಷ್ಟು ಗಂಜಿ ನನ್ನ ಮನೆಯಲ್ಲಿದೆ. ನನ್ನ ಜೊತೆಗೆ ಬಾ... ಹೊರಗಿನ ಕೆಲಸಗಳನ್ನು ಮಾಡಿಕೊಂಡಿರು' ಎಂದು ತನ್ನ ಜೊತೆ ಕರೆದರು. ಬಾಲಕ ತನಿಯ ಮರುಮಾತನಾಡದೆ ತಲೆಯಾಡಿಸಿದನು. ಅಪರೂಪಕ್ಕೆ ಸಿಕ್ಕಿದ ಅವ್ವ ಎಂದು ಭಾವಿಸಿ ಆಕೆಯ ತಲೆಯಲ್ಲಿದ್ದ ಕಳ್ಳಿನ ಗಡಿಗೆಯನ್ನು ತಾನೆ ಹೊತ್ತುಕೊಂಡನು. ಬಿದಿರೆ ತಲುಪಿದಾಗ ಕತ್ತಲಾಯಿತು. ಅಂದು ಅಲ್ಲೇ ರಾತ್ರಿಯನ್ನು ಕಳೆದರು. ಮರುದಿನ ಬೆಳಿಗ್ಗೆಯಿಂದಲೇ ತಾವು ಹೊತ್ತು ತಂದ ಕಳ್ಳು ಮಾರಾಟಕ್ಕೆ ನಿಂತರು. ಆದರೆ ಆ ಗಡಿಗೆಯ

ಕಳ್ಳು ಎಷ್ಟು ಮಾರಿಹೋದರೂ ಮತ್ತೆ ಮತ್ತೆ ತುಂಬಿಕೊಳ್ಳುತ್ತಿತ್ತು. ಹೀಗೆ ಏಳು ದಿನ ಏಳು ರಾತ್ರಿ ಮಾರಿದರೂ ಕಳ್ಳಿನ ಗಡಿಗೆ ಖಾಲಿಯಾಗದಿದ್ದಾಗ ತಾಯಿ ಮೈರೆ ಬೈದೆದಿಗೆ ಆತಂಕವಾಯಿತು. ತನಿಯ ಮುಸಿ ಮುಸಿ ನಕ್ಕನು. ಆತನ ಆ ನಗುವಿನ ಅರ್ಥ ತಿಳಿದುಕೊಳ್ಳಲಾಗದಿದ್ದರೂ ಆತನಲ್ಲಿ ಏನೋ ಒಂದು ಶಕ್ತಿ ಇರುವುದು ತಾಯಿಯ ಅರಿವಿಗೆ ಬಂತು. ಆಕೆ ಕಳ್ಳು ಮಾರಿ ಖಾಲಿಯಾಗಲಿ ಎಂದು ಕದಿರೆಯ ಮಂಜುನಾಥ ದೇವರಿಗೆ ಹರಕೆ ಹೊತ್ತಳು. ಆಕೆ ಹರಕೆ ಹೊತ್ತು ಬಾಯಿ ಮುಚ್ಚುವಷ್ಟರಲ್ಲಿ ಕಳ್ಳು ಪೂರ್ತಿ ಮಾರಾಟವಾಯಿತು. ತನಿಯ ಮತ್ತೆ ನಕ್ಕನು.

ಇವರು ಎಣಸೂರ ಬಾಳಿಕೆ(ಕುತ್ತಾರು ಬರ್ಕೆ)ಯ ಮನೆ ತಲುಪಿದಾಗ ಮೈರೆಕ್ಕನ ಮಗಳು ಬಾಗಿಲಲ್ಲಿ ನಿಂತು ಕಾಯುತ್ತಿದ್ದಳು. ಅವಳು ತನಿಯನನ್ನು ಕಂಡು ಬೆದರಿದಳು. ತಾಯಿ ಅವನ ಬಗ್ಗೆ ವಿಷಯವನ್ನೆಲ್ಲಾ ಅರುಹಿ, 'ನಮ್ಮ ಮನೆಯಲ್ಲಿ ಹೊರಗಿನ ಕೆಲಸ ಮಾಡಿಕೊಂಡಿರಲಿ' ಎಂದರು. ಆಕೆ ತಲೆಯಾಡಿಸಿದಳು. ತನಿಯನನ್ನು ಕರೆದು, "ನೀನು ಅಲ್ಲಿ ಹಟ್ಟಿಯ ಪಕ್ಕದಲ್ಲಿ ಒಂದು ಜೋಪಡಿಯನ್ನು ಕಟ್ಟಿಕೊಳ್ಳು, ಇತರ ಆಳುಗಳ ಸಹಾಯ ಪಡೆದುಕೊಳ್ಳು" ಎಂದರು. ಹಟ್ಟಿಯಲ್ಲಿ ದನಕರುಗಳಿವೆ, ಅವಕ್ಕೆ ಕಾಲಕಾಲಕ್ಕೆ ಹುಲ್ಲು, ಸೊಪ್ಪು ಹಾಕುವುದು, ಗುಡ್ಡದಲ್ಲಿ ಮೇಯಿಸುವುದು, ಮತ್ತೆ ಹಟ್ಟಿಗೆ ತಂದು ಕಟ್ಟುವುದು ಇತ್ಯಾದಿ ಕೆಲಸಗಳನ್ನು ಮಾಡಬೇಕು ಎಂದರು. ಆಯಿತು ಎನ್ನುತ್ತಾ ತನಿಯ ಹಟ್ಟಿಯ ಕಡೆಗೊಮ್ಮೆ ಕಣ್ಣು ಹಾಯಿಸಿದನು. ಅಂದಿನಿಂದ ತನಿಯನ ಬದುಕು ಬಾಳಿಕೆಯ ದನಕರುಗಳೊಂದಿಗೆ ಆರಂಭವಾಯಿತು. ಕೆಲಸಕ್ಕೂ ಕೊರತೆ ಇಲ್ಲ, ಗಂಜಿಗೂ ಬರವಿಲ್ಲ ಎಂಬಂತೆ ದಿನ ಕಳೆಯತೊಡಗಿತು. ತನಿಯನ ಆಗಮನವಾದಂದಿನಿಂದ ಬಾಳಿಕೆಯಲ್ಲಿ ಸಿರಿಸಂಪತ್ತು ಇಮ್ಮಡಿಗೊಳ್ಳತೊಡಗಿತು. ಏಳು ಕೂಲಿಯಾಳು ಮಾಡುವ ಕೆಲಸ ಕಾರ್ಯಗಳನ್ನು ಆತನೊಬ್ಬನೇ ಮಾಡುತ್ತಿದ್ದನು. ಗದ್ದೆ ತೋಟಗಳೂ ಫಲತುಂಬಿ ತುಳುಕಾಡಿತು. ಹಸುಗಳ ಇಳುವರಿಯೂ ಹೆಚ್ಚಿತು.

ಪ್ರತಿದಿನ ನೂರಾರು ದನಕರುಗಳನ್ನು ಮೇಯಿಸಲು ಕುತ್ತಾರುಪದವುಗೆ ಹೋಗುತ್ತಿದ್ದ. ಸಂಜೆಯವರೆಗೆ ದನ ಕಾಯ್ದು ನಂತರ ಮತ್ತೆ ಹಟ್ಟಿಗೆ ಹಿಂತಿರುಗುತ್ತಿದ್ದನು. ಹಸುಗಳು ತಮ್ಮ ಪಾಡಿಗೆ ತಾವು ಮೇಯುತ್ತಿದ್ದಾಗ, ಆತ ಆಗಾಗ ಕುತ್ತಾರಿನಲ್ಲಿರುವ ತನ್ನ ಕುಲಬಾಂಧವರ ಬಲೆಪುಗೆ (ಮನೆಗಳಿಗೆ) ಹೋಗಿ ಹರಟೆ ಹೊಡೆಯುತ್ತಿದ್ದನು. ಕೆಲವೊಮ್ಮೆ ಅಲ್ಲಿಯೇ ಗಂಜಿ ಕುಡಿಯುತ್ತಿದ್ದನು. ಅಲ್ಲಿನ ಜನರ ಪ್ರೀತಿ ವಿಶ್ವಾಸಗಳನ್ನೂ ಸಂಪಾದಿಸಿದ್ದನು. ಸಂಜೆ ಬಾಳಿಕೆಗೆ ಮರಳಿ ಹಸುಗಳನ್ನು ಎಣಿಸಿ ಹಟ್ಟಿಯಲ್ಲಿ ಕಟ್ಟುತ್ತಿದ್ದನು.

ಹೀಗೆ ಬಾಳಿಕೆಯಲ್ಲಿ ತನಿಯನ ಬದುಕಿನ ದಿನಗಳು ಸರಾಗವಾಗಿ ಸಾಗುತ್ತಲೇ ಇತ್ತು. ಅದೊಂದು ದಿನ ತನಿಯನಿಗೆ ತನ್ನ ಬಾಲ್ಯದ ದಿನಗಳು ನೆನಪಿಗೆ ಬಂತು. ತಾಯಿ, ಮಾವ, ಬಲೆಪಿನ ಆ ಮಂದಿ ಎಲ್ಲವೂ ನೆನಪಾಗಿ ಬಿಕ್ಕಳಿಸಿ ಬಿಕ್ಕಳಿಸಿ ಅತ್ತನು. ಹಟ್ಟಿಯಲ್ಲಿದ್ದ ಹಸುಗಳು ಕಣ್ಣೀರಿಳಿಸಿದವು! ತಾಯಿ ಮೈರೆ ಬೈದೆದಿಯನ್ನು ಕರೆದು, ತಾನು ಕುಲಕಸುಬಾದ ಬುಟ್ಟಿ ಹೆಡಿಗೆಗಳನ್ನು ಮಾಡಬೇಕು. ಅದಕ್ಕಾಗಿ ಬಿಳಲು ತರಲು ಕಾಡಿಗೆ ಹೋಗಬೇಕು

ಎಂದನು. ತಾಯಿ ಅಪ್ಪಣೆ ಪಡೆದು ಸೊಲ್ಲಮಲೆಯ ಕಡೆಗೆ ಹೊರಟೇಬಿಟ್ಟನು.

ಬಾಳಿಕೆಯಿಂದ ಹೊರಟ ಬಾಲಕ ಮೂರು ಹಗಲು, ಮೂರು ರಾತ್ರಿ ನಡೆದು ಸೊಲ್ಲಮಲೆ ತಲುಪಿದನು. ಅತ್ತಿತ್ತ ಸುಳಿದಾಡಿ ತನ್ನ ಸಾಮರ್ಥ್ಯಕ್ಕೆ ಸರಿಹೊಂದುವಷ್ಟು ನೆಕ್ಕಿ ನೆಡಿಲು, ಮಾದಿರು ಬಿಳಲುಗಳನ್ನು ಗುರುತಿಸಿದನು. ದಣಿವಾರಿಸಲೆಂದು ಒಂದು ಮಣ್ಣಿನ ದಿಣ್ಣೆಯಲ್ಲಿ ಎರಗಿಕೂತನು. ಅಲ್ಲಿಯೇ ಮಂಪರು ನಿದ್ದೆ ಹತ್ತಿತು. ಹೆತ್ತವ್ವ ಕೊರಪಲು ಕನಸಲ್ಲಿ ಬಂದು "ಮಗೂ, ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದಕ್ಕಾಗಿ ಇಷ್ಟೊಂದು ಕಷ್ಟಪಡಬೇಕಾಯಿತು. ಆದರೂ ಭಯ ಪಡುವುದು ಬೇಡ. ಕಷ್ಟಗಳನ್ನು ಧೈರ್ಯವಾಗಿ ಎದುರಿಸು..." ಎಂದು ಹರಸಿದರು. ತನಿಯನಿಗೆ ತಕ್ಷಣ ಎಚ್ಚರವಾಗಿ ನೋಡಿದಾಗ ಅಲ್ಲಿ ಯಾರೂ ಇಲ್ಲ. ಅತ್ತಿತ್ತ ನೋಡಿದಾಗ ತಾನು ಕಡಿಯಲೆಂದು ಗುರುತಿಸಿದ್ದ ನೆಕ್ಕಿ, ನೆಡಿಲು ರಾಶಿರಾಶಿಯಾಗಿ ಬಿದ್ದಿತ್ತು. ಅವುಗಳನ್ನು ಒಟ್ಟುಗೂಡಿಸಿ ಕಟ್ಟು ಕಟ್ಟಿದನು. ಹೊರೆಹೊತ್ತು ಬಾಳಿಕೆಯತ್ತ ಹೊರಟನು. ಏಳೇ ಏಳು ಹೆಜ್ಜೆಗೆ ಮನೆ ತಲುಪಿದನು. ತನಿಯ ಮನೆ ತಲುಪಿದಾಗ ಬಾಳಿಕೆಯಲ್ಲಿ ಮೌನ ಆವರಿಸಿತ್ತು. ಮೈರೆಕ್ಕ ತಲೆಮೇಲೆ ಕೈಹೊತ್ತು ಕೂತಿದ್ದರು. ತಲೆಯ ಹೊರೆಯನ್ನು ಇಳಿಸದೆ, ತಾಯಿಯನ್ನು ಕರೆದು ವಿಚಾರ ಏನೆಂದು ಕೇಳಿದನು. ಹಟ್ಟಿಯಲ್ಲಿ ಕಟ್ಟಿ ಹಾಕಿದ್ದ ಗಬ್ಬದ ಗೋವು ಒಂದು ಕಾಣೆಯಾಗಿದೆ, ಎಂದು ಆಕೆ ಹೇಳಿದರು. "ಚಿಂತಿಸಬೇಡಿ ತಾಯಿ, ಕಳವಾದ ಗೋವು ಮತ್ತೆ ಹಟ್ಟಿಗೆ ಬಂದು ಸೇರುತ್ತದೆ" ಎಂದವನೇ ಹೊರೆಯನ್ನು ಕೆಳಗೆ ಹಾಕಿ ಹಟ್ಟಿಯ ಕಡೆಗೆ ದಿಟ್ಟಿಸಿದನು. ಈಗ ಹೋಗಿ ನೋಡಿ ತಾಯಿ, ಹಸು ಹಟ್ಟಿಯಲ್ಲಿಯೇ ಇದೆ ಎಂದನು. ಮೈರಕ್ಕ ಹಾಗೂ ಮಕ್ಕಳು ಅತ್ತ ಓಡಿದರು. ಹೌದು ಕಳವಾದ ಅದೇ ಗೋವು ಆರಾಮವಾಗಿ ಹುಲ್ಲು ತಿನ್ನುತ್ತಿತ್ತು. ಇದು ಹೇಗೆ ಸಾಧ್ಯ? ಎಂದು ಯಾರಿಗೂ ತಿಳಿಯಲಿಲ್ಲ. ತನಿಯನ ಶಕ್ತಿಯ ಬಗ್ಗೆ ತಿಳಿದಿದ್ದ ತಾಯಿಯೂ ಮತ್ತೆ ಬಾಯಿ ಮಿಸುಕಾಡಿಸಲಿಲ್ಲ.

ಒಮ್ಮೆ ಮೈರೆ ಬೈದೆದಿಯ ಮನೆಯಲ್ಲಿ ಅದ್ಯಾರಿಗೋ ಮೈಗೆ ಹುಷಾರಿರಲಿಲ್ಲ. ಮೈರೆಕ್ಕ ಬಲ್ಮೆದ ಭಟ್ರಲ್ಲಿಗೆ(ಜ್ಯೋತಿಷ್ಯರಲ್ಲಿಗೆ) ಹೋಗಿ ಪರಿಹಾರ ಬಯಸಿದ್ದರು. ಜ್ಯೋತಿಷಿಯು ಅಮಾವಾಸ್ಯೆಯ ದಿನ ನೀಚದಾನ ನೀಡುವಂತೆ ಪರಿಹಾರ ಸೂಚಿಸಿದರು. ನೀಚದಾನ ಯಾರಿಗೆ ಕೊಡುವುದು, ಅದನ್ನು ಸ್ವೀಕರಿಸುವವರು ಯಾರು? ಎಂದು ಬೈದೆದಿ ವಿಚಾರಿಸಿದಾಗ, "ಅವರಿವರನ್ನು ಯಾಕೆ ಹುಡುಕುತ್ತೀರಿ ತಾಯಿ? ನಿಮ್ಮ ಮನೆಯ ಆಳು ಇದ್ದಾನಲ್ಲ ಅವನಿಗೆ ನೀಡಿ" ಎಂದು ಬಲ್ಮೆದ ಭಟ್ರು ಸಲಹೆ ಮಾಡಿದರು. ಅದರಂತೆ ಮನೆಗೆ ಬಂದ ಮೈರೆಕ್ಕ ತನಿಯನನ್ನು ಕರೆದು, ಏಳು ಕಳಸೆ ಅಕ್ಕಿಯ ಅನ್ನ ಹಿಡಿಯುವಷ್ಟು ದೊಡ್ಡದಾದ ಗೆರಸೆಯನ್ನು ಮಾಡಿಕೊಡುವಂತೆ ತಿಳಿಸಿದರು. ಆತ ಮರುಮಾತನಾಡದೆ ದೊಡ್ಡಗಾತ್ರದ ಗೆರಸೆ ಮಾಡಿಕೊಟ್ಟನು. ಅದೇ ಅಮಾವಾಸ್ಯೆಯ ದಿನ ಬಲ್ಮೆದ ಭಟ್ರು ಸೂಚಿಸಿರುವಂತೆ ಆ ಗೆರಸೆಗೆ ದೊಡ್ಡ ಗಾತ್ರದ ಏಳು ಬಾಳೆ ಹಾಕಿ, ಏಳು ಕಳಸೆ ಅಕ್ಕಿಯ ಅನ್ನವನ್ನು ಬಡಿಸಿದರು. ಬೂದು ಕುಂಬಳಕಾಯಿಯ ತಿಳಿಸಾರನ್ನು ಅನ್ನಕ್ಕೆ ಸುರಿದರು. ಕಾಯಿಲೆ ಬಿದ್ದಿರುವ ವ್ಯಕ್ತಿಯನ್ನು ಅಂಗಳಕ್ಕೆ ಕರೆತಂದು ಪೂರ್ವಕ್ಕೆ

ಮುಖ ಮಾಡಿಸಿ ಕೂರಿಸಿದರು. ಆತನ ಕೈಯ ಉಗುರುಗಳನ್ನು ಕತ್ತರಿಸಿ ಅನ್ನದಲ್ಲಿ ಬೆರೆಸಿದರು. ಎಡಭಾಗದ ಒಂದಷ್ಟು ತಲೆಗೂದಲನ್ನು ಕಿತ್ತು ಹಾಕಿ ಅದನ್ನೂ ಅನ್ನಕ್ಕೆ ಹಾಕಿದರು. ಇದನ್ನೆಲ್ಲ ಅಚ್ಚರಿಯಿಂದ ನೋಡುತ್ತಿದ್ದ ತನಿಯನನ್ನು ತಾಯಿ ಬೈದೆದಿ ಮುಂದೆ ಕರೆದರು. "ಈ ಗೆರಸೆಯ ಅನ್ನವನ್ನು ರೋಗಿಯ ತಲೆಗೆ ಮೂರು ಸುತ್ತು ನೀವಾಳಿಸಿ ತೆಗೆದು, ಆ ಅನ್ನವನ್ನು ನಿನ್ನ ಗುಡಿಚಿಲ ಒಳಗೆ ಹೋಗಿ ಉಣ್ಣು" ಎಂದು ಆಕೆ ತಿಳಿಸಿದರು. ತಲೆಗೂದಲು, ಉಗುರು ಅನ್ನಕ್ಕೆ ಬೆರೆಸಿದ್ದನ್ನು ಕುತೂಹಲದಿಂದ ಗಮನಿಸುತ್ತಿದ್ದ ತನಿಯನಿಗೆ, ಅದೇ ಅನ್ನವನ್ನು ಉಣ್ಣುವಂತೆ ತಾಯಿ ಹೇಳಿದಾಗ ಪಿತ್ತ ನೆತ್ತಿಗಡರಿತು. ಆದರೂ ತೋರಿಸಿ ಕೊಳ್ಳುವಂತಿಲ್ಲ. ಅನ್ನ ಕೊಟ್ಟ ತಾಯಿಗೆ ಎದುರಾಡಿದವನಲ್ಲ. ಸಾವರಿಸಿಕೊಂಡು ಗೆರಸೆ ಸಮೇತ ಅನ್ನವನ್ನು ಎತ್ತಿ ಮೂರು ಸುತ್ತು ನೀವಾಳಿಸಿದನು. ಸಿಟ್ಟು ತಡೆಯಲಾಗಲಿಲ್ಲ. ಗೆರಸೆಯನ್ನು ಹಾಗೇ ಎತ್ತಿ ಬಾಕಿ ಮಾರು ಗದ್ದೆಯಲ್ಲಿ ಮನೆಯ ಹೆಬ್ಬಾಲಿಗೆ ತಂದು ಕವಚಿ ಹಾಕಿದನು. ಹಿಂದಿರುಗಿ ನೋಡದೆ ತನ್ನ ಗುಡಿಸಲೊಳಗೆ ನುಸುಳಿದನು. ತನಿಯನು ಪ್ರಥಮ ಬಾರಿಗೆ ತಾಯಿಯ ಕ್ರಮವನ್ನು ಪ್ರತಿಭಟಿಸಿದನು. ಆತನ ಕೋಪದ ಪರಿಣಾಮವನ್ನು ಅರಿತಿದ್ದ ಮೈರೆಕ್ಕ ಸಮಾಧಾನಪಡಿಸಿದರು. ಹಗಲು ರಾತ್ರಿಗಳಾಗಿ, ಅಮಾವಾಸ್ಯೆ, ಹುಣ್ಣಿಮೆ ಗಳು ಮರಳಿ ಮರಳಿ ಬಂದವು. ವರ್ಷಗಳೇ ಉರುಳಿದವು. ಹೆತ್ತವ್ವನ ಹಾರೈಕೆಯಿಂದ ತನಿಯ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದ್ದನು. ಬಾಳಿಕೆಯಲ್ಲಿ ಪಚ್ಚೆ ಪೈರುಗಳಿಂದ ಕೂಡಿದ ಗದ್ದೆ, ತೋಟಗಳಲ್ಲಿ ತನಿಯನ ಕೆಲಸವೂ ಹೆಚ್ಚಿತು. ಏಳು ಜನರ ಕೆಲಸಕ್ಕೂ, ಏಳು ಜನರ ಅನ್ನಕ್ಕೂ ಒಬ್ಬನೇ ವಾರಿಸುದಾರನಾದನು.

ಅದೊಂದು ದಿನ ಮುಂಜಾನೆ, ಹೆತ್ತವ್ವ ಸೊಲ್ಲಮಲೆಯಲ್ಲಿ ಕನಸಲ್ಲಿ ಬಂದಿರುವುದು ನೆನಪಿಗೆ ಬಂತು. ಮತ್ತೆ ಬಲೆಪು, ಅಲ್ಲಿಂದ ನಡೆದು ಬಂದ ದಾರಿ, ಮೈರೆಯ ಅಕ್ಕರೆಯ ಆಸರೆ ಎಲ್ಲವೂ ನೆನಪಾಯಿತು. ತಾಯಿಗೆ ಹೇಳಿ ಮತ್ತೆ ಸೊಲ್ಲಮಲೆಗೆ ಹೊರಟು ನಿಂತನು. ಮೂರು ತಿಂಗಳು ಕಳೆದು ಬರುವೆನೆಂದನು. ಸೊಂಟದ ತುಂಡು ಬಟ್ಟೆಯ ಮೇಲೆ ಅಂಕೊಡಿಯನ್ನು ಕಟ್ಟಿಕೊಂಡು ಕತ್ತಿಯನ್ನು ಸಿಕ್ಕಿಸಿಕೊಂಡನು. ತಲೆಯಲ್ಲಿ ಅಡಿಕೆ ಹಾಳೆಯ ಮುಟ್ಟಾಲೆ ಇಟ್ಟುಕೊಂಡನು. ಬಲಗೈಯಲ್ಲಿ ಕರಿನೆಕ್ಕಿ ಗಿಡದ ದಂಡ(ದಂಟೆ, ಕೋಲು) ಹೆಗಲ ಗಾಂತಿರ(ಬುಟ್ಟಿ)ಯಲ್ಲಿ ಒಂದು ಹಿಡಿ ಅಕ್ಕಿ, ವೀಳ್ಯದೆಲೆ ಇತ್ತು. ಬೆನ್ನಲ್ಲಿ ತಾಯಿ ಕೊಟ್ಟ ತುತ್ತಿನ ಪೊದಿಕೆ ಹಾಕಿಕೊಂಡು ಸೊಲ್ಲಮಲೆಗೆ ಹೊರಟೇ ಬಿಟ್ಟನು. ಮಧ್ಯಾಹ್ನದ ಉರಿಬಿಸಿಲಿಗೆ ಸೊಲ್ಲಮಲೆ ಮೆಟ್ಟಿ ನಿಂತನು. ಒಂದು ತುಂಡು ಬಿದಿರು ತಂದನು. ಪೊದರು ಪೊದರು ಬಿಳಲು ಎಳೆದನು. ಅಂದು ಮಲಗಿದ್ದ ದಿಣ್ಣೆಯಲ್ಲಿ ಕೂತು ಅತ್ತರಿಗೆ ಅಡಿ ಇಟ್ಟನು. ಕುತ್ತರಿಗೆ ಕೈ ಕಟ್ಟಿದನು. ಗೆರಸೆಗೆ ಮೂಲೆ ತಿರುಗಿಸಿದನು. ಕುಡುಪುಗೆ ಬಿಳಲು ಸುರುಟಿದನು. ಹತ್ತೂರು ಸುತ್ತಿ ಕಸುಬು ಮಾರಿದನು. ಅಲ್ಪ ಕಾಲ ಅಜ್ಞಾತನಾದನು!

ಇತ್ತ ಬಾಳಿಕೆಯಲ್ಲಿ ಮೂರು ತಿಂಗಳಲ್ಲಿ ಮರಳಿ ಬರುವೆನೆಂದು ಮಾತು ಕೊಟ್ಟಿರುವ ತನಿಯ, ಇನ್ನೂ ಬಾರದಿರುವುದರಿಂದ ತಾಯಿ ಕಂಗಾಲಾಗಿದ್ದರು. ದಿನವೂ ಬಾಗಿಲಲ್ಲಿ

ನಿಂತು ತನಿಯನ ಬರುವಿಕೆಗಾಗಿ ಕಾಯುತ್ತಿದ್ದರು. ಅತ್ತ ಮತ್ತೆಂದೂ ಬಾಳಿಕೆಗೆ ಮರಳದೆ ಸೊಲ್ಲಮಲೆಯಲ್ಲೇ ಅದೃಶ್ಯನಾಗಬೇಕೆಂದುಕೊಂಡರೂ ತನಿಯನಿಗೆ ಸಾಕು ತಾಯಿಯ ನೆನಪು ಸದಾ ಕಾಡುತ್ತಿತ್ತು. ಕೊಟ್ಟಮಾತು, ಅನ್ನದ ಋಣ ನೆನಪಾಗಿ ಮತ್ತೆ ಕುತ್ತಾರುಪದವು ಹತ್ತಿದನು. ಬಾಳಿಕೆ ಸೇರಿದನು. ತಾಯಿ ತನ್ನ ಅಗಲಿಕೆಯಿಂದಾಗಿ ನೊಂದಿರುವುದನ್ನು ಕಂಡು ವ್ಯಥೆಪಟ್ಟನು. ತನಿಯನ ದನಿ ಕೇಳಿ ಹಸುಗಳು ಕಿವಿ ಅಗಲಿಸಿ, ಆತನನ್ನು ಕರೆದವು. ಕೋಳಿಗಳು ಕಾಲಡಿ ಆಡಿದವು, ನಾಯಿ, ಬೆಕ್ಕು ಇವನ ಸುತ್ತಲೇ ಸುಳಿದಾಡಿದವು. ಆತ ಮಾತ್ರ ಎಂದಿನಂತೆ ಹಸುಗಳನ್ನು ಗುಡ್ಡದಲ್ಲಿ ಮೇಯಿಸಲು ಅಣಿಯಾದನು. ಕೋಳಿಗೆ ಕಾಳು, ನಾಯಿ ಬೆಕ್ಕುಗಳಿಗೆ ಅನ್ನವನ್ನು ಹಾಕಿ, ಹಟ್ಟಿಗೆ ತೆರಳಿ ದನಗಳ ಬೆನ್ನು ಸವರಿದನು. ಅಪ್ಪೆ ಕೊಟ್ಟ ಗಂಜಿ ಕುಡಿದು, ದನಕರುಗಳೊಂದಿಗೆ ಕುತ್ತಾರು ಕಡೆಗೆ ನಡೆದನು.

ಬಾಳಿಕೆಯಲ್ಲಿ ತನಿಯನ ಬೆಳವಣಿಗೆಯ ಬಗ್ಗೆ ನಾಲ್ಕೂ ದಿಕ್ಕುಗಳಲ್ಲಿ ಸುದ್ದಿಯಾಗಿತ್ತು. ಇವನ ಆಗಮನದ ಬಳಿಕ ಬಾಳಿಕೆಯಲ್ಲಿ ಕಂಡುಬರುವ ಬದಲಾವಣೆಗಳಿಗೆ ದಂಗಾದ ಮಂದಿ ಒಳಗೊಳಗೆ ಹೊಟ್ಟೆಯುರಿಸಿಕೊಂಡರು. ಬಾಳಿಕೆಯಂತಹ ಬಿಲ್ಲವ ಮನೆತನದಲ್ಲಿ ಕೊರಗನೊಬ್ಬನ ಏಳಿಗೆಯನ್ನು ಕೆಲವೊಬ್ಬರು ಸಹಿಸದಾದರು. ಅವರೆಲ್ಲ ಸೇರಿ ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯುವ ತಂತ್ರಗಾರಿಕೆಗೆ ತೊಡಗಿದರು.

ಕದಿರೆಯ ಮಂಜುನಾಥ ದೇವರ ವರ್ಷಾವಧಿ ಜಾತ್ರೆಗೆ ದಿನ ನಿಗದಿಯಾಗಿತ್ತು. ಜಾತ್ರೆಗೆ ಎಣಸೂರು ಬಾಳಿಕೆಯಿಂದ ಪ್ರತೀವರ್ಷದಂತೆ ಹಸಿರು ಹೊರೆಕಾಣಿಕೆ ಸಲ್ಲಿಸುವುದಿತ್ತು. ಆದರೆ ಈ ಬಾರಿ ಹೊರೆ ಹೊರಲು ಊರವರು ನಿರಾಕರಿಸಿದರು. ಆಳುಗಳಿಲ್ಲ ಎಂದು ಬೈದೆದಿ ಚಿಂತೆಗೊಳಗಾದರು. ಆಗ ಹೊರೆ ಹೊರಲು, ಹೊರಗಿನ ಆಳುಗಳೇಕೆ? ಮನೆಯ ಆಳು ತನಿಯನಿದ್ದಾನಲ್ಲ, ಅವನನ್ನೇ ಹೊರಿಸೋಣ ಎಂದು ಕೆಲವರು ಬಿಟ್ಟಿ ಸಲಹೆ ನೀಡಿದರು. ಈ ಎಲ್ಲಾ ಬೆಳವಣಿಗೆಗಳನ್ನು ತನಿಯ ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ತನ್ನನ್ನು ಮುಗಿಸಲು ಪ್ರಯತ್ನಗಳಾಗುತ್ತಿರುವ ಬಗ್ಗೆಯೂ ಆತನಿಗೆ ಸುಳಿವು ಸಿಕ್ಕಿರಬೇಕು!!

"ಹೊರೆ ಹೊರಲು ನಾನು ಸಿದ್ಧ. ಆದರೆ ಹೊತ್ತ ಹೊರೆಯನ್ನು ಇಳಿಸಿ ಮತ್ತೆ ಬಾಳಿಕೆಗೆ ಮರಳಿ ಬರುವೆನೆಂದು ಹೇಳಲಾರೆ" ಎಂದು ಆತ ತಾಯಿಯ ಮುಂದೆ ಕಣ್ಣೀರು ಹಾಕುತ್ತಾನೆ. "ನೀನು ಒಲ್ಲೆನೆಂದರೆ ನಾನು ಒತ್ತಾಯಿಸುವುದಿಲ್ಲ, ಬೇರೆ ಆಳುಗಳನ್ನು ನೋಡೋಣ" ಎಂದು ತಾಯಿ ಸಾಂತ್ವಾನ ಹೇಳಿದರು. "ಇಲ್ಲ... ತಾಯಿ, ನಾನೇ ಹೊರೆ ಹೊರುತ್ತೇನೆ. ಆದದ್ದು ಆಗಲಿ... ಏಳು ಮಂದಿಯ ಅನ್ನ, ಏಳು ಮುಡಿ ಭತ್ತ, ಏಳು ಜನರ ವೀಳ್ಯ ಕೊಡಿ" ಎಂಬುವುದಾಗಿ ತನಿಯ ಹೇಳಿದಾಗ ತಾಯಿ ಒಪ್ಪಿಕೊಂಡರು. ಒಂದು ಅಡಿಕೆಮರ ಏರಿದವನು, ಎಪ್ಪತ್ತು ಮರಗಳಿಗಾಗಿ, ಒಂದು ತೆಂಗಿನ ಮರ ಹತ್ತಿದವನು, ಎಪ್ಪತ್ತುಮರವೇರಿ ಅಡಿಕೆ, ಹಿಂಗಾರ, ಸೀಯಾಳ, ಸಿರಿ ಕೀಳುತ್ತಾನೆ. ಏಳು ಮಂದಿಯ ಹೊರೆಯನ್ನು ಒಂದೇ ಹೊರೆಯಾಗಿ ಕಟ್ಟುತ್ತಾನೆ.

ತಾಯಿ ಕೊಟ್ಟ ಅನ್ನವನ್ನು ಉಂಡು, ಮೊದಲಾಗಿ ಏಳು ಮುಡಿ ಭತ್ತವನ್ನು ಕುತ್ತಾರು

ಪದವಿನ ಕುಲಬಾಂಧವರಲ್ಲಿಗೆ ತಲುಪಿಸುತ್ತಾನೆ. ಬಾಳಿಕೆಗೆ ಬಂದು ಹೊರೆ ಹೊತ್ತು ಕದಿರೆ ಮಂಜುನಾಥ ದೇವರ ಸನ್ನಿಧಾನಕ್ಕೆ ಹೊರಟು ನಿಲ್ಲುತ್ತಾನೆ. ಮತ್ತೊಮ್ಮೆ ಹಿಂದಿರುಗಿ ತಾಯಿ ಬೈದೆದಿಯನ್ನು ನೋಡುತ್ತಾನೆ. ದುಃಖ ತಡೆಯಲಾರದೆ ಬಿಕ್ಕಿಬಿಕ್ಕಿ ಅಳುತ್ತಾನೆ. "ತಾಯಿ ನಾನೀಗ ನಿಮಗೆ ಮತ್ತು ಮನೆಗೆ ಬೆನ್ನುಹಾಕಿ ಹೊರಡುತ್ತಿರುವೆನು. ಆದರೆ ಇತ್ತ ಮುಖ ಮಾಡಿಕೊಂಡು ಮತ್ತೆ ಈ ಮನೆಗೆ ಬರುವೆನೆಂದು ನಂಬಬೇಡಿ" ಎಂದು ಗದ್ಗದಿತನಾಗಿ ಹೇಳುತ್ತಾನೆ. ತಾಯಿ ಮುಖ ನೋಡಲಾರದೆ ಮುಂದೆ ಹೆಜ್ಜೆ ಹಾಕಿಯೇ ಬಿಟ್ಟನು. ಏಳೇ ಏಳು ಹೆಜ್ಜೆಗೆ ದೇವಸ್ಥಾನದ ಬಾಕ್ಯಾರು ಗದ್ದೆ ತಲುಪುತ್ತಾನೆ.

ದೇವಸ್ಥಾನದ ದ್ವಾರಪಾಲಕರಾದ ಮೈಸಂದಾಯ ಹಾಗೂ ಕಿನ್ನಿಕೊಡಂಗೆನಾರು ತನಿಯನನ್ನು ತಡೆಯುತ್ತಾರೆ. "ಕಾಡ ಕೊರಗೆ ಹೊರೆ ತರುವುದಾದರೆ ದೇವಸ್ಥಾನದ ಹೊರಗಡೆಯೇ ಹೊರೆ ಇಳಿಸಬೇಕು, ಆತ ದೇವಸ್ಥಾನದ ಒಳಗೆ ಪ್ರವೇಶಿಸುವಂತಿಲ್ಲ" ಎಂದು ಕಟುವಾಗಿ ನುಡಿದರು. ತನಿಯನ ಪಿತ್ತ ಮತ್ತೆ ನೆತ್ತಿಗೇರಿತು. "ನಾನು ಕಾಡಕೊರಗ, ನಾನು ತರುವ ಹೊರೆ ಆಗುವುದಿದ್ದರೆ ನಾನ್ಯಾಕೆ ಬೇಡ?" ಎಂದು ಪ್ರಶ್ನಿಸಿದನು. ದ್ವಾರಪಾಲಕರು ತನಿಯನಿಂದ ಇಂತಹ ಮಾತು ನಿರೀಕ್ಷಿಸಿರಲಿಲ್ಲ. ಪರಸ್ಪರ ಮಾತಿಗೆ ಮಾತು ಬೆಳೆಯಿತು. ಹ್ಯೊ ಕೈ ಆಗುವಷ್ಟರಲ್ಲಿ ತನಿಯ ತನ್ನ ತಲೆಯ ಹೊರೆಯನ್ನು ಎತ್ತಿ ದೇವಸ್ಥಾನದ ಒಳಗೆ ಬಿಸಾಡುತ್ತಾನೆ. ಅದು ಗರ್ಭಗುಡಿಯ ಪಕ್ಕದಲ್ಲಿ ಹೋಗಿ ಬೀಳುತ್ತದೆ. ಅವಮಾನದಿಂದ ಕಂಗೆಟ್ಟ ಬಾಲಕ ದೇವಸ್ಥಾನದ ಪಕ್ಕಕ್ಕೆ ತೆರಳಿ ಒಂದು ಮರದ ನೆರಳಿನಲ್ಲಿ ಕೂರುತ್ತಾನೆ. ಒಂದಲ್ಲ ಒಂದು ದಿನ ಈ ದೇವಸ್ಥಾನದ ಒಳಗೆ ಪ್ರವೇಶ ಮಾಡಿಯೇ ಮಾಡುತ್ತೇನೆ, ಎಂಬುವುದಾಗಿ ಮನದಲ್ಲೇ ನಿರ್ಣಯಿಸಿಕೊಂಡನು. ದೇವಸ್ಥಾನದ ಕಡೆಗೊಮ್ಮೆ ಕಣ್ಣೆತ್ತಿ ನೋಡಿದಾಗ ಅಲ್ಲೊಂದು ಕೈಪುರೆ(ಮಾಫಲ) ಮರ ಕಂಡಿತು. ತಾಯಿ ಮೈರೆ ಬೈದೆದಿಗೆ ಮಾಫಲದ ಹಣ್ಣಿನ ಉಪ್ಪಡು (ಉಪ್ಪಿನಕಾಯಿ) ಎಂದರೆ ತುಂಬಾ ಇಷ್ಟ! ಅವರಿಗಾಗಿ ಒಂದಾದರೂ ಹಣ್ಣು ಕೊಂಡೊಯ್ಯುತ್ತೇನೆಂದು ಆ ಮರವನ್ನು ಏರುತ್ತಾನೆ.

ಮಂಜುನಾಥನ ಮಹಿಮೆಯೋ, ತನಿಯನ ಹಣೆಬರಹವೋ ಮರದ ಒಂದು ರೆಂಬೆ ದೇವಸ್ಥಾನದ ಒಳಾಂಗಣದತ್ತ ಬಾಗಿಕೊಂಡಿತ್ತು. ಆ ಕೊಂಬೆಯ ಕಾಯಿ ಕೀಳಲೆಂದು ಅತ್ತ ಕೈಚಾಚಿದರೆ, ಹೆಗ್ಗೆ ಮುರಿದು ಆತನೂ ಅಂಗಣದೊಳಗೆ ಬೀಳುತ್ತಾನೆ. ಆಗಲೇ ಜಗಳವಾಡಿ ಸಿಟ್ಟುಗೊಂಡಿದ್ದ ದ್ವಾರಪಾಲಕರು ಇತ್ತ ದೌಡಾಯಿಸುತ್ತಾರೆ. ಹಿಂದೆ ಮುಂದೆ ನೋಡದೆ ಸುರಿಯ(ಚೂರಿ)ದಿಂದ ತಿವಿಯುತ್ತಾರೆ. ದೇವಸ್ಥಾನದ ಅಂಗಣದಲ್ಲೇ ತನಿಯನ ಪ್ರಾಣಪಕ್ಷಿ ಹಾರಿಹೋಗುತ್ತದೆ. ಆತನ ಹೆಣವೂ ಇತರರ ಕಣ್ಣಿಗೆ ಬೀಳದಂತೆ ಮಾಯ ಮಾಡಲಾಗುತ್ತದೆ. ದೇವಳ ಪ್ರವೇಶದಿಂದಾಗಿ ತನಿಯ ಮಾಯವಾದನು ಎಂಬ ಕತೆಯನ್ನು ಸಮಾಜದ ಮುಂದೆ ಹರಿಯಬಿಡಲಾಯಿತು. ಕ್ರಮೇಣ ವಿಷಯ ತಿಳಿದ ಕುತ್ತಾರುಪದವಿನ ಕುಲ ಬಾಂಧವರು ತನಿಯನಿಗೆ ಅಗೆಲ್(ಎಡೆ ಇಟ್ಟು) ಬಡಿಸಿ ಮೊದಲ ಬಾರಿಗೆ ತಮ್ಮ ಕುಟುಂಬದ ಹಿರಿಯರೊಂದಿಗೆ ಸೇರಿಸಿಕೊಂಡರು. ಮುಂದೆ ಪ್ರತಿವರ್ಷ ನಿರ್ದಿಷ್ಟ

ದಿನದಂದು, ಅನ್ನ, ಕಳ್ಳು ಎಡೆ ಇಡುವ ಸಂಪ್ರದಾಯ ಬೆಳೆಯಿತು. ಕುತ್ತಾರಿನಲ್ಲಿ ಆರಂಭಗೊಂಡ ಕೊರಗ ತನಿಯನ ಅಗೆಲ್ ಬಡಿಸುವ ಕ್ರಮವು, ಮುಂದುವರಿದು ಇಡೀ ಸಮುದಾಯವೇ ತನಿಯನನ್ನು ಕುಲದೈವದೆಂದು ಪರಿಗಣಿಸಿ ಆರಾಧಿಸತೊಡಗಿತು. ತನಿಯನ ಕಾರಣಿಕವನ್ನು ಅರಿತು ಇತರ ಜನಸಮುದಾಯದವರೂ ನಂಬಿ ಆರಾಧಿಸ ತೊಡಗಿದರು. ದುರಾದೃಷ್ಟವೆಂದರೆ ಕುತ್ತಾರಿನ ಕೊರಗ ಕುಟುಂಬಗಳು ಅಲ್ಲಿಂದ ಸ್ಥಳಾಂತರಗೊಂಡ ನಂತರ ಆ ಜಾಗೆ ಬೇರೆಯವರ ಪಾಲಾಯಿತು. ಇದೀಗ ಆ ಸ್ಥಳವನ್ನು ಕೊರಗಜ್ಜನ (ಕೊರಗ ತನಿಯನ) ಮೂಲ ಸ್ಥಾನವೆಂದು ಹೇಳಲಾಗುತ್ತದೆ. ವಾಸ್ತವವಾಗಿ ತನಿಯನು ಮಾಯವಾಗುವ ವೇಳೆಗೆ ಆತನ ವಯಸ್ಸು 25 ವರ್ಷ ಮೀರಿರಲಾರದು ಎಂದು ಜಾನಪದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅದಾಗ್ಯೂ ಇಂದಿನ ಪೀಳಿಗೆಯವರು ತನಿಯನನ್ನು ಅಜ್ಜ(ಕೊರಗಜ್ಜ) ಎನ್ನುವುದರಲ್ಲಿ ತಪ್ಪೇನೂ ಇಲ್ಲ. ಈ ಕೊರಗ ತನಿಯ ಅಥವಾ ಕೊರಗಜ್ಜ ಈ ಸಮುದಾಯದಲ್ಲಿ ಬಾಳಿ, ನಂತರ ಅಸಹಜ ರೀತಿಯ ಅಂತ್ಯಕ್ಕೆ ಬಲಿಯಾಗಿರುವ ಹಿರಿಯವ ಅಥವಾ ಕೊರಗರ ಕುಲದೈವ. ಈತನಿಗೆ ಗೆರಸೆ ತುಂಬಾ ಅಗೆಲ್ ಬಡಿಸಿ, ಒಂದು ವೀಳ್ಯ ಇಟ್ಟು ಪ್ರಾರ್ಥಿಸಿದರೆ ಸಾಕು, ಅದೇ ಅವನ ಆರಾಧನೆ. ಕೊರಗರು ಮಾಡುತ್ತಿರುವುದು ಇಷ್ಟೆ ನಿಜವಾಗಿಯೂ ಆಡಂಬರಕ್ಕೆ ಈತ ಒಲಿಯುವುದಿಲ್ಲ. ಸರಳವಾದ ದೈವ, ಭಯಭಕ್ತಿಯಿಂದ, ಪ್ರಾಮಾಣಿಕವಾಗಿ ಮನದುಂಬಿ ಬೇಡಿಕೊಂಡರೆ ಯಾವತ್ತೂ ನಿರಾಕರಿಸುವುದಿಲ್ಲ. ಇಷ್ಟಾರ್ಥಗಳನ್ನು ಈಡೇರಿಸುತ್ತಾನೆ. ಈತನ ಕಲೆ ಕಾರಣಿಕಗಳಿಗೆ ತಲೆಬಾಗಿ ಇತರ ಸಮುದಾಯದವರೂ ಆರಾಧಿಸುತ್ತಾರೆ.

ಕುತ್ತಾರುಪದವಿನಲ್ಲಿಯೂ ಇತರ ಪರಿಶಿಷ್ಟ ಜಾತಿಯವರು ಕೊರಗಜ್ಜನ ನೇಮೋತ್ಸವ ವನ್ನು ಮಾಡುತ್ತಾರೆ. ಮೂಲತಃ ಈತ ಕೋಲ, ನೇಮಗಳನ್ನು ಸ್ವೀಕರಿಸುವ ದೈವವೇ ಅಲ್ಲ. ಆದರೂ ಇದೀಗ ಜನರು ತಮ್ಮ ಪ್ರತಿಷ್ಠೆ ಮೆರೆಸಲು ಆಡಂಬರದ ನೇಮೋತ್ಸವ ಮಾಡುತ್ತಾರೆ. ಕೆಲವು ಕಡೆ ಈ ನೇಮೋತ್ಸವಗಳಲ್ಲಿ ವೇಷಧಾರಿಯ ಮೈಗೆ ಕಪ್ಪುಬಣ್ಣ ಬಳಿದು, ಮುಖಕ್ಕೆ ಬಿಳಿಗೆರೆಗಳನ್ನು ಎಳೆದು, ಎರಡೂ ಕೈಗಳಲ್ಲಿ ಊರುಗೋಲುಗಳನ್ನು ಹಿಡಿದು ವಿಕಾರವಾಗಿ ಕುಣಿಯುತ್ತಾರೆ. ಅಸಭ್ಯ ಮಾತುಗಳೊಂದಿಗೆ ಅಪಹಾಸ್ಯ ಮಾಡಿ ನಗುತ್ತಾರೆ. ಸೊಂಟದ ಕೆಳಗಿನ ಭಾಷೆಯನ್ನು ಬಳಸಿ, ಕೊರಗಜ್ಜನನ್ನೇ ವಿಕೃತ ಕಾಮಿಯಂತೆ ಚಿತ್ರಿಸುತ್ತಾರೆ. ಇದು ಖಂಡಿತವಾಗಿಯೂ ಖಂಡನಾರ್ಹ ನಡೆಯಾಗಿದೆ. ಕೊರಗ ಸಮುದಾಯದ ಮೂಲ ನೆಲೆಗಳಲ್ಲಿ ಒಂದಾಗಿರುವ ಹಾಗೂ ತನಿಯನ ಮೂಲ (ಬಂಗೇರಣ್ಣ ಬಳಿ) ಸ್ಥಾನವಾಗಿರುವ ಆಯಿಕಲದ ಹಿರಿಯ ಅಜ್ಜಿ ಚಿಕ್ಕಿಯವರ ಪ್ರಕಾರ ಇಂದು ಕೋಲ ಕಟ್ಟುವವರ ಜನಸಂಖ್ಯೆ ಕಡಿಮೆಯಾಗಲು, ಕೊರಗ ತನಿಯನನ್ನು ಅಪಹಾಸ್ಯ ಮಾಡಿ, ಅವಮಾನಿಸುವುದೇ ಮುಖ್ಯ ಕಾರಣವಾಗಿರುತ್ತದೆ. ಕೊರಗರು ಹಾಗೂ ಕೊರಗ ತನಿಯನ ಬಣ್ಣ ನೈಜವಾದ ಕಪ್ಪು ಆಗಿದ್ದರೂ, ಆತ ಸ್ಫುರದ್ರೂಪಿ ಯಾಗಿದ್ದನು. ಉದ್ದನೆಯ ಗುಂಗುರು ತಲೆಕೂದಲನ್ನು ನೀಟಾಗಿ ಸವರಿ ಹಿಂದುಗಡೆ ಜುಟ್ಟು

ಕಟ್ಟುತ್ತಿದ್ದನು. ತಲೆಗೊಂದು ಅಡಿಕೆ ಹಾಳೆಯ ಮುಟ್ಟಾಳೆ, ಹೆಗಲಲ್ಲಿ ರಾಜ ಠೀವಿಯ ದಂಡದ ಸಂಕೇತವಾಗಿ ಆಳೆತ್ತರದ ಕರಿನೆಕ್ಕಿ ಗಿಡದ ದಂಡ(ದಂಟೆ) ಸೊಂಟಕ್ಕೊಂದು ತುಂಡು ಬಟ್ಟೆ, ಅದರ ಮೇಲೆ ರಣಹದ್ದುಗಳ ರೆಕ್ಕೆಯ ಮೂಳೆಗಳನ್ನು ಸುರಿದು ಮಾಡಿದ ಸೊಂಟಪಟ್ಟಿ, ಅದರಲ್ಲಿ ಕತ್ತಿ ಸಿಕ್ಕಿಸಿಕೊಳ್ಳಲು ಮರದ ಚಿಲಕ, ಇವಿಷ್ಟು ತನಿಯನ ನಿತ್ಯ ಉಡುಗೆ-ತೊಡುಗೆ, ಕಟ್ಟು ಮಸ್ತಾದ ದೇಹ, ನೇರ ನಡಿಗೆ, ನೇರ ನುಡಿ!

ನಂಬಿಕೆಗಳು

ನಂಬಿಕೆಗಳೇ ಕೊರಗರ ಬದುಕಿನ ಜೀವಾಳ. ಅವರು ಪ್ರಕೃತಿಯಲ್ಲಿ ಸೂರ್ಯ,ಚಂದ್ರ, ಕಲ್ಲು, ಮರಗಳನ್ನು ದೇವರೆಂದು ನಂಬಿದವರು. ಕಾಡಿನ ಕ್ರೂರ ಪ್ರಾಣಿಗಳನ್ನೂ,ಪ್ರಕೃತಿಯ ವೈಚಿತ್ರಗಳನ್ನೂ ಕಂಡು ಬೆರಗಾದವರು. ಅವುಗಳನ್ನು ಅಗೋಚರ ಮತ್ತು ಅಲೌಕಿಕ ಶಕ್ತಿಗಳೆಂದು ನಂಬಿದವರು. ಮರಗಿಡಗಳಿಗೂ ಜೀವವಿದೆ, ಅವುಗಳಿಗೂ ನೋವಿದೆ ಎಂದು ತಿಳಿದಿದ್ದರು. ಹುಲಿ, ಕರಡಿಗಳಂತಹ ಕ್ರೂರ ಪ್ರಾಣಿಗಳೂ, ಮರಗಿಡಗಳೂ ತಮ್ಮೊಂದಿಗೆ ಸಂವಹನ ನಡೆಸುತ್ತವೆ ಎಂದೂ ನಂಬಿದ್ದಾರೆ. ಸತ್ತಿರುವ ತಮ್ಮ ಬಂಧುಗಳೂ ತಮ್ಮೊಂದಿಗೆ ಇರುತ್ತಾರೆ, ಇಲ್ಲವೇ ನೆನೆದಾಗ ಬರುತ್ತಾರೆ ಎನ್ನುವ ನಂಬಿಕೆ ಇದೆ. ಹಾಗಾಗಿ ಮನೆಯಲ್ಲಿ ಯಾವುದೇ ಮಾಂಸದ ಅಡುಗೆ ಮಾಡಿದಾಗ ಸತ್ತವರಿಗೂ ಬಡಿಸಿ ಗಾಳಿಗೆ ಇಡುವ ಸಂಪ್ರದಾಯವಿದೆ. ಮಾನವನ ಪ್ರತಿಯೊಂದು ಹೆಜ್ಜೆಯನ್ನೂ ಮೇಲಿರುವ ದೇವರು (ಸೂರ್ಯ) ಗಮನಿಸುತ್ತಾನೆ. ಭೂಮಿಯ ಮೇಲೆ ಮನುಷ್ಯನ ಅತಿರೇಕಗಳು ಹೆಚ್ಚಾದಾಗ, ಸಿಡಿಲು, ಬಿರುಗಾಳಿ, ಭೂಕಂಪಗಳ ಮೂಲಕ ನಿಯಂತ್ರಿಸುತ್ತಾನೆ ಎಂದು ನಂಬುತ್ತಾರೆ. ಮೇಲಿರುವಾತನಿಂದ ದೊಡ್ಡವರು ಯಾರೂ ಇಲ್ಲ ಎಂಬುವುದಾಗಿ ಮಾತಿನ ನಡುವೆ ಧಾರಾಳವಾಗಿ ಹೇಳುತ್ತಾರೆ. ತಮ್ಮ ಗಣನೆಗೆ ನಿಲುಕದ ವಿಚಾರಗಳನ್ನು ದೇವರ ಲೀಲೆ ಎನ್ನುತ್ತಾರೆ. ಗುಡ್ಡೆಯಲ್ಲಿ ಬೆಳೆಯುವ ಕೇಪುಳ(ಕಿಷ್ಕಾರ) ಹೂವು ಹಾಗೂ ಹಲಸಿನ ಚಿಗುರೆಲೆಗಳು ಇವರಿಗೆ ಪವಿತ್ರವಾದ ವಸ್ತುಗಳು.

ಮದುವೆಯಾಗದೇ ಯಾರಾದರೂ ತೀರಿ ಹೋದರೆ ಅಂಥವರಿಂದ ಕುಟುಂಬಕ್ಕೆ ಕಂಟಕಗಳು ತಪ್ಪಿದ್ದಲ್ಲ ಎಂದು ನಂಬಿದ್ದಾರೆ. ಅದರಲ್ಲೂ ಹೆಣ್ಣು ಮಕ್ಕಳು ಅಸುನೀಗಿದರೆ ಅವರಿಗೆ ಮದುವೆ ಮಾಡಲೇಬೇಕು. ಹಾಗಾಗಿ ಹುಟ್ಟಿದ ಮಗು ಹೆಣ್ಣೋ, ಗಂಡೋ ಎಂದು ತಿಳಿದರೆ ಸಾಕು, ಅದು ತಾಯಿ ಗರ್ಭದಲ್ಲೇ ಸತ್ತಿದ್ದರೂ ಮುಂದೆ ಅದಕ್ಕೂ ಮದುವೆ ಮಾಡಬೇಕು.

ಸತ್ತವರಿಗೆ ಮದುವೆ ಮಾಡದಿದ್ದರೆ ಅಥವಾ ಅವರಿಗೆ ಎಡೆ ಇಡದಿದ್ದರೆ ಅವರಿಂದ ತುಂಬಾ ಉಪಟಳಕ್ಕೆ ಒಳಗಾಗಬೇಕಾಗುತ್ತದೆ ಎಂದೇ ಭಾವಿಸುತ್ತಾರೆ ಹಾಗೂ ಇನ್ನಿಲ್ಲದಂತೆ ವ್ಯಥೆ ಪಟ್ಟುಕೊಂಡು ಚಡಪಡಿಸುತ್ತಾರೆ. ಶಿಕ್ಷಣದ ಕೊರತೆಯಿಂದಾಗಿ ಯಾವುದೇ ವಿಚಾರ ಗಳನ್ನು ಪರಾಮರ್ಶೆ ಮಾಡದೆ, ಇದ್ದದ್ದನ್ನು ಇದ್ದ ಹಾಗೆ ನಂಬಿ ಬಿಡುವ ಮುಗ್ಧಜೀವಿಗಳು ಈ ಕೊರಗರು. ತಮಗೆ ಯಾರಾದರೂ ಮೋಸ ಮಾಡಿದರೂ ಯಾವುದೇ ಪ್ರತಿಕ್ರಿಯೆ

ವ್ಯಕ್ತಪಡಿಸುವುದಿಲ್ಲ. ಯಾಕೆಂದರೆ ಮೋಸ ಮಾಡಿದವರನ್ನು ದೇವರು ನೋಡಿಕೊಳ್ಳುತ್ತಾನೆ ಎಂದು ನಂಬುತ್ತಾರೆ. ಇಂದು ಈ ಕಾಡುಕೊರಗರು ಕಾಡಾ ನಾಗಮೂಲವನ್ನು ಹುಡುಕಿಕೊಂಡು ಊರೂರು ಅಲೆಯುತ್ತಿದ್ದಾರೆ. ವಾಸ್ತವವಾಗಿ ಇವರು ನಾಗನ ಆರಾಧಕರೂ ಅಲ್ಲ. ತಮ್ಮ ಬುಡಮೂಲವನ್ನೇ ನಾಗಮೂಲವೆಂದು ಭ್ರಮಿಸಿ ಅದರ ಹುಡುಕಾಟ ನಡೆಸುತ್ತಿರುವುದು ವಿಪರ್ಯಾಸವೇ ಸರಿ! ಸುಟ್ಟು ತಿಂದವರು ಹಾಲೆರೆದು ಕೈ ಜೋಡಿಸಿದರೆ ಫಲ ಸಿದ್ಧಿಸುವುದೇ?

ಗುರಿಕಾರ ಮತ್ತು ನ್ಯಾಯ ಪದ್ಧತಿ

ಈ ಸಮುದಾಯದಲ್ಲಿ ಪ್ರತಿಯೊಂದು ಬಲೆಪು(ಹಾಡಿ)ಗೂ ಮಾತೃಮೂಲೀಯ ಕೂಡು ಕುಟುಂಬದ ಒಬ್ಬೊಬ್ಬ ಕೊಡ್ತಯಿ ಅಥವಾ ಗುರಿಕಾರ ಇರುತ್ತಾನೆ. ಈ ಗುರಿಕಾರನಿಗೆ ಕುಟುಂಬದಲ್ಲಿ ಅವನದ್ದೇ ಆದ ಹಲವು ಜವಾಬ್ದಾರಿಗಳಿರುತ್ತವೆ. ನಿರ್ದಿಷ್ಟ ಕರ್ತವ್ಯಗಳ ಜೊತೆಗೆ ವಿಶೇಷವಾದ ಸ್ಥಾನಮಾನಗಳೂ ಇರುತ್ತವೆ. ಮಾತೃ ಕುಟುಂಬದ ಕುಲದೈವ ಸೂಚಿಸುವ ಅಥವಾ ಕೂಡುಕುಟುಂಬಿಕರ ಸಮ್ಮುಖದಲ್ಲಿ ಆಯ್ಕೆಯಾದ ವ್ಯಕ್ತಿಯು ಆ ಬಲೆಪಿನ ಕೊಡ್ತಯಿ ಅಥವಾ ಗುರ್ಕಾರನಾಗುತ್ತಾನೆ.

ಕುಲದೈವ ದರ್ಶನ(ದೈವಾಹ್ವಾನ) ಬರುವ ವೇಳೆಗೆ ಆ ಕುಟುಂಬದ ಸರ್ವ ಪುರುಷ ಸದಸ್ಯರು ಶುಚಿಯಾಗಿ ದೈವದ ಮುಂದೆ ನಿಲ್ಲುತ್ತಾರೆ. ದೈವವು ಎಲ್ಲರ ಮೇಲೂ ಕಿಷ್ಕಾರ ಹೂವು ಹಾಗೂ ಶುದ್ಧ ನೀರನ್ನು ಚಿಮುಕಿಸುತ್ತದೆ. ನೀರು ಬಿದ್ದಾಗ ಯಾರು ವಿಚಿತ್ರವಾಗಿ ವರ್ತಿಸುತ್ತಾರೋ(ಬೀಳುವುದು; ಕಂಪಿಸುವುದು; ಬೊಬ್ಬೆ ಹಾಕುವುದು ಇತ್ಯಾದಿ)ಅವರನ್ನೇ ದೈವವು ಗುರ್ಕಾರನನ್ನಾಗಿ ಆರಿಸಿದೆ ಎಂದು ನಿರ್ಧಾರವಾಗುತ್ತದೆ. ಒಂದು ವೇಳೆ ಒಂದಕ್ಕಿಂತ ಹೆಚ್ಚು ಜನರಿಗೆ ಈ ರೀತಿಯ ಅನುಭವಗಳಾದರೆ, ಆಗ ದೈವವೇ ಕುರ್ಪಕೊಟ್ಟು (ಹೂವಿನ ಪ್ರಸಾದ) ಯಾರಿಗೆ ಬೆಸಸಂಖ್ಯೆಯಲ್ಲಿ ಕುರ್ಪ ಸಿಕ್ಕಿವೆಯೋ ಅವರೇ ಗುರ್ಕಾರನಾಗುತ್ತಾನೆ. ದೈವ ಯಾವತ್ತೂ ಬಾಯಿ ಬಿಟ್ಟು ನಿರ್ಧಾರ ಹೇಳುವುದಿಲ್ಲ. ಕೆಲವು ಕಡೆ ಕೂಡು ಕುಟುಂಬಿಕರೆಲ್ಲ ಹತ್ತಿರದ ನೆಂಟರಿಷ್ಟರನ್ನು ಕರೆದು ಗುರ್ಕಾರನನ್ನು ಆರಿಸುವ ಕ್ರಮವೂ ಇದೆ. ನ್ಯಾಯ ಕೂಟದಂತೆಯೇ ಕುಳಿತು, ಅನುಭವ ಇರುವ ಯಾರಾದರೂ ಒಬ್ಬ ವ್ಯಕ್ತಿಯ ಹೆಸರನ್ನು ಸೂಚಿಸಿದರೆ ಉಳಿದವರು ಅನುಮೋದಿಸುತ್ತಾರೆ. ಇಲ್ಲವೇ ಇನ್ನೊಬ್ಬನ ಹೆಸರು ಸೂಚಿಸಿ ಅನುಮೋದನೆ ಪಡೆಯುತ್ತಾರೆ. ಪರವೂರ ನೆಂಟರು ಸಾಕ್ಷಿಗಳಾಗುತ್ತಾರೆ. ಈ ರೀತಿಯಲ್ಲಿ ಸೂಚನೆ ಮತ್ತು ಅನುಮೋದನೆಯ ಕ್ರಮವು ಪ್ರಜಾಪ್ರಭುತ್ವ ಮಾದರಿಯೂ ಆಗಿದ್ದು, ಅನುಭವಸ್ಥ ಗುರಿಕಾರನನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ಇದೀಗ ಎಲ್ಲೆಲ್ಲೂ ದೈವ ಸೂಚಿತ ವ್ಯಕ್ತಿಗಳೇ ಕೊಡ್ತಾಯಿ ಆಗುತ್ತಿರುವುದರಿಂದ ಅನುಭವ, ಸಂಬಂಧ ಹಾಗೂ ಪ್ರಾಯಗಳು ಗಣನೆಗೆ ಬರುವುದಿಲ್ಲ. ಪರಿಣಾಮವಾಗಿ ಕುಟುಂಬ ವ್ಯವಸ್ಥೆಯ ನಿಯಂತ್ರಣ ಕಳೆದುಕೊಂಡು ಅತಂತ್ರವಾಗುತ್ತಿರುವುದು ಕಂಡು ಬರುತ್ತದೆ. ಆಯ್ಕೆಯು ದೈವೇಚ್ಛೆಯಾಗಿರುವುದರಿಂದ ಪ್ರಶ್ನಾತೀತವೂ ಆಗಿರುತ್ತದೆ. ಇಲ್ಲಿ ಕೆಲವೊಮ್ಮೆ ಗುರ್ಕಾರನ ಸರ್ವಾಧಿಕಾರ ಚಲಾವಣೆಯಾಗಿ ಕಲಹಗಳೂ ಉಂಟಾಗುವುದಿದೆ.

ಈ ಗುರ್ಕಾರನಿಗೆ ಬಲೆಪಿನಲ್ಲಿ ಒಂದು ಮಗುವು ಹುಟ್ಟಿದಾಗಿನಿಂದ ಆರಂಭಗೊಂಡು;

ಆ ಮಗು ಬೆಳೆದು ದೊಡ್ಡದಾಗುವ ವರೆಗಿನ ಮತ್ತು ಅಂತಿಮ ಕ್ರಿಯೆಯಲ್ಲೂ ಪ್ರಮುಖವಾದ ಪಾತ್ರಗಳಿವೆ. ಕುಟುಂಬದಲ್ಲಿ ಮಗುವೊಂದು ಹುಟ್ಟಿದರೆ, ಆ ಸುದ್ದಿಯನ್ನು ಮಗುವಿನ ತಂದೆಯ ಕಡೆಯವರಿಗೆ ತಲುಪಿಸುವ ಏರ್ಪಾಡು ಮಾಡಬೇಕು. ಬಾಣಂತನ ಆಚರಣೆ, ವಿಧಿಗಳನ್ನು ಪೂರೈಸಲು ಮಾರ್ಗದರ್ಶನ ನೀಡಬೇಕು. ನಾಮಕರಣದ ದಿನ, ವಿಧಿಗಳನ್ನು ನಿರ್ಧರಿಸಬೇಕು. ಹೆಣ್ಣು ಮಗು ಮೈನೆರೆದಾಗಿನ ಆಚರಣೆ, ವಧು ಹುಡುಕಾಟ, ಮದುವೆ, ಮುಹೂರ್ತ, ಔತಣ, ಹೆರಿಗೆ ಹಾಗೂ ಮರಣ, ಅಂತಿಮ ಕ್ರಿಯೆ ಇತ್ಯಾದಿ ಕಾರ್ಯಗಳಲ್ಲೂ ಗುರ್ಕಾರನದ್ದೇ ನೇತೃತ್ವ ಮತ್ತು ಮಾರ್ಗದರ್ಶನ. ಕುಲದೈವ ದರ್ಶನ, ಅಗೆಲ್ ತಂಬಿಲದಂತಹ ವಾರ್ಷಿಕ ಆಚರಣೆಗಳಲ್ಲೂ ಈತನೇ ಸೂತ್ರಧಾರಿ. ಕುಟುಂಬದಲ್ಲಿ ಯಾವುದೇ ಕಲಹ, ಭಿನ್ನಾಭಿಪ್ರಾಯ, ಘರ್ಷಣೆ ಅಥವಾ ಅನಾಚಾರಗಳು ನಡೆಯದಂತೆ ನೋಡಿಕೊಳ್ಳುವುದು, ಒಂದು ವೇಳೆ ಅಂತಹ ಘಟನೆಗಳು ನಡೆದೇ ಹೋದರೆ ಅವುಗಳನ್ನು ನ್ಯಾಯ ಪಂಚೇತಿಕೆ, ರಾಜಿ ಸಂಧಾನಗಳ ಮೂಲಕ ಇತ್ಯರ್ಥ ಪಡಿಸುವ ಗುರುತರ ಹೊಣೆಯೂ ಗುರ್ಕಾರನ ಮೇಲಿದೆ. ಹಿಂದಿನ ಕಾಲದಲ್ಲಿ ಅಜಲು, ಬೇಟೆ ಅಥವಾ ಕುಲಕಸುಬಿನ ಮಾರಾಟ ಕ್ಷೇತ್ರಗಳ ವ್ಯಾಪ್ತಿಯನ್ನೂ ಇದೇ ಗುರ್ಕಾರನು ನಿರ್ಧರಿಸಬೇಕಿತ್ತು.

ಸಮುದಾಯದಲ್ಲಿ ಸಾಮಾನ್ಯವಾಗಿ ಗಂಡ ಹೆಂಡತಿ ನಡುವಿನ ಭಿನ್ನಾಭಿಪ್ರಾಯ, ನ್ಯಾಯ ಪಂಚೇತಿಕೆಯು ವಿಷಯವಾಗಿತ್ತು. ಇಂತಹ ವಿಷಯಗಳನ್ನು ಎರಡೂ ಕಡೆಯ ಗುರ್ಕಾರರು ಕೂತು ಚರ್ಚಿಸಿ, ಇತ್ಯರ್ಥ ಪಡಿಸುತ್ತಿದ್ದರು. ಪ್ರತಿಯೊಂದು ಬಲೆಪಿನಲ್ಲಿಯೂ ಕೊರಗ ತನಿಯನ ಕಲ್ಲಿನ ಪಕ್ಕದಲ್ಲಿ ಮರದ ಬುಡದಲ್ಲಿ ನ್ಯಾಯ ಪಂಚೇತಿಕೆಯ ಕಟ್ಟೆಗಳು (ಮೀಸಲಿರಿಸಿದ ಸ್ಥಳ) ಇದ್ದವು. ಅಲ್ಲಿಯೇ ನ್ಯಾಯ ತೀರ್ಮಾನಗಳಾಗುತ್ತಿದ್ದವು. ಸಾಮಾನ್ಯವಾಗಿ ಅಂದಿನ ಬಾಜೆಲ್‌ದ ಖರ್ಚು(ಶೇಂದಿ ಕುಡಿಯಲು ಬೇಕಾಗುವ ಖರ್ಚು) ಭರಿಸುವುದು ಹಾಗೂ ಕೊರಗತನಿಯನಿಗೆ ಒಂದು ಕೋಳಿಯನ್ನು ತಪ್ಪು ದಂಡವಾಗಿ ನೀಡುವ ಸರಳ ಶಿಕ್ಷೆಯನ್ನು ತಪ್ಪು ಮಾಡಿದಾತನಿಗೆ ವಿಧಿಸಲಾಗುತ್ತಿತ್ತು. ಆದರೆ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ರುಜುವಾತು ಆದಲ್ಲಿ ಅಂಥವರನ್ನು ಸಮುದಾಯದಿಂದಲೇ ಬಹಿಷ್ಕರಿಸುವ ಕಠಿಣ ಶಿಕ್ಷೆಯೂ ಆಗುತ್ತಿತ್ತು. ಈಗ ಬಹಿಷ್ಕಾರ ದಂತಹ ಶಿಕ್ಷೆಗಳು ಇಲ್ಲದಿದ್ದರೂ ಸಾವಿರಾರು ರೂಪಾಯಿಗಳನ್ನು ದಂಡವಾಗಿ ಪಡೆಯಲಾಗುತ್ತದೆ. ಆ ಮೂಲಕ ಅನೈತಿಕ ಚಟುವಟಿಕೆಗಳು ನಡೆಯದಂತೆ ಈ ನ್ಯಾಯ ಪಂಚೇತಿಕೆಗಳು ಕಡಿವಾಣ ಹಾಕುತ್ತಿವೆ. ಹಾಗಾಗಿ ಈ ನ್ಯಾಯ ಕೂಟಗಳು ಸಮುದಾಯದ ಘನತೆಯನ್ನು ಉಳಿಸುವ ಪ್ರಯತ್ನವನ್ನು ಮಾಡುತ್ತಿವೆ.

ಹಿಂದೆ ಒಂದೇ ಬಳಿಯೊಳಗೆ ಮದುವೆಯಾದರೆ ಅಥವಾ ಅವರು ಓಡಿ ಹೋದರೆ ಅಂತವರನ್ನೂ ಸಮುದಾಯದಿಂದ ಬಹಿಷ್ಕರಿಸಲಾಗುತ್ತಿತ್ತು. ಇಂಥವರನ್ನು ಮತ್ತೆ ಕುಟುಂಬದೊಳಗೆ ಸೇರಿಸಿಕೊಳ್ಳಬೇಕಾದರೆ, ಆ ಜೋಡಿಯಲ್ಲಿ ಯಾರಾದರೂ ಒಬ್ಬರು ತಮ್ಮ ಬಳಿ(ಬೆಡಗು)ಯನ್ನು ಬದಲಾಯಿಸಿಕೊಳ್ಳಬೇಕಿತ್ತು. ಇಲ್ಲಿ ಅದಕ್ಕೂ ಅವಕಾಶ ನೀಡಿದ್ದು, ಇಂತಹ ಬಳಿ ಬದಲಾಯಿಸುವ ಕ್ರಿಯೆಗಳೂ ನಡೆಯುತ್ತಿದ್ದುವು. ಆದರೆ ಅವರನ್ನು

ಯಾರಾದರೂ ತಮ್ಮ ಬಳಿಗೆ ಸೇರಿಸಿಕೊಳ್ಳುವವರೂ ಇರಬೇಕು. ಎಲ್ಲವೂ ಸರಿಹೋದರೆ ಕೆಲವೊಂದು ವಿಧಿಗಳನ್ನು ಪೂರೈಸಿಕೊಂಡ ಬಳಿಕ ಯಾವುದಾದರೂ ಒಂದು ಬಲೆಪಿನವರು ಈ ಹುಡುಗ ಅಥವಾ ಹುಡುಗಿಯನ್ನು ತಮ್ಮ ಬಳಿಗೆ ಸೇರಿಸಿಕೊಳ್ಳುತ್ತಾರೆ. ಆ ಬಲೆಪಿನ ಗುರ್ಕಾರ ಇತರರ ಸಲಹೆ ಪಡೆದು ಈ ಕ್ರಿಯೆಯನ್ನು ನಡೆಸುತ್ತಾನೆ. ಮುಂದೆ ಈ ರೀತಿ ಸೇರಿಕೊಂಡ ಹುಡುಗಿಯ ಸಂತಾನದವರು ಸದ್ರಿ ಬಲೆಪಿಗೆ ಕೊಡ್ತರ್ ಅಥವಾ ಗುರ್ಕಾರೆ ಆಗುವ ಅವಕಾಶಗಳಿರುವುದಿಲ್ಲ. ಹೆಚ್ಚೆಂದರೆ ಆತ/ಆಕೆ ದೈವದ ದರ್ಶನ ಪಾತ್ರಿ(ದೈವಾಹ್ವಾನಿಸಿಕೊಳ್ಳುವಾತ) ಆಗಬಹುದಿತ್ತು. ನಡುಸಾಲಿನಲ್ಲಿ ಈ ರೀತಿ ತಮ್ಮ ಬಳಿಯೊಳಗೆ ಸೇರಿಸಿಕೊಂಡಿರುವ ಹಲವಾರು ಉದಾಹರಣೆಗಳು ದೊರೆಯುತ್ತದೆ. ಈ ಬಳಿ ಅಥವಾ ಬೆಡಗನ್ನು ಬದಲಿಸುವ ವಿಧಾನಗಳು ಬೇರೆಬೇರೆ ರೀತಿಗಳಲ್ಲಿ ನಡೆಯುತಿತ್ತು. ಒಂದೇ ಬೆಡಗಿನ ಜೋಡಿಯಲ್ಲಿ ಹುಡುಗಿಯನ್ನು ಇನ್ನೊಂದು ಬಳಿಯವರು ಸ್ವೀಕರಿಸುವ ಮುನ್ನ ಆ ಬಲೆಪಿನ ಕೊಡ್ತರು ಹಿರಿಯರನ್ನು ಕರೆದು ಆಕ್ಷೇಪಣೆ ಇದೆಯೇ ಎಂದು ವಿಚಾರಿಸುತ್ತಾನೆ. ತಮ್ಮ ಬಳಿಯೊಳಗೆ ಸೇರಿದ ಬಳಿಕ ಹೇಗಿರಬೇಕು, ಅವಳಿಂದ ಏನನ್ನು ನಿರೀಕ್ಷಿಸಬಹುದು ಇತ್ಯಾದಿ ವಿಚಾರಗಳನ್ನು ಚರ್ಚಿಸುತ್ತಾರೆ. ಎಲ್ಲರಿಗೂ ಒಪ್ಪಿಗೆಯಾದರೆ ಮಾತ್ರ, ಐದು ಬಳಿಗಳ ಒಬ್ಬೊಬ್ಬರನ್ನು ಕರೆಸಿಕೊಂಡು, ನಿಗದಿತ ದಿನದಂದು ಅದೇ ಗುರಿಕಾರರ ಮುಂದೆ ವಿಧಿ ನಡೆಯುತ್ತದೆ. ಕುಲದೈವವನ್ನು ಪ್ರಾರ್ಥಿಸಿ, ತೆಂಗಿನ ಸೋಗೆಯಿಂದ ಮೊದಲೇ ನಿರ್ಮಿಸಿದ್ದ ಮೂರು ಜೋಪಡಿಗಳಿಗೆ ಗುರ್ಕಾರ ಒಂದರ ನಂತರ ಒಂದಕ್ಕೆ ಬೆಂಕಿ ಹಚ್ಚುತ್ತಾರೆ. ಆ ಬೆಂಕಿಯ ನಡುವಿನಿಂದ ಈ ಹುಡುಗಿ ಒಳಹೊಕ್ಕು, ಹೊರ ಬರಬೇಕು. ಅಲ್ಲಿ ಆಕೆ ಹಾದು ಹೋಗಲು ಸಾಕಷ್ಟು ಸ್ಥಳಾವಕಾಶವಿತ್ತು. ಹೀಗೆ ಮೂರು ಬಾರಿ ಬೆಂಕಿ ಹಾದು ಬಂದ ಬಳಿಕ ಆಕೆಗೆ ಕಬ್ಬಿಣ ಕಾಯಿಸಿದ ಬಿಸಿನೀರನ್ನು ಅದೇ ಗುರ್ಕಾರ ನೀಡುತ್ತಾನೆ. ಅದನ್ನು ಕುಡಿದು ಅಲ್ಲಿದ್ದ ಊರ, ಪರವೂರ ಹಿರಿಯರ ಕಾಲಿಗೆ ಬಿದ್ದು, ಆಶೀರ್ವಾದ ಪಡೆದು ಅಧಿಕೃತವಾಗಿ ಆ ಬಲೆಪಿನ ಬಳಿಗೆ ಸೇರುತ್ತಾಳೆ. ಕೆಲವು ಕಡೆ ಬೆಂಕಿ ಹಾಯುವ ಅಥವಾ ಕಬ್ಬಿಣ ಕಾಯಿಸಿ ನೀರು ಕುಡಿಯುವುದು, ಇದರಲ್ಲಿ ಒಂದನ್ನು ಮಾತ್ರ ಮಾಡುತ್ತಾರೆ. ಈಗ ಇಂತಹ ಕ್ರಿಯೆಗಳು ನಡೆಯುವುದು ಅಪರೂಪವೇ ಸರಿ.

ನ್ಯಾಯ ಪಂಚೇತಿಕೆ

ಯಾವುದೇ ರೀತಿಯ ಕಲಹಗಳು ನ್ಯಾಯ ಪಂಚೇತಿಕೆಗಳಲ್ಲಿ ತೀರ್ಮಾನವಾಗುತ್ತಿತ್ತು. ಒಂದೇ ಬಲೆಪಿನೊಳಗಿನ ಕಲಹಗಳಾಗಿದ್ದಲ್ಲಿ ಗುರಿಕಾರನ ಸಮ್ಮುಖದಲ್ಲಿ ಇತ್ಯರ್ಥ ಪಡಿಸುತ್ತಾರೆ. ಆದರೆ ಎರಡು ಪ್ರತ್ಯೇಕ ಬಲೆಪುಗಳಿಗೆ ಸಂಬಂಧಪಟ್ಟ ವಿಚಾರವಾಗಿದ್ದರೆ (ಉದಾ: ಗಂಡ-ಹೆಂಡತಿ ಜಗಳ) ಎರಡೂ ಬಲೆಪುಗಳ ಗುರ್ಕಾರರ ಸಹಿತ ಇತರ ಮೂರು ಬಳಿಗಳ ಗುರ್ಕಾರರ ಸಮ್ಮುಖದಲ್ಲಿ ತೀರ್ಮಾನವಾಗಬೇಕು. ಸಾಮಾನ್ಯವಾಗಿ ವಂಚನೆಗೊಳಗಾದ ವ್ಯಕ್ತಿಯ ಬಲೆಪಿನವರು ನ್ಯಾಯಕೂಟವನ್ನು ಕರೆಯುವುದು

ರೂಢಿಯಾಗಿದೆ. ವಂಚನೆಗೊಳಗಾದ ವ್ಯಕ್ತಿಯ ಬಲೆಪಿನ ಗುರ್ಕಾರ, ವಂಚನೆಗೈದ ವ್ಯಕ್ತಿಯ ಗುರ್ಕಾರನಿಗೆ ನ್ಯಾಯಕೂಟದ ವೀಳ್ಯ ನೀಡುತ್ತಾನೆ. ಅದನ್ನು ಮನ್ನಿಸಿ ಆ ಗುರ್ಕಾರ ಮತ್ತು ಇತರರು ನಿಗದಿತ ದಿನಕ್ಕೆ ನ್ಯಾಯ ಪಂಚೇತಿಕೆಗೆ ಹಾಜರಾಗುತ್ತಾರೆ. ಕೂಟ ಕರೆದ ಬಲೆಪಿನವರು ಇತರ ಮೂರು ಬಳಿಗಳವರನ್ನೂ ಕರೆದಿರುತ್ತಾರೆ. ಅಗತ್ಯವಿದ್ದರೆ ಇನ್ನೊಂದು ಪಾರ್ಟಿಯೂ ತಮಗೆ ಬೇಕಾದ ಗುರ್ಕಾರರನ್ನು ಕರೆದು ತರಬಹುದು.

ಪೂರ್ವ ನಿರ್ಧರಿತ ಸ್ಥಳದಲ್ಲಿ ನಡೆಯುವ ಈ ಪಂಚೇತಿಕೆಯು ಸೌಹಾರ್ದವಾಗಿಯೇ ಆರಂಭಗೊಳ್ಳುವುದು. ಆರೋಪಿ ಸ್ಥಾನದಲ್ಲಿರುವವರನ್ನೂ ಗೌರವದಿಂದಲೇ ಬರಮಾಡಿ ಕೊಳ್ಳುತ್ತಾರೆ. ಬಾಯಾರಿಕೆ ನೀಡಿ, ಕುಶಲೋಪಚಾರದ ಬಳಿಕವೇ ಮುಂದಿನ ಕ್ರಿಯೆಗಳನ್ನು ಆರಂಭಿಸುತ್ತಾರೆ. ಎರಡೂ ಕಡೆಯವರು ಕೊರಗ ತನಿಯನ ಕಲ್ಲಿನ ಕಡೆಗೆ ತೆರಳಿ, ವೀಳ್ಯ ಇಟ್ಟು, ದೀಪ ಬೆಳಗಿಸಿ ಪ್ರಾರ್ಥಿಸಿದ ನಂತರವೇ ನ್ಯಾಯ ಕೂಟಕ್ಕೆ ಕೂರುತ್ತಾರೆ.

ಮೊದಲಾಗಿ ಎರಡೂ ಕಡೆಯವರಿಗೆ ಒಪ್ಪಿಗೆಯಾಗುವ ಮೂರನೇ ಬಳಿಯ ಗುರಿಕಾರನೊಬ್ಬನನ್ನು ಅಂದಿನ ನ್ಯಾಯಕೂಟದ ತೀರ್ಪುಗಾರರನ್ನಾಗಿ ನಿಯೋಜಿಸುತ್ತಾರೆ. ಚರ್ಚೆ ಎಷ್ಟೇ ನಡೆದರೂ, ವಾದ ಯಾರು ಮಾಡಿದರೂ, ಅಂತಿಮ ತೀರ್ಮಾನ ಈ ನಿಯೋಜಿತ ಗುರ್ಕಾರನದ್ದೇ ಆಗಿರುತ್ತದೆ. ಸೇರಿದವರೆಲ್ಲರೂ ವೃತ್ತಾಕಾರವಾಗಿ ಕೂತು, ಕೂಟ ಆರಂಭಿಸುತ್ತಾರೆ. ವಂಚನೆಗೊಳಗಾದ ವ್ಯಕ್ತಿಯ ಕಡೆಯ ಗುರಿಕಾರ ವಿಷಯ ಪ್ರಸ್ತಾಪಿಸಿ, ಇದು ನ್ಯಾಯವೇ? ಎಂದು ಪ್ರಶ್ನಿಸುತ್ತಾರೆ. ಮತ್ತೊಂದು ಕಡೆಯ ಗುರಿಕಾರ ಉತ್ತರ ಅಥವಾ ಸಮಜಾಯಿಸಿ ನೀಡುತ್ತಾನೆ. ಆ ವೇಳೆ ಚರ್ಚೆ ಬಿಸಿಯೇರಲೂಬಹುದು. ನಿಯೋಜಿತ ಗುರ್ಕಾರ ಎಲ್ಲರನ್ನೂ ವಿಚಾರಿಸಿಕೊಳ್ಳುತ್ತಾರೆ. ಬೆಂಬಲಿಗರಾಗಿ ಆಗಮಿಸಿರುವ ಇತರ ಬಲೆಪುಗಳ ಗುರಿಕಾರರ ಸಲಹೆ ಸೂಚನೆಗಳನ್ನೂ ಪಡೆಯುತ್ತಾರೆ. ಕೊನೆಗೆ ತನ್ನ ತೀರ್ಪು ನೀಡುತ್ತಾ "ಇದು ಈ ಜಾಗದ ಮಣ್ಣು ಹಾಗೂ ಕುಲದೈವಗಳಿಗೆ ತಾನು ನೀಡುತ್ತಿರುವ ಗೌರವ" ಎನ್ನುತ್ತಾ ಕೈ ಜೋಡಿಸಿ ನಮಸ್ಕರಿಸುತ್ತಾರೆ. ಅವರು ನೀಡುವ ತೀರ್ಪನ್ನು ಎಲ್ಲರೂ ಒಪ್ಪಲೇಬೇಕು. ಯಾಕೆಂದರೆ ಆತ ವಿಷಯ ತಜ್ಞನೂ, ಆ ಸಂದರ್ಭಕ್ಕೆ ಕುಲದೇವರ ಪ್ರತಿನಿಧಿಯೂ ಆಗಿರುತ್ತಾರೆ. ತಪ್ಪಿತಸ್ಥರಿಗೆ ತಪ್ಪಿನ ಗಂಭೀರತೆಯ ಆಧಾರದ ಮೇಲೆ ಶಿಕ್ಷೆಯೂ ಆಗುತ್ತದೆ.

ಒಂದು ಹಂತದವರೆಗೆ ಈ ನ್ಯಾಯ ಕೂಟಗಳು ಸುಸೂತ್ರವಾಗಿ, ಗೌರವಾನ್ವಿತ ವಾಗಿಯೂ ನಡೆಯುತ್ತಿತ್ತು. ಯಾವಾಗ ತೆಂಗಿನಮರದ ಕಳ್ಳಿನ(ಶೇಂದಿ) ಬದಲಾಗಿ ಭಟ್ಟಿಳಿಸಿದ ಸಾರಾಯಿಗೆ ಈ ಗುರ್ಕಾರರು ಶರಣಾದರೋ ಅಲ್ಲಿಂದ ಮುಂದೆ ಜನರು ಇವರ ಮಾತಿಗೆ ಬೆಲೆ ಕೊಡುವುದು ಕ್ಷೀಣಿಸತೊಡಗಿತು. ಏಕೆಂದರೆ ನ್ಯಾಯ ದಾನವು ಪಕ್ಷಪಾತವಾಗತೊಡಗಿತು. ಹೆಚ್ಚಿನ ಸಂದರ್ಭಗಳಲ್ಲಿ ಪುರುಷ ಪರವಾದ ನ್ಯಾಯವೇ ಅಂತಿಮಗೊಳ್ಳುತ್ತಿತ್ತು. ಇದರ ಪರಿಣಾಮವಾಗಿ ಜನ ಈ ಪಂಚೇತಿಕೆಯ ಬಗ್ಗೆ ನಂಬಿಕೆ ಕಳೆದುಕೊಳ್ಳಲಾರಂಭಿಸಿದರು. ಆದರೂ ಗುರ್ಕಾರ ಪದ್ಧತಿ ಹಾಗೂ ನ್ಯಾಯ ಕೂಟಗಳು ಇಂದಿಗೂ ಜೀವಂತವಿದೆ. ಎನ್ನುವುದೇ ವಿಶೇಷ!

ಕೊರಗರ ಧರ್ಮ

ಇಂದು ಹಲವಾರು ಜಾತಿ ಮತಗಳು, ಧರ್ಮ ಸಂಸ್ಕೃತಿಗಳನ್ನು ಹೊಂದಿರುವ ಈ ನೆಲದಲ್ಲಿ ನೂರಾರು ಭಾಷೆ, ಸಂಪ್ರದಾಯಗಳೂ ನೆಲೆಯಾಗಿವೆ. ಹಿಂದು, ಮುಸ್ಲಿಂ, ಪಾರಸಿ, ಸಿಖ್, ಬೌದ್ಧ, ಜೈನ, ಕ್ರೈಸ್ತ ಮುಂತಾದ ಮತಧರ್ಮಗಳಲ್ಲಿ ಕೆಲವೊಮ್ಮೆ ಅತ್ಯಂತ ಅನ್ಯೋನ್ಯ ಹೊಂದಾಣಿಕೆ, ಮತ್ತೆ ಕೆಲವೊಮ್ಮೆ ತದ್ವಿರುದ್ಧ ಸೈದ್ಧಾಂತಿಕ ಅಭಿಪ್ರಾಯಗಳು ವ್ಯಕ್ತಗೊಳ್ಳುವುದೂ ನಡೆದು ಬಂದಿದೆ. ಈ ಮೇಲಾಟದಲ್ಲಿ ಇಲ್ಲಿನ ಮೂಲನಿವಾಸಿಗಳಾದ ಕೊರಗರ ಧರ್ಮ ಯಾವುದು ಎಂಬ ಬಗ್ಗೆ ಜಿಜ್ಞಾಸೆಗಳು ಉಂಟಾಗುವುದು ಸಹಜ. ಈ ಕೊರಗರು ಆದಿವಾಸಿ(ಆದಿ ಮಾನವ ಮೂಲ) ಗಳಾಗಿರುವುದರಿಂದ ಸಹಜ ವಾಗಿಯೇ ಇವರದ್ದು ಆದಿ ಧರ್ಮವೆಂದು ಹೇಳಬಹುದು. ಆದಿ ಧರ್ಮ ಎಂದರೇನು? ಇದೊಂದು ಹೊಸ ಧರ್ಮವೇ? ಇದರ ಆರಂಭವೇ ಸೂಚಿಸುವಂತೆ ಇದು ಆದಿ ಕಾಲದ ಜನರು ಅನುಸರಿಸಿಕೊಂಡು ಬಂದಿರುವ ಧರ್ಮ! ಇದು ಮಾನವ ಧರ್ಮವೂ ಆಗಿರಬಹುದು. ಆದರೆ ಈ ಆದಿವಾಸಿಗಳನ್ನು ಇವತ್ತಿನವರೆಗೂ ಹಿಂದೂ ಅಥವಾ ಇನ್ನಾವುದೋ ಇತರ ಧರ್ಮಗಳೊಂದಿಗೆ ಸರಕಾರಿ ವ್ಯವಸ್ಥೆಯೂ ಗುರುತಿಸಿಕೊಂಡು ಬರುತ್ತಿದೆ. ಹಿಂದೂ ಧರ್ಮ ವ್ಯವಸ್ಥೆಯಲ್ಲಿ ಇವರ ಮೂಲ ವಿಚಾರ, ಆಚಾರಗಳು ಪ್ರತ್ಯೇಕವಾಗಿ ನಿಲ್ಲುವುದರಿಂದ ಇವರು ಆ ಧರ್ಮದ ಅನುಯಾಯಿಗಳಲ್ಲ ಎಂಬುವುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿದೆ. ಸಂಸ್ಕೃತಿ, ಸಂಪ್ರದಾಯ, ಭಾಷೆ, ಹಬ್ಬಗಳು, ಕಸುಬು, ಮನೋಧರ್ಮ ಇತ್ಯಾದಿ ಎಲ್ಲವೂ ಬೇರೆಯೇ ಆಗಿರುತ್ತದೆ. ಹಿರಿಯರನ್ನು ಗೌರವಿಸುತ್ತಾ, ಕಿರಿಯರನ್ನು ಪ್ರೀತಿಸುತ್ತಾ, ಪ್ರಕೃತಿಯೊಂದಿಗೆ ಅನ್ಯೋನ್ಯವಾಗಿ, ಸ್ವಚ್ಛಂದವಾಗಿ ಬದುಕುವುದೇ ಇವರ ಧರ್ಮ; ಸಂಸ್ಕೃತಿ! ಕಾಡು ಮೇಡು, ಬೆಟ್ಟ ತೊರೆಗಳಿಂದ ಪ್ರಭಾವಿತವಾದ ಬದುಕು ಇವರದ್ದು. ಇಂದು ಈ ಆದಿ ಧರ್ಮದ ಕೆಲವು ಕೊರಗರು ಕೂಡಾ, ಹಿಂದೂ ಧರ್ಮ ಸಂಸ್ಕೃತಿಗೆ ಒಗ್ಗಿಕೊಂಡಿದ್ದರೆ ಅದು ಕಲುಷಿತ ಧರ್ಮ ರಾಜಕೀಯದ ಕಾರಣಕ್ಕಾಗಿ ಮಾತ್ರ. ಈ ಮೂಲ ನಿವಾಸಿಗಳು ಯಾವತ್ತಿದ್ದರೂ ಆದಿ ಧರ್ಮ ಪರಿಪಾಲಕರೆ.

ಕೊರಗರ ಭಾಷೆ

ಆದಿಮಾನವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಹಾಗೂ ಪರಸ್ಪರ ವಿಚಾರಗಳ ವಿನಿಮಯ ಮಾಡಿಕೊಳ್ಳಲು ಕಂಡುಕೊಂಡ ಪದ ಪ್ರಯೋಗವೇ ಮುಂದೆ ಭಾಷೆಯಾಗಿ ಮಾರ್ಪಾಡಾಯಿತು. ಅದೊಂದು ಮಹತ್ತರವಾದ ಸಂಶೋಧನೆಯೇ ಆಗಿದೆ. ಪ್ರಕೃತಿಯ ಒಡನಾಟದಿಂದ ಪ್ರಾಣಿ ಪಕ್ಷಿಗಳ ಕೂಗಿನ ಲಯ, ಬೀಸುವ ಗಾಳಿ, ಹರಿಯುವ ತೊರೆಗಳ ಸದ್ದು, ಮರಗಳ ಲಾಕಲಾಟ ಇತ್ಯಾದಿಗಳ ಅನುಕರಣೆ ಮಾಡುತ್ತಾ ಈ ಭಾಷೆಗಳು ಅಭಿವೃದ್ಧಿ ಹೊಂದಿರಬಹುದು. ಕ್ರಮೇಣ ನಿರ್ದಿಷ್ಟ ಪದಗಳ ಬಳಕೆಯಾದಂತೆ ಭಾಷೆ ಬೆಳೆಯಿತು.

ಈ ಭಾಷೆಗಳು ಜಾತಿ, ವರ್ಗ, ಧರ್ಮ, ಪ್ರಾಂತ್ಯ, ರಾಜ್ಯ, ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಭಿನ್ನತೆಗಳಿಂದಲೂ, ವೈಶಿಷ್ಟ್ಯತೆಗಳಿಂದಲೂ ಕೂಡಿರುತ್ತದೆ. ಆದಿವಾಸಿ, ಬುಡಕಟ್ಟು ಸಮುದಾಯಗಳು ಕೂಡಾ ತಮ್ಮ ಭಾಷಾ ಅಸ್ತಿತ್ವವನ್ನು ಇಂದಿಗೂ ಉಳಿಸಿಕೊಂಡಿದೆ. ಅನಾದಿ ಕಾಲದಿಂದಲೂ ವಾಸಿಸಿಕೊಂಡಿರುವ ಕೊರಗ ಸಮುದಾಯವೂ ಸ್ವಂತ ಇತಿಹಾಸ, ಸಂಸ್ಕೃತಿಗಳ ಜೊತೆಗೆ ಸ್ವತಂತ್ರ ಭಾಷೆಯನ್ನು ಹೊಂದಿದೆ. ಶೋಷಣೆ, ಅನುಕರಣೆ, ಆಧುನೀಕರಣಗಳ ಪ್ರವಾಹಕ್ಕೆ ಸಿಲುಕಿದ್ದರೂ, ಅಳಿದುಳಿದ ಪಳೆಯುಳಿಕೆಗಳು ರೂಪಾಂತರಗೊಂಡ ಸ್ಥಿತಿಯಲ್ಲಿ ಕಂಡುಬರುತ್ತದೆ. ಇಂದು ಸಮುದಾಯದ ಶೇಕಡಾ ಇಪ್ಪತ್ತೈದರಷ್ಟು ಮಂದಿ ಮಾತ್ರ ಈ ಮಾತೃ ಭಾಷೆಯನ್ನು ಆಡುತ್ತಾರೆ. ಆದರೆ ಶೇಕಡಾ ಐವತ್ತಕ್ಕಿಂತಲೂ ಹೆಚ್ಚು ಜನರಿಗೆ ಈ ಭಾಷೆ ತಿಳಿದಿದೆ.

ದಿನಾಂಕ 15-2-2017 ರಿಂದ 18-2-2017ರವರೆಗೆ ಉಡುಪಿ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯು ಜಿಲ್ಲೆಯ ಒಟ್ಟು 1837 ಮಂದಿ ಕೊರಗರನ್ನು ಸಂದರ್ಶಿಸಿ ನಡೆಸಿದ ಸಮೀಕ್ಷೆಯಲ್ಲಿ 1299 ಮಂದಿ ಕೊರಗ ಭಾಷೆಯನ್ನು ಮಾತನಾಡುತ್ತಾರೆ ಎಂದು ದಾಖಲಿಸಲಾಗಿದೆ. ಇದು ಶೇಕಡಾ 70.71ರಷ್ಟಾಗುವುದು. ಉಳಿದಂತೆ ತುಳು ಅಥವಾ ಕನ್ನಡ ಭಾಷೆಗಳನ್ನು ಬಳಸುತ್ತಾರೆ. ಅನೇಕ ವಿದ್ವಾಂಸರು ಈ ಭಾಷೆಯನ್ನು ಅಧ್ಯಯನ ಮಾಡಿ, ಇದು ತುಳು ಅಥವಾ ಇತರ ಯಾವುದಾದರೂ (ಕನ್ನಡ, ತೆಲುಗು, ತಮಿಳು ಇತ್ಯಾದಿ) ಭಾಷೆಗಳ ಉಪಭಾಷೆಯಾಗಿರಬಹುದು ಎಂದು ಅಂದಾಜಿಸಿದ್ದಾರೆ. ಕೆಲವರು ಉತ್ತರ ದ್ರಾವಿಡ ಭಾಷೆಗಳಿಗೂ ಹೋಲಿಕೆ ಮಾಡಿ ಆ ಭಾಷೆಗಳ ಉಪಭಾಷೆ ಎಂತಲೂ ಅಭಿಪ್ರಾಯಿಸಿದ್ದಾರೆ. ಇದು ದಕ್ಷಿಣದಲ್ಲಿ ಮಲಯಾಳಿಗೂ, ನಡುಸಾಲಿನಲ್ಲಿ ತುಳುವಿಗೂ, ಉತ್ತರದಲ್ಲಿ ಕನ್ನಡ ಭಾಷೆಗೂ ಹತ್ತಿರವಿರುವುದು ನಿಜ. ಆದರೆ ಅದೇ ಕಾರಣಕ್ಕೆ ಆಯಾ ಭಾಷೆಗಳ ಉಪಭಾಷೆ ಎಂಬುವುದಾಗಿ ದಾಖಲಿಸುವುದು ಸಮಂಜಸವಲ್ಲ. ಯಾಕೆಂದರೆ ಇದೊಂದು ಸ್ವತಂತ್ರ ಭಾಷೆಯಾಗಿರುವ ಸಾಧ್ಯತೆಗಳೇ ಹೆಚ್ಚು. ಇದಕ್ಕೆ ಆಧಾರವಾಗಿ

ಗಮನಿಸಬಹುದಾದ ಮೊದಲನೇ ಮುಖ್ಯ ಅಂಶವೆಂದರೆ, ಕೊರಗ ಸಮುದಾಯವು ಒಂದು ಆದಿಮೂಲ ಬುಡಕಟ್ಟು ಸಮುದಾಯ ಆಗಲೂ ಇವರು ಸ್ವತಂತ್ರವಾಗಿ ಸಂವಹನ ನಡೆಸುತ್ತಿದ್ದರು. ಹಾಗಾಗಿ ಇವರು ಅನ್ಯ ಭಾಷೆಗಳನ್ನು ಬಳಸಿರುವ ಸಾಧ್ಯತೆಗಳಿಲ್ಲ. ಎರಡನೇ ಮುಖ್ಯ ಅಂಶವೆಂದರೆ ತುಳು, ಕನ್ನಡ ಭಾಷೆಗಳಲ್ಲಿ ಇಲ್ಲದ ನೂರಾರು ಪದಗಳು ಈ ಭಾಷೆಯಲ್ಲಿವೆ. ಉದಾಹರಣೆ: ಔರು(ಅನ್ನ), ಕೂಜಿ(ಹುಡುಗಿ), ಕೊಡ್ತರು (ಗುರಿಕಾರ), ಕ್ವರ್ತಿ(ಹೆಂಡತಿ), ಕೊರಯಿ(ಗಂಡ), ಕುಜೇರ್ಲು(ಮಕ್ಕಳು), ಜೂ(ಇಡು), ಚೂ(ನೋಡು), ದೂ(ಚೆಲ್ಲು), ಪೆಯಿ(ಸುರಿಯುವುದು) ಇತ್ಯಾದಿ.

ಆದರೂ ನಂತರದ ದಿನಗಳಲ್ಲಿ ತುಳು, ಕನ್ನಡ ಭಾಷೆಗಳ ಪ್ರಭಾವಕ್ಕೆ ಒಳಗಾಗಿರುವುದು ನಿಜ! ಬಹುಸಂಖ್ಯಾತರ ಭಾಷೆಯೊಂದು ಸಣ್ಣ ಜನಸಂಖ್ಯೆಯ ಜನರ ಭಾಷೆಯ ಮೇಲೆ ಪ್ರಭಾವ ಬೀರುವುದು ಸಾಮಾನ್ಯವಾಗಿದೆ. ಕೊರಗರ ಭಾಷೆಯಲ್ಲಿ ಪ್ರಾದೇಶಿಕ ಭಿನ್ನತೆಗಳಿಗನುಗುಣವಾಗಿ ಐದು ಪ್ರಕಾರಗಳಿವೆ. ಉಡುಪಿ ನಗರ, ಬ್ರಹ್ಮಾವರ, ಬಾರಕೂರ, ಕೋಟಾ, ಸುತ್ತಮುತ್ತಲಿನ ತಪ್ಪು ಕೊರಗರು ಒಂದು ಪ್ರಕಾರ ಮಾತನಾಡಿದರೆ, ಕಾಪು, ಬೆಳ್ಮಣ್ಣು, ಮುಲ್ಕಿ, ಐಕಳ, ಕಾರ್ಕಳ, ಮೂಡಬಿದ್ರೆ ಪರಿಸರದ ಕೊರಗರು ಅದೇ ಭಾಷೆಯನ್ನು ಅಲ್ಪ ಸ್ವಲ್ಪ ಉಚ್ಚಾರ ಬೇಧವಾಗಿ ಮಾತನಾಡುತ್ತಾರೆ. ಉತ್ತರ ಉಡುಪಿಯ ಕೊಕ್ಕರ್ಣೆ, ಹಾಲಾಡಿ, ಹೆಬ್ರಿ, ಅಜೆಕಾರು, ಕಾರ್ಕಳ ಬಜಗೋಳಿ ಸುತ್ತಮುತ್ತದ ಕೊರಗರು ಇನ್ನೊಂದು ಶೈಲಿಯ ಭಾಷೆಯನ್ನು ಆಡುತ್ತಾರೆ. ಕುಂದಾಪುರ, ಶಂಕರನಾರಾಯಣ, ಕೊಲ್ಲೂರು, ಬೈಂದೂರು, ನಾಡಾ, ಶಿರ್ಸಿ ಆಸುಪಾಸಿನ ಕಪುಡ ಕೊರಗರು ಮತ್ತೊಂದು ಭಾಷೆಯನ್ನು ಬಳಸುತ್ತಾರೆ. ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ ಹಾಗೂ ಕಾಸರಗೋಡಿನ ಕುಂಟು ಕೊರಗರಲ್ಲಿ ಮಗದೊಂದು ಭಾಷೆಯು ಚಾಲ್ತಿಯಲ್ಲಿತ್ತು. ಆದರೆ ಇಂದು ಅದರ ಅವಶೇಷಗಳು ಮಾತ್ರ ಉಳಿದಿವೆ. ಉದಾಹರಣೆಗೆ : ನಯ್ಯೆ (ತಂದೆ), ನಪ್ಪೆ(ತಾಯಿ), ಆರ(ಮಾಂಸ), ಆಂಬು(ಪದಾರ್ಥ), ಕೂರ್(ಗಂಜಿ), ಮಂಜಿಲ (ಮದುವೆ), ಚೆಲಿ(ತೆಲಿ), ಇತ್ಯಾದಿ. ಕೆಲವೇ ಕೆಲವು ಪದಗಳು ಇಲ್ಲಿನ ಜನರ ನೆನಪಿನಲ್ಲಿದೆ.

ಈ ಕೆಳಗಿನ ಕೋಷ್ಟಕದಲ್ಲಿ ಕೊರಗ ಭಾಷೆಯಲ್ಲಿನ ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಗಮನಿಸಬಹುದು.

1. ಕನ್ನಡ : ನಿನ್ನ ಹೆಸರು ಏನು?
   ಕಪುಡ ಕೊರಗ : ನಿಂದ ಹೆಸರು ಈತ?
   ಸೊಪ್ಪು ಕೊರಗ : ನಿನ್ನ ಹುದರ್ ಗಿತ್ತ?
   ತಪ್ಪು ಕೊರಗ : 1. ನಿನ್ನ ಪೊದರ್ ಎತ್ತ?
   2. ನಿನ್ನ ಪದರ್ ಇಂತ?

2. ಕನ್ನಡ : ಊಟ ಆಯಿತ?
ಕಪುಡ : ಕುಳ್ ತಿನ ಅಕ್ಕದಾ?
ಸೊಪ್ಪು : ಹರ್ವ ಅಕ್ಕದಾ?
ತಪ್ಪು : 1. ಔರು ಪರ್ಕೆರ? 2. ಔರು ಪರ ಆಕ?

3. ಕನ್ನಡ : ಮಕ್ಕಳು ಕಲಿಯಲು ಹೋಗುತ್ತಾರೆ.
ಕಪುಡ : ಕಿಜ್ರ ಕಲಿಕಾ ಹೋಕ್ವು
ಸೊಪ್ಪು : ಕಿದ್ದೆರ್ ಕಲ್ಲೆರೆ ಹೋತನೆರ್
ತಪ್ಪು : 1. ಜೇರ್ರು ಕಲ್ಲೆರೆ ಪೋನೆರ್
2. ಕುಜೇರ್ಲು ಕಲ್ಲೆರೆ ಪೋನೆರ್

4. ಕನ್ನಡ : ನಾನು ಕೆಲಸ ಮಾಡುತ್ತೇನೆ.
ಕಪುಡ : ನೇನ್ ಕೆಲ್ಸ ಮಾಡ್ನೆ
ಸೊಪ್ಪು : ಏನ್ ಬದ್ಕ್ ಮಾಡ್ತನೆ
ತಪ್ಪು : 1. ಯಾನ್ ಬೇಲೆ ಮಾಟೊನೆ
2. ಯಾನ್ ಬೇಲೆ ಮಾನೆ

5. ಕನ್ನಡ : ನಮಗೆ ದೇವರ ಮೇಲೆ ನಂಬಿಕೆ ಕಡಿಮೆ.
ಕಪುಡ : ನಮಕ ದ್ಯಾವ್ರ ಮೇಲೆ ನಂಬ್ಕಿ ಕಡ್ಮಿ
ಸೊಪ್ಪು : ಅಮರಗ ದೇವೆರೆ ಮೇಲ್ತು ನಂಬಿಕೆ ಕಡಿಮೆ
ತಪ್ಪು : 1. ನಮರೆಗ ದೇವೆರ್ನ ಮಿತ್ ನಂಬಿಕೆ ಕಮ್ಮಿ
2. ಅಮೆರೆಗ ದೇಬೆರ್ನ ಮಿತ್ ನಂಬುಗೆ ಕಡಿಮೆ

6. ಕನ್ನಡ : ಹುಟ್ಟಿಗೂ ಸಾವಿಗೂ ನಡುವೆ ಕಷ್ಟಪಟ್ಟು ಬದುಕುವುದು ಅಗತ್ಯವಿದೆ.
ಕಪುಡ : ಹುಟ್ಕಂದ್ಕು, ಚೈಂದ್ಕು ಮದ್ಯ ಕಷ್ಟಪಡ ಬದಕಂದ ಅಗತ್ಯ ಯೆಕ್ಕದ್
ಸೊಪ್ಪು : ಹುಟ್ಟಿನದಕ್ಕನ, ಸೈನದಕ್ಕನ ಮದ್ಯತ್ ಕಷ್ಟಪಡ ಬದಕನದ್ ಅಗತ್ಯನಂದ್
ತಪ್ಪು : 1. ಪುಟ್ನೆಕನಾ, ಚೆನೇಕನಾ ನಡುಟ್ ಬಂಗೊಡ್ ಬದ್ಕನ ಅಗತ್ಯರಂಡ್

7. ಕನ್ನಡ : ಹೆಣ್ಣು ಗಂಡು ಎಂಬ ಬೇಧ ಸರಿಯಲ್ಲ.
ಕಪುಡ : ಹೆಣ್ಣ್, ಗಂಡ ಒಜಿ ಭೇದ ಸರಿಯಿಲ್ಲ
ಸೊಪ್ಪು : ಹೆಣ್, ಗಂಡ್ ಅನ್ನಾ ಬೇಧ ಸಮ ಅತ್
ತಪ್ಪು : ಪೊನ್ನು, ಆನ್ ನೂನ ಬೇಧ ಸರಿ ಅತ್

8. ಕನ್ನಡ : ನನಗೆ ನನ್ನ ಸಾಮರ್ಥ್ಯದ ಬಗ್ಗೆ ವಿಶ್ವಾಸ ಇದೆ.
ಕಪುಡ : ನಂಗೆ ನನ್ ಶಕ್ತಿತ್ ಬಗ್ಗೆ ನಂಬಿಕೆಯೆಕ್ಕದ
ಸೊಪ್ಪು : ಅಂಗ ಅನ ತಾಕತ್‌ದ ಬಗ್ಗೆ ನಂಬಳಿಗೆ ನಂದ್
ತಪ್ಪು : ಅಂಗ ಅನ್ನ ತಾಕತ್‌ದ ಬಗ್ಗೆ ವಿಶ್ವಾಸ ರಂಡ್

9. ಕನ್ನಡ : ನೀನು ತಾಯಿಗೆ ಹೇಗೆ ಗೌರವ ಕೊಡುತ್ತೀ?
ಕಪುಡ : ಈಚ್ಚೆ ಅಪ್ಪೆಕ ಹ್ಯಾಂಗ್ ಮರ್ಯಾದಿ ಕೊಳ್ನಾ?
ಸೊಪ್ಪು : ಇಂಚಿ ಅಪ್ಪೆಗ ಹ್ಯಾಂಗ್ ಗೌರವ ಕೋರ್‌ತನ?
ತಪ್ಪು : ಇಜ್ಜಿ ಅಪ್ಪೆಗ ಎಚ್ಚಿ ಮರ್ಯಾದಿ ಕೋರ್ನ?

10. ಕನ್ನಡ : ತಂದೆ ಅಣ್ಣನಿಗೆ ಬುದ್ಧಿ ಹೇಳುತ್ತಿದ್ದರು.
ಕಪುಡ : ಅಚ್ಚೆ ಅಣ್ಣಕ ಬುದ್ಧಿ ಒಜ್ಜಕರ ಯೆಕ್ಕಿ
ಸೊಪ್ಪು : ಅಣ್ಣೆ ಅಚ್ಚಗ ಬುದ್ಧಿ ನೆಕ್ಯರ ಇರ್ಕೆರ್
ತಪ್ಪು : 1. ಅಮ್ಮಡೆ ಪರಿಯಗ ಬುದ್ಧಿ ಚೆಲ್ಲಲ ಊಕೆರ್

11. ಕನ್ನಡ : ತಂಗಿ ತಮ್ಮನಿಂದ ಹೊಗಳಿಸಿಕೊಂಡಳು
ಕಪುಡ : ಮೆಗ್ದ ಮೆಗಿನಿಂದ ಹೊಗಳೆಂಕರೆಕ್
ಸೊಪ್ಪು : ಮೆಗ್ದ್ ಮೆಗ್ಗೆನ ಕೈತ್ ಹುಗರ್‌ಲೆಗೆ ಕಲೆಲ್‌ಗದ್
ತಪ್ಪು : 1. ಮೆಗ್ದ್ ಮೆಗ್ಯಂಟ್ ಪೊದರ್ ಕಲೆಲೊಂಡ್
2. ಮೆಗ್ದ್ ಮೆಗ್ಯಂಟ ಪೊಗರ್ ಪ್ಯಲಗ್

12. ಕನ್ನಡ : ಆದಿತ್ಯವಾರ ಮನೆಗೆ ನೆಂಟರು ಬರುತ್ತಾರೆ.
ಕಪುಡ : ಆಯಿತವಾರ ಇಲ್ಲಕ ನೆಂಟ್ರ ಬಂದ್ರ್
ಸೊಪ್ಪು : ಐತ್ವಾರ ಕೊಪ್ಪಗ ಬಿರ್ನೇರ್ ಬನ್ನೇರ್
ತಪ್ಪು : ಐತಾರ ಕೊಟಗ ಬಿನ್ನೆರ್ ಬನ್ನೆರ್

13. ಕನ್ನಡ : ಒಗ್ಗಟ್ಟಿನಲ್ಲಿ ಬಲವಿದೆ.
ಕಪುಡ : ಅಸುಜನನು ಒಟ್ಟಾಯಿದಂಕಟ ಬಂಧ
ಸೊಪ್ಪು : ಒಗ್ಗಟತ್ ಬಲನಂದ್
ತಪ್ಪು : ಒಗ್ಗಟ್ಟುಡ್ ಬಲರಂಡ್

14. ಕನ್ನಡ : ಎಷ್ಟು ಗಂಡಸರು, ಹೆಂಗಸರು ಮಾತನಾಡುತ್ತಾರೆ?
ಕಪುಡ : ಎಷ್ಟು ಗಂಡಳ, ಹೆಮ್ಮನ ಮಾತಾಡ್‌ಂದ್ರ್?
ಸೊಪ್ಪು : ಏತ್ ಗಂಡಕ್ಕಿಗಲ್, ಕೊರ್ಪಜೇರ್ ಅಜ್ಕೆ ಜಾವುತನೆರ್?
ತಪ್ಪು : 1. ಏತ್ ಆನ್ಲು, ಪೊನ್ನುಲು ಪಾತ್ರೊನೆರ್?
2. ಏತ್ ಗಂಡ್ಲ್, ಪೊನ್ಲ್ ಪಾತುರ್ನೆರ್?

15. ಕನ್ನಡ : ಎಲ್ಲಿ, ಹೇಗೆ, ಯಾವಾಗ ನೋಡುತ್ತಾರಂತೆ?
ಕಪುಡ : ಎಲ್ಲ್, ಹ್ಯಾಂಗ್, ಎಕ್ಕಲಕ ಚೊಂಡ್ರ?
ಸೊಪ್ಪು : ಎಲ್ಲ್ ಹ್ಯಾಂಗೆ, ಎಕ್ಕಲಗ ಸುತನೇರ್‌ಗ್‌ಲ್?
ತಪ್ಪು : 1. ಒಯಿಟೆ, ಎಚ್ಚಿ, ಎಕಲಗ ಸೂನೆರ್ಗ್?
2. ಓಲ್, ಎಚ್ಚಿ , ಎಕಲಗ ಚೂನೆರ್ಗೆ?

16. ಕನ್ನಡ : ಓಡುವುದಕ್ಕೂ ನಡೆಯುವುದಕ್ಕೂ ವ್ಯತ್ಯಾಸವಿದೆ.
ಕಪುಡ : ಓಡಂದಕ್ಕೂ, ನೆಡೆಂದಕ್ಕೂ ವ್ಯತ್ಯಾಸಯೆಕ್ಕದ
ಸೊಪ್ಪು : ಓಡನದಕ್ಕನ ನಡವನದಕ್ಕನ ವ್ಯತ್ಯಾಸನಂದ್
ತಪ್ಪು : ಬಲ್ಪುನೆಕ್ಕನಾ, ನಡವುನೆಕ್ಕನಾ ವ್ಯತ್ಯಾಸರಂಡ್

17. ಕನ್ನಡ : ಡೋಲು ನಮ್ಮ ಆಸ್ತಿ
ಕಪುಡ : ಕಡ್ಡಿ ನಮ್ಮ ಸೊತ್ತು
ಸೊಪ್ಪು : ಕೌಡಯಿ ಅಮ ಆಸ್ತಿ
ತಪ್ಪು : ಕಡ್ಡೈ ನಮ್ಮ ಸುತ್ತು

18. ಕನ್ನಡ : ಕೊಳಲು ಯಾಕೆ ಬೇಡ?
ಕಪುಡ : ಕೊಳಲ್ ಇತಕ ಬ್ಯಾಡ?
ಸೊಪ್ಪು : ವಾಂಟೆ ಗಿತ್ತಕ ಬೋಡ?
ತಪ್ಪು : 1. ಕೊರಲ್ ಎತ್ತಗ ಬಡಂಜಿ? 2. ಕೊರಲ್ ಇಂತೆಕ ಬಡಂಜಿ?

19. ಕನ್ನಡ : ಬಳಿಯೊಳಗೆ ಮದುವೆ ತಪ್ಪು.
ಕಪುಡ : ಬಳಯೊಳಮಿ ದಿಬ್ಬಣ ತಪ್ಪ್
ಸೊಪ್ಪು : ಬಳಿತೊಳಮಗ ಮಂಗಿಲ ತಪ್ಪು
ತಪ್ಪು : 1. ಬಳಿತ್ತೊಲ್ಮಯಿಂಟ ಬಿರ್ದ್ ತಪ್ಪು
2. ಬಳಿತೊಲಯಿ ಬಿರ್ದ್ ತಪ್ಪು

20. ಕನ್ನಡ : ಹುಡುಗ, ಹುಡುಗಿ ಚೆಂದವಿದ್ದಾರೆ.
ಕಪುಡ : ಕ್ವಾಜೆ, ಕೂಜಿ ಚೆಂದ್ ಯೆಕ್ಕರ್
ಸೊಪ್ಪು : ಕೂಜೆ, ಕೂಜಿ ಲಾಯಿಕ್ ನನ್ನೆರ್
ತಪ್ಪು : ಕೂಜೆ, ಕೂಜಿ ಪೊರ್ಲು ರನ್ನೆರ್

ಕುಲಕಸುಬು

ಕೊರಗರು ಕೃಷಿ ಪೂರ್ವದ ಒಂದು ಬುಡಕಟ್ಟು ಪಂಗಡವಾಗಿದ್ದು, ಕಾಡಿನ ಬದುಕಿನಲ್ಲಿ ಕಾಡುತ್ಪನ್ನಗಳ ಸಂಗ್ರಹವೇ ಅವರ ಮೂಲ ಕಸುಬು ಆಗಿತ್ತು. ಹಣ್ಣು, ಹಂಪಲು, ಬೇರು, ನಾರು, ತೊಗಟೆ, ಸೊಪ್ಪು, ಚಿಗುರು ಇತ್ಯಾದಿಗಳ ಸಂಗ್ರಹ ಮತ್ತು ಉಪಯೋಗ ಮಾಡಿ ಜೀವನ ಸಾಗಿಸುತ್ತಿದ್ದವರು, ಜೊತೆಗೆ ಕಾಡಿನಲ್ಲಿ ಸಿಗುವ ಜೇನುತುಪ್ಪ ಸಂಗ್ರಹ ಮಾಡುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಈಗಲೂ ಕೆಲವರು ಜೇನು ತೆಗೆಯುವ ಕಸುಬನ್ನು ಮುಂದುವರಿಸಿದ್ದಾರೆ. ಕಾಡುತ್ಪನ್ನ ಸಂಗ್ರಹ ಹಾಗೂ ಜೇನು ತುಪ್ಪ ತೆಗೆಯುವುದೇ ಕೊರಗರ ಮೂಲ ಕಸುಬು. ಕ್ರಮೇಣ ಇವರು ಋತುಮಾನಕ್ಕೆ ಅನುಗುಣವಾಗಿ ಅಲ್ಪಾವಧಿ ಕೃಷಿಯನ್ನೂ ಮಾಡತೊಡಗಿದ್ದರು. ಕೃಷಿ ಜೀವನದ ಪರಿಚಯವಾದ ಮೇಲೆ ಕೃಷಿಗೆ ಪೂರಕವಾದ ಕೆಲವೊಂದು ಪರಿಕರಗಳ ಅನ್ವೇಷಣೆಯೂ ನಡೆಯಿತು. ಕಾಡಿನ ಬಿಳಲು ತೆಗೆದು ಕೃಷಿ ಕಾರ್ಯಕ್ಕೆ ಸಹಕಾರಿಯಾಗುವಂತಹ ಬಟ್ಟಿ (ಬುಟ್ಟಿ) ತಯಾರಿಸುತ್ತಿದ್ದರು. ಈ ರೀತಿ ತಯಾರಿಸಲ್ಪಟ್ಟ ಕೃಷಿ ಪರಿಕರಗಳು ಮುಂದೆ ಕೆಲಸಕ್ಕೆ ಮಾತ್ರವಲ್ಲದೆ, ಇತರರಿಗೂ ಉಪಯೋಗಕ್ಕೆ ಬಂತು. ನಾಡಿಗೆ ಪರಿಚಯವಾದ ನಂತರ ಇವರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗತೊಡಗಿತು. ಬಿಳಲುಗಳಿಂದಲೇ ತಯಾರಾದ ಬೇರೆ ಬೇರೆ ಗಾತ್ರ ಹಾಗೂ ಆಕಾರದ ಉತ್ಪನ್ನಗಳು ಬಳಕೆಗೆ ಬರತೊಡಗಿತ್ತು. ತಾವು ತಯಾರಿಸಿದ ಬುಟ್ಟಿಗಳನ್ನು ಇತರರಿಗೂ ನೀಡಿ ಅವರಿಂದ ಆಹಾರ ವಸ್ತುಗಳನ್ನು ಪಡೆಯುವ ವಿನಿಮಯ ಪದ್ಧತಿ ಬೆಳೆಯಿತು. ಕ್ರಮೇಣ ಇದೇ ಕುಲಕಸುಬು ಆಯಿತು. ತರಾವಾರು ಬಳ್ಳಿ, ಬಿಳಲುಗಳನ್ನು ಬಳಸಿ ಬಟ್ಟಿ, ಪಡ್ಯೆ, ಕುರ್ವೆಗಳನ್ನು ಹೆಣೆಯುತ್ತಿದ್ದರು. ಸಿಮೆಕೋಲು ಬಿದಿರು ಮತ್ತು ತಾಳೆ ಮರದ ಸೋಗೆಯ ದಂಡು(ದಿಂಡು)ಗಳನ್ನು ಕೂಡಾ ಉಪಯೋಗಿಸಿ ಗೆರಸೆ, ಹೆಡಿಗೆಗಳನ್ನು ಸಿದ್ಧಗೊಳಿಸುತ್ತಾರೆ. ಕಾಡಿನಲ್ಲಿ ಮಾದಿರ ಬೂರು, ನೆಡಿಲ ಬೂರು, ಕೊಜಂಬೆ, ಅರ್ಕೆದ ಬೂರು, ಇಲ್ಲ ಬೂರು, ಎಲಿ ಬೂರು, ಪಾಂಡಿಲ್, ರೆಂಜಿರ್, ಚೆನ್ನೆ ಬೂರು, ಸರೋಲಿ, ಮುಂಡೇವು ಬೇರು ಮುಂತಾದ ನೂರಾರು ಜಾತಿಯ ಬಳ್ಳಿ, ಬಿಳಲುಗಳನ್ನು ತೆಗೆದು ಕಚ್ಚಾ ಮಾಲುಗಳಾಗಿ ಬಳಸುತ್ತಾರೆ. ಕುರುವೆ(ಸಣ್ಣ ಬುಟ್ಟಿ), ಕಾಂಟ್ಯ(ಹೆಡಿಗೆ), ಉಮಿ ಸಾರಣೆ(ಭತ್ತದ ಸಿಪ್ಪೆ ಸಾರಿಸುವ ಪರಿಕರ, ಬುಟ್ಟಿ), ಅಡ್ಡೆ ಸಾರಣೆ (ತಿಂಡಿ ಮಾಡುವ ಅಗಲವಾದ ಬುಟ್ಟಿ), ತಡ್ಪೆ (ಗೆರಸೆ, ಮೊರೆ), ಪೆಟ್ಟಿಗೆ, ತೊಟ್ಟಿಲು, ಕುತ್ತರಿ (ಕೋಳಿ ಹಾಕಲು ಅನುಕೂಲಕರವಾದ ದೊಡ್ಡ ಗಾತ್ರದ ಬುಟ್ಟಿ), ಕುರ್ಕಿಲ್ (ತರೆಗೆಲೆ ಹೊರುವ ಬಟ್ಟಿ), ಕೂರಿ (ಮೀನು ಹಿಡಿಯುವ ಸಾಧನ), ಅಜಕುರುವೆ (ಬಟ್ಟೆ, ಸಾಮಾನು ತುಂಬಿಸಿ ಸಾಗಿಸಲು), ತಟ್ಟಿಕುಡ್ಪು (ಅನ್ನ

ಬಸಿಯುವ ಸಾಧನ), ತೆಂಗಿನ ಹಾಲು ಸೋಸುವ ಕುರವೆ ಇತ್ಯಾದಿ ತರಾವರಿ ಸಾಧನಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ ಕೆಲವು ಆಕಾರ, ಗಾತ್ರಗಳಲ್ಲಿ ವ್ಯತ್ಯಾಸವಷ್ಟೇ ಅಲ್ಲದೆ ಕಲಾತ್ಮಕ ಕುಸುರಿ ಕೌಶಲ್ಯಗಳನ್ನೂ ಹೊಂದಿರುತ್ತವೆ. ಉದಾಹರಣೆಗೆ : ಮಗು ಮಲಗಿಸಿ ತೂಗುವ ತೊಟ್ಟಿಲು ಹಾಗೂ ಅಜಕುರುವೆ. ಇವುಗಳ ನೆಯ್ಗೆಯೇ ಬಹಳ ಸೂಕ್ಷ್ಮ ಹಾಗೂ ಕಲಾತ್ಮಕವಾಗಿದೆ. ದುರಂತವೆಂದರೆ ಈ ರೀತಿಯ ಕುಸುರಿ ಕೆಲಸಗಳಿಗೆ ಹಾಗೂ ಪರಿಶ್ರಮಕ್ಕೆ ಊರವರು ಕವಡೆ ಕಾಸಿನ ಬೆಲೆಯನ್ನು ಕೊಡಲಿಲ್ಲ. ಬರೀ ಮಾತಿನ ಉಪಚಾರ ಹಾಗೂ ಬೆದರಿಕೆಯನ್ನು ಒಡ್ಡಿಯೇ ಈ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು. ಕೆಲವೊಮ್ಮೆ ಹಳಸಿದ ಅನ್ನ ಹಾಗೂ ಬಣ್ಣ ಮಾಸಿ ಹರಿದ ಚಿಂದಿ ಬಟ್ಟೆಯನ್ನು ನೀಡಿ ಬೆಲೆ ಸಂದಾಯ ಮಾಡುತ್ತಿದ್ದರು. ಹಾಗಾಗಿ ಈ ಕಸುಬು ಕೂಡಾ ಮುದುಡಿ ಮುರುಟಿತು. ಇತ್ತೀಚಿನ ಪ್ಲಾಸ್ಟಿಕ್, ಫೈಬರ್, ರಬ್ಬರ್ ಉತ್ಪನ್ನಗಳ ದಾಳಿ ಕೂಡಾ ಕೊರಗರ ಉತ್ಪಾದನೆಗಳಿಗೆ ಕೊಡಲಿ ಏಟನ್ನೇ ನೀಡಿದೆ. ಕಾಡು ನಾಶವಾಗಿ ಕಚ್ಚಾ ಮಾಲಿನ ಕೊರತೆಯೂ ಎದುರಾಗಿದ್ದು ಕಸುಬುದಾರರು ಅನ್ಯ ಉದ್ಯೋಗ(ಕೂಲಿ)ಗಳತ್ತ ವಾಲುತ್ತಿರುವುದು ಕಂಡುಬರುತ್ತಿದೆ. ಅರಣ್ಯ ಪ್ರವೇಶಕ್ಕೆ ಅನುಮತಿ ದೊರೆತಲ್ಲಿ ಕಚ್ಚಾಮಾಲು ಸಮಸ್ಯೆ ಪರಿಹಾರವಾಗಬಹುದು. ಸರಕಾರವು ಅನುಸೂಚಿತ ವ್ಯಕ್ತಿಗಳಿಗೆ ಅರಣ್ಯ ಪ್ರವೇಶಕ್ಕೆ ಅನುಮತಿ ಸೂಚಿಸುವ ಗುರುತಿನ ಕಾರ್ಡ್‌ಗಳನ್ನು ನೀಡುವ ಕ್ರಮ ಅನುಸರಿಸಬೇಕು. ಹಾಗೂ ಇವರ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗಬೇಕಾದರೆ ಮಾರುಕಟ್ಟೆ ವ್ಯವಸ್ಥೆಯೂ ಅತ್ಯಗತ್ಯವಾಗಿ ಆಗಬೇಕು. ಕುಲಕಸುಬು ಮಾಡುವವರ ಸಹಕಾರ ಸಂಘಗಳನ್ನು ರಚಿಸಿ ಮಾರುಕಟ್ಟೆ ಒದಗಿಸಿದಲ್ಲಿ ಮತ್ತೆ ಕುಲಕಸುಬನ್ನು ಉತ್ತೇಜಿಸಬಹುದು. ಹಿಂದೆ ಇದ್ದಂತಹ (ಕಾಪು, ಬೆಳ್ಮಣ್ಣು, ಹೆಬ್ರಿ, ಕೊಕ್ಕರ್ಣೆ) ಕೊರಗ ಮಹಿಳೆಯರ ವಿವಿಧೋದ್ದೇಶ ಸಹಕಾರ ಸಂಘಗಳು ವಿಫಲವಾಗಿರುವ ಅನುಭವ ಕಣ್ಣ ಮುಂದೆಯೇ ಇದೆ. ಇವುಗಳ ಬಗ್ಗೆಯೂ ಪರಾಮರ್ಶೆ ನಡೆಯಬೇಕು. ಈಗಿರುವ ಸಹಕಾರಿ ಸಂಘಗಳನ್ನು ಇದ್ದ ಹಾಗೆಯೇ ವಿಸರ್ಜಿಸಿ ಮುಂದೆ ಕೇವಲ ಮಹಿಳೆಯರ ಸಹಕಾರಿ ಸಂಘಗಳ ಬದಲಿಗೆ ಕೊರಗರ ಸಹಕಾರ ಸಂಘಗಳ ಸ್ಥಾಪನೆಯಾಗಬೇಕು. ಸರಕಾರವು ಇವರ ಉತ್ಪಾದನೆಗಳಿಗೆ ಯೋಗ್ಯ ಬೆಂಬಲ ಬೆಲೆ ನೀಡುವುದು, ಕಸುಬುದಾರರಿಗೆ ಪಿಂಚಣಿ, ಗೌರವಧನದ ಭದ್ರತೆ ಒದಗಿಸುವುದು ಹಾಗೂ ಯುವ ಜನರಿಗೆ ಬೇಕಾದ ತರಬೇತಿ ವ್ಯವಸ್ಥೆಗಳನ್ನು ಕಲ್ಪಿಸಿ ಕೊಡುವುದಾದರೆ ಮುಂದೆ ಖಂಡಿತವಾಗಿಯೂ ಕೊರಗರ ಈ ಕಸುಬನ್ನು ಒಂದು ಗೌರವಾನ್ವಿತ ಹಾಗೂ ಲಾಭದಾಯಕ ಉದ್ಯೋಗವನ್ನಾಗಿ ಉಳಿಸಿಕೊಳ್ಳಲು ಸಾಧ್ಯವಿದೆ. ಈ ಬಗ್ಗೆ ಕೊರಗರ ಸಂಘಟನೆಗಳು ಕೂಡಾ ಮುತುವರ್ಜಿ ವಹಿಸಬೇಕಾಗಿದೆ.

ಆಹಾರ ಪದ್ಧತಿ

ಕೊರಗರು ಕಾಡುವಾಸಿಗಳಾಗಿದ್ದ ವೇಳೆ ಸಹಜವಾಗಿಯೇ ಹಣ್ಣು ಹಂಪಲು, ಗೆಡ್ಡೆ ಗೆಣಸು, ಸೊಪ್ಪು, ನಾರುಗಳನ್ನೇ ತಿಂದು ಬದುಕಿದವರು. ಅಳಿಲು, ಆಮೆ, ಮೊಲ, ನರಿ, ಮಂಗ ಮುಂತಾದ ಸಣ್ಣ ಪುಟ್ಟ ಪ್ರಾಣಿಗಳನ್ನೂ ಕಾಡುಕೋಳಿ, ನವಿಲು, ಕಾಗೆ, ಗಿಳಿ, ಗಿಡುಗ, ಗೂಬೆ, ಹದ್ದು ಮುಂತಾದ ಪಕ್ಷಿಗಳನ್ನೂ ಭೇಟೆಯಾಡಿ ಮಾಂಸವಾಗಿ ಬಳಸುತ್ತಿದ್ದರು. ಹಲಸಿನ ಹಣ್ಣು, ಹೆಬ್ಬಲಸು ಹಾಗೂ ಕುಮೇರ್ ಚಪ್ಪು(ತಗಟೆ ಸೊಪ್ಪು) ಇವೇ ಅವರ ಮೂಲ ಆಹಾರವಾಗಿತ್ತು. ಅಲೆಮಾರಿ ಜೀವನದಲ್ಲಿ ಆಹಾರ ಸಂಗ್ರಹ ವಿಧಾನ ಅನುಸರಿಸುವುದು ಸಾಧ್ಯವಿರಲಿಲ್ಲ. ಸಿಕ್ಕಿದ್ದನ್ನೂ ಆಗಲೇ ತಿಂದು ಮುಗಿಸುವುದು ಅನಿವಾರ್ಯವಾಗಿತ್ತು. ಈಗಲೂ ಕೆಲವು ಕೊರಗರಲ್ಲಿ ಈ ಗುಣಲಕ್ಷಣಗಳು ಕಂಡುಬರುತ್ತವೆ. ಕಾಡಲ್ಲಿ ಒಂದು ಕಡೆ ನೆಲೆ ನಿಲ್ಲಲು ಆರಂಭವಾದಂದಿನಿಂದ ಇವರಲ್ಲೂ ಆಹಾರ ಸಂಗ್ರಹದ ಅನಿವಾರ್ಯತೆ ಎದುರಾಯಿತು. ಹಲಸಿನ ಬೀಜಗಳನ್ನು ಒದ್ದೆ ಮಣ್ಣಿನೊಂದಿಗೆ ಮುದ್ದೆ ಮಾಡಿ ಸಂಗ್ರಹಿಸಿಡುವ ಪದ್ಧತಿ ಬೆಳೆಯಿತು. ಆಮೆ, ನರಿಯಂತಹ ಪ್ರಾಣಿಗಳ ಮಾಂಸವನ್ನು ಒಣಗಿಸಿ ಕಾಪಿಡುವ ಕ್ರಮವೂ ಆರಂಭವಾಯಿತು. ತಾವೇ ಬೆಳೆದ ಧಾನ್ಯಗಳನ್ನು ಮಣ್ಣಿನ ಕುಡಿಕೆಗಳಲ್ಲಿ ಹಾಕಿಡುತ್ತಿದ್ದರು. ಕೊರಗರ ಆಹಾರ ಯಾವುದು ಎಂದು ಕೇಳುವುದಕ್ಕಿಂತ ಇವರು ಯಾವುದನ್ನೂ ಆಹಾರವಾಗಿ ಬಳಸುವುದಿಲ್ಲ? ಎಂದು ಕೇಳಿದರೆ ಒಂದಷ್ಟು ಹೆಸರುಗಳನ್ನು ಹೇಳಬಹುದು. ಏಕೆಂದರೆ ಕಾಡಿನಲ್ಲಿ ಸಿಗುವ ಹೆಚ್ಚಿನ ವಸ್ತುಗಳನ್ನೂ, ಜೀವಿಗಳನ್ನೂ ಇವರು ಆಹಾರವಾಗಿ ಬಳಸುತ್ತಿದ್ದರು. ಹೆಬ್ಬಾವು, ನಾಗರ ಹಾವುಗಳೂ ಇವರಿಗೆ ಆಹಾರವಾಗಿತ್ತು ಎಂದರೆ ಬೆಚ್ಚಿ ಬೀಳಬೇಕಾಗಿಲ್ಲ. ಹಾವಿನ ವಿಷಪೂರಿತ ಭಾಗವನ್ನು ಅರಿತು, ಅದನ್ನು ಕತ್ತರಿಸಿ ತೆಗೆದು, ಉಳಿದ ಭಾಗವನ್ನು ಬೆಂಕಿಯಲ್ಲಿ ಸುಟ್ಟು ತಿನ್ನುವುದು ಇವರಿಗೆ ಪ್ರಿಯವಾದ ಹವ್ಯಾಸವೂ ಆಗಿತ್ತು. ಪರಿಣಾಮವಾಗಿ ಕೆಲವೊಮ್ಮೆ ಅದೆಷ್ಟೋ ಪ್ರಾಣ ಹಾನಿಯಾಗಿದ್ದನ್ನೂ ಕೆಲವು ಹಿರಿಯ ಕೊರಗರು ನೆನಪಿಸಿಕೊಳ್ಳುತ್ತಾರೆ. ಹುಲಿ ಅಥವಾ ಚಿರತೆಗಳು ಬೇಟೆಯಾಡಿ ತಿಂದು ಬಿಟ್ಟಿರುವ, ಬರಿಂಕಾ, ಕಡವೆ, ಕಾಟಿಗಳ ಮಾಂಸವನ್ನೂ ಬಳಸುತ್ತಿದ್ದರು. ಕ್ರಮೇಣ ಇವರ ಆಹಾರ ಶೈಲಿ ಬದಲಾಗತೊಡಗಿತು. ಇವರು ಯಾವಾಗ ಇತರರ ಸಂಪರ್ಕಕ್ಕೆ ಸಿಕ್ಕಿದರೋ ಆಗಲೇ ಆಹಾರದ ವಸ್ತು ಮತ್ತು ಬಳಸುವ ವಿಧಾನಗಳು ಬದಲಾಯಿತು. ಅಜಲು ಪದ್ಧತಿಯ ಸುಳಿಗೆ ಸಿಲುಕಿದ ನಂತರವಂತೂ ಕೊಳಕೇ ಇವರ ಆಹಾರವಾಯಿತು. ಆಗ ತಾನೇ ಬೇಟೆಯಾಡಿದ ಹಸಿಹಸಿ ಮಾಂಸದ ಬದಲಿಗೆ ಸತ್ತು ಬಿದ್ದಿರುವ ದನಕರುಗಳ ಕೊಳೆತ ಮಾಂಸವನ್ನು ಬಳಸಬೇಕಾಯಿತು. ಯಾರೋ ತಿಂದು ಬಿಸಾಡಿದ ಎಲೆಯ

ಎಂಜಲನ್ನಕ್ಕಾಗಿ ಬಾಯಿ ಬಿಡಬೇಕಾಯಿತು. ಕಾಡಿನ ಕೃಷಿ ಜೀವನ ಬಿಟ್ಟು ಊರಿನ ಬಿಟ್ಟಿ ಚಾಕಿರಿಗೆ ಒಗ್ಗಿಕೊಂಡು, ಊರವರ ಕಾಯಿಲೆ ವಾಸಿ ಮಾಡಲು, ಅನ್ನದಾನ (ನೀಚದಾನ)ದ ಹೆಸರಲ್ಲಿ ಉಗುರು, ತಲೆಗೂದಲು ಬೆರೆಸಿದ, ಅರೆಬೆಂದ ಅನ್ನವನ್ನು ಮುಕ್ಕಬೇಕಾಯಿತು. ಇದು ಈ ನೆಲದ ಮೂಲ ಮಕ್ಕಳ ಬದುಕಿನ ದುರ್ದೈವ!

ಮೂಲತಃ ಮಿಶ್ರಹಾರಿಗಳಾದ ಇವರು ಗಾಳ ಹಾಕಿ ಮೀನು ಹಿಡಿಯುವುದು, ಆಮೆ ಶಿಕಾರಿ ಮಾಡುವುದು ಇತ್ಯಾದಿ ಹವ್ಯಾಸಗಳು ಅವರ ಜೀವನ ವಿಧಾನವನ್ನು ಸೂಚಿಸುತ್ತದೆ. ಬೇಟೆಯಾಡಿದ ಪ್ರಾಣಿ, ಪಕ್ಷಿ, ಮೀನು ಹಾಗೂ ತಾವೇ ಬೆಳೆದ ಬಸಳೆ, ಅರಿವೆ ಸೊಪ್ಪು, ಜೊತೆಗೆ ಕಾಡಿನ ಕೆಸು ಮುಂತಾದ ಇನ್ನಿತರ ಸೊಪ್ಪುಗಳು, ಹಣ್ಣುಗಳು ಇವರ ಆಹಾರಗಳಾಗಿವೆ. ಮಾಂಸವನ್ನು ಬೇಯಿಸಿ, ಒಣಗಿಸಿ ಸಂಗ್ರಹಿಸಿಡುವ ಕ್ರಮ ಈಗಲೂ ಕೆಲವು ಕಡೆ ಇದೆ. ಕುಲದೈವ ಕೊರಗ ತನಿಯನಿಗೂ ತೋಡಿನ(ತೊರೆ) ಮೀನಿನ ಸಾಂಬಾರು ಮಾಡಿ ಅಗೆಲ್ ಬಡಿಸುತ್ತಿದ್ದರು. ತೀರಾ ಇತ್ತೀಚೆಗೆ ಕೋಳಿ ಮಾಂಸವನ್ನೂ ಬಹುವಾಗಿ ಇಷ್ಟಪಡುತ್ತಾರೆ. ಉತ್ತಮ ಆಹಾರ ಕ್ರಮಗಳನ್ನು ಅನುಸರಿಸುತ್ತಾರೆ. ಮದುವೆ ಮುಂತಾದ ಸಮಾರಂಭಗಳಲ್ಲಿ ಕೋಳಿ, ಕಡಲಿನ ಮೀನು, ಇನ್ನೂ ಕೆಲವು ಕಡೆ ಹಂದಿ, ಆಡಿನ ಮಾಂಸವನ್ನೂ ಬಳಸುತ್ತಾರೆ. ಶಿಕ್ಷಣ ಪಡೆದು, ಉದ್ಯೋಗ ಹೊಂದಿರುವ ಮಂದಿ, ಹಾಲು, ಮೊಸರು, ಸೇಬು, ದ್ರಾಕ್ಷಿ ಮೊದಲಾದ ಹಣ್ಣುಗಳನ್ನೂ ಸೇವಿಸುತ್ತಾರೆ. ಆದರೆ ಅಂದಿನ ತಾಜಾ ಆಹಾರ ವಸ್ತುಗಳಿಂದ ವಂಚಿತರಾಗಿ, ತೋರಿಕೆಯ ಜೀವನ ಶೈಲಿಯಿಂದಾಗಿ ಅಂದಿನ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಅಂದು ಕಾಡಿನಲ್ಲಿ ಸಿಗುತ್ತಿದ್ದ ಸೊಪ್ಪುಗಳಿಂದ ಚಟ್ನಿ, ಬಜ್ಜಿ ಮಾಡಿ ಗಂಜಿ ಉಂಡರೆ ಸಿಗುತ್ತಿದ್ದ ನೆಮ್ಮದಿಯು ಇಂದಿನ ಕೋಳಿ, ಹಂದಿ ಮಾಂಸದ ಊಟದಲ್ಲಿ ಸಿಗುವುದಿಲ್ಲ ಎನ್ನುತ್ತಾರೆ ಬಜಗೋಳಿ ಕಡಾರಿಯ ಬೊಗ್ಗು ಕೊಡ್ತರು. ಒಣ ಮಾಂಸವನ್ನು ಬೆಂಕಿಯಲ್ಲಿ ಸುಟ್ಟು, ನುಣ್ಣಗೆ ಗುದ್ದಿ, ಅದಕ್ಕೆ ಮೆಣಸಿನ ಪುಡಿ, ಉಪ್ಪು ಬೆರೆಸಿ ಒಂದಷ್ಟು ತೆಂಗಿನ ಕಾಯಿಯ ತುರಿಯನ್ನು ಹಾಕಿದರೆ ಪೊಗರ್ದಸ್ತಾದ ಬಜ್ಜಿ ಸಿದ್ಧವಾಗುತ್ತಿದ್ದ ಆ ದಿನಗಳನ್ನು ನೆನೆಸಿಕೊಂಡರೆ ಈಗಲೂ ಬಾಯಿಯಲ್ಲಿ ನೀರೂರುತ್ತದೆ ಎನ್ನುತ್ತಾರೆ ಪಾಂಗಾಳ ದರ್ಕಾಸಿನ ನರಂಗ ಕೊರಗ.

ಕೊರಗರು ಇತರ ಆದಿವಾಸಿಗಳಂತೆಯೇ ತಾವೇ ಸಿದ್ಧಡಿಸಿದ ಮದ್ಯವನ್ನು ಕುಡಿಯುತ್ತಿದ್ದರು. ಬೈನೆ ಮರ(ಈಂದ್)ದ ಕಳ್ಳು ಇವರ ಪ್ರಿಯವಾದ ಪಾನೀಯ. ಜೊತೆಗೆ ತಾಳೆ ಮರದ ಶೇಂದಿಯನ್ನೂ ಕುಡಿಯುತ್ತಿದ್ದರು. ಆದರೆ, ಅದು ಅವರ ದೈನಂದಿನ ಆಹಾರ ವಸ್ತುಗಳಾಗಿದ್ದವೇ ಹೊರತು ಮತ್ತು ಬರಿಸಿಕೊಳ್ಳಲು ಅಲ್ಲ! ಇತಿ ಮಿತಿಯಲ್ಲಿಯೇ ಈ ಪಾನೀಯಗಳನ್ನು ಸೇವಿಸುತ್ತಿದ್ದರು. ಊರಿನ ಅಜಲು ಸೇವೆಗೆ ತೊಡಗಿಸಿಕೊಂಡ ಮೇಲೆ ಅದು ವಿಪರೀತವಾಗಿ ಜನ ಅಮಲೇರತೊಡಗಿದರು. ಭಟ್ಟಿಳಿಸಿದ ಕಂಟ್ರಿ ಸಾರಾಯಿಯ ಸಹವಾಸವೂ ಶುರುವಾಯಿತು.

೭೪

ಕೊರಗರ ವೈದ್ಯ ಪದ್ಧತಿ

ಕೊರಗರ ವೈದ್ಯ ಪದ್ಧತಿಯನ್ನು ಕೂಲಂಕುಶವಾಗಿ ಪರಿಶೋಧಿಸಿದರೆ, ಸಮುದಾಯದಲ್ಲಿ ಎಲ್ಲಾ ಕಡೆ ಒಂದೇ ರೀತಿಯ ಪದ್ಧತಿ ಇದ್ದಂತಿಲ್ಲ. ಪ್ರಾದೇಶಿಕ ಭಿನ್ನತೆಗಳಿಗನುಗುಣವಾಗಿ ಹಾಗೂ ಒಬ್ಬ ವ್ಯಕ್ತಿಯ ಸೀಮಿತ ಜ್ಞಾನದ ಪರಿಮಿತಿಯಲ್ಲಿ ಈ ಮೂಲಿಕೆಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ. ಒಂದೇ ಕಾಯಿಲೆಗೆ ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ತರದ ಬೇರು, ನಾರು, ಸೊಪ್ಪು, ತೊಗಟೆಗಳನ್ನು ಬಳಸುತ್ತಾರೆ. ಅದೇನೆ ಇದ್ದರೂ ತಮ್ಮ ವಾಸಸ್ಥಳದ ಅಕ್ಕಪಕ್ಕದಲ್ಲಿ ಲಭ್ಯವಿರುವ ಪ್ರಾಕೃತಿಕ ವಸ್ತುಗಳನ್ನು ಬಳಸಿ ಔಷಧಿಗಳನ್ನು ನೀಡುತ್ತಾರೆ. ಇಲ್ಲಿ ಗಮನಿಸಲೇಬೇಕಾದ ಅಂಶವೆಂದರೆ, ಇವರು ನೀಡುವ ಔಷಧಿಗಳು ಕಾಯಿಲೆಯ ಮೇಲೆ ಉಂಟುಮಾಡುವ ಪರಿಣಾಮದಷ್ಟೇ, ಔಷಧಿ ನೀಡುವ ವ್ಯಕ್ತಿಯ ಮೇಲಿನ ನಂಬಿಕೆಗಳೂ ಪರಿಣಾಮ ಬೀರುತ್ತದೆ. ಕೆಲವು ವರ್ಷಗಳ ಹಿಂದೆ ಈ ರೀತಿಯ ಮೂಲಿಕೆಗಳ ಬಗ್ಗೆ ಬಹಳ ಮಂದಿ ಕೊರಗರಿಗೆ ಜ್ಞಾನವಿತ್ತು. ದುರಾದೃಷ್ಟವೆಂದರೆ ಈ ರೀತಿಯ ತಮ್ಮ ಜ್ಞಾನವನ್ನು ಇವರು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವುದಿಲ್ಲ. ಈ ಮೂಲಿಕೆಗಳ ಫಲಿಸುವಿಕೆ ಕಡಿಮೆಯಾಗಿ ತನ್ನ ಹೆಸರು ಕೆಡುವ ಸಾಧ್ಯತೆಗಳಿವೆ ಎಂಬ ಆತಂಕವೇ ಇದಕ್ಕೆ ಕಾರಣ. ಪುರುಷರು ಮಾತ್ರವಲ್ಲದೆ ಸಾಕಷ್ಟು ಮಹಿಳೆಯರೂ ಮೂಲಿಕೆ ನೀಡುವುದರಲ್ಲಿ ನೈಪುಣ್ಯತೆಯನ್ನು ಪಡೆದಿದ್ದರು. ಇವರು ಸಸ್ಯ ಜನ್ಯ ಹಾಗೂ ಪ್ರಾಣಿ ಜನ್ಯ ಮೂಲಿಕೆಗಳನ್ನೂ ನೀಡುತ್ತಿದ್ದರು. ಚಿಕ್ಕ ಪುಟ್ಟ ಕಾಯಿಲೆಗಳಾದ ಶೀತ, ಜ್ವರ, ಕಫ, ಗಂಟುನೋವು, ತಲೆನೋವು, ಹೊಟ್ಟೆ ನೋವುಗಳಿಗೆ ಮದ್ದು ನೀಡುವುದು ಸಾಮಾನ್ಯವಾಗಿ ಪ್ರತೀ ಮನೆಯ ಹಿರಿಯರಿಗೂ ತಿಳಿದಿತ್ತು. ಹಾವು ಕಡಿತ, ಚೇಳು ಕಡಿತ, ಮಹಿಳೆಯರ ಬಿಳಿಸೆರಗು ಕಾಯಿಲೆ, ಉಬ್ಬಸ, ಮೂರ್ಛೆ ರೋಗಗಳಿಗೂ ಔಷಧಿ ನೀಡುವುದರಲ್ಲಿ ಕೆಲವರು ಪರಿಣತರಾಗಿದ್ದರು. ಬಹಳಷ್ಟು ಸರಳ ವಿಧಾನದಲ್ಲಿ ಕಾಯಿಲೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು.

ಉದಾಹರಣೆಗೆ : ಸಣ್ಣ ಮಕ್ಕಳಿಗೆ ಕಫವಾದರೆ ಅರ್ಧ ಚಮಚೆಯಷ್ಟು ತುಂಬೆ ಗಿಡದ ಎಲೆಯ ರಸವನ್ನು ಕುಡಿಸುವುದು. ಇದರಿಂದ ಕಫ ನೀರಾಗಿ ಮಲದ ಮೂಲಕ ಹೊರಗೆ ಹೋಗುತ್ತದೆ. ಸ್ವಲ್ಪ ದೊಡ್ಡವರಾದರೆ ತುಂಬೆ ರಸಕ್ಕೆ ನೀರುಳ್ಳಿಯನ್ನೂ ಗುದ್ದಿ ರಸ ಹಿಂಡುತ್ತಾರೆ. ಆಡುಸೋಗೆ(ಆಟಿಸೋಗೆ)ಯ ಚಿಗುರೆಲೆಯನ್ನು ಈರುಳ್ಳಿಯೊಂದಿಗೆ ಗುದ್ದಿ ಅದರ ರಸ ಕುಡಿದರೆ ಎಂಥವರ ಕಫವೂ ನೀರಾಗಿ ಹೋಗುತ್ತದೆ. ಕೆಲವು ಪಂಡಿತರು ನೆಕ್ಕಿ ಗಿಡದ ಚಿಗುರೆಲೆ ಮತ್ತು ತುಂಬೆ ಎಲೆಯನ್ನು ಬೆರೆಸಿ, ರಸ ತೆಗೆದು ಕುಡಿಸುತ್ತಾರೆ.

ಮೂಗು ಕಟ್ಟುವುದು

ಮೂಗು ಕಟ್ಟುವಿಕೆಗೆ ಕೂಡಾ ಇದೇ ಮೂಲಿಕೆಗಳನ್ನು ಬಳಸಲಾಗುತ್ತದೆ. ತುಂಬೆ ಅಥವಾ ನೆಕ್ಕಿ ಗಿಡದ ಚಿಗುರೆಲೆಗಳನ್ನು ಗುದ್ದಿ ಹತ್ತು ನಿಮಿಷಗಳಷ್ಟು ಸಮಯ ಅದರ ವಾಸನೆಯನ್ನು ಮೂಗಿನೊಳಗೆ ಎಳೆದುಕೊಂಡರೆ ಕಟ್ಟಿದ ಮೂಗಿನ ಸಮಸ್ಯೆ ನಿವಾರಣೆಯಾಗುವುದು. ಅದು ಈಗಿನ ವಿಕ್ಸ್ (VICKS) ಅಥವಾ ನೀಲಗಿರಿಯಂತಹ ಪರಿಣಾಮವನ್ನು ಉಂಟುಮಾಡುತ್ತದೆ. ತಲೆಸಿಡಿತ, ತಲೆ ನೋವಿಗೂ ಇದೇ ಔಷಧಿ ಉಪಯೋಗವಾಗುತ್ತದೆ. ರಸವನ್ನು ಹಣೆಗೆ, ಎದೆಗೆ ಹಚ್ಚಿಕೊಂಡರೆ ತಲೆನೋವು ವಾಸಿಯಾಗುತ್ತದೆ.

ಜ್ವರ

ಸಣ್ಣ ಮಕ್ಕಳಿಗೆ ಜ್ವರ ಬಂದರೆ ಸಂಬಾರಬಳ್ಳಿಯ ಎಲೆಯನ್ನು ಹದವಾಗಿ ಬೆಂಕಿಯಲ್ಲಿ ಕಾಯಿಸಿ ಮಗುವಿನ ಹಣೆ, ಕಂಕುಳು ಹಾಗೂ ಕೈಕಾಲಿನ ಗಂಟುಗಳಿಗೆ ಅದರ ಬಿಸಿ ತಾಗಿಸಿದರೆ ಜ್ವರ ಇಳಿಯುತ್ತದೆ. ದೊಡ್ಡವರಿಗೆ ಜ್ವರ ಬಂದರೆ ಬೇಲಿಯಿಂದ ಒಂದು ತುಂಡು ಕಳ್ಳಿಯನ್ನು ತಂದು ಅದರ ಮುಳ್ಳನ್ನು ಕಿತ್ತು ಹಾಕಿ ಅದನ್ನು ಒಲೆಯ ಕೆಂಡದಲ್ಲಿ ಬೇಯಿಸುತ್ತಾರೆ. ಹದವಾಗಿ ಬೆಂದ ಕಳ್ಳಿಯನ್ನು ತೆಗೆದು ಜ್ವರ ಪೀಡಿತ ವ್ಯಕ್ತಿಯ ಹಣೆ, ಕಂಕುಳು ಹಾಗೂ ಕೈಕಾಲಿನ ಗಂಟುಗಳಿಗೆ ಬಿಸಿ ಇಡುತ್ತಾರೆ. ಹೀಗೆ ಐದಾರು ಬಾರಿ ಪುನರಾವರ್ತಿಸಿದರೆ ಜ್ವರ ವಾಸಿಯಾಗುತ್ತದೆ.

ಹೊಟ್ಟೆನೋವು

ಸಣ್ಣ ಮಕ್ಕಳ ಹೊಟ್ಟೆ ನೋವಿಗೆ ತುಂಬೆ ರಸವನ್ನೇ ಕುಡಿಸುತ್ತಾರೆ. ದೊಡ್ಡವರ ಹೊಟ್ಟೆನೋವಿಗೆ ಕುಂಟಲ ಮರದ ಚಿಗುರು, ಪೇರಳೆ ಗಿಡದ ಚಿಗುರು ಇವುಗಳ ಕಷಾಯ ಮಾಡಿ ಕುಡಿಯಬೇಕು. ವಾಂತಿಬೇಧಿಯಾಗುವವರಿಗೂ, ಇದೇ ಕಷಾಯವನ್ನು ನೀಡುತ್ತಾರೆ.

ಬೆನ್ನು / ಗಂಟುನೋವು

ಗಂಟುನೋವು ಮತ್ತು ಬೆನ್ನುನೋವು ಬಾಧಿತರಿಗೆ ಕಿಷ್ಕಾರ ಗಿಡದ ಬೇರು ಅಥವಾ ಕಡೀರು ಬೇರು ಇವುಗಳನ್ನು ಗುದ್ದಿ ಅದಕ್ಕೆ ಜೀರಿಗೆ ಹಾಕಿ ಕಷಾಯ ಮಾಡಿ ಕುಡಿದರೆ ನೋವು ನಿವಾರಣೆಯಾಗುವುದು.

ಕೆಂಗಣ್ಣು

ಕೆಂಗಣ್ಣಾದರೆ ಕೊತ್ತಂಬರಿ ನೆನಸಿದ ನೀರು ಅಥವಾ ಕಿಷ್ಕಾರ ಹೂವಿನ ನೀರನ್ನು ಹನಿ ಹನಿಯಾಗಿ ಕಣ್ಣಿಗೆ ಬಿಡಬೇಕು. ಎರಡು ದಿನ ಹೀಗೆ ಮಾಡಿದರೆ ಕೆಂಗಣ್ಣು ವಾಸಿಯಾಗುವುದು.

ಮೈತುರಿಕೆ

ಮೈ ತುರಿಸುವುದು, ಕಜ್ಜಿ ಇತ್ಯಾದಿ ಚರ್ಮವ್ಯಾಧಿಗಳಿಗೆ ಕಹಿಬೇವಿನ ಸೊಪ್ಪನ್ನು ಬೇಯಿಸಿ ಅದರ ನೀರನ್ನು ಸೇವಿಸುವುದರಿಂದಲೂ, ತುರಿಕೆ ನಿವಾರಣೆಯಾಗುವುದು.

ಕಾಮಾಲೆ ಅಥವಾ ಹಳದಿರೋಗ

ಈ ಕಾಯಿಲೆಗೆ ನೆಲನೆಲ್ಲಿ ಎಂಬ ಕಳೆ ಜಾತಿ ಗಿಡದ ಕಷಾಯ ಮಾಡಿ ಕುಡಿದರೆ ಕಾಯಿಲೆ ಗುಣವಾಗುತ್ತದೆ.

ನಾಲಗೆ ಮರಗಟ್ಟುವುದು

ನಾಲಗೆಯು ದಪ್ಪದಪ್ಪವಾಗಿ ಮರಗಟ್ಟಿದಂತಾಗುವುದಕ್ಕೆ ಕೊಟ್ಟೆ ಮುಳ್ಳಿನ ತೊಗಟೆಯನ್ನು ಗುದ್ದಿ ನಾಲಗೆಗೆ ತಿಕ್ಕುವುದು. ಒಂದೆರಡು ಬಾರಿ ಹೀಗೆ ತಿಕ್ಕಿದರೆ ನಾಲಗೆಯು ಮೊದಲಿನಂತಾಗುತ್ತದೆ.

ಗಾಯ

ಗಾಯವಾದಾಗ ತೆಂಗಿನ ಗಿಡದ ಸೋಗೆಯಲ್ಲಿ(ಸಿರಿ) ಇರುವ ಕೂರು(ಮಡ್ಡಿ)ನ್ನು ತೆಗೆದು ಗಾಯಕ್ಕೆ ಹಚ್ಚಿ, ಒತ್ತಿ ಇಟ್ಟರೆ ರಕ್ತ ಸೋರುವಿಕೆ ನಿಲ್ಲುತ್ತದೆ. ತೇಗ ಮರದ ಚಿಗುರೆಲೆಯನ್ನು ಗುದ್ದಿ ಅದಕ್ಕೆ ಒಂದಿಷ್ಟು ಅರಸಿನ ಪುಡಿ ಬೆರೆಸಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ, ಬಿಸಿ ಆರಿದ ಮೇಲೆ ಎಣ್ಣೆಯನ್ನು ಗಾಯಕ್ಕೆ ಹಚ್ಚಿದರೆ ಎರಡು ಮೂರು ದಿನಗಳಲ್ಲಿ ಗಾಯ ಗುಣವಾಗುತ್ತದೆ.

ಕುರ

ಕುರ ಅಥವಾ ಕುರು ಆದಲ್ಲಿ ಉಪ್ಪಳಿಗೆ ಮರದ ಎಲೆಯ ದಂಡಿನಿಂದ ಬರುವ ಮೇಣವನ್ನು "ಕುರ"ದ ಸುತ್ತ ಹಚ್ಚಬೇಕು. ಹೀಗೆ ಮಾಡುವುದರಿಂದ ಕುರ ಬೇಗನೇ ಹಣ್ಣಾಗಿ ಸೋರುತ್ತದೆ.

ಮೂರ್ಛೆರೋಗ

ಈ ಕಾಯಿಲೆ ಇರುವವರು ಮೂರ್ಛೆ ಹೋಗುವ ಸಂದರ್ಭದಲ್ಲಿ ಅವರ ಕೈಗೆ ಕಬ್ಬಿಣದ ತುಂಡನ್ನು ಕೊಡುತ್ತಾರೆ. ನಂತರ ನೀರುಳ್ಳಿ, ತುಂಬೆ ರಸ ಕುಡಿಸುತ್ತಾರೆ. ನೀರುಳ್ಳಿ ಹಾಗೂ ತುಂಬೆಯ ವಾಸನೆಯನ್ನು ಮೂಗಿನ ಮೂಲಕ ಸೇವಿಸುವಂತೆ ಮಾಡುತ್ತಾರೆ.

ಹಲ್ಲುನೋವು

ಹಲ್ಲುನೋವು ಬಂದರೆ ಹಲ್ಲಿನ ಬುಡಕ್ಕೆ ಬೆಳ್ಳುಳ್ಳಿ ಮತ್ತು ಉಪ್ಪನ್ನು ಇಟ್ಟು ಒತ್ತುತ್ತಾರೆ.

ಮತ್ತು ಕಹಿಬೇವಿನ ಕಡ್ಡಿಯಿಂದ ಹಲ್ಲು ತಿಕ್ಕುತ್ತಾರೆ. ಹಲ್ಲು ಸ್ವಚ್ಛವಾಗಿಡಲು ಇದ್ದಿಲು ಮತ್ತು ಉಪ್ಪನ್ನು ಪುಡಿಮಾಡಿ ಅದರಲ್ಲಿ ಹಲ್ಲು ತಿಕ್ಕುತ್ತಾರೆ.

ಕಜ್ಜಿ

ದೂಪದ ಮರದ ಮೇಣವನ್ನು ತೆಂಗಿನ ಎಣ್ಣೆಯೊಂದಿಗೆ ತೇಗದ ಚಿಗುರೆಲೆ ಬಿಸಿ ಮಾಡಿ ಹಚ್ಚಿದರೆ ಕಜ್ಜಿ ವಾಸಿಯಾಗುತ್ತದೆ.

ಪಾದ ಒಡೆಯುವುದು

ತೆಂಗಿನಕಾಯಿಯ ನೀರನ್ನು ಕುದಿಸಿ, ಕುದಿಸಿ ಅದು ಆವಿಯಾಗಿ ಕೊನೆಗೆ ಪಾತ್ರೆಯಲ್ಲಿ ಅಂಟುರೂಪದ ದ್ರವ ಉಳಿಯುತ್ತದೆ. ಆ ಅಂಟನ್ನು ಕಾಲಿನ ಹಿಮ್ಮಡಿ ಒಡೆಯುವ ಜಾಗಕ್ಕೆ ಲೇಪಿಸಿದರೆ ಕ್ರಮೇಣ ಹಿಮ್ಮಡಿ ಒಡೆಯುವುದು ಕಡಿಮೆಯಾಗುತ್ತದೆ. ಜಾರಿಗೆ ಹುಳಿಯ ಮೇಣವನ್ನು ಪಾದದ ಅಡಿಗೆ ಹಚ್ಚುವುದರಿಂದಲೂ ಕಾಯಿಲೆ ಗುಣವಾಗುವುದು.

ಉಗುರು ಸುತ್ತು

ಉಗುರು ಸುತ್ತು ಆದರೆ ಗೇರುಬೀಜದ ಸಿಪ್ಪೆಯನ್ನು ಕಾಯಿಸಿದಾಗ ಬರುವ ಎಣ್ಣೆಯನ್ನು ಬಿಸಿಯಾಗಿಯೇ ಹಚ್ಚಿದರೆ, ಕ್ಷಣ ಮಾತ್ರದಲ್ಲಿ ನೋವು ನಿವಾರಣೆಯಾಗುತ್ತದೆ.

ಇನ್ನು ಕಾಲಲ್ಲಿ ನೀರು ಬಂದು, ಕಾಲು ದಪ್ಪಗಾಗುವುದು ಹೀಗೆ ಆದಲ್ಲಿ ಗುಮ್ಮ ಸೊಪ್ಪು ಅಥವಾ ಬಾಳೆ ಎಲೆಯಲ್ಲಿ ಕಾಲು ತೊಳೆಯಬೇಕು. ಕಾಲಿನ ಮೇಲಿನಿಂದ ಅಡಿಯವರೆಗೆ ಸೊಪ್ಪಿನಿಂದ ಸವರುತ್ತಾ ತೊಳೆಯಬೇಕು. ಆಗ ನೀರು ಇಳಿದು, ಕಾಲು ಮಾಮೂಲಿ ಸ್ಥಿತಿಗೆ ಬರುತ್ತದೆ ಎಂಬ ನಂಬಿಕೆ.

ಹಾವು ಕಡಿತ

ಕೊರಗರು ಹಾವು ಕಡಿತಕ್ಕೂ ಔಷಧಿ ನೀಡುತ್ತಾರೆ. ಯಾವುದೋ ಒಂದೆರಡು ಬಗೆಯ ಬೇರುಗಳನ್ನು ಅರೆದು ಹಾವು ಕಚ್ಚಿದ ಭಾಗಕ್ಕೆ ಲೇಪನ ಮಡುತ್ತಾರೆ. ಹರಳೆಣ್ಣೆ, ಅರಸಿನವೂ ಇದರಲ್ಲಿ ಬಳಕೆಯಾಗುತ್ತದೆ. ಒಂದೆರಡು ವಾರಗಳ ಪಥ್ಯವೂ ಇರುತ್ತದೆ. ಆ ಬೇರು ಯಾವುದು, ಚಿಗುರು ಯಾವುದು ಎನ್ನುವುದನ್ನು ಗೌಪ್ಯವಾಗಿಡುತ್ತಾರೆ. ಆ ಬೇರಿನ ಹೆಸರನ್ನು ಹೇಳಿ ಪ್ರಚಾರ ಮಾಡಿದರೆ ಮದ್ದಿನ ಗುಣಮಟ್ಟ ಕಡಿಮೆಯಾಗಿ ಅದು ಫಲಿಸುವುದಿಲ್ಲ ಎಂಬ ನಂಬಿಕೆಯೂ ಇದರ ಹಿಂದೆ ಇದೆ.

ಬಸವಳಿಕೆ ತೆಗೆಯುವುದು

ಇನ್ನು ಕೆಲವು ಕಡೆ ಬಸವಳಿಕೆ ತೆಗೆಯುವ ಕ್ರಮವೂ ಇದೆ. ಸತ್ತವರ ಪೀಡನೆಯಿಂದ ಈ ತರದ ಬಸವಳಿಕೆ(ಆಯಾಸಗೊಳ್ಳುವುದು) ಬರುತ್ತದೆ ಎಂಬ ನಂಬಿಕೆ ಕೊರಗರಲ್ಲಿದೆ.

ಒಂದೆರಡು ಹಿಡಿಯಷ್ಟು ಹಲಸಿನ ಮರದ ತೊಗಟೆ ಹಾಗೂ ಅಷ್ಟೇ ಪ್ರಮಾಣದ ಮಾವಿನ ಮರದ ತೊಗಟೆಯನ್ನು ಕೆತ್ತಿ ತಂದು, ಅದನ್ನು ಒಟ್ಟಿಗೆ ಗುದ್ದಿ ಕಂಚಿನ ಬಟ್ಟಲಿಗೆ(ಈಗ ಸ್ಟೀಲು ಬಟ್ಟಲು) ಹಾಕುತ್ತಾರೆ. ಬಸವಳಿಕೆ ಬರುವ ವ್ಯಕ್ತಿಯನ್ನು ಪೂರ್ವಕ್ಕೆ ಮುಖ ಮಾಡಿಸಿ ಕೂರಿಸುತ್ತಾರೆ. ಅವನ ಮುಂದೆ ಕಂಚಿನ ಬಟ್ಟಲಿಗೆ ನೀರು ಹಾಕಿ ತೊಗಟೆಯನ್ನು ಕೈಯಿಂದ ಕಲಸುತ್ತಾರೆ. ಆ ನೀರಿಗೆ ಒಂದು ಚೂರು ಸುಣ್ಣವನ್ನು ಬೆರೆಸುತ್ತಾರೆ. ಆಗ ನೀರು ಒಂದು ರೀತಿ ಹಳದಿ, ಕೆಂಪು ಮಿಶ್ರಿತ ಬಣ್ಣವನ್ನು ಪಡೆಯುತ್ತದೆ. ಕೆಲವೊಮ್ಮೆ ಈ ನೀರು ಕಲಸಿದ ಹಿಟ್ಟಿನಂತೆ ಗಟ್ಟಿಯಾಗುತ್ತದೆ. ಮತ್ತೆ ಕೆಲವೊಮ್ಮೆ ನೀರಾಗಿಯೇ ಇರುತ್ತದೆ. ಒಂದು ವೇಳೆ ನೀರು ಗಟ್ಟಿಯಾದರೆ ಅದು ಸತ್ತ ಹಿರಿಯ ವ್ಯಕ್ತಿಗಳ ಪೀಡನೆಯಿಂದ ಬಸವಳಿಕೆ ಬಂದಿರುವುದು ಎಂದು ಖಚಿತವಾಗುತ್ತದೆ. ನೀರು ನೀರಾಗಿಯೇ ಇದ್ದರೆ ಅದು ಸಹಜ ಬಸವಳಿಕೆ ಎಂದೆನಿಸಿಕೊಳ್ಳುತ್ತದೆ. ಈ ನೀರನ್ನು ಬಾಧಿತನಿಗೆ ನೀವಾಳಿಸಿ, ಒಂದು ಗುಟುಕು ಕುಡಿಸಿ ದೂರ ಕೊಂಡುಹೋಗಿ ಚೆಲ್ಲುತ್ತಾರೆ. ಇದು ಬಸವಳಿಕೆ ತೆಗೆಯುವ ಕ್ರಮವೂ ಹೌದು ಸತ್ತವರ ಬಾಧೆಯೋ ಎಂದು ತಿಳಿಯುವ ವಿಧಾನವೂ ಹೌದು. ಸಾಮಾನ್ಯವಾಗಿ ಈ ಕ್ರಿಯೆಯನ್ನು ಹಿರಿಯ ಮಹಿಳೆಯರೇ ನೆರವೇರಿಸುತ್ತಾರೆ.

ಕೊದಿ ತೆಗೆಯುವುದು

ಯಾವುದೋ ಅಲೌಕಿಕ ಶಕ್ತಿಗಳ(ಹೆಚ್ಚಿನ ಸಂದರ್ಭದಲ್ಲಿ ಸತ್ತವರದ್ದೇ) ಬಾಧೆಯಿಂದ ಹೊಟ್ಟೆ ಉಬ್ಬರಿಸುವುದು, ಅಜೀರ್ಣವಾಗುವುದು ಎಂಬುವುದಾಗಿ ನಂಬುವ ಈ ಜನರು ಅದರ ನಿವಾರಣೆಗೆ ಕೊದಿ ತೆಗೆಯುವ ಕ್ರಮವನ್ನು ಅನುಸರಿಸುತ್ತಾರೆ. ಈ ವಿಧಿಯನ್ನು ಪರಿಣಿತರು ಮಾತ್ರ ನಡೆಸುತ್ತಾರೆ.

ಮೂರು ದಾರಿಗಳು ಸಂಧಿಸುವ ಸ್ಥಳದಿಂದ ಒಂದಷ್ಟು ಒಣ ಹುಲ್ಲು ಮತ್ತು ಹಸಿ ನೆಕ್ಕಿ ಸೊಪ್ಪು ತರಿಸಿಕೊಂಡು ಮಣ್ಣಿನ ಗಡಿಗೆಯೊಳಗೆ ಹಾಕುತ್ತಾರೆ. ಅದರೊಳಗೆ ಐದಾರು ಒಣಮೆಣಸು ಹಾಕುತ್ತಾರೆ. ಕಾಯಿಲೆ ಪೀಡಿತನನ್ನು ಪೂರ್ವಾಭಿಮುಖವಾಗಿ ಕೂರಿಸುತ್ತಾರೆ. ನಂತರ ಗಡಿಗೆಯೊಳಗಿನ ಹುಲ್ಲಿಗೆ ಬೆಂಕಿ ಹಚ್ಚುತ್ತಾರೆ. ಅದು ಉರಿಯುತ್ತಿರುವಾಗಲೇ ಪೀಡಿತನ ಹೊಟ್ಟೆಗೆ ಗಡಿಗೆಯ ಬಾಯಿಯನ್ನು ಒತ್ತಿ ಹಿಡಿಯುತ್ತಾರೆ. ಒಂದೆರಡು ಕ್ಷಣಗಳ ನಂತರ ಗಡಿಗೆ ನೆಟ್ಟಗೆ ಮಾಡಿ ಅಗಲವಾದ ಗಂಜಿ ನೀರಿನ ಬಟ್ಟಲಿಗೆ ಕವಚ ಹಾಕುತ್ತಾರೆ. ಬಟ್ಟಲು ಸಮೇತ ಗಡಿಗೆಯನ್ನು ಎತ್ತಿ ಪೀಡಿತನಿಗೆ ಮೂರು ಸುತ್ತು ನೀವಾಳಿಸುತ್ತಾರೆ. ಗಡಿಗೆಗೆ ಉಗುಳುವಂತೆ ಸೂಚಿಸುತ್ತಾರೆ. ಬಳಿಕ ಅದನ್ನು ಮೂರು ದಾರಿ ಸಂಧಿಸುವಲ್ಲಿಗೆ ಕೊಂಡು ಹೋಗಿ ಗಂಜಿ ನೀರು ಸಮೇತ ಗಡಿಗೆಯನ್ನು ಎಸೆಯುತ್ತಾರೆ. ಅಲ್ಲಿಗೆ ಸತ್ತವರ ಬಾಧೆ ನಿವಾರಣೆಯಾಗುತ್ತದೆ ಎಂಬುವುದು ಇವರ ನಂಬಿಕೆ.

ಇನ್ನು ಕೆಲವು ಪ್ರಾಣಿಜನ್ಯ ಮೂಲಿಕೆಗಳೂ ಬಳಕೆಯಲ್ಲಿವೆ

ಕೆಮ್ಮು : ಕಪ್ಪೆಯ ಹಿಂಭಾಗದ ಕಾಲುಗಳ ಚರ್ಮ ಸುಲಿದು ಅದಕ್ಕೆ ಅರಶಿನ

ಹಚ್ಚಿ, ಬೆಂಕಿಯಲ್ಲಿ ಸುಟ್ಟು ತಿಂದರೆ ಒಣಕೆಮ್ಮು ನಿವಾರಣೆಯಾಗುತ್ತದೆ.

ನಿದ್ದೆಯಲ್ಲಿ ಮೂತ್ರ ಮಾಡುವುದು : ಆಮೆಯ ಪಿತ್ತಕೋಶವನ್ನು ಹಸಿಯಾಗಿ ನುಂಗಿದರೆ ಮಕ್ಕಳು ನಿದ್ದೆಯಲ್ಲಿ ಮೂತ್ರ ಮಾಡುವುದು ಕಡಿಮೆಯಾಗುತ್ತದೆ.

ಪಾದ ಒಡೆಯುವುದು : ಪಾದದ ಅಡಿಭಾಗ ಒಡೆಯುವ ಕಾಯಿಲೆಗೆ ಹೆಬ್ಬಾವಿನ ಕೊಬ್ಬು ಹಚ್ಚಿದರೆ ಒಂದೇ ವಾರದಲ್ಲಿ ನಿವಾರಣೆಯಾಗುತ್ತದೆ.

ಗಳಗಂಡ : ಹೆಬ್ಬಾವಿನ ಬೆನ್ನು ಮೂಳೆಯನ್ನು ಮಣಿಗಳಂತೆ ಪೋಣಿಸಿ ಕೊರಳಿಗೆ ಹಾಕಿಕೊಂಡರೆ ಗಳಗಂಡ ಕಾಯಿಲೆ ವಾಸಿಯಾಗುವುದು.

ಕಪ್ಪು ಆಮೆ ಹಾಗೂ ಹೆಬ್ಬಾವಿನ ಹಸಿ ರಕ್ತ ಹೀರುವುದರಿಂದ ರಕ್ತ ಪರಿಚಲನೆ ಸಾಮಾನ್ಯವಾಗುತ್ತದೆ. ಈಗ ಈ ಎಲ್ಲಾ ವಿಧಾನಗಳು ಮೂಢನಂಬಿಕೆಗಳಾಗಿ ಕಂಡು ಬಂದರೂ ಅಂದು ಆತ್ಮಸ್ಥೈರ್ಯ ತುಂಬಿ ಕೊರಗರನ್ನು ಜೀವಂತವಾಗಿರಿಸಿದ್ದೇ ಇಂತಹ ವೈದ್ಯಪದ್ಧತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ರೀತಿಯ ಮೂಲಿಕೆಗಳಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲದಿದ್ದರೂ ಸ್ವತಃ ಅವರವರೇ ಕಾಯಿಲೆಗೆ ಔಷಧಿ ತೆಗೆದುಕೊಳ್ಳುವ ಮೊದಲು ಬಲ್ಲವರಿಂದ ತಿಳಿದುಕೊಂಡರೆ ಪರಿಣಾಮಕಾರಿಯಾದೀತು.

ಸಾಂಸ್ಕೃತಿಕ ಕಲೆಗಳು / ಮನೋರಂಜನೆಗಳು

ಕೊರಗ ಸಮುದಾಯದ ಮನೋರಂಜನಾ ಪರಿಕಲ್ಪನೆ ಅನನ್ಯವಾದುದು. ಬಿಡುವಿನ ವೇಳೆ ಹಾಗೂ ಮದುವೆ ಮೊದಲಾದ ಸಂಪ್ರದಾಯ ಆಚರಣೆಗಳ ಸಂದರ್ಭದಲ್ಲಿ ತಮ್ಮದೇ ಶೈಲಿಯ ಮನರಂಜನಾ ವಿಧಾನಗಳನ್ನು ಅನುಸರಿಸಿ ಖುಷಿ ಪಡುತ್ತಾರೆ, ಹಾಡುತ್ತಾರೆ, ಕುಣಿಯುತ್ತಾರೆ. ಸಾಮಾನ್ಯವಾಗಿ ಇದು ಎಲ್ಲಾ ಗಿರಿಜನ ಪಂಗಡಗಳಲ್ಲೂ ಕಂಡು ಬರುತ್ತದೆ. ಇವುಗಳ ಜೊತೆಗೆ ಕೆಲವು ಪಂಗಡಗಳು ಮನರಂಜನೆಗಾಗಿ ವಾದ್ಯ ಪರಿಕರಗಳನ್ನೂ ಬಳಸುತ್ತೇವೆ. ಇನ್ನು ಕೆಲವರಲ್ಲಿ ಕತೆ ಹೇಳುವುದು, ಒಗಟುಗಳನ್ನು ಬಿಡಿಸುವುದು, ಬೇಟೆಯಾಡುವುದು, ಆಟೋಟಗಳಲ್ಲಿ ಪಾಲ್ಗೊಳ್ಳುವುದು ಹಾಗೂ ಸಾಹಸ ಪ್ರದರ್ಶನಗಳನ್ನು ಮಾಡುವುದು. ಇತ್ಯಾದಿಗಳೂ ಈ ಕಾಡು ಜೀವಿಗಳ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಕೆಲವು ಮನರಂಜನಾ ಪರಿಕಲ್ಪನೆಗಳಾಗಿವೆ. ತಮಾಷೆ ಮಾತುಗಳನ್ನು ಆಡುತ್ತಾ, ತಾನೂ ಸಂತಸಪಟ್ಟು, ಇತರರನ್ನೂ ರಂಜಿಸುವ ಇಬ್ಬರ ಬದುಕು ಮಾತ್ರ ಅತಂತ್ರ, ಅನಿಶ್ಚಿತ! ಕೊರಗರಲ್ಲೂ ಹಾಡು, ಕುಣಿತಗಳ ಜೊತೆ ಹಲವು ವಿಧದ ಮನರಂಜನೆಯ ಪರಿಕಲ್ಪನೆಗಳಿವೆ. ಈ ಸಮುದಾಯದ ರಾಜ್ಯಮಟ್ಟದ ಸಂಘಟನೆಯ ಅಧ್ಯಕ್ಷರೂ ಸಮುದಾಯದ ಕಟ್ಟುಕಟ್ಟಳೆಗಳ ಬಗ್ಗೆ ಮಾಹಿತಿಯುಳ್ಳವರೂ ಆದ ಕಡಂದಲೆ ಗೋಳಿದಡಿ

ಮದುವೆಯ ದಿನ ಸಂಭ್ರಮದ ಡೋಲು ವಾದನ

ಕೊರಗರ ಬಲೆಪಿನ ಗುರಿಕಾರ ಸುಂದರ ಕೊಡ್ತರು ಈ ಸಮುದಾಯದ ಮನರಂಜನೆಗಳ ಬಗ್ಗೆಯೂ ಮಾಹಿತಿ ನೀಡುತ್ತಾರೆ.

ಕೊರಗರ ಸಂಪ್ರದಾಯ ಆಚರಣೆಗಳಲ್ಲಿ ಮನೋರಂಜನೆಗಳು

ಈ ಸಮುದಾಯದಲ್ಲಿ ಹೆಣ್ಣು ಕೂಸೊಂದು ಹುಟ್ಟಿದರೆ ಸಂತೋಷ ಸಂಭ್ರಮಗಳು ಎಲ್ಲೆಲ್ಲೋ ಹರಿದಾಡುತ್ತವೆ; ನಲಿದಾಡುತ್ತವೆ. ಹೆಣ್ಣು ಸಂತಾನದ ಕುಡಿ(ಚಿಗುರು), ಹೆಣ್ಣಿಂದಲೇ ವಂಶಾಭಿವೃದ್ಧಿ ಎಂಬ ನಂಬಿಕೆಯೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ ಕೆಲವೊಂದು ಸಂಪ್ರದಾಯ ಆಚರಣೆಗಳು ನಡೆಯುತ್ತದೆ. ಅದರ ಜೊತೆಗೆ ಮನರಂಜನೆಗಳೂ ಧಾರಾಳವಾಗಿ ನೆರೆದವರಿಗೆ ಲಭಿಸುತ್ತವೆ. ಸಂಪ್ರದಾಯ ಆಚರಣೆಯೊಂದಿಗೆ ಹಲವು ತರದ ಹಾಡುಗಳನ್ನು, ಮಹಿಳೆಯರು ಹಾಡುತ್ತಾರೆ. ಡೋಲು ಬಡಿದು ಕುಣಿಯುತ್ತಾರೆ. ಹೆಣ್ಣು ಕೂಸಿನ ಉಜ್ವಲ ಭವಿಷ್ಯಕ್ಕಾಗಿ ಹಾರೈಸುತ್ತಾರೆ. ಮಗು ಹುಟ್ಟಿದ ಏಳನೇ ದಿನಕ್ಕೆ ನಾಮಕರಣ ಮಾಡುವ ವಿಧಿ ನಡೆಯುತ್ತದೆ. ಅಂದು ಕೂಡಾ ಹಾಡು, ಕುಣಿತ, ಡೋಲುವಾದನಗಳು ನಡೆಯುತ್ತದೆ. ಹೆಣ್ಣು ಮಗು ಹುಟ್ಟಿದ ಸಂಭ್ರಮ ಆಚರಿಸುವ ಹಾಡೊಂದು ಹೀಗೆ ಮುಂದುವರೆಯುತ್ತದೆ...

ಅಪ್ಪೆ ಮೂಲ ತೆಗುಲುಗತ
ನಮ್ಮ ಬಲೆಪುಡು...
ಕೇಪುಲ ಪೂ ಅರಲುಗತ
ಕೊಪದ ಜಾಲುಟ್
ಸಂಪು ಗಾಳಿ ಬೀಜಿಗತ
ನಮ್ಮ ಕೂಟಡ್
ಪೊನ್ನ ಕೊಡಿ ಒರಿಪುಗತ
ಅಪ್ಪೆ ಕುಟುಮನ್...
ಕಲ್ಲು ಕಲತ ಇರ್ಲು ಕರಿಕ್
ತೊಡರು ತೋಜಿಗ್...
ಸಂಸಾರದ ಮಾಯಲೆಗ
ಬೊಲ್ಪು ಚಿಕ್ಕುಗ್...
ಸಾರಕಾಲ ಪೂ ನೀರ್
ಬೈಕಾಡ್ಯಪ್ಪೆಗ...
ನನ ಏತೋ ಕಾಲ ಮುಟ್ಟ
ತೊಡರು ತನಿಯಗ...

ಈ ಸಮುದಾಯದಲ್ಲಿ ಹುಡುಗಿಯೊಬ್ಬಳು ಪ್ರಾಯಕ್ಕೆ ಬಂದಾಗ(ಮೈ ನೆರೆದಾಗ)ಲೂ ಇದೇ ಪರಿಯ ಸಂಭ್ರಮ ಆಚರಿಸುತ್ತಾರೆ. ಮೈ ನೆರೆತ ಏಳನೇ ದಿನ 'ಪೆರತ' ಎಂಬ

ಆಚರಣೆ ನಡೆಯುತ್ತದೆ. ಅಂದು ಕೂಡ ಭರಪೂರ ಹಾಡುಗಳ ರಸದೌತಣ ನೆರೆದವರನ್ನು ರಂಜಿಸುತ್ತದೆ. ಈ ದಿನ ಹಾಡುವ ಹಾಡುಗಳು ಕೆಲವು ಬಾರಿ ಶಿಷ್ಟತೆಯ ಗಡಿಯನ್ನು ಮೀರಿ ಹೋಗುವುದೂ ಇದೆ. ಸಂಪ್ರದಾಯಸ್ಥರಿಗೆ ಇದು ಕೊಂಚ ಇರಿಸುಮುರಿಸು ಎನಿಸಿದರೂ ರಂಜನೆಗೆ ಇಂಬು ಕೊಡುತ್ತದೆ. ಹುಡುಗಿಯ ದೇಹ ಸೌಂದರ್ಯವನ್ನು ವರ್ಣಿಸುವ ಹಾಗೂ ಲೈಂಗಿಕ ಕ್ರಿಯೆಗೆ ಪ್ರಚೋದಿಸುವ ಈ ಹಾಡುಗಳನ್ನು ಈಗ ಹಾಡುತ್ತಿಲ್ಲವಾದರೂ ಹಿಂದೆ ಯಥೇಚ್ಚವಾಗಿ ಹಾಡಲಾಗುತ್ತಿತ್ತು. ಅಂತಹ ಒಂದು ಹಾಡು ಈ ರೀತಿ ಸಾಗುತ್ತದೆ.

ಲೇಲೇ ಲೇ ತರಸೋ
ಲೇಲೇ ಲೇ ತರಸೋ
ಚೆಲ್ಲೆರನತಾ ತರಸೋ
ಕೇಲೆರನತಾ... ॥ಲೇ ಲೇ॥

ನಿನ್ನ ಮೂಕು ಮಲ್ಲೆನಾ ತರಸೋ
ಮೂಕುದ ಕೊಡಂಗೆ ಮಲ್ಲೆನಾ ತರಸೋ
ಚೆಲ್ಲೆರನತ ತರಸೋ
ಕೇಲೆರನತಾ... ॥ಲೇ ಲೇ॥

ನಿನ್ನ ಕೆಬಿ ಮಲ್ಲೆನಾ ತರಸೋ
ಕೆಬಿತ ಕೊಂಡಲೆ ಮಲ್ಲೆನಾ ತರಸೋ
ಚೆಲ್ಲೆರನತಾ ತರಸೋ
ಕೇಲೆರನತಾ... ॥ಲೇ ಲೇ॥

ನಿನ್ನ ಬಿರೆಲು ಮಲ್ಲೆನಾ ತರಸೋ
ನಿನ್ನ ಉಂಗಿಲ ಮಲ್ಲೆನಾ ತರಸೋ
ಚೆಲ್ಲೆರನತ ತರಸೋ
ಕೇಲೆರನತಾ.... ॥ಲೇ ಲೇ॥

ನಿನ್ನ ಕೈ ಮಲ್ಲೆನಾ ತರಸೋ
ಕೈತ ಗಡವು ಮಲ್ಲೆನಾ ತರಸೋ
ಚೆಲ್ಲೆರನತ ತರಸೋ
ಕೇಲೆರನತಾ... ॥ಲೇ ಲೇ॥

ಈ ಹಾಡು ಇನ್ನೂ ಮುಂದುವರಿಯುತ್ತದೆ. ಹುಡುಗಿಗೆ ತಲೆನೀರು ಸ್ನಾನ ಮಾಡುವಾಗ, ಮದುಮಕ್ಕಳ ಶೃಂಗಾರ ಮಾಡುವಾಗ, ಈ ಪರಿಯ ಹಾಡುಗಳನ್ನು ಹಾಡುತ್ತಾರೆ. ಜನ ಮೈಯೆಲ್ಲ ಕಿವಿಯಾಗಿ ಈ ಹಾಡುಗಳನ್ನು ಸವಿಯುತ್ತಾರೆ. ಇದೇ

ರೀತಿಯ ಸಂಭ್ರಮ ಮದುವೆಯ ಸಂದರ್ಭದಲ್ಲೂ ನಡೆಯುತ್ತದೆ. ಮನೆಯ ಹೊರಗಡೆ ಸೇರಿದ ಜನ ಡೋಲುವಾದನ ಮಾಡಿ ಕುಣಿಯುತ್ತಾರೆ, ಹಾಡುತ್ತಾರೆ. ಇತರರನ್ನೂ ರಂಜಿಸಿ, ತಾವು ಆನಂದಿಸುತ್ತಾರೆ. ಆದುದರಿಂದ ಕೊರಗ ಸಮುದಾಯದಲ್ಲಿ ಹಾಡು, ಕುಣಿತಗಳೇ ಪ್ರಧಾನ ಮನೋರಂಜನೆಗಳು. ವಿಪರ್ಯಾಸವೆಂದರೆ ಈ ಪರಿಯ ಸಂಭ್ರಮಾಚರಣೆಗಳು ಈಗ ಕಡಿಮೆಯಾಗಿ, ಮನರಂಜನೆಯ ಪರಿಕಲ್ಪನೆ ಬದಲಾದಂತೆ ಕಂಡುಬರುತ್ತದೆ.

ಈ ಸಮುದಾಯದಲ್ಲಿ ಹೆಣ್ಣಿನ ಮನೆಯಲ್ಲೇ ಮದುವೆ ನಡೆಯುವುದು ಸಂಪ್ರದಾಯವಾಗಿದೆ. ಆ ಸಮಯದಲ್ಲಿ ಮದುವೆ ಮನೆಯಲ್ಲಿ ಒಂದಷ್ಟು ಹೊತ್ತು ಮನ ತಣಿಸುವ ಕ್ಷಣಗಳು ಘಟಿಸುತ್ತದೆ. ಹುಡುಗನ ಕಡೆಯ ದಿಬ್ಬಣವು ಕೊಳಲು, ಡೋಲುವಾದನದೊಂದಿಗೆ ಹುಡುಗಿಯ ಮನೆ ತಲುಪಿದಾಗ ಮದುವೆ ಮನೆಯಲ್ಲಿ ಗದ್ದಲ, ಸಂಭ್ರಮ! ದಿಬ್ಬಣದ ನೆಂಟರಿಗೆ ದಣಿವಾರಿಸಿಕೊಳ್ಳಲು, ಬಾಯಾರಿ ಬಂದವರಿಗೆ ಕುಡಿಯಲು ನೀರು ಪೂರೈಕೆ, ಆರೈಕೆ ನಡೆದ ಬಳಿಕ ಔಪಚಾರಿಕ ಕುಶಲೋಪಚಾರ ನಡೆಯುತ್ತದೆ. ಬಂದವರ ದಣಿವಾರಿದಂತೆ ಅನೌಪಚಾರಿಕತೆ ಗರಿಗೆದರಿಕೊಳ್ಳುತ್ತದೆ. ನಗೆ ಚಟಾಕಿಗಳು ಹಾರಿಸಲ್ಪಡುತ್ತದೆ. ಎರಡೂ ಕಡೆಯವರಿಂದ ನಗೆ ಚಟಾಕಿಗಳು ಮದುವೆ ಮನೆಯನ್ನು ನಗೆ ಗಡಲಲ್ಲಿ ತೇಲಿಸುತ್ತದೆ.

ಅದರ ಒಂದು ಮಾದರಿಯನ್ನು ಗಮನಿಸುವುದಾದರೆ...

ಮನೆಯವನು : ನಿಮ್ಮ ಊರಿನಲ್ಲಿ ಎಲ್ಲ ಹೇಗಿದ್ದಾರೆ?

ಬಂದವನು : ಊರಿನ ಅರದಾಯಿಯನ್ನು ಬಿಟ್ಟು ಎಲ್ಲರೂ ಸೌಖ್ಯ?

ಮನೆಯವನು : ಅವನಿಗೇನಾಗಿದೆ?

ಬಂದವನು : ಏನಾಗಿದೆ ಅಂತ ಗೊತ್ತಿಲ್ಲ... ಆದರೆ ಡೋಲಿನವರು ಎಲ್ಲಿ? ಡೋಲಿನವರು ಎಲ್ಲಿ ಅಂತ ಪದೇ ಪದೇ ಕೇಳುತ್ತಿರುತ್ತಾರೆ.

ಮನೆಯವನು : ಯಾಕಂತೆ?

ಬಂದವನು : ಮುದಿಯನಿಗೆ ದಿನ ಹತ್ತಿರ ಬಂದಿದೆ!

ಹೀಗೆ ಮಾತುಕತೆ, ಚಟಾಕಿಗಳು ಮುಂದುವರಿದಂತೆ ಹುಡುಗಿಯ ಕಡೆಯ ಹಿರಿಯ ವ್ಯಕ್ತಿಯೊಬ್ಬ(ಗುರಿಕಾರ) ಯಾವುದೋ ನೆಪ ಮಾಡಿ ನೆಂಟರ ಮುಂದೆ ಬಿದ್ದಂತೆ ನಟಿಸುತ್ತಾರೆ. ಹುಡುಗನ ಕಡೆಯವರು ಆತನನ್ನು ಕಷ್ಟಪಟ್ಟು ಮೇಲೆ ಎತ್ತುವಂತೆ ಮಾಡುತ್ತಾರೆ. ಈ ಸಂದರ್ಭ ಅವರಿಬ್ಬರ ಆಟ ಮತ್ತು ಮಾತುಗಳು ನೆರೆದವರನ್ನು ನಗೆ ಸಾಗರದಲ್ಲಿ ತೇಲಿಸುತ್ತದೆ. ಮನರಂಜನೆ ಬುಗಿಲೇಳುತ್ತದೆ! ಇದಾದ ಬಳಿಕ ಮದುವೆಯ ಕಡೆಯ ಗುರಿಕಾರ ಒಂದು ಕೋಳಿ ಮತ್ತು ಒಂದು ಕಾಯಿಯನ್ನು ನೆಂಟರಿಗೆ ತೋರಿಸುವ ಸಂಪ್ರದಾಯ ನಡೆಯುತ್ತದೆ. ಅದು ಅಂದಿನ ಮದುವೆ ಊಟ ಮಾಂಸಾಹಾರದ್ದಾಗಿದೆ ಎನ್ನುವ ಸಂಕೇತವನ್ನು ಸೂಚಿಸುತ್ತದೆ.

ಸಾಂಪ್ರದಾಯಿಕ ಉಡುಗೆಯಲ್ಲಿ

ಕೋಳಿ ಅಡುಗೆ ಮನೆಗೆ ಹೋಗುತ್ತಿದ್ದಂತೆ ಗುರಿಕಾರ, ಹುಡುಗನ ಕಡೆಯ ಗುರಿಕಾರನಿಗೆ ಕಾಯಿಯನ್ನು ಕೊಟ್ಟು ಅದನ್ನು ಒಡೆದು ಕೊಡುವಂತೆ ವಿನಂತಿಸುತ್ತಾನೆ. ಹುಡುಗನ ಕಡೆಯವರು ಅದನ್ನು ಬರಿಗೈಯಲ್ಲಿ ಒಡೆದು ಹಿಂದೆ ಕೊಡಬೇಕು. ಇದು ನೆಂಟರಿಗೊಂದು ಸವಾಲು ಕೂಡಾ ಹೌದು. ಆ ಕಡೆಯಿಂದ ಕೈಗೆ ಬಟ್ಟೆ ಸುತ್ತಿ ಕಾಯಿ ಒಡೆಯಲು ಯುವಕನೊಬ್ಬ ಸಿದ್ಧನಾಗುತ್ತಾನೆ. ಕಾಯಿಯನ್ನು ತಾಳೆಯ ಗರಿಯಿಂದ ಮಾಡಿದ ಸುರುಳಿಯ(ಉಂಗುರ) ಮೇಲೆ ಇರಿಸಿ, ಮೊಣಕಾಲೂರಿ ಕುಳಿತುಕೊಂಡ ಯುವಕ ಒಂದೇ ಏಟಿಗೆ ಅದನ್ನು ಚೂರು ಚೂರಾಗಿ ಒಡೆದಾಗ ಅಲ್ಲೆಲ್ಲ ಸಂಭ್ರಮವೋ ಸಂಭ್ರಮ! ಕೆಲವೊಮ್ಮೆ ಕಾಯಿ ಒಂದೆರಡು ಹೊಡೆತಕ್ಕೆ ಒಡೆಯುವುದಿಲ್ಲ. ಆಗ ಒಬ್ಬರ ಹಿಂದೆ ಒಬ್ಬರು ಕಾಯಿ ಒಡೆಯಲು ಸಿದ್ಧರಾಗುವುದು, ಪ್ರಯತ್ನಿಸುವುದು, ಸೋಲುವುದು ನಡೆಯುತ್ತದೆ. ಆ ಆಟ ನೋಡುಗರ ಮನರಂಜಿಸುವಲ್ಲಿ ಸಂಪೂರ್ಣ ಸಫಲತೆಯನ್ನು ಕಾಣುತ್ತದೆ. ಕುತೂಹಲವನ್ನು ಕೆರಳಿಸುತ್ತದೆ.

ಇದು ಆತಿಥ್ಯ ವಹಿಸಿದವರಿಗೆ ಸವಾಲು, ಅತಿಥಿಗಳಿಗೆ ಸಾಹಸ ಪ್ರದರ್ಶನಕ್ಕೆ ಅವಕಾಶ! ಆದರೂ ಸೌಹಾರ್ದಯುತ ವಾತಾವರಣ ಎಲ್ಲರಿಗೂ ಸಮಾಧಾನ!

ಮದುವೆಯ ವಿಧಿಗಳೆಲ್ಲ ಮುಗಿದ ಬಳಿಕ, ಕೊನೆಯಲ್ಲಿ ನೆಂಟರು ಹಿಂದಿರುಗುವ ಸಂದರ್ಭದಲ್ಲಿ ಇನ್ನೊಂದು ಪ್ರಸಂಗ ನೆರೆದವರ ಮನರಂಜಿಸುತ್ತದೆ. ಅದು ನದಿ ದಾಟಿಸುವುದು... ಊಟ ಮಾಡಿ ಮರಳಿ ಮನೆಗೆ ಹೊರಡುವ ನೆಂಟರು, ಮದುವೆ ಮನೆಯ ಅಂಗಳ ದಾಟುತ್ತಿರುವಂತೆಯೇ ಅಲ್ಲೊಬ್ಬ ಕಾಮಿಡಿ ನಾವಿಕ ಎದುರಾಗುತ್ತಾನೆ. ಯಾವುದೋ ಒಂದು ಹಳೆಯ ಬುಟ್ಟಿಗೆ ಹಗ್ಗ ಕಟ್ಟಿ, ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಿರುತ್ತಾನೆ. ಕೈಯಲ್ಲಿ ಒಂದು ಉದ್ದನೆಯ ಹಾಯಿಗೋಲು(ದೋಣಿ ನಡೆಸುವ ಸಾಧನ) ಹಿಡಿದು ಕೊಂಡಿರುತ್ತಾನೆ. "ನೀವು ಇಲ್ಲಿಂದ ಆಚೆ ಹೋಗಬೇಕಾದರೆ ಆಳವಾದ ನದಿಯನ್ನು ದಾಟಬೇಕಾಗುತ್ತದೆ; ನೀರು ಬಹಳವಿದೆ; ನದಿ ಆಳವಾಗಿದೆ" ಎಂದೆಲ್ಲ ಬೊಗಳೆಬಿಡುತ್ತಾನೆ. ನೆಂಟರನ್ನು ಆಚೆ ದಡಕ್ಕೆ ತಲುಪಿಸುವಂತೆ ನಟಿಸುತ್ತಾನೆ. ಆತನ ನಡಿಗೆ; ದೋಣಿ ನಡೆಸುವ ಪರಿಗೆ ನೋಡುವ ಜನ ಬಿದ್ದು ಬಿದ್ದು ನಗುತ್ತಾರೆ. ಅವನ ವೇಷಭೂಷಣಗಳೂ ನಗು ತರಿಸುವಂತಿರುತ್ತದೆ. ಜನರನ್ನು ಕಾಡಿ, ಪೀಡಿಸಿ ಚಿಲ್ಲರೆ ಹಣ ಕೇಳುವ ಈ ಹಾಸ್ಯ ನಾವಿಕನ ನಟನೆ ಜನಮನದಲ್ಲಿ ಅಚ್ಚಾಗುವಂತೆ ಇರುತ್ತದೆ. ಕೆಲವು ವರ್ಷಗಳ ಹಿಂದೆ

ಈ ರೀತಿಯ ಹಾಸ್ಯ ಅಥವಾ ಮನರಂಜನಾ ಕಲ್ಪನೆ ಸಮುದಾಯದ ಪ್ರತಿಯೊಂದು ಮದುವೆ ಕಾರ್ಯದಲ್ಲೂ ಇತ್ತು. ಈಗೀಗ ಇದು ಮಾಯವಾಗುತ್ತಿದೆ.

ಡೋಲುವಾದನ

ಡೋಲು ಕೊರಗ ಸಮುದಾಯದ ಒಂದು ಅವಿಭಾಜ್ಯ ಮನೋರಂಜನಾ ಪರಿಕರ. ಡೋಲುವಾದನವನ್ನು ಈ ಜನರು ಅವರ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳಲ್ಲೂ ಬಳಸಿಕೊಳ್ಳುತ್ತಾರೆ. ಈ ಡೋಲುವಾದನದ ಬಗ್ಗೆ ಅಪಾರ ಮಾಹಿತಿ ಹೊಂದಿರುವ ನಡ್ಸಾಲು ಭಾಗದ ಕೋಡು ಗ್ರಾಮದ ರಮೇಶ್ ಮಂಚಕಲ್ಲು ಮಾಹಿತಿ ನೀಡಿದ್ದಾರೆ. ಈ ಡೋಲು ವಾದನದಲ್ಲಿ ಹಲವಾರು(ನೂರಕ್ಕೂ ಹೆಚ್ಚು) ತಾಳಗಳಿವೆ. ಈ ರಿದಮ್‌ಗಳನ್ನು ಇವರು ಸಂದರ್ಭಕ್ಕೆ ತಕ್ಕಂತೆ ನುಡಿಸುತ್ತಾರೆ. ಉದಾಹರಣೆಗೆ ಧಾರ್ಮಿಕ ಆಚರಣೆಗಳಲ್ಲಿ, ಅಂದರೆ ಇವರ ಕುಲದೈವ ಕೊರಗಜ್ಜನ ವಾರ್ಷಿಕ ಅಗೆಲ್ ಆಚರಣೆಯಲ್ಲಿ, ಕೊರಗಜ್ಜನ ಪ್ರಾರ್ಥನೆ ಟಕ್ಕು (ತಾಳ, ರಿದಂ), ದೈವ ಆವೇಶ ಭರಿಸಲು ದರ್ಶನದ ಟಕ್ಕು, ಅಗೆಲ್ ಬಡಿಸುವಾಗ(ಅನ್ನ ಬಡಿಸುವಾಗ) ಅಗೆಲ್‌ದ ಟಕ್ಕುಗಳನ್ನು ನುಡಿಸುತ್ತಾರೆ. ಇನ್ನು ಸಾಮಾಜಿಕ ನ್ಯಾಯ ಕೂಟದ ವೇಳೆ ಕೂಟದ ಟಕ್ಕು, ನೀತಿದ ಟಕ್ಕು ಮೊದಲಾದ ತಾಳಗಳನ್ನು ನುಡಿಸುತ್ತಾರೆ. ಇದೇ ಅಲ್ಲದೆ ಮದುವೆ, ಪೆರತ (ತಲೆನೀರ ಮದುವೆ), ನಾಮಕರಣದ ಸಂದರ್ಭಗಳಲ್ಲೂ ಬೇರೆ ಬೇರೆ ಟಕ್ಕುಗಳಿವೆ.

ಮದುವೆಯಲ್ಲಿ ದಿಬ್ಬಣ(ನಡಕೆ)ದ ಟಕ್ಕು, ದಾರೆದ ಟಕ್ಕು, ಮುರ್ತದ ಟಕ್ಕುಗಳು ಡೋಲುವಾದನದಲ್ಲಿವೆ. ಅದರಂತೆ ಇನ್ನೂ ನೂರಾರು ಮನೋರಂಜನೆಯ ಟಕ್ಕುಗಳು ಇದರಲ್ಲಿದೆ. ಕೊರಗರು ಈ ಡೋಲನ್ನು ತಮ್ಮ ಸ್ವಂತ ಆಡುನುಡಿಯಲ್ಲಿ ಕಡ್ಡೈ, ಕರ್‌ಂಡೆ (ಚೆಂಡೆ), ಚಾವಲ (ಚಕ್ರತಾಳ) ಹಾಗೂ ಕೊರಲ್ (ಕೊಳಲು) ಎಂಬ ನಾಲ್ಕು ವಾದ್ಯ ಪರಿಕರಗಳನ್ನು ಈ ಡೋಲು ವಾದನದಲ್ಲಿ ಬಳಸುತ್ತಾರೆ. ಈ ರೀತಿಯ ಡೋಲು ವಾದನವನ್ನು ಕೊರಗರ ಗಜಮೇಳ ಎನ್ನುತ್ತಾರೆ. ಪ್ರತಿಯೊಂದು ಪರಿಕರಗಳನ್ನು ನುಡಿಸಲು ಹಲವಾರು ಮಂದಿ ಪರಿಣತಿ ಪಡೆದ ಕಲಾವಿದರು ಇರುತ್ತಾರೆ. ವಿಪರ್ಯಾಸವೆಂದರೆ ಈ ಪರಿಯ ಡೋಲುವಾದನ ಕಲೆಯು ಹಿಂದೆ ಅಜಲು ಸೇವೆಯ ನೆಪದಲ್ಲಿ ಊರವರ ಮನರಂಜನೆಗೆ ಬಳಕೆಯಾಗುತ್ತಿತ್ತು. ಇಂದು ಈ ಕಲೆಯನ್ನು ಉಳಿಸಿ, ಬೆಳೆಸುವುದಕ್ಕಾಗಿ ಕೊರಗ ಸಂಘಟನೆಗಳು ಹತ್ತಾರು ಕಲಾತಂಡಗಳನ್ನು ರಚಿಸಿ ಕಾರ್ಯಾಚರಿಸುತ್ತಿದೆ. ಇವುಗಳಲ್ಲಿ ಮಂಗಳೂರಿನ ಕೊರಲ್ ಕಲಾತಂಡ, ಕಿನ್ನಿಗೋಳಿಯ ಬೈಕಾಡ್ದಿ ಕಲಾತಂಡ, ಬಾರ್ಕೂರಿನ ಹುಬಾಶಿಕ ಯುವ ಕಲಾವೇದಿಕೆ ಮುಖ್ಯವಾದವುಗಳು. ಪಾಂಬೂರಿನ ನವೋದಯ ಕೊರಗರ ಸಾಂಸ್ಕೃತಿಕ ಕಲಾತಂಡ ಹಾಗೂ ಉಡುಪಿಯ ರವಿಚಂದ್ರ ಪೋಷಿತ ಕಲಾತಂಡಗಳೂ ಕೊರಗ ಸಮುದಾಯದ ಕಲೆಯ ಉಳಿವಿಗಾಗಿ ಪ್ರಯತ್ನಿಸುತ್ತಿವೆ.

೨೪

ಕೊರಗರ ಡೋಲು – ಹಿನ್ನೆಲೆ ಮತ್ತು ತಯಾರಿ

ಕೊರಗ ಸಮುದಾಯಲ್ಲಿ ಪ್ರಚಲಿತವಿರುವ ಪ್ರಳಯದ ಕತೆಯಲ್ಲಿ ಬರುವಂತೆ, ಅಂದು ಪ್ರಳಯವಾದಾಗ ಕೊರಗರ ಅಣ್ಣ ತಂಗಿಯರಿಬ್ಬರು ಡೋಲಿನ ಒಳಗೆ ಕುಳಿತು ಜೀವ ರಕ್ಷಣೆ ಪಡೆದ ಬಗ್ಗೆ ಪ್ರಸ್ತಾಪವಿದೆ. ಇದು ನಿಜವೋ ಸುಳ್ಳೋ ಗೊತ್ತಿಲ್ಲ. ಆದರೆ ಆದಿಕಾಲದ ಕೊರಗರು ಕಾಡಿನಲ್ಲಿ ವಾಸವಿದ್ದಾಗಲೇ ಉರುಳುವ ಮರದ ತುಂಡು (ಕಾಂಡ)ಗಳನ್ನು ಕಂಡು ಅದರೊಳಗೆ ಇಣುಕಿದಾಗ ಎರಡೂ ಕಡೆ ಟೊಳ್ಳು ಇರುವುದನ್ನು ಗಮನಿಸಿ ಬೆರಗಾಗಿರಬಹುದು. ಆ ಕಡೆ ಈ ಕಡೆ ಬಡಿದಾಗ ವಿಚಿತ್ರವಾದ ಶಬ್ದ ಕೇಳಿ ಆಕರ್ಷಿತರಾಗಿರಬಹುದು. ಅದುವೆ ಮುಂದೆ ಡೋಲಿನ ತಯಾರಿಗೆ ಪ್ರೇರಣೆಯಾಗಿರಲೂ ಬಹುದು. ಇವರು ಕಾಡಾಡಿಗಳಾಗಿದ್ದಾಗ ಈ ಡೋಲು ಇವರ ಜೀವ ರಕ್ಷಣೆಯ ಅಸ್ತ್ರವೂ ಆಗಿತ್ತು. ವಿಶ್ರಾಂತಿಯ ವೇಳೆ ಮನರಂಜನೆಯ ಸಾಧನವೂ ಆಗಿತ್ತು. ಕಾಡು ಪ್ರಾಣಿಗಳನ್ನು ತಮ್ಮ ವಾಸಸ್ಥಳದ ಹತ್ತಿರ ಸುಳಿಯದಂತೆ ದೂರ ಓಡಿಸಲು ಡೋಲು ಬಡಿಯುತ್ತಾ, ಶಬ್ದ ಮಾಡುತ್ತಿದ್ದರು. ಮುಂದೆ ಇದೇ ರಕ್ಷಣಾ ಅಸ್ತ್ರವು ಮನರಂಜನೆಯ ಸಾಧನವಾಯಿತು. ಕಾಡು ಬಿಟ್ಟು, ನಾಡಿಗೆ ಪರಿಚಯವಾದ ಮೇಲೆ ಇದೇ ಡೋಲು ಇತರರ ಮನರಂಜನೆಗಾಗಿ ಬಳಕೆಯಾಯಿತು. ಕ್ರಮೇಣ ಇವರು ವಾದನದಲ್ಲಿ ಕರ್ಂಡೆ, (ಚೆಂಡೆ) ಹಾಗೂ ಕೊಳಲನ್ನು ಕೂಡಾ ಉಪಯೋಗಿಸಿದರು. ಕಂಚಿನ ತಾಳವು(ಚಕ್ರತಾಳ) ಇವರು ಅಜಲು ಸೇವೆಗೆ ಒಗ್ಗಿಕೊಂಡ ಬಳಿಕವಷ್ಟೇ ಸೇರಿಕೊಂಡಿತು.

ಈ ವಾದ್ಯ ಪರಿಕರಗಳು ಇಂದು ಆಕಾರ ಮತ್ತು ಗಾತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. ಹಿಂದಿನ ಕರ್ಂಡೆಯ ಬದಲಿಗೆ ಈಗ ಚೆಂಡೆಯನ್ನು ಉಪಯೋಗಿಸಲಾಗುತ್ತದೆ. ಡೋಲಿನಂತೆಯೇ, ಆದರೆ ಗಾತ್ರದಲ್ಲಿ ಡೋಲಿನ ಮೂರು ಪಟ್ಟು ಸಣ್ಣದಾದ ಕರ್ಂಡೆಗೆ ಈಗ ಕಬ್ಬಿಣದ ಅಟ್ಟೆ(ಸಲಾಕೆ)ಯನ್ನು ಜೋಡಿಸಿ, ಆಕರ್ಷಕ ಚೆಂಡೆಯಾಗಿ ಮಾರ್ಪಡಿಸಲಾಗಿದೆ. ಕೊಳಲಿನ ಗ್ರಾವೂ ಈಗ ಕಿರಿದಾಗಿದೆ. ಹಿಂದೆ ಏಳೆಂಟು ತೂತುಗಳುಳ್ಳ ಉದ್ದನೆಯ ಬಿದಿರಿನ ಕೊಳಲುಗಳನ್ನು ನುಡಿಸುತ್ತಿದ್ದರು. ಈಗ ನಾಲ್ಕು, ಐದು ತೂತಿನ ಹಾಗೂ ಸಪೂರವಾದ ಚಿಕ್ಕ ಕೊಳಲು ಬಳಸಲಾಗುತ್ತದೆ. ಡೋಲಿನ ಗಾತ್ರವೂ ತುಂಬಾ ಕಿರಿದಾಗಿದೆ. ಹಿಂದೆ ಇಬ್ಬರು ಬಡಿಗೆ ಹಾಕಿ ಹೆಗಲಲ್ಲಿ ಹೊರುವ ಬೃಹದಾಕಾರದ ದಂಡಿನ ಡೋಲುಗಳಿದ್ದವು. ಅದನ್ನು ಬಾರಿಸಲು ಮತ್ತೊಬ್ಬನ ಅಗತ್ಯವಿತ್ತಂತೆ. ಕೊರಗರನ್ನು ಅಜಲು ಚಾಕಿರಿಗೆ ಪಳಗಿಸಿದ ನಂತರ ದೇವಸ್ಥಾನಗಳು, ಅಥವಾ ಗುತ್ತು, ಬರ್ಕೆಗಳಂತಹ ಮನೆತನದವರು ತಮ್ಮ ತಮ್ಮ ಪ್ರತಿಷ್ಠೆಗಳನ್ನು ಹೆಚ್ಚಿಸಲು ಇಂತಹ ಡೋಲುಳನ್ನು ಮಾಡಿಸುತ್ತಿದ್ದರು. ಬಾರಕೂರು, ಬಪ್ಪನಾಡು, ಎಲ್ಲೂರು

ಹಾಗೂ ಇನ್ನೂ ಕೆಲವು ಕಡೆ ಇಂತಹ ಡೋಲುಗಳು ಇದ್ದವು ಎಂದು ಸಚ್ಚೇರಿಪೇಟೆಯ ಮಾನಿಗ ಕೊಡ್ತರು ಮಾಹಿತಿ ನೀಡಿದ್ದಾರೆ. ಇನ್ನು ಉಬಸಿಕತನ ಕಾಲದಲ್ಲಿ ಕಂಚಿನ ಡೋಲುಗಳಿದ್ದವು ಎಂಬುವುದಾಗಿ ಹೇಳಲಾಗುತ್ತದೆ. ಅವುಗಳನ್ನು ಅಂದು ಅಪಾಯದ ಮುನ್ಸೂಚನೆಗಾಗಿ ಬಳಸಲಾಗುತ್ತಿರಬಹುದು. ಆದರೆ ಅದಕ್ಕೆ ಪುರಾವೆಗಳು ಸಿಗುವುದಿಲ್ಲ.

ಈ ಡೋಲನ್ನು ತಯಾರಿಸುವುದು ಡೋಲುವಾದನಕ್ಕಿಂತಲೂ ಕಷ್ಟಕರವಾದದ್ದು. ಅದರ ತಯಾರಿಗೆ ಸಾಕಷ್ಟು ಪರಿಣತರೇ ಆಗಿರಬೇಕು. ಹಿಂದಿನಿಂದಲೂ ಇವರಲ್ಲಿ ಈ ಬಗ್ಗೆ ಕೌಶಲ್ಯವನ್ನು ಪಡೆದ ಜನರಿದ್ದರು. ಈಗಲೂ ಕೆಲವು ಪರಿಣತರಿದ್ದಾರೆ. ನಿರ್ದಿಷ್ಟವಾದ ಮರದ ತುಂಡುಗಳನ್ನು ಕೇವಲ ಕಣ್ಣಳತೆಯಲ್ಲೇ ಅಂದಾಜಿಸಿ ಕತ್ತರಿಸಿ, ಅದರ ಒಳ ತಿರುಳನ್ನು ತೆಗೆಯುತ್ತಾರೆ. ಇದು ಬಹಳ ನಾಜೂಕಿನ ಕೆಲಸ. ಏಕೆಂದರೆ ಸ್ವಲ್ಪ ಯಾಮಾರಿದರೂ ಇಡೀ ಮರದ ತುಂಡೇ ನಷ್ಟವಾಗಿ ಹೋಗುತ್ತದೆ. ಅದಕ್ಕಾಗಿ ಇಂದು ಕೆಲವರು ಮರದ ಕೆಲಸಗಾರರಿಂದಲೇ ಇದನ್ನು ಮಾಡಿಸುತ್ತಾರೆ.



ಡೋಲಿಗೆ ಮುಚ್ಚಿಗೆ ಮಾಡುತ್ತಿರುವುದು

ಡೋಲಿನ ಈ ಕರ(ಅಂಡೆ)ಗಳನ್ನು ಹೊನ್ನೆ ಮರದ ಕಾಂಡಗಳಿಂದಲೇ ತಯಾರಿಸುತ್ತಾರೆ. ಅದರಲ್ಲೂ ಸಿರಿಹೊನ್ನೆ ಮರ ಅತ್ಯುತ್ತಮವಂತೆ! ಉಳಿದಂತೆ, ಹಲಸು ಹಾಗೂ ಹೆಬ್ಬಲಸಿನ ಮರಗಳಲ್ಲೂ ಇವನ್ನು ತಯಾರಿಸುತ್ತಾರೆ. ಆದರೆ ಅವು ಹೊತ್ತು ಕೊಳ್ಳುವುದಕ್ಕೆ ತುಂಬಾ ಭಾರವಿರುತ್ತವೆ ಎಂದು ಶಿರ್ವ ಕೋಡುವಿನ ರಾಜು ಕೊಡ್ತರು ತಿಳಿಸುತ್ತಾರೆ. ಅದೇ ರೀತಿಯಲ್ಲಿ ಕರ್‌ಂಡೆಯ ಕರವನ್ನು ಕೂಡಾ ಹೊನ್ನೆ ಮರದಿಂದಲೇ ಮಾಡುತ್ತಾರೆ.

ಇನ್ನು ಡೋಲಿಗೆ ಮುಚ್ಚಿಗೆ ಮಾಡುವುದಕ್ಕೂ ವಿಶೇಷ ಪರಿಣತಿ ಬೇಕಾಗುತ್ತದೆ. ಡೋಲಿಗೆ ಮುಚ್ಚಿಗೆ ಹಾಕಲು ದನದ ಚರ್ಮವನ್ನೇ ಬಳಸುತ್ತಾರೆ. ಇಲ್ಲಿ ಡೋಲಿನ ಎಡಬದಿಗೆ(ಕೈಗೆ) ದನದ ಚರ್ಮವನ್ನು ಬಳಸಿದರೆ, ಬಲಬದಿಗೆ(ಕೋಲುಗೆ) ಎಮ್ಮೆಯ ಕರು ಅಥವಾ ಎತ್ತುಗಳ ಚರ್ಮ ಹಾಕುತ್ತಾರೆ. ಡೋಲಿನ ಬಲ ಬದಿಯನ್ನು ಕೋಲಿನಿಂದ ನುಡಿಸುವುದಾದ್ದರಿಂದ ದಪ್ಪವಾದ ಚರ್ಮವೇ ಬೇಕು. ಹಾಗೆ ಮಾಡುವುದರಿಂದ ಎರಡು ಬದಿಗಳಲ್ಲೂ ಬೇರೆ ಬೇರೆ ಸ್ವರಗಳು ಹೊಮ್ಮುತ್ತದೆ. ಚರ್ಮವನ್ನು ಹದಗೊಳಿಸುವುದು ಹಾಗೂ ಮುಚ್ಚಿಗೆ ಮಾಡುವುದು ಕೂಡಾ ಒಂದು ಕಲೆ! ಅದು ಎಲ್ಲರಿಂದಲೂ ಆಗುವಂತದಲ್ಲ.

ಈಗ ದನದ ಚರ್ಮ ಸಿಗುವುದಿಲ್ಲ, ಸಿಕ್ಕಿದರೂ ದುಬಾರಿಯಾಗಿವೆ. ಆದುದರಿಂದ ಕೆಲವು ಕಡೆ ಡೋಲಿನ ಎಡಬದಿಗೆ ಮತ್ತು ಚೆಂಡೆಗೆ ಆಡಿನ ಚರ್ಮವನ್ನು, ಬಲಬದಿಗೆ ಕುರಿಯ ಚರ್ಮವನ್ನು ಬಳಸುತ್ತಾರೆ. ಇದರ ಬಾಳಿಕೆ ಮಾತ್ರ ತುಂಬಾ ಕಡಿಮೆ ಅವಧಿಯಾಗಿರುತ್ತದೆ. ಇತ್ತೀಚೆಗೆ ಕೆಲವರು ಪ್ರಾಯೋಗಿಕವಾಗಿ ಫೈಬರ್ ಶೀಟುಗಳನ್ನೂ ಬಳಸುತ್ತಾರೆ ಎಂಬ ಮಾಹಿತಿ ಇದೆ. ಆದರೆ ಚರ್ಮದಲ್ಲಿ ಹೊಮ್ಮುವ ಡೋಲಿನ ಮಾಧುರ್ಯ ಈ ಫೈಬರ್ ಹಾಳೆಯಲಿಲ್ಲ ಎನ್ನಲಾಗುತ್ತದೆ. ಹಿಂದೆ ಚರ್ಮದಿಂದಲೇ ಮಾಡಿದ ದಾರ(ಬಾರ)ವನ್ನು ಡೋಲಿಗೆ ಹಾಕುತ್ತಿದ್ದರೆ, ಈಗ ನೂಲಿನ ದೋರೆ ಅಥವಾ ಸಂಗೀಸ್ ಹಗ್ಗವನ್ನು ಬಾರವಾಗಿ ಬಳಸುತ್ತಾರೆ. ಇದೀಗ ತುಸು ಆಕರ್ಷಕವಾಗಿಯೂ ಕಾಣುತ್ತದೆ. ಇನ್ನು ಡೋಲು ನುಡಿಸುವ ಕೋಲುಗಳು ಕೂಡಾ ಹಿಂದೆ ಆಕರ್ಷಕ ಕೆತ್ತನೆಗಳಿಂದ ಕೂಡಿತ್ತು. ಯಾವುದಾದರೂ ಹಗುರವಾದ ಮರದ ತುಂಡುಗಳಿಂದ ಈ ಕೋಲುಗಳನ್ನು ತಯಾರು ಮಾಡುತ್ತಾರೆ. ಚೆಂಡೆ ನುಡಿಸುವ ಕೋಲುಗಳನ್ನು ಯಾವುದಾದರೂ ನಾಜೂಕಾದ ಬಿಳಲುಗಳಿಂದ ತಯಾರಿಸುತ್ತಾರೆ.

ಒಯಿರೆಗಳು

ಕೊರಗರು ಡೋಲುವಾದನ ಮಾಡಿ ಕುಣಿಯುವಾಗ ಹಲವಾರು ಒಯಿರೆಗಳನ್ನು ಹಾಡುತ್ತಾರೆ. ನಿಧಾನಗತಿಯಿಂದ ಆರಂಭವಾಗುವ ಇವರ ಕುಣಿತ ಒಯಿರೆಗಳ (ಉರಲ್) ಕೂಗಿನೊಂದಿಗೆ ವೇಗವನ್ನು ಪಡೆದುಕೊಳ್ಳುತ್ತದೆ. ಕೊರಗರ ಈ ಕುಣಿತಕ್ಕೆ ನಿರ್ದಿಷ್ಟವಾದ ಅಥವಾ ನಿಗದಿತ ಹೆಜ್ಜೆಗಳಿಲ್ಲ. ಒಬ್ಬೊಬ್ಬರದ್ದೂ ಒಂದೊಂದು ಶೈಲಿ! ಡೋಲಿನ ತಾಳಕ್ಕೆ

ತಪ್ಪದ ಅಬ್ಬರದ ಬಿರುಸು ಕುಣಿತಗಳನ್ನು ನೋಡುವುದೇ ಒಂದು ಸಂಭ್ರಮ. ಹೆಣ್ಣು ಕೂಸಿನ ಜನನ, ನಾಮಕರಣ, ತಲೆನೀರ ಮದುವೆ, ಮದುವೆಯಂತಹ ದಿನಗಳಲ್ಲಿ ಈ ತರದ ಕುಣಿತ ಹಾಗೂ ಒಯಿರೆಗಳನ್ನು ಕಾಣಬಹುದು. ಮನರಂಜನೆಗಾಗಿ ಕೆಲವು ಒಯಿರೆಗಳನ್ನು ಸಮುದಾಯದ ಹಿರಿಯಜ್ಜ ಕುತ್ಯಾರು ತಬುರ ಕೊಡ್ತರು ಹೀಗೆ ವಿವರಿಸುತ್ತಾರೆ... "ಈ ಒಯಿರೆಗಳು ಮನೋರಂಜನೆಯೂ ಹೌದು, ಜೊತೆಗೆ ಇತರರು ನಮ್ಮನ್ನು ಅಮಾನವೀಯವಾಗಿ ನಡೆಸಿಕೊಂಡ ಸಂದರ್ಭಗಳಲ್ಲಿ ಹುಟ್ಟಿಕೊಂಡ ಕ್ರೋಧವೂ ಹೌದು" ಅಂದರೆ ಅಸಹಾಯಕ ಕೊರಗರು ಇತರರ ಮೇಲಿನ ಸಿಟ್ಟನ್ನು ತಾವು ಕುಣಿಯುವಾಗ ಈ ರೀತಿಯಾಗಿ ಪ್ರಕಟಿಸುತ್ತಿದ್ದರು. ಇವರು ಕುಣಿಯುತ್ತಿರುವಾಗ, ಒಬ್ಬ ವ್ಯಕ್ತಿ ಈ ರೀತಿಯಾಗಿ ಹಾಡುತ್ತಾನೆ. "ಚೀರೆ ಚಪರೆ, ಕಣ್ಣು ಪುರ್ಂಗೆಲೆ... ಕುಲ್ಲ ಚೈಯೆರೆ ಬೊಡಬಡಂಜಿ ಚೈಲೆದ ಕೊರಾಯಿ..." ಆಗ ಉಳಿದವರು "ಹೇ ಹೇ ಹೇ..." ಎಂದು ಕೋರಸ್ ಹಾಡುತ್ತಾರೆ. ಈ ರೀತಿ ತಮ್ಮ ಮೇಲೆ ದಬ್ಬಾಳಿಕೆ ನಡೆಸಿದವರನ್ನು ಈ ಹಾಡಿನ ಮೂಲಕ ಬೈದು, ತಮ್ಮಷ್ಟಕ್ಕೆ ಸಮಾಧಾನಪಡಿಸಿಕೊಳ್ಳುತ್ತಾರೆ. ಖುಷಿ ಪಟ್ಟುಕೊಳ್ಳುತ್ತಾರೆ.

1. "ತೌತೆ ಬಣ್ಣದ ಕೂಜಿ, ತೆಕ್ಕರೆ ಬಣ್ಣದ ಕೂಜೆ...
ತೋಡ ಬರಿಕ ಪುಕ್ಕೆರ್ಡೆ, ನರ್ತೆ ಪಿಜ್ಜಿಗೆರ್...
ಹೇ ಹೇ ಹೇ........ಹೇ ಹೇ"

2. "ಅಕುಲು ಇಕೆಲ್ ಮಾಮಿನಕುಲು,
ಮಾಮಿನಕುಲೇ ಕುಜೇಲ್ರ್ಲು ಸೇಲೆದಕುಲು....
ಹೇ ಹೇ ಹೇ........ಹೇ ಹೇ"

3. "ಒಂಜಿ ರಡ್ಡು ಮೂಜಿ ನಾಲು ತೇರ ಬಂಡಿ....
ಕೊನ್ಯ ಕೊನ್ಯ ಕುಜೇರ್ಲ್ ಚಂಡಿ ಮುಂಡಿ....
ಹೇ ಹೇ ಹೇ.......ಹೇ ಹೇ"

ಇಂತಹ ನೂರಾರು ಪ್ರಾಸಬದ್ಧ ವೈರೆಗಳನ್ನು ಕೊರಗರು ಹಾಡುತ್ತಾರೆ, ಕುಣಿಯುತ್ತಾರೆ. ಈ ರೀತಿಯ ಒಯಿರೆಗಳು ಈಗಲೂ ಪ್ರಚಲಿತದಲ್ಲಿದೆ. ಸಂಘಟನೆಗಳ ಸಮಾರಂಭಗಳಲ್ಲೂ ಯುವ ಜನರು ಡೋಲುವಾದನ ಮಾಡಿ ಕುಣಿಯುವಾಗ ಇದನ್ನು ಹಾಡುತ್ತಾರೆ.

4. ಕಾಯಿಗುಜ್ಜೆ ಪರ್ಂದ್ ಗುಜ್ಜೆ
ಕಕ್ಕೆ ಕೂಂತುಂಡು
ಕಾಡ್‌ದೊಲಯಿ ಪೂರಾ ಪಕ್ಕಿ ಮೂಡ್ದುಂಡು!

5. ಚೀರೆ ಚಪರೆ ಕಣ್ಣುರ್ಂಗೆಲೆ
ಕುಲ್ಲ ಚೈಯೆರೆ ಬೊಡಬಡಂಜಿ ಚೈಲೆದ ಕೊರಾಯಿ!

6. ಕಾಡ ಬರಿಕ ತಿರ್ಗೇಲೆ
ಬೋಂಟೆ ದೇರೇಲೆ
ದಿಕ್ಕೆದ ಗೋಡ್ಯು ಕುಲ್ಲೇಲೆ
ಬೋಲೆ ಚೊಲ್ಪೇಲೆ!

7. ಮಾಮಿನಕುಲೆ ಮದ್ದೋಲಿ ದೆಂಗಿ ಗುದ್ದೇಲು
ಕಂಬುಲದವುಲು ಕುಲ್ಲೇಲು ಅರಂಟ ಪುಡ್ದೇಲು!

ಕೊಳಲುವಾದನ

ಕೊರಗರ ಡೋಲುವಾದನದೊಂದಿಗೆ ಗಜಮೇಳದಲ್ಲಿ ಕೊಳಲುವಾದನ ಇದ್ದೇ ಇದೆ. ಅದಲ್ಲದೆ ಕೊರಗರು ಬರೇ ಒಂಟಿ ಕೊಳಲಿನಲ್ಲೂ ಹಲವಾರು ರಾಗಗಳನ್ನು ನುಡಿಸಬಲ್ಲರು. ರಾಗ, ತಾಳಗಳ ಹೆಸರು, ಪರಿಚಯ ಇಲ್ಲದಿದ್ದರೂ ತಮ್ಮದೇ ಆದ ರಾಗಗಳನ್ನು ನುಡಿಸಿ ಸಂತಸಪಟ್ಟುಕೊಳ್ಳುತ್ತಾರೆ. "ಕೊಳಲು ವಾದನದಲ್ಲಿ ದಿಬ್ಬಣ ಕೊಳಲು ಹಾಗೂ ಮರಣ ಕೊಳಲು ಪ್ರಮುಖವಾದದ್ದು. ಈಗ ರಾಗಗಳನ್ನು ನುಡಿಸುವುದು ಬಹಳ ಕಷ್ಟ, ಅವೆರಡು ರಾಗಗಳಲ್ಲಿ ಕೂದಲೆಳೆಯ ಅಂತರವಿದೆ" ಎನ್ನುತ್ತಾರೆ ಕಾರ್ಕಳ ಅತ್ತೂರಿನ ಹರೀಶ ಕೊರಗ. ಸ್ವತಃ ಕೊಳಲು ವಾದಕರಾದ ಇವರು ಡೋಲಿನ ಎಲ್ಲಾ ಮನೋರಂಜನಾ ಟಕ್ಕುಗಳಿಗೆ ಕೊಳಲು ನುಡಿಸುತ್ತಾರೆ. ಕೆಲವೊಂದು ವೇಳೆ ಬೇಸರ ಕಳೆಯಲು ಕೊರಗರು ಒಂಟಿ ಕೊಳಲು ವಾದನ ಮಾಡುತ್ತಾರೆ. ಈಗಿನ ಕೆಲವು ಯುವ ವಾದಕರು ಸಿನಿಮಾ ಹಾಡುಗಳನ್ನೂ ನುಡಿಸುವ ಕೌಶಲ್ಯ ಪಡೆದಿರುತ್ತಾರೆ. ಆದುದರಿಂದ ಈ ಕೊಳಲುವಾದನ ಕೊರಗರ ಬಹುಪ್ರಿಯವಾದ ಮನರಂಜನೆ. ಇದರಲ್ಲಿ ಮಕ್ಕಳ ಮನರಂಜನೆಗಾಗಿ ಕತೆ ಹೇಳುವುದು, ಒಗಟುಗಳನ್ನು ಬಿಡಿಸುವುದು ನಡೆಯುತ್ತದೆ.

ಸಾಮಾನ್ಯವಾಗಿ ಇವರು ಮಕ್ಕಳಿಗೆ ಕಾಡು ಪ್ರಾಣಿಗಳಾದ ನರಿ, ಹುಲಿ ಹಾಗೂ ಮೊಸಳೆ ಕತೆಗಳನ್ನು ಹೇಳಿ ರಂಜಿಸುತ್ತಾರೆ. ಕೆಲವು ವೇಳೆ ಮಂಗಣ್ಣನ ಕತೆಗಳೂ ಬರುತ್ತವೆ; ಅರಸರ ಕತೆಗಳೂ ಬರುವುದಿದೆ. ಸಂಜೆಯ ವೇಳೆ ಹಿರಿಯರು ಮಕ್ಕಳನ್ನು ಒಟ್ಟು ಸೇರಿಸಿ ಕತೆಗಳನ್ನು ಹೇಳಲು ಶುರುವಿಟ್ಟರೆ ಮಕ್ಕಳಿಗೆ ತೂಕಡಿಕೆ ಬರೋವರೆಗೂ ಅದು ಮುಂದುವರಿಯುತ್ತದೆ. ಕೆಲವು ಕಡೆಗಳಲ್ಲಿ ನರಿ ಹೀರೋ ಆದರೆ, ಕೆಲವದರಲ್ಲಿ ವಿಲನ್! ಹುಲಿ ಯಾವಾಗಲೂ ಬಲಶಾಲಿ ಮತ್ತು ಗರ್ವಿಷ್ಟ! ಆದರೂ ಹುಲಿಗೇ ಸೋಲು! ಅರಸನ ಕತೆಗಳಲ್ಲೂ ಕಾಡಿನರಾಜ ಪ್ರಮುಖನಾಗುತ್ತಾನೆ. ಅದೇನೆ ಇದ್ದರೂ ಮಕ್ಕಳ ಮನರಂಜನೆಗೆ ಹಲವಾರು ಕತೆಗಳಿವೆ.

ಒಗಟುಗಳು

ಒಗಟುಗಳನ್ನು ಬಿಡಿಸುವುದು ಇವರ ಅತ್ಯಂತ ಪ್ರಿಯವಾದ ಹವ್ಯಾಸ. ಮಕ್ಕಳನ್ನು

ರಂಜಿಸಲು ಈ ಒಗಟುಗಳನ್ನು ಹಿರಿಯರು ಬಳಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಹಿರಿಯರೂ ತಮ್ಮ ವಿರಾಮದ ವೇಳೆ ಹಾಗೂ ಕೆಲಸದ ನಡುವೆಯೂ ಈ ಒಗಟುಗಳನ್ನು ಬಿಡಿಸುತ್ತಾರೆ, ರೋಮಾಂಚನಗೊಳ್ಳುತ್ತಾರೆ. ಹೆಚ್ಚಾಗಿ ಕಾಡು, ಪ್ರಾಣಿಗಳು, ಪರಿಸರಕ್ಕೇ ಸಂಬಂಧಿಸಿದ ಒಗಟುಗಳಾಗಿರುತ್ತದೆ. ಏಳೆಂಟು ಮಂದಿ ಒಟ್ಟಿಗೆ ಕೆಲಸ ಮಾಡುವ ಸಂದರ್ಭಗಳಿದ್ದರೆ ಈ ರೀತಿಯ ಒಗಟುಗಳನ್ನು ಬಿಡಿಸುತ್ತಾರೆ. ಕುಲಕಸುಬು ಬುಟ್ಟಿ ಹೆಣೆಯುವಾಗಲೂ; ಕೃಷಿ ಕೂಲಿ ಕೆಲಸದ ವೇಳೆಯೂ ಇದು ನಡೆಯುತ್ತದೆ. ಈ ಬುಡಕಟ್ಟು ಸಮುದಾಯದಲ್ಲಿ ಪ್ರಚಲಿತದಲ್ಲಿರುವ ಕೆಲವು ಒಗಟುಗಳನ್ನು ಕನ್ನಡ ಅನುವಾದದೊಂದಿಗೆ ಇಲ್ಲಿ ನೀಡಲಾಗಿದೆ.

1. ಅಡ್ಡ ಮರಟು ಬಡ್ಡೆ ನೇಲ್ನಿ
   (ಅಡ್ಡ ಮರದಲ್ಲಿ ಬೊಡ್ಡ ನೇತಾಡುತ್ತಾನೆ = ಹಲಸಿನ ಹಣ್ಣು)
2. ತೋರ್ತ ಬಲಟು ಬಂಗಾರ್ದ ಬಿಸಲೆ
   (ಚರ್ಮದ ಬಲೆಯಲ್ಲಿ ಚಿನ್ನದ ಪಾತ್ರ = ಕಿವಿಯಲ್ಲಿನ ಬೆಂಡೋಲೆ)
3. ಅಪ್ಪೆ ದರಬರ; ಅಮ್ಮೆ ದೋಂಟಸೆ, ಮಗಲ್ ಬೋರ್‌ಮಂಡೆ
   (ತಾಯಿ ದರಬರ; ತಂದೆ ಉದ್ದನೆಯವನು; ಮಗಳು ಬೋಳು ತಲೆ = ತಾಯಿ ತಾಳೆ ಗರಿ; ತಂದೆ ತಾಳೆ ಮರ; ಮಗಳು ತಾಳೆ ಕಾಯಿ)
4. ಚಟ್ಟೆ ಕಂಗುಡ್ ಗೆನ್ಪನ ಬಜ್ಜೆಯಿ
   (ಚಪ್ಪಟೆ ಕಂಗಿನಲ್ಲಿ ಲೆಕ್ಕವಿಲ್ಲದಷ್ಟು ಅಡಿಕೆಯ ರಾಶಿ)
5. ದೇಬೆರ್ ಒಲಯಿ, ಗಂಧ ಪಿದೆಯಿ
   (ದೇವರು ಒಳಗೆ, ಗಂಧ ಹೊರಗೆ = ಏಡಿ ಮತ್ತು ಹ್ಯೊಗೆ)
6. ಕಡಲ್ದ ಸುತ್ತ ಗರ್ಬದ ಬೇಲಿ
   (ಕಡಲಿನ ಸುತ್ತ ಕಬ್ಬಿಣದ ಬೇಲಿ – ಕಣ್ಣು ಮತ್ತು ರೆಪ್ಪೆ)
7. ಇಲ ದಾಂತಿ ಗುಂಡಿಡ್ ಎಲು ದಾಂತಿ ಬಂಟೆ
   (ನೆಲ ಇಲ್ಲದ ಗುಂಡಿಯೊಳಗೆ ಮೂಳೆ ಇಲ್ಲದ ಜೀವ=ಬಾಯಿಯೊಳಗೆ ನಾಲಗೆ)
8. ಅಪ್ಪೆ ದಡ್ಡಿ ಮಗಲ್ ಕೊನ್ಪೆ
   (ತಾಯಿ ದಡ್ಡಿ, ಮಗಳು ಕುಣಿಯುವಳು = ಅರೆಯುವ ಕಲ್ಲು)
9. ಅಜಿಲೆರೆಗ ಆಜಿ ಕಣ್ಣು; ಮುಜಿಲೆರೆಗ ಮೂಜಿ ಕಣ್ಣು; ತೋಟದ ಅಜ್ಜಗ ಒಂಜೇ ಕಣ್ಣು
   (ಅಜಿಲರಿಗೆ ಆರು ಕಣ್ಣು, ಮುಜಿಲರಿಗೆ ಮೂರು ಕಣ್ಣು, ತೋಟದ ಅಜ್ಜನಿಗೆ ಒಂದೇ ಕಣ್ಣು = ಹಗ್ಗದ ಬಲೆ; ತೆಂಗಿನಕಾಯಿ; ಅಡಿಕೆ)
10. ಒಂಜಿ ಗುರಿಟು ಒರ್ಲ ಮರಂಟೆ
   (ಒಂದು ಗುಂಡಿಗೆ ಒಂದೇ ಮೀನು = ಹಲಸಿನ ಸೋಳೆಯಲ್ಲಿ ಒಂದೇ ಬೀಜ)
11. ಕಡಲ್ ನಡುಟು ಕಂಚಿದ ದೀಪ
   (ಕಡಲಿನ ನಡುವೆ ಕಂಚುವಿನ ದೀಪ = ನೀರಿನ ನಡುವಿರುವ ಕಮಲದ ಹೂವು)
12. ಬೊಲ್ಲಿ ಉಬಿರ್ನದ್; ಬಂಗಾರ್ ನುಂಗುನಂದ್

(ಬೆಳ್ಳಿ ಉಗುಳಿ; ಬಂಗಾರ ನುಂಗುವುದು = ಹೆಬ್ಬಲಸಿನ ಹಣ್ಣು ತಿಂದು ಬೀಜ ಉಗುಳುವುದು)

13. ಗಟ್ಟಿ ಆರ್ಟ್ನ್ರ್ದ್, ಇರೆ ತಿನ್ನದು
(ಗಟ್ಟಿ ಬಿಸಾಡಿ, ಎಲೆ ತಿನ್ನುವುದು = ಮೂಳೆ ಬಿಸಾಡಿ ಮಾಂಸ ತಿನ್ನುವುದು)
14. ಚೀಂವ್ ಚೀಂವ್ ಪಕ್ಕಿಗ ಮುನ್ನೂದ್ ಕಣ್ಣು
(ಚೀಂವ್ ಚೀಂವ್ ಹಕ್ಕಿಗೆ ಮುನ್ನೂರು ಕಣ್ಣು = ನೀರ್ದೋಸೆ)
15. ಚೀಂವ್ ಚೀಂವ್ ಪಕ್ಕಿ ಬೀಲಡ್ ನೀರ್ ಕಲಪೋಂಡ್
(ಚೀಂವ್ ಚೀಂವ್ ಹಕ್ಕಿ ಬಾಲದಲ್ಲಿ ನೀರು ಎತ್ತುವುದು = ಏತ)
16. ಅಜ್ಜಿನ ಮೆಯಿ ತುಂಬ ಗಜ್ಜಿ
(ಅಜ್ಜಿಯ ಮೈ ತುಂಬಾ ಕಜ್ಜಿ = ಹಾಗಲಕಾಯಿ)
17. ಅನ್ನ ಅಜ್ಜಿ ಅಬ ಉಪ ಪೋಂಡ್, ಗೋಂಟುಡ್ ಪಾ ಕುಲ್ಂಡ್
(ನನ್ನ ಅಜ್ಜಿ ಆಚೆ ಈಚೆ ಹೋಗಿ, ಮೂಲೆಯಲ್ಲಿ ಕೂರುತ್ತಾಳೆ = ಪೊರಕೆ)
18. ಒಂಜಿ ಭೂತಗ ಸಾರ ವಕ್ಕನೂಲು
(ಒಂದು ಭೂತಕ್ಕೆ ಸಾವಿರ ಖಡ್ಗ = ಪೊರಕೆ)
19. ಸಾರ ಜನಕ ಒಂಜಿ ವಕ್ಕನೂಲು
(ಸಾವಿರ ಜನರಿಗೆ ಒಂದೇ ಉಡಿದಾರ = ಪೊರಕೆ)
20. ಬಾಲೆ ಮರಂಕನೆ, ತೊಟಿಲ್ಲು ಕಂಕನೆ
(ಮಗು ಅಂಗಾತ–ತೊಟ್ಟಿಲು ಕವಚ–ಜನರು ಅಂಗಾತ ಮಲಗಿದಾಗ ಮನೆಯ ಮೇಲ್ಛಾವಣಿ ಕವಚ ಬಿದ್ದಂತೆ ಇರುವುದು)
21. ತಗ್ಗುದ ಗುಂಡಗ ಬಗ್ಗ ಕೈ ಮುಗ್ಯಡ್
(ತಗ್ಗಿನ ಗುಡಿಗೆ ಬಗ್ಗಿ ನಮಸ್ಕರಿಸುವುದು = ಒಲೆಗೆ ಊದುವುದು)
22. ಮೂಜಿ ಗುಂಡಗ ಒಂಜೇ ದೇಬೆರ್
(ಮೂರು ಗುಡಿಗೆ ಒಂದೇ ದೇವರು – ಒಲೆಯ ಮೂರು ಗುಂಡುಗಳಿಗೆ ಒಂದೆ ಪಾತ್ರೆ)
23. ಕರ್ಲು ದಾಂತಿನ ಕೋರಿ ಕೆಲೆಪುಂಡ್
(ಕರುಳು ಇಲ್ಲದ ಕೋಳಿ ಕೂಗುವುದು =ಕೊಳಲು)

ಬೇಟೆ

ಬೇಟೆಯಾಡುವುದು ಕೂಡಾ ಕೊರಗರ ಒಂದು ಪ್ರಿಯವಾದ ಮನೋರಂಜನೆಯಾಗಿದೆ. ಕೆಲಸದ ಬಿಡುವಿನ ವೇಳೆ ಗಂಡಸರೆಲ್ಲ ಸೇರಿ ಈ ಬೇಟೆಗೆ ಹೋಗುವುದು ವಾಡಿಕೆಯಾಗಿದೆ. ಸಾಮಾನ್ಯವಾಗಿದೆ. ಕೊರಗರು ಸಾದು ಜೀವಿಗಳಾದ ಮೊಲ, ಆಮೆ, ಮೀನು ಹಾಗೂ ಪಕ್ಷಿಗಳನ್ನೇ ಬೇಟೆಯಾಡುತ್ತಾರೆ. ಆಮೆ ಬೇಟೆ ಇವರ ಅತ್ಯಂತ

ಪ್ರಿಯವಾದ ಬೇಟೆ. ಬಯಲು ಪ್ರದೇಶದಲ್ಲಿ ನೀರಿನ ಒರತೆ ಇರುವಲ್ಲಿ ಆಮೆಗಳು ಮೇಲ್ಪದರ ಮಣ್ಣಿನಲ್ಲಿ ಅವಿತು ಕೂತಿರುತ್ತದೆ. ಅದರ ಜಾಡು ಹಿಡಿದು, ಕೋಲಿನಿಂದ ಕುಕ್ಕಿ ಅದನ್ನು ಹೊರತೆಗೆಯುತ್ತಾರೆ. ಈ ರೀತಿಯ ಬೇಟೆಗೆ ಒಬ್ಬೊಬ್ಬರೂ ಹೋಗುವುದಿದೆ; ಗುಂಪಾಗಿಯೂ ಹೋಗುತ್ತಾರೆ. ಆದರೆ ಕೆರೆಗಳಲ್ಲಿ, ಕೊಳಗಳಲ್ಲಿ, ನದಿಯಲ್ಲಿ ಆಮೆ ಹಿಡಿಯುವುದು ಅಷ್ಟು ಸುಲಭವಲ್ಲ. ಆಗ ಹತ್ತಾರು ಜನ ಇರಲೇಬೇಕು. ನೀರಲ್ಲಿ ಮುಳುಗಿ ಬರಿ ಕೈಯಲ್ಲಿ ಆಮೆಗಳನ್ನು ಹಿಡಿಯುತ್ತಾರೆ. ಇನ್ನು ಕೆಲವು ಕಡೆ ಗುಹೆಗಳಲ್ಲಿ ಆಮೆಗಳು ಒಟ್ಟಾಗಿರುತ್ತದೆ. ಆಗ ಆ ಗುಹೆಯನ್ನು ಅಗೆದು ತೆಗೆದು ಅದರೊಳಗಿನ ಬೇಟೆಯನ್ನು ಹೊರತೆಗೆಯಬೇಕಾಗುತ್ತದೆ. ಇದು ಸಾಹಸಮಯವಾದ ಹವ್ಯಾಸವೂ ಹೌದು. ಆದರೂ ಇದೊಂದು ಬಗೆಯ ಮನರಂಜನೆ! ಅದೇ ರೀತಿ ನದಿ ತೊರೆಗಳಲ್ಲಿ ಮೀನು ಹಿಡಿಯುವುದೂ ಇದೆ. ಕೆಲವೊಮ್ಮೆ ಗಾಳ ಹಾಕಿ ಆಮೆ; ಮೀನು ಹಿಡಿಯುತ್ತಾರೆ. ಹತ್ತಾರು ಜನ ಸೇರಿ ರಾತ್ರಿಯೂ ಆಮೆ ಬೇಟೆಗೆ ಹೋಗುತ್ತಾರೆ. ಅದಲ್ಲದೇ ಇವರು ಬೇರೆ ಬೇರೆ ಹಕ್ಕಿಗಳನ್ನು ಬೇಟೆಯಾಡುತ್ತಾರೆ. ಹಕ್ಕಿಗಳನ್ನು ಚಾಟಿ ಬಿಲ್ಲಿನಿಂದ ಹೊಡೆಯುವು ದೆಂದರೆ ಬಲು ಖುಷಿ. ಮೊಲ, ಮುಳ್ಳು ಹಂದಿಗಳನ್ನೂ ಉರುಳು ಇಟ್ಟು ಹಿಡಿಯುತ್ತಾರೆ. ಬಹಳ ಹಿಂದೆ ಹೆಬ್ಬಾವಿನ ಬೇಟೆಯೂ ಇವರಿಗೆ ಬಹು ಇಷ್ಟವಾಗಿತ್ತು. ಅದೀಗ ಇಲ್ಲ. ಆದರೆ ಇತರ ಬೇಟೆಗಳನ್ನು ಈಗಲೂ ಈ ಕಾಡಿನ ಮಕ್ಕಳು ಮುಂದುವರಿಸಿದ್ದಾರೆ.

ಆಟೋಟಗಳು

ಬುಡಕಟ್ಟು ಜನರ ಜೀವನ ಅತ್ಯಂತ ದುರ್ಭರವಾದರೂ ಅವರು ಮನೋರಂಜನೆ ಗಾಗಿ ಆಟೋಟಗಳನ್ನೆಂದೂ ಮರೆತವರಲ್ಲ. ಕಾಡೇ ಅವರಿಗೆ ಆಟದ ಅಖಾಡ! ಕೊರಗರ ಆಟೋಟಗಳಲ್ಲಿ ಹಿರಿಯರು ಆಡುವ ಆಟಗಳು, ಹೆಂಗಸರು ಆಡುವ ಆಟಗಳು, ಮಕ್ಕಳ ಆಟಗಳು ಬೇರೆ ಬೇರೆ ಇವೆ.

ಹಿರಿಯರು ಆಡುವ ಆಟಗಳಲ್ಲಿ ಉರುಡಾಟವೂ ಒಂದು. ಸುಮ್ಮ ಸುಮ್ಮನೆ ಒಬ್ಬರನ್ನು ಇನ್ನೊಬ್ಬರು ಕೆಣಕಿ ಎಳೆದಾಡಿಕೊಂಡು ಉರುಡಾಟ ಆರಂಭಿಸುತ್ತಾರೆ. ಈ ಬಗ್ಗೆ ಫಲಿಮಾರಿನ ಹಿರಿಯ ಮಹಿಳೆ ತಾರಿಯವರು ವಿವರಿಸಿದ್ದಾರೆ. ಗಂಡಸರು ಈ ಉರುಡಾಟ ಆರಂಭಿಸಿದರೆ, ಅದಕ್ಕೆ ಹೊತ್ತು ಗೊತ್ತು ಇರುವುದಿಲ್ಲ. ಹೊರಗಿನಿಂದ ನೋಡಿದವರಿಗೆ ಇವರೇನೋ ಹೊಡೆದಾಡಿಕೊಳ್ಳುವಂತೆ ಭಾಸವಾಗುತ್ತದೆ. ಕಂಬಳದ ಗದ್ದೆ; ಮದುವೆಯ ಮರುದಿನದ ವಿರಾಮವನ್ನು ಇವರು ಈ ಆಟಕ್ಕೆ ಬಳಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಈ ಆಟ ಆರಂಭಗೊಳ್ಳುವುದು ಭಾವಮೈದುನರ ನಡುವೆಯೇ ಆಗಿದೆ. ಆಟದಲ್ಲಿ ಯಾರಾದರೂ ಒಬ್ಬರು ಸುಸ್ತಾದ(ಸೋತ) ಮೇಲಷ್ಟೇ ಇದು ಕೊನೆಗೊಳ್ಳುವುದು. ಕೆಲವೊಮ್ಮೆ ಈ ಉರುಡಾಟ ಅರ್ಧಗಂಟೆಗೂ ಹೆಚ್ಚು ಸಮಯ ನಡೆಯುತ್ತದೆ. ನೆರೆದವರೆಲ್ಲರೂ ಉಸಿರು ಬಿಗಿಯಾಗಿಸಿಯೇ ಈ ಆಟವನ್ನು ಆಸ್ವಾದಿಸುತ್ತಾರೆ. ಆಟ ಮುಗಿದ ಕೂಡಲೇ ಪರಸ್ಪರ ಕೈಮುಗಿದುಕೊಂಡು ಆಲಂಗಿಸಿಕೊಳ್ಳುತ್ತಾರೆ. ಅಲ್ಲಿಗೆ

ಸ್ಪರ್ಧಾ ಮನೋಭಾವ ಮರೆಯಾಗಿ ಮಾಮೂಲಿ ಸ್ನೇಹ ಸಂಬಂಧ ಏರ್ಪಡುತ್ತದೆ. ಇನ್ನು ಸಿಪ್ಪೆ ಸುಳಿದ ತೆಂಗಿನಕಾಯಿಯನ್ನು ಬರಿಗೈಯಿಂದ ಹೊಡೆಯುವ ಆಟವನ್ನು ಕೊರಗರು ಆಗಾಗ ಆಡುತ್ತಾರೆ. ಇದರಲ್ಲಿ ಪಂಥ ಕಟ್ಟುವುದೂ ನಡೆಯುತ್ತದೆ. ಇನ್ನೂ ಹಲವಾರು ಆಟಗಳನ್ನು ಕೊರಗರು ಆಡುತ್ತಾರೆ.

ಯುವಕರ ಆಟಗಳು

ಯುವಜನರು ಸಾಮಾನ್ಯವಾಗಿ ಮರಕೋತಿ, ಗುರಿಯಿಟ್ಟು ಕಲ್ಲು ಹೊಡೆಯುವುದು, ಗುಡ್ಡ–ಬಂಡೆಗಳನ್ನು ಹತ್ತಿ ಇಳಿಯುವುದು, ಬುಗರಿ ಆಡುವುದು ಇತ್ಯಾದಿ ಆಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಉರುಡಾಟಗಳಲ್ಲೂ, ಕಾಯಿ ಹೊಡೆಯುವುದರಲ್ಲೂ ಯುವಕರು ಉತ್ಸಾಹ ತೋರಿಸುತ್ತಾರೆ. ಗುರಿಯಿಟ್ಟು ಕಲ್ಲು ಹೊಡೆಯುವ ಆಟದಲ್ಲಿ ಒಂದು ವಸ್ತುವಿಗೆ ಗುರಿಯಿಟ್ಟರೆ ಅದನ್ನು ಕೀಳದೆ ಹಿಂತಿರುಗುವುದೇ ಇಲ್ಲ. ಸಾಮಾನ್ಯವಾಗಿ ತೆಂಗಿನಮರದ ಕಾಯಿಗಳೇ ಇವರ ಗುರಿಯಾಗಿರುತ್ತದೆ. ಕಲ್ಲು ಹೊಡೆದೇ ಕಾಯಿ ಕೀಳುವ ಇವರ ಸಾಮರ್ಥ್ಯ ಮತ್ತು ಕೌಶಲ್ಯಗಳು ಅನನ್ಯವಾಗಿರುತ್ತದೆ.

ಸಮಯ ಸಿಕ್ಕಾಗ ಬಂಡೆ ಹತ್ತುವುದು, ಗುಡ್ಡೆ ಇಳಿಯುವುದೂ ನಡೆಯುವುದು. ನಾಲ್ಕಾರು ಯುವಕರ ತಂಡವು ಈ ಸಾಹಸಕ್ಕೆ ಹೊರಡುತ್ತಾರೆ. ತಾನು ಎಷ್ಟು ಬಾರಿ ಆ ಗುಡ್ಡವನ್ನು ಹತ್ತಿ ಇಳಿಯುತ್ತಾನೆ ಎನ್ನುವುದೇ ಆ ಆಟದ ಗೆಲುವು ಆಗಿರುತ್ತದೆ. ಎತ್ತರದ ಬಂಡೆಯ ತುದಿಗೆ ಯಾರು ಕಲ್ಲು ಬೀಸುವುದೆಂಬ ಪಂಥಗಳೂ ಅಲ್ಲಿಯೇ ನಡೆಯುತ್ತದೆ. ಕೆಲವೊಮ್ಮೆ ಮೊಲ ಮುಂತಾದ ಸಣ್ಣ ಪ್ರಾಣಿಗಳನ್ನೂ ಗುರಿಯಿಟ್ಟು ಕಲ್ಲು ಹೊಡೆಯುವ ಆಟದಲ್ಲಿ ಬೇಟೆಯಾಡುತ್ತಾರೆ. ಮರದ ಮೇಲಿನ ಹಕ್ಕಿಗಳನ್ನೂ ಕಲ್ಲು ಹೊಡೆದೇ ಉರುಳಿಸುತ್ತಾರೆ.

ಹೆಂಗಸರ ಆಟಗಳು: ಹೆಂಗಸರು ಸಾಮಾನ್ಯವಾಗಿ ಸಮಯ ಕಳೆಯಲು ಹಾಡುವುದು ವಾಡಿಕೆ. ಆದರೆ ನಾಲ್ಕಾರು ಮಹಿಳೆಯರು ಒಟ್ಟಾಗಿ ವಿರಮಿಸಿದರೆ ಅಲ್ಲಿ ಆಟದ ಮನಸ್ಸುಗಳು ಹುಟ್ಟಿಕೊಳ್ಳುತ್ತದೆ. ಕಲ್ಲಾಟ ಆಡುವುದು ಇವರ ಪ್ರಿಯವಾದ ಮನೋರಂಜನೆ. ನಾಲ್ಕೈದು ಮಹಿಳೆಯರು ವೃತ್ತಾಕಾರವಾಗಿ ಕುಳಿತುಕೊಂಡು ಈ ಆಟವನ್ನು ಆಡುತ್ತಾರೆ. ಇವರ ಭಾಷೆಯಲ್ಲಿ ಈ ಆಟವನ್ನು ಪೊಕ್ಕು ಆಟ ಎನ್ನುತ್ತಾರೆ. ಹೆಚ್ಚಾಗಿ ಕೊರಗ ಮಹಿಳೆಯರು ಇತರರ ಆಟವನ್ನು ನೋಡಿ ಮನರಂಜನೆ ಪಡೆಯುತ್ತಾರೆ. ಅಪರೂಪಕ್ಕೆ ಮಾತ್ರ ಸ್ವತಃ ಆಟ ಆಡುತ್ತಾರೆ..

ಮಕ್ಕಳ ಆಟಗಳು

ಈ ಸಮುದಾಯದ ಮಕ್ಕಳು ಅನೇಕ ಆಟಗಳ ಮೂಲಕ ಮನೋರಂಜನೆಯನ್ನು ಪಡೆಯುತ್ತಾರೆ. ಮಕ್ಕಳ ಆಟಗಳಲ್ಲಿ 'ಅಚಿಲ್ ಪಿಚಿಲ್' ಆಟವೂ ಒಂದು. ಏಳೆಂಟು ಮಕ್ಕಳು ವೃತ್ತಾಕಾರವಾಗಿ ಕುಳಿತುಕೊಂಡು ಎರಡೂ ಕೈಗಳನ್ನು ಮುಂದಕ್ಕೆ ಚಾಚಿ

ಅಂಗೈಯನ್ನು ನೆಲಕ್ಕೆ ಕವಚವಾಗಿ ಇಡುತ್ತಾರೆ. ಅವರಲ್ಲಿ ಒಬ್ಬರು ತನ್ನ ಒಂದು ಕೈಯನ್ನು ನೆಲಕ್ಕೆ ಒತ್ತಿ; ಇನ್ನೊಂದು ಕೈಯ ತೋರು ಬೆರಳಿನಿಂದ ಎಲ್ಲರ ಕೈಗಳನ್ನು ಮುಟ್ಟಿ, ಅಚಿಲ್ ಪಿಚಿಲ್, ಗೋಳಿ ಕೊಟ್ಟೆ, ರೆಂಜ ಕೊಟ್ಟೆ ದಾಂಟೆ ಎನ್ನುತ್ತಾಳೆ. 'ದಾಂಟೆ' ಎಂಬ ಕೊನೆಯ ಪದ ಯಾರ, ಯಾವ ಕೈಗೆ ಬರುತ್ತದೋ ಆ ಕೈಯನ್ನು ಅಂಗಾತ ಇಡಬೇಕು. ಹೀಗೆ ಎಲ್ಲರ ಕೈಗಳೂ ಅಂಗಾತವಾದ ಬಳಿಕ ಮತ್ತೆ ಆಟ ಮುಂದುವರಿಯುತ್ತದೆ. ಆ 'ದಾಂಟೆ' ಎಂಬ ಪದ ಬರುವ ಕೈಯನ್ನು ಅದೇ ವ್ಯಕ್ತಿ ಕಚ್ಚಿ ತನ್ನ ಹಿಂದೆ ಇಟ್ಟುಕೊಳ್ಳುತ್ತಾನೆ. ಕೊನೆಗೆ ಯಾರ ಕೈ ಉಳಿಯುತ್ತದೆಯೋ ಅವರು ಆಟದಲ್ಲಿ ಸೋಲುತ್ತಾರೆ. ಇದು ಮಕ್ಕಳಿಗೆ ಇಷ್ಟವಾದ ಆಟವಾಗಿದೆ. ಮಕ್ಕಳೆಲ್ಲ ಕೂಡಿ ಮನರಂಜನೆ ಪಡೆಯುವ ಆಟವಿದು. ಕೆಲವು ಕಡೆ "ಅಚಿಲ್ ಪಿಚಿಲ್ ಗೋಳಿ ಕಟ್ಟೆ, ರೆಂಜ ಕೊಟ್ಟೆ ದಾಂಟೆ" ಎಂಬ ಹಾಡಿನ ಬದಲಿಗೆ "ಅರ್ಪನ್ ತಿರ್ಪನ್ ಬಂದನ ಬಲಿಪನ ಆನೆ ಚಕ್ಕ ಕೊಯ್ಯ ಕೋಲ, ಗುತ್ತಿ ಗುಂಡು ಮಡಂಕು" ಎಂದು ಹೇಳುತ್ತಾರೆ. ಇಲ್ಲಿ 'ಮಡಂಕು' ಎಂಬುವುದು ಕೊನೆಯ ಪದವಾಗಿರುತ್ತದೆ. ಹಾಡು ಮಾತ್ರ ಬೇರೆ, ಆಟದ ವಿಧಾನ ಒಂದೇ ಆಗಿದೆ.

ಇವರಲ್ಲಿ ಮಕ್ಕಳು ಆಡುವ ಇನ್ನೊಂದು ಆಟವೆಂದರೆ, ಅಂಬಿ ಪೂಜಿನದ್ (ಸೆಗಣಿ ಸಾರಿಸುವುದು). ಈ ಆಟಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಜನ ಬೇಕಾಗುತ್ತದೆ. ನಾಲ್ಕೈದು ಜನರಿಂದ ಹೆಚ್ಚು ಜನರಿಗೆ ಈ ಆಟವನ್ನು ಆಡಲು ಆಗುವುದಿಲ್ಲ. ಈ ಆಟವನ್ನು ಮಕ್ಕಳು ಹೆಚ್ಚಾಗಿ ಸಂಜೆಯ ವೇಳೆ, ಸಮಯ ಕಳೆಯಲು ಆಡುತ್ತಾರೆ. ಸಾಮಾನ್ಯವಾಗಿ ಕೊರಗರ ರಾತ್ರಿ ಊಟ ಏಳು ಗಂಟೆಯ ಒಳಗೆ ನಡೆಯುತ್ತದೆ. ಕೆಲವೊಮ್ಮೆ ಬೇಟೆ ಸಿಕ್ಕಿದ್ದನ್ನು ಅಡುಗೆ ಮಾಡಿ ಮುಗಿಸುವಾಗ ತಡವಾಗುವಂತಿದ್ದರೆ ಮಕ್ಕಳು ನಿದ್ದೆ ಬರುವುದನ್ನು ನಿಯಂತ್ರಿಸಲು ಈ ಆಟವನ್ನು ಆಡುತ್ತಿದ್ದರು. ಒಬ್ಬ ಹುಡುಗಿ ಅಥವಾ ಹುಡುಗ ಉದ್ದಕ್ಕೆ ಕಾಲು ಚಾಚಿ ಕೂರುತ್ತಾಳೆ/ನೆ. ಅವಳ ಕಾಲಿನ ಮೇಲೆ ಅಕ್ಕಪಕ್ಕದಲ್ಲಿ ಕೂತ ಮಕ್ಕಳು ಕಾಲು ಚಾಚುತ್ತಾರೆ. ಮೊದಲು ಉದ್ದಕ್ಕೆ ಕಾಲು ಚಾಚಿದ ಹುಡುಗಿ ಬೇರೆ ಮಕ್ಕಳಿಂದ ಸೆಗಣಿಯನ್ನು ಬೇಡುತ್ತಾಳೆ. ಒಬ್ಬ ವ್ಯಕ್ತಿ ಸೆಗಣಿ ನೀಡುತ್ತಾನೆ. ನಂತರ ಆಕೆ ನೀರು ಬೇಡುತ್ತಾಳೆ. ಅದನ್ನು ಪಡೆದ ಬಳಿಕ ಪೊರಕೆ ಬೇಡಿ ಪಡೆಯುತ್ತಾಳೆ. ಹೀಗೆ ಬೇಕುಬೇಕಾದ ವಸ್ತುಗಳನ್ನು ಪಡೆದ ನಂತರ ಆಕೆ ಸೆಗಣಿ ಸಾರಿಸುವಂತೆ ತನ್ನ ಕೈಗಳಿಂದ ಇತರರ ಕಾಲುಗಳ ಮೇಲೆ ಸವರುತ್ತಾಳೆ. "ಅಂಬಿ ಪೂಜಾಯಿಂ... ಅಂಬಿ ಪೂಜಾಯಿಂ..." ಎಂದು ಹಾಡುತ್ತಾಳೆ. ನಂತರ ಆಕೆ "ದೆಂಗಿಲು ಪೂರ ಗುಡೆಕ ಪಾಡು" (ಏಡಿಗಳೆಲ್ಲ ಬಿಲದೊಳಗೆ ಹೋಗಲಿ) ಎನ್ನುತ್ತಾಳೆ. ಮಕ್ಕಳೆಲ್ಲ ತಮ್ಮ ಕೈಗಳನ್ನು ಕಾಲುಗಳ ಎಡೆಯಲ್ಲಿ ಅಡಗಿಸಿಕೊಳ್ಳುತ್ತಾರೆ. ಆಕೆ ಒಬ್ಬೊಬ್ಬರದ್ದೇ ಕೈಗಳಿಗೆ ತನ್ನ ಬೆರಳಿನಿಂದ ಸವರುತ್ತಾ "ಏಡಿ ಇದ್ದರೆ ಹಿಡಿಯಲಿ... ಏಡಿ ಇದ್ದರೆ ಹಿಡಿಯಲಿ" ಎನ್ನುತ್ತಾಳೆ. ಒಬ್ಬ ತನ್ನ ಕೈಯಿಂದ ಆಕೆಯ ಗಲ್ಲವನ್ನು ಚಿವುಟಿ ಹಿಡಿಯುತ್ತಾನೆ. ಅವಳು "ಇದು ಯಾವ ಏಡಿ? ಹಾಲು ಏಡಿಯಾ ಕಲ್ಲು ಏಡಿಯಾ ಅಥವಾ ಮೆದು ಏಡಿಯಾ?" ಎಂದು ಕೇಳುತ್ತಾಳೆ. ಆತ ಯಾವುದಾದರೂ ಒಂದು ಹೆಸರು ಹೇಳುತ್ತಾನೆ. ಮತ್ತೆ ಅವಳು "ಬಿಡು ಏಡಿಯೇ

ಬಿಡು" ಎನ್ನುತ್ತಾ ಆತನ ಕೈಗೆ ಮೆಲ್ಲನೆ ಹೊಡೆಯುತ್ತಾಳೆ. ಆತ ಆಕೆಯ ಗಲ್ಲ ಬಿಟ್ಟು ಕೈಯನ್ನು ತನ್ನ ಹಿಂದಕ್ಕೆ ಇಟ್ಟುಕೊಳ್ಳುತ್ತಾನೆ. ಹೀಗೆ ಎಲ್ಲರನ್ನು ವಿಚಾರಿಸಿಕೊಂಡು ಎಲ್ಲರ ಕೈಗಳೂ ಹಿಂದಕ್ಕೆ ಹೋದ ಬಳಿಕ ಎಲ್ಲರ ಕೈಗಳನ್ನೂ ಒಬ್ಬನ ಕಾಲಿನ ಮೊಣಗಂಟಿನ ಮೇಲೆ ಇರಿಸುತ್ತಾಳೆ. ಎಲ್ಲರೂ ಒಂದರ ಮೇಲೆ ಒಂದರಂತೆ ಕೈಗಳನ್ನು ಇಟ್ಟ ಮೇಲೆ ಅವಳು ಸಾಂಬಾರ ಪದಾರ್ಥಗಳನ್ನು ಕೇಳುತ್ತಾಳೆ. ಮೆಣಸು, ಜೀರಿಗೆ, ಸಾಸಿವೆ, ನೀರುಳ್ಳಿ, ಬೆಳ್ಳುಳ್ಳಿ, ಹುಳಿ, ಉಪ್ಪು ಇತ್ಯಾದಿಗಳನ್ನು ಕೇಳಿದ ಮೇಲೆ, ಎಲ್ಲರೂ ಒಟ್ಟಾಗಿ "ಗಡೂಲು ಗುಡೂಲು" ಎನ್ನುತ್ತಾ ಕಲ್ಲಿನಲ್ಲಿ ಮಸಾಲೆ ಅರೆಯುವಂತೆ ಕೈಗಳನ್ನು ಸುತ್ತುತ್ತಾರೆ. ಜೋರಾಗಿ ತಿರುಗಿಸಿದಾಗ ಕೈಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬೀಳುತ್ತದೆ. ಆಗ ಕ್ಲೈಮ್ಯಾಕ್ಸ್! ಎಲ್ಲರೂ ನಗುತ್ತಾ ಆಟವನ್ನು ಆಸ್ವಾದಿಸುತ್ತಾರೆ. ಮನರಂಜನೆ ಪಡೆಯುತ್ತಾರೆ. ಆಟ ಮುಗಿಯುತ್ತದೆ. ಇನ್ನೂ ಸಮಯವಿದ್ದರೆ ಮತ್ತೆ ಅದೇ ಆಟ, ಹೊಸದಾಗಿ ಆರಂಭಿಸುತ್ತಾರೆ. ಇದೊಂದು ಜನಪ್ರಿಯ ಆಟವಾಗಿದೆ.

ಇವೇ ಅಲ್ಲದೆ ಇತರ ಸಮುದಾಯಗಳಲ್ಲಿ ಆಡುವಂತಹ ಕಾಗೆ ಗಿಳಿ, ಟೊಂಕ ಆಟ, ಹಾಗೂ ಪಲ್ಲೆ ಆಟಗಳನ್ನೂ ಇವರು ಆಡುತ್ತಾರೆ. ಕುಟ್ಟಿದೊನ್ನೆಯನ್ನೂ ಆಡುತ್ತಾರೆ. ವೈಶಾಖದಲ್ಲಿ ಗೇರು ಹಣ್ಣಿನ ಬೀಜಗಳೊಂದಿಗೂ ಇವರು ಆಟ ಆಡುತ್ತಾರೆ. ಈ ಆಟದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಒಂದೊಂದು ಬೀಜಗಳನ್ನು ನೆಲದಲ್ಲಿ ಒಟ್ಟಿಗೆ ಇಡುತ್ತಾರೆ. ಪ್ರತಿಯೊಬ್ಬರೂ ಚಪ್ಪಟೆಯಾಕಾರದ ಕಲ್ಲನ್ನು ಹೊಂದಿರುತ್ತಾರೆ. ಆ ಕಲ್ಲಿನ ಮೂಲಕ ನಿರ್ದಿಷ್ಟ ದೂರದಿಂದ ಆ ಬೀಜಗಳನ್ನು ಹಾರಿಸಬೇಕು. ಯಾರು ಬೀಜಗಳನ್ನು ಹಾರಿಸುತ್ತಾರೋ ಅವರಿಗೇ ಅದು ಸೇರುತ್ತವೆ. ಇದು ಮನೋರಂಜನೆಯೂ ಹೌದು, ಕೌಶಲ್ಯವೂ ಹೌದು, ಜೊತೆಗೆ ಬೀಜ ಸಂಗ್ರಹದ ವಿಧಾನವೂ ಹೌದು.

ಇವು ಬುಡಕಟ್ಟು ಕೊರಗ ಸಮುದಾಯದ ವಿಶಿಷ್ಟವಾದ ಹಾಗೂ ಅನನ್ಯವಾದ ಆಟಗಳು ಮತ್ತು ಮನೋರಂಜನೆಗಳು.

ಪ್ರಸ್ತುತ ಶಿಕ್ಷಣ ಮತ್ತು ಆರೋಗ್ಯ

ಶಿಕ್ಷಣ ಎಂದರೆ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದು ಎಂಬುವುದಾಗಿ ಸರಳವಾಗಿ ಅರ್ಥೈಸಬಹುದು. ಇಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ಎಂಬ ಎರಡು ಪರಿಕಲ್ಪನೆಗಳಿವೆ. ಒಂದು ವ್ಯವಸ್ಥಿತ ರೀತಿಯಲ್ಲಿ ವಿಚಾರಗಳನ್ನು, ಮಾಹಿತಿಗಳನ್ನು ಪಡೆದುಕೊಳ್ಳುವುದನ್ನು ಔಪಚಾರಿಕ ಶಿಕ್ಷಣವೆಂದು ಪರಿಗಣಿಸಿದರೆ, ಸುತ್ತಮುತ್ತಲ ಪರಿಸರವನ್ನು ಗಮನಿಸುತ್ತಾ, ಜೀವನ ಅನುಭವದಿಂದ ವಿಚಾರಗಳನ್ನು ಕಲಿಯುವುದೇ ಅನೌಪಚರಿಕ ಶಿಕ್ಷಣ ಆಗಿರುತ್ತದೆ. ಈ ಕಾಡಿನ ಮಕ್ಕಳಲ್ಲಿ ಅನೌಪಚಾರಿಕ ಶಿಕ್ಷಣದ ಕೊರತೆಯೇನೂ ಇಲ್ಲ. ಕುಲಕಸುಬಿನ ತಯಾರಿ, ಅದಕ್ಕೆ ಬೇಕಾದ ಬಿಳಲು, ಬಳ್ಳಿಗಳ ಪರಿಚಯ, ಬೇಟೆ, ಗಿಡಮೂಲಿಕೆ ಇತ್ಯಾದಿಗಳಲ್ಲಿ ಪರಿಣತಿಯನ್ನು ಪಡೆದಿರುತ್ತಾರೆ. ಔಪಚಾರಿಕ ಶಿಕ್ಷಣದ ಪರಿಚಯವಾಗಿರುವುದು ಮಾತ್ರ ತೀರಾ ಇತ್ತೀಚೆಗೆ. ಬಹುಶಃ 1930–1940 ಅವಧಿಯಲ್ಲಿ ಬೈಂದೂರು ಶೀರೂರಿನ ದಿ. ಕನ್ನ ಕೊರಗ ಮತ್ತು ಕಾರ್ಕಳದ ಪಳ್ಳಿ ಗೋಕುಲ್‌ದಾಸರೇ ಈ ಸಮುದಾಯದಲ್ಲಿ ಶಾಲೆಗೆ ಹೋಗಿ ಅಕ್ಷರಗಳನ್ನು ಪರಿಚಯಿಸಿಕೊಂಡ ಮೊದಲಿಗರು ಆಗಿರಬಹುದು! ವಿಶೇಷವೆಂದರೆ ಇವರೀರ್ವರು ಅಂಚೆ ಇಲಾಖೆಯಲ್ಲೇ ಸೇವೆಸಲ್ಲಿಸಿ ನಿವೃತ್ತರಾಗಿರುವುದು. ಗೋಕುಲ್‌ದಾಸರು ಇಲಾಖೆಯಲ್ಲಿ ಅಂಚೆಪಾಲಕ, ನಿರೀಕ್ಷಕರಾಗಿಯೂ ದುಡಿದು ಪ್ರಾಮಾಣಿಕ ಅಧಿಕಾರಿ ಎನಿಸಿಕೊಂಡ ಹೆಮ್ಮೆಯ ಕೊರಗ ಪ್ರತಿನಿಧಿಯಾಗಿ ಗುರುತಿಸಿಕೊಳ್ಳುತ್ತಾರೆ. ಈ ಹಿನ್ನಲೆಯಲ್ಲಿ ಅವರಿಬ್ಬರ ಪಾಲಕರೇ ಔಪಚಾರಿಕ ಶಿಕ್ಷಣದ ಬಗ್ಗೆ ಯೋಚಿಸಿದ ಮೊದಲ ಕೊರಗರು.

ಆದರೆ ಅಂದಿನಿಂದ ಇಂದಿನವರೆಗೂ ಈ ಸಮಾಜದಲ್ಲಿ ಶೈಕ್ಷಣಿಕ ಬೆಳವಣಿಗೆ ಸಾಧ್ಯವಾಗಿಲ್ಲ. ಕೆಲವೇ ಕೆಲವು ಮಂದಿ ಮಾತ್ರ ಶಾಲೆಯ ಕಡೆಗೆ ಆಸಕ್ತಿ ತೋರಿಸುತ್ತಾರೆ. ಸಮುದಾಯಕ್ಕೆ ಶತಮಾನಗಳ ಹಸಿವಿನಿಂದ ಹೊರಬಂದು ಶಿಕ್ಷಣ ಎಂಬ ಹೊಸ ಲೋಕವನ್ನು ಕಲ್ಪಿಸಿಕೊಳ್ಳುವುದು ಇಂದಿಗೂ ಸಾಧ್ಯವಾಗಿಲ್ಲ. ಊರಿನ ಅಜಲು ಚಾಕಿರಿ ಎಂಬ ಬಂಧನದಿಂದ ಬಿಡಿಸಿಕೊಳ್ಳಲು ಊರವರು ಅವಕಾಶವನ್ನೇ ನೀಡಿರಲಿಲ್ಲ. ಇದರಿಂದಾಗಿ ಶಿಕ್ಷಣ ಎಂದರೆ ಪರಿಚಯವೇ ಇಲ್ಲದ ಒಂದು ಭ್ರಮಾಲೋಕವೇ ಆಗಿತ್ತು. ಹಾಗಾಗಿಯೇ ಇವರು ಶಿಕ್ಷಣವನ್ನು ಒಂದು 'ಹಕ್ಕು' ಅಥವಾ ಅದು ಇಂದಿನ'ಅನಿವಾರ್ಯ' ಎಂಬುವುದಾಗಿ ಪರಿಗಣಿಸಲು ಸಾಧ್ಯವಾಗಿಲ್ಲ. ತೀರಾ ಇತ್ತೀಚೆಗೆ ಸರಕಾರದ ನೀತಿಯಿಂದಲೋ ಜನಸಾಮಾನ್ಯರ ಒತ್ತಾಯಕ್ಕೋ ಈ ಮಕ್ಕಳೂ ಶಾಲೆ ಎಂಬ ನಾಲ್ಕು ಗೋಡೆಗಳ ನಡುವೆ ಕಾಲ ಕಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಬೇಕು, ಬೇಡಗಳೆಂಬ ಗೊಂದಲಗಳಿಗೆ ಸಿಲುಕಿ ಮಾಧ್ಯಮಿಕ ಹಂತದಲ್ಲೆ ಹೆಚ್ಚಾಗಿ ಡ್ರಾಪ್ ಔಟ್

ಆಗುತ್ತಾರೆ. "ಕೊರಗ ಮಕ್ಕಳಲ್ಲಿ ವಿಶೇಷವಾದ ಕಲಿಕಾ ಸಾಮರ್ಥ್ಯವಿದೆ, ಯಾವುದೇ ವಿಷಯಗಳನ್ನು ಸಮರ್ಥವಾಗಿ ಗ್ರಹಿಸುತ್ತಾರೆ. ಆದರೆ ಶಾಲೆಯಲ್ಲಿ ಅವರ ಹಾಜರಾತಿ ನಿರಂತರವಾಗಿರುವುದಿಲ್ಲ. ಆದುದರಿಂದ ಪಾಠದ ಅನುಸರಣೆ ಅವರಿಗೆ ಸಾಧ್ಯವಾಗುತ್ತಿಲ್ಲ" ಎಂಬುವುದು ಇತ್ತೀಚಿಗಿನ ಕೆಲವು ಅಧ್ಯಾಪಕರ ಅಭಿಪ್ರಾಯ.

ಇಂತಹ ಪರಿಸ್ಥಿತಿಯನ್ನು ಮೀರಿ ಇಂದು ಹತ್ತಾರು ಮಕ್ಕಳು ಎಸ್.ಎಸ್.ಎಲ್.ಸಿ ಹಂತ ದಾಟಿ ಉನ್ನತ ಶಿಕ್ಷಣದತ್ತ ದಾಪುಗಾಲು ಇಟ್ಟಿದ್ದಾರೆ. ಮುಂದೆ ಇವರೇ ಇತರ ಮಕ್ಕಳಿಗೆ ಮಾದರಿಯಾಗಿ ಶೈಕ್ಷಣಿಕ ಪ್ರತಿಮೆಗಳಾಗಬೇಕಿದೆ. 2015–2016 ರಲ್ಲಿ ಕೊರಗ ಸಂಘಟನೆಗಳು ನಡೆಸಿದ ಸಮೀಕ್ಷೆಯ ಪ್ರಕಾರ ಎಸ್.ಎಸ್.ಎಲ್.ಸಿ ಹಾಗೂ ನಂತರದ ಶಿಕ್ಷಣ ಪಡೆದವರ ಒಟ್ಟು ಸಂಖ್ಯೆ ಕೇವಲ 455 ಮಾತ್ರ!!

ಎಸ್.ಎಸ್.ಎಲ್.ಸಿ	–	120
ಪಿಯುಸಿ	–	133
ಪದವಿ	–	70
ಬಿ.ಎಸ್. ಡಬ್ಲ್ಯೂ	–	6
ಸ್ನಾತಕೋತ್ತರ	–	52
ಐಟಿಐ/ಡಿಪ್ಲೊಮ	–	22
ಬಿ.ಇ	–	18
ನರ್ಸಿಂಗ್ (ಎ.ಎನ್.ಎಂ)	–	12
ನರ್ಸಿಂಗ್ (ಜಿ.ಎಸ್.ಎಂ)	–	18
ಎಲ್.ಎಲ್.ಬಿ	–	2

ಆರೋಗ್ಯ

ಅಜಲು ಪದ್ಧತಿಯ ಆಚರಣೆ, ಕುಡಿತದ ಅಮಲು ಹಾಗೂ ಅದರಿಂದ ಪ್ರೇರಿತವಾದ ಬದುಕಿನ ಅಸ್ಪಷ್ಟತೆ, ಇವುಗಳಿಂದಾಗಿ ಕೊರಗರಿಗೆ ಯಾವುದೇ ಕಾಯಿಲೆಗಳಾದರೂ ಅವು ಬದುಕಿನ ಒಂದು ಅವಿಭಾಜ್ಯವೇ ಹೊರತು ಬೇರೇನೂ ಅಲ್ಲ. ಮೇಲ್ನೋಟಕ್ಕೆ ಗೋಚರಿಸುವಂತಹ ಇವರ ಅಸಹಜ ನಡವಳಿಕೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಸದಾ ಮಂಕು ಬಡಿದಂತೆ ಕಾಣುವ ಇವರು ಹಲವು ರೋಗಗಳ ಭಂಡಾರವೇ ಆಗಿರುತ್ತಾರೆ. ರಕ್ತ ಹೀನತೆ, ಕ್ಷಯ ಮಾಮೂಲಿ ಕಾಯಿಲೆಗಳಾದರೆ, ಉಬ್ಬಸ, ರಕ್ತದೊತ್ತಡಗಳೂ ಬಹಳ ಜನರಲ್ಲಿ ಕಂಡು ಬರುತ್ತದೆ. ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿದರೆ ಈ ಸಮುದಾಯದಲ್ಲಿ ಶೇಕಡಾ ಐವತ್ತಕ್ಕೂ ಹೆಚ್ಚು ಮಂದಿ ಮಾನಸಿಕ ಅಸ್ವಸ್ಥರಿದ್ದಾರೆ. ಒಂದಲ್ಲ ಒಂದು ರೀತಿಯ ಗೊಂದಲ, ಒತ್ತಡಗಳಲ್ಲಿ ಸಿಲುಕಿರುವ ಇವರು ವಿಚಿತ್ರ ನಡವಳಿಕೆಗಳಿಂದ ಕೂಡಿರುತ್ತಾರೆ. ಅಥವಾ ಖಿನ್ನತೆಗೆ ಒಳಗಾಗಿರುತ್ತಾರೆ. ಇತ್ತೀಚೆಗೆ ಕೆಲವು ಕೊರಗ ಬಲೆಪುಗಳನ್ನು ಸಂದರ್ಶಿಸಿದ ಆರೋಗ್ಯ ಅಧ್ಯಯನ

ತಂಡವೊಂದು "ಈ ಸಮುದಾಯದಲ್ಲಿ ಒಂದು ಬಗೆಯ ಅವ್ಯಕ್ತ ಭಯವಿದೆ ಹಾಗೂ ಅತೀ ಹೆಚ್ಚು ಜನರು ಖಿನ್ನತೆಗೆ ಒಳಗಾಗಿದ್ದಾರೆ ಎಂಬುವುದಾಗಿ ಅಭಿಪ್ರಾಯ ಪಟ್ಟಿದೆ. ಆಹಾರ ಪದ್ಧತಿ ಹಾಗೂ ಕೆಲವೊಂದು ಚಟಗಳಿಂದಾಗಿ ಕ್ಯಾನ್ಸರ್, ಎಚ್.ಐ.ವಿ ಯಂತಹ ಮಾರಕ ಕಾಯಿಲೆಗಳೂ ಇವರನ್ನು ಬಾಧಿಸುತ್ತಿದೆ. ಅಪೌಷ್ಠಿಕತೆ ಮತ್ತು ಅಮಲು ಸೇವನೆಯ ಪರಿಣಾಮದಿಂದಾಗಿ ಸಣ್ಣಪುಟ್ಟ ಕಾಯಿಲೆಗಳೂ ಗಂಭೀರ ಪರಿಣಾಮವನ್ನು ಉಂಟು ಮಾಡುತ್ತವೆ. ಸಾಮಾನ್ಯ ಜ್ವರ, ಹೊಟ್ಟೆನೋವುಗಳಂತಹ ಕಾಯಿಲೆಗಳನ್ನು ಇವರು ನಿರ್ಲಕ್ಷಿಸಿ ಬಿಡುತ್ತಾರೆ. ಇಲ್ಲವೇ ತಮಗೆ ತಿಳಿದಿರುವ ಗಿಡಮೂಲಿಕೆಗಳಿಂದ ಶಮನಪಡಿಸಿ ಕೊಳ್ಳುತ್ತಾರೆ. ಕಾಯಿಲೆ ಉಲ್ಬಣಿಸಿದೆ ಎಂದೆನಿಸಿದಾಗ ಮೂಢನಂಬಿಕೆಗಳಿಗೆ ಜೋತು ಬೀಳುತ್ತಾರೆ. ಆಸ್ಪತ್ರೆಯ ವಾತಾವರಣ ಅವರಿಗೆ ಅಸಹ್ಯವೆನಿಸುತ್ತದೆ. ಅಲ್ಲಿನ ಔಷಧಿ ಹಾಗೂ ಸಿಬ್ಬಂದಿಗಳ ಬಗ್ಗೆ ನಂಬಿಕೆಯೇ ಇಲ್ಲ. ಹಾಗಾಗಿ ಅದರ ಗೊಡವೆಗೆ ಹೋಗುವುದೇ ಇಲ್ಲ. ಹೆರಿಗೆ ಸಂದರ್ಭಗಳಲ್ಲೂ ಮಗುವಿನ ಸಾವಿನ ಪ್ರಮಾಣ ಅಧಿಕವಾಗಿದೆ. ಒಟ್ಟಾರೆಯಾಗಿ ಈ ಸಮುದಾಯವು ಮಾನಸಿಕವಾಗಿಯೂ, ದೈಹಿಕ ವಾಗಿಯೂ ಒಂದು ಅನಾರೋಗ್ಯ ಸಮುದಾಯವಾಗಿಯೇ ಮುಂದುವರಿದಿರುವುದು ದುರಂತವೇ ಸರಿ.

ಬುಡಕಟ್ಟು ಅನನ್ಯತೆ / ಚಹರೆಗಳು

ಕೊರಗ ಸಮುದಾಯದ ಪ್ರತ್ಯೇಕವಾದ ಸ್ವತಂತ್ರ ಭಾಷೆ, ಕಾಡಿನ ಮೂಲಗಳನ್ನು ಆಧರಿಸಿದ ಕುಲಕಸುಬು, ಬುಡಕಟ್ಟು ಸಂಸ್ಕೃತಿಯ ಆರಾಧನಾ ಕ್ರಮ, ಪ್ರತ್ಯೇಕವಾದ ಕುಲದೈವ, ಕಡು–ಬಡತನದಲ್ಲೂ ನೆಮ್ಮದಿಯ ಬದುಕಿನ ಪರಿಕಲ್ಪನೆ ಮುಂತಾದ ವಿಶಿಷ್ಟ ಚಹರೆಗಳೇ ಇವರ ಅನನ್ಯತೆ ಅಥವಾ ಅಸ್ಮಿತೆಯ ಪ್ರತೀಕಗಳು. ಜೊತೆಗೆ ತುಳುನಾಡಿನ ದೈವಾರಾಧನೆಗಳಲ್ಲಿ ಹೇರಳವಾಗಿ ಬಳಸುವ ಗುಡ್ಡದ ಹೂವು(ಕೇಪುಳ ಅಥವಾ ಕಿಷ್ಕಾರ ಹೂವು) ಮೊತ್ತಮೊದಲಾಗಿ ಕೊರಗರ ಕುರ್ಪ(ಹೂವು) ಆಗಿರುತ್ತದೆ. (ನಂತರ ಇತರ ತುಳುವರೂ ಇದನ್ನೇ ಬಳಸಿದರು). ಅದರಂತೆಯೇ ಹಲಸಿನ ಎಲೆ ಇವರಿಗೆ ಪವಿತ್ರವಾದದ್ದಾಗಿದೆ. ಸಾವಿನ ಸೂತಕ ಕಳೆಯುವುದಕ್ಕೂ ಹಲಸಿನ ಚಿಗುರೆಲೆಗಳಿಂದ ನೀರನ್ನು ಚಿಮುಕಿಸಿ ಶುದ್ಧ ಮಾಡುತ್ತಾರೆ. ಈ ಕಾಡಿನ ಮಕ್ಕಳಿಗೆ ಕುಲ ಪಕ್ಷಿ ಹಾಗೂ ಕುಲ ಪ್ರಾಣಿಗಳೂ ಇವೆ. ಆದರೆ ಯಾವುದೆಂಬುದು ತಿಳಿದಿಲ್ಲ. ಕಾಡಿನ ಕೊರಗೆರೆಕ್ಕಿ (ಕೊರಗರ ಹಕ್ಕಿ) ಇವರ ಕುಲ ಪಕ್ಷಿಯಾಗಿರಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಇವರ ಕತೆಗಳಲ್ಲಿ ಹೆಚ್ಚಾಗಿ ಬರುವ ಕಥಾನಾಯಕ ಕುದ್ಕರಸು(ನರಿ) ಅಥವಾ ಮೊದರಣ್ಣ (ಮೊಸಳೆ) ಕುಲ ಪ್ರಾಣಿ ಆಗಿರುವ ಸಾಧ್ಯತೆಗಳೂ ಇವೆ. ಈ ಬಗ್ಗೆ ಇನ್ನೂ ತಳಮಟ್ಟ ಅಧ್ಯಯನ ಆಗಬೇಕಾಗಿದೆ. ಸಮುದಾಯದ ಸಾಂಸ್ಕೃತಿಕ ಕಲಾಪರಿಕರವಾದ ಡೋಲು, ಕೊಳಲು ಹಾಗೂ ಇಂದಿನ ಬದುಕಿಗೆ ಅನಿವಾರ್ಯವಾಗಿರುವ ಶಿಕ್ಷಣದ ಪ್ರತೀಕವಾದ ತೆರೆದ ಪುಸ್ತಕವನ್ನು ಹೊಂದಿರುವ ರೇಖಾಚಿತ್ರವನ್ನು ಸಂಘಟನೆಯು, ತನ್ನ ಲಾಂಛನವನ್ನಾಗಿ ಸ್ವೀಕರಿಸಿತ್ತಾದರೂ ಭಿನ್ನಾಭಿಪ್ರಾಯಗಳಿಂದಾಗಿ ಅದಿನ್ನೂ ಅಂತಿಮಗೊಂಡಂತಿಲ್ಲ. ಅದು ಅಂತಿಮಗೊಂಡು, ಕುಲಚಿಹ್ನೆ ಸಂಶೋಧನೆಯ ಕಡೆಗೆ ಕುಲಬಾಂಧವರು ಗಮನ ಕೊಡಬೇಕಾಗಿದೆ.

ಮತಾಂತರ

ಸಾಮಾನ್ಯವಾಗಿ ವಿದೇಶಿ ಕ್ರಿಶ್ಚಿಯನ್ ಮಿಷನರಿಗಳು ಈ ಬುಡಕಟ್ಟು ಸಮುದಾಯಗಳನ್ನು ಮತಾಂತರ ಮಾಡಿರುವುದು ಕಂಡುಬರುತ್ತದೆ. ಉತ್ತರಕನ್ನಡ ಜಿಲ್ಲೆಯ ಸಿದ್ಧಿ ಬುಡಕಟ್ಟು ಸಮುದಾಯವು ಇದಕ್ಕೊಂದು ಉತ್ತಮ ಉದಾಹರಣೆ. ವಿಶೇಷವೆಂದರೆ ಈ ಸಿದ್ಧಿ ಜನರನ್ನು ಕ್ರಿಶ್ಚಿಯನ್ನರ ಜೊತೆಗೆ ಮುಸ್ಲಿಂ ಹಾಗೂ ಹಿಂದೂಗಳು ಮತಾಂತರ ಮಾಡಿದ್ದಾರೆ. ಆದುದರಿಂದ ಇಲ್ಲಿ ಕ್ರಿಶ್ಚಿಯನ್ ಸಿದ್ಧಿ, ಮುಸ್ಲಿಂ ಸಿದ್ಧಿ ಹಾಗೂ ಹಿಂದೂ ಸಿದ್ಧಿಗಳೆಂಬ ಮೂರು ಉಪ ಪ್ರಭೇದಗಳೂ ಇವೆ. ಉಳಿದ ಆದಿವಾದಿಗಳು ಸಾಮಾನ್ಯವಾಗಿ ಹಿಂದೂ ಇಲ್ಲವೇ ಕ್ರಿಶ್ಚಿಯನ್ ಸಂಸ್ಕೃತಿಗಳನ್ನು ಒಪ್ಪಿ ಅಪ್ಪಿಕೊಂಡಿರುತ್ತಾರೆ. ಈ ಕಾಡು ಕೊರಗರು ಕೂಡಾ ನಾಡಿಗೆ ಬಂದಾಗಲೇ ಹಿಂದೂ ಧರ್ಮ ಸಂಸ್ಕೃತಿಗೆ ಒಳಗಾಗಿರುತ್ತಾರೆ. ಹಿಂದೂಗಳ ಮನೆ, ಮಠ, ಮಂದಿರಗಳಲ್ಲಿ ಇವರಿಗೆ ನಿಷೇಧವಿದ್ದರೂ, ಅಸ್ಪೃಶ್ಯತೆ ತಾಂಡವವಾಡುತ್ತಿದ್ದರೂ ಹಿಂದೂ ಸಂಸ್ಕೃತಿಯ ತಾಯಿ ಬೇರು ಇವರನ್ನು ತನ್ನ ಸೇವೆಗೆ ಬಳಸಿಕೊಂಡಿತು. ಅನಿವಾರ್ಯವಾಗಿ ಇವರು ಬುಡಕಟ್ಟು ಸಂಸ್ಕೃತಿಯನ್ನು ಮರೆಯುವಂತೆ ಮಾಡಿತು. ಕ್ರಮೇಣ ಉಡುಗೆ-ತೊಡುಗೆಯ ಜೊತೆಗೆ ಕೆಲವೊಂದು ಆಚಾರ ವಿಚಾರಗಳನ್ನು ಕೂಡಾ ಹಿಂದೂ ಸಂಸ್ಕೃತಿಗೆ ಒಗ್ಗಿಸಿಕೊಂಡರು. ಹಾಗಾಗಿ ಇಂದು ಕೊರಗರಲ್ಲಿ 90% ಬುಡಕಟ್ಟು ಚಹರೆಗಳು ಮಾಯವಾಗಿ, ಹಿಂದೂಗಳಂತೆ ನಡೆದುಕೊಳ್ಳುತ್ತಿದ್ದಾರೆ. ಅಸ್ಪೃಶ್ಯತೆ ಮಾತ್ರ ಇವರನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಇಂದಿಗೂ ಬಿಟ್ಟುಕೊಟ್ಟಿಲ್ಲ.

ಇನ್ನು ಕೆಲವು ಕೊರಗರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಕೊಂಡಿದ್ದಾರೆಂಬ ಮಾಹಿತಿ ಇದೆ. ಕೇರಳ ಕರ್ನಾಟಕ ರಾಜ್ಯಗಳ ಗಡಿನಾಡಿನ ಮಂಜೇಶ್ವರ ಬ್ಲಾಕ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೊರಗರು ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡಿರುತ್ತಾರೆ, ಮೇಲ್ನೋಟಕ್ಕೆ ಇವರು ಕ್ರಿಶ್ಚಿಯನ್ ಧರ್ಮ ಗುರುಗಳ ಆಮಿಷಗಳಿಗೆ ಬಲಿಯಾಗಿರುವಂತೆ ಕಂಡುಬರುತ್ತದೆ. ಮಂಗಳೂರು ಹಾಗೂ ಪುತ್ತೂರು ತಾಲೂಕುಗಳಲ್ಲಿಯೂ ಕೆಲವು ಕುಟುಂಬಗಳು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ್ದಾರೆ. ಕಾರ್ಕಳ ಬಜಗೋಳಿಯ ಒಂದು ಕುಟುಂಬ ಕೂಡಾ ಮತಾಂತರಗೊಂಡಿದ್ದಾರೆ. ಈ ಕುಟುಂಬಕ್ಕೆ ವಾಸಿಯಾಗದ ಕಾಯಿಲೆಯೊಂದು ವಕ್ಕರಿಸಿದ ಬಳಿಕ ಕ್ರೈಸ್ತ ವ್ಯಕ್ತಿಯೊಬ್ಬರ ಸಲಹೆಯಂತೆ, ತಮ್ಮ ಮನೆಯಲ್ಲಿದ್ದ ಕುಲದೇವರು ಹಾಗೂ ಹಿಂದೂ ದೇವರ ಫೋಟೋಗಳನ್ನು ಹೊರಗೆ ಬಿಸಾಕಿ, ಕ್ರೈಸ್ತ ಮತಾವಲಂಬಿಗಳಾಗಿದ್ದಾರೆ. ಆ ಮತಕ್ಕೆ ಸೇರಿದ ನಂತರದ ಜೀವನಾನುಭವವು ಆ ದೇವರಿಗೇ ಪ್ರೀತಿ!

ಇನ್ನು ಮುಲ್ಕಿ ಹಾಗೂ ಕಾಪು ಪರಿಸರದಲ್ಲಿ ಒಂದಿಬ್ಬರು ಇಸ್ಲಾಂ ಧರ್ಮಕ್ಕೆ

ಸೇರಿದ್ದಾರೆಂಬ ಸುದ್ದಿ ಇದ್ದರೂ ಅದು ಖಚಿತಗೊಂಡಿಲ್ಲ. ತೀರಾ ಇತ್ತೀಚೆಗೆ ಮಂಗಳೂರಿನ ವಾಮಂಜೂರಿನಲ್ಲಿ ಕೆಲವರು ಸ್ವಯಂ ಪ್ರೇರಿತರಾಗಿ ಬೌದ್ಧ ಧರ್ಮವನ್ನು ಸ್ವೀಕರಿಸುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ. ಇರುವ ಹದಿನೈದು ಸಾವಿರ ಕೊರಗರೆಲ್ಲಾ ಹೀಗೆ ಬೇರೆಬೇರೆ ಧರ್ಮಗಳಿಗೆ ಹಂಚಿ ಹೋದರೆ, ಬುಡಕಟ್ಟು ಸಂಸ್ಕೃತಿಯ ಕೊರಗರು ಇನ್ನು ಕೆಲವೇ ಕಾಲದಲ್ಲಿ ಪುಸ್ತಕ, ಪತ್ರಿಕೆಗಳಲ್ಲಿ ಮಾತ್ರ ಓದಬೇಕಾದ ವಿಷಯಗಳಾಗಬಹುದು!

ವಿಧಿ ನಿಷೇಧಗಳು

ವಿಧಿ ನಿಷೇಧಗಳು ಎಂದರೆ ಮಾಡಬಾರದ ಕಾರ್ಯಗಳು ಎಂದರ್ಥ. ನಿಷೇಧ ಇರುವಂತಹ ವಿಧಿಗಳು! ಕೊರಗ ಸಮುದಾಯದಲ್ಲಿ ನಿಷೇಧವಿರುವ ವಿಧಿಗಳು ಯಾವುವು?

ಮೂಲತಃ ಈ ಬುಡಕಟ್ಟು ಸಮುದಾಯದಲ್ಲಿ ಯಾವುದು ಮಾಡಬೇಕು, ಯಾವುದು ಮಾಡಬಾರದು ಎಂಬ ನಿಷೇಧಗಳಿಲ್ಲ. ಆದರೆ ತಮ್ಮದಲ್ಲದ ಕೆಲವೊಂದು ನಿಷೇಧಗಳನ್ನು ತಮ್ಮದಾಗಿಸಿಕೊಳ್ಳುವುದರಲ್ಲಿ ಇವರೂ ಹಿಂದೆ ಬಿದ್ದಿಲ್ಲ. ಅವುಗಳಲ್ಲಿ ಕೆಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ಸುರಕ್ಷತೆಯ ದೃಷ್ಟಿಯಿಂದ ಇಂತಹ ಕಟ್ಟುಪಾಡುಗಳು ಬೆಳೆದಿರಬಹುದು ಎಂದೆನಿಸುತ್ತದೆ. ಆದರೆ, ಹುಡುಗಿ ಪುಷ್ಪವತಿಯಾದಾಗ, ಆಕೆ ಮನೆಯೊಳಗೆ ಹಾಗೂ ದೇವರ ಕೋಣೆಗೆ ಪ್ರವೇಶಿಸಬಾರದು, ಪುರುಷರು ಮುಟ್ಟಕೂಡದು, ಮೂರು ದಿನ ಮಹಿಳೆ ಪ್ರತ್ಯೇಕವಾಗಿರಬೇಕು ಎಂಬುವುದು ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯ ಬಳುವಳಿಯಾಗಿದೆ. ಮಹಿಳೆ ಹೆತ್ತಾಗ ಕುಟುಂಬಿಕರೆಲ್ಲ ಕೆಲವು ದಿನ ಸೂತಿಕೆ ಆಚರಿಸಬೇಕು, ಯಾರಾದರೂ ತೀರಿಹೋದರೂ ಕುಟುಂಬಿಕರೆಲ್ಲರಿಗೂ ಪಿಲೆ ಅಥವಾ ಸೂತಿಕೆ ಇತ್ಯಾದಿಗಳು ಇತರರಿಂದ ಎರವಲು ಪಡೆದ ಆಚರಣೆಗಳಾಗಿವೆ. ಗಂಡನ ಅಣ್ಣನನ್ನು, ತಮ್ಮನ ಹೆಂಡತಿ ಮುಟ್ಟಬಾರದು, ಒಂದು ವೇಳೆ ಸ್ಪರ್ಶಿಸಿದರೆ ಆತನಿಗೆ ತಲೆಸುತ್ತು ಬರುತ್ತದೆ ಎನ್ನುವುದು ಒಂದು ರೀತಿಯ ಬೂಟಾಟಿಕೆಯಾದರೂ, ಭಾವನ ಕಾಮ ದೃಷ್ಟಿಯಿಂದ ನಾದಿನಿಯನ್ನು ದೂರವಿರಿಸುವ ಗುರುತರ ಉದ್ದೇಶವೂ ಅದರಲ್ಲಿದೆ. ಇನ್ನು ಕೆಲವು ನಿಷೇಧಗಳ ಹಿಂದೆ ಆರೋಗ್ಯ ರಕ್ಷಣೆಯ ಉದ್ದೇಶವೂ ಇರಬಹುದು. ಉದಾಹರಣೆಗೆ: ಋತಿಮತಿಯಾದ ಮಹಿಳೆ ಅಡುಗೆಕೋಣೆ ಪ್ರವೇಶಿಸಬಾರದು ಎನ್ನುವುದು, ಆಕೆ ಅಲ್ಲಿ ಏನಾದರೂ ವಸ್ತುಗಳನ್ನು ಎತ್ತುವುದು, ಬಗ್ಗಿ ಕೆಲಸ ಮಾಡುವುದು, ಹೀಗೆ ಮಾಡಿದರೆ ರಕ್ತಸ್ರಾವ ಅಧಿಕವಾಗಬಹುದು ಎಂಬ ಆತಂಕದಿಂದಲೂ ಇರಬಹುದಲ್ಲವೇ? ಆದರೆ ಅಂತಹ ಒಂದು ಕಲ್ಪನೆ ಜನರಿಗೆ ಇದ್ದಿತ್ತೋ ಅಥವಾ ಕೇವಲ ಭಂಡತನದ ಪ್ರದರ್ಶನವೇ ಎಂಬ ಜಿಜ್ಞಾಸೆಯೂ ಇದೆ. ಕ್ರಮೇಣ ಈ ನಿಷೇಧಗಳು ನೈಜ ಅರ್ಥವನ್ನು ಕಳೆದುಕೊಂಡು ಮಹಿಳೆಯರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳಲು ಕಾರಣವಾದದ್ದು ಮಾತ್ರ ನಿಜ. ಅದೇನಿದ್ದರೂ ಮೊದಲೇ ಹೇಳಿದಂತೆ ಇವು ಯಾವುವೂ ಕೊರಗ ಸಮುದಾಯದ್ದಲ್ಲ. ಕೊರಗತನಿಯ ಹಾಗೂ ಬೈಕಾಡ್ತಿ ದೈವಗಳ ಕೆಲಸ ಕಾರ್ಯಗಳಿಗೆ ಸ್ಪರ್ಶಿಸುವುದಕ್ಕೆ ಈ ನಿಷೇಧಗಳು ಲಗಾವು ಆಗುವುದಿಲ್ಲ ಎಂಬುವುದೇ ಇದಕ್ಕೆ ಪುರಾವೆ! ಆದರೆ ಕ್ರಮೇಣ ಇತರರಿಂದ ಇವನ್ನು ಪಡೆದು, ಪುರುಷ ಪ್ರಧಾನ

ವ್ಯವಸ್ಥೆಯು ಗಟ್ಟಿಗೊಳ್ಳಲು ಕಾರಣವಾಯಿತು.

ಇನ್ನು ಕೆಲವು ನಿಷೇಧಗಳು ಪುರುಷರು ಮತ್ತು ಮಹಿಳೆಯರು ಇಬ್ಬರಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಒಂದೇ ಬಳಿಯೊಳಗಿನ ಮದುವೆ ಸಂಬಂಧಗಳು ನಿಷಿದ್ಧವಾಗಿವೆ. ಗಂಡ ಸತ್ತ ಮಹಿಳೆಯ ಮದುವೆಯಂತಹ ಕಾರ್ಯಗಳಲ್ಲಿ ಭಾಗವಹಿಸ ಬಾರದು ಎಂಬ ನಿಯಮವೇನೂ ಇಲ್ಲ. ಇಲ್ಲಿ ಮಂಗಳ ಅಮಂಗಳಗಳ ಕಲ್ಪನೆ ಇತ್ತೀಚಿನದಷ್ಟೇ.

ಒಟ್ಟಾರೆಯಾಗಿ ಹೇಳುವುದಾದರೆ, ಕೊರಗ ಸಮುದಾಯದಲ್ಲಿ ಮಹಿಳೆಯರ ವಿರುದ್ಧ ಇರುವ ನಿಷೇಧಗಳ್ಯಾವುವು ಅವರದ್ದಲ್ಲ, ಇತರರ ಕೊಡುಗೆ, ಇವರು ಬಲಿಪಶುಗಳು ಅಷ್ಟೇ!

ಸಂಘಟನೆ ಮತ್ತು ಚಳವಳಿಗಳು

ಇಂದು ಕೊರಗ ಸಂಘಟನೆಗಳು ಬಹಳಷ್ಟು ಬೆಳೆದು ನಿಂತಿವೆ. ಆದರೆ ಕರಾವಳಿಯ ಅಜಲು ಪದ್ಧತಿಯ ಅಲಗಿನಲ್ಲಿ ನುಜ್ಜುಗುಜ್ಜಾಗಿದ್ದ ಈ ಕಾಡುಕೊರಗರು ಇಷ್ಟೊಂದು ಎತ್ತರಕ್ಕೆ ಬೆಳೆದು ನಿಲ್ಲಲು ಸಾಧ್ಯವಾದದ್ದಾದರೂ ಹೇಗೆ? ಇದರ ಹಿಂದಿರುವ ಆ ಪ್ರೇರಕ ಶಕ್ತಿ ಎಂತದ್ದು? ಕೊರಗರಿಗೆ ಏಕಾಏಕಿ ಜ್ಞಾನೋದಯವಾಗಿ, ಈ ಕಾರ್ಯ ನಡೆದು ಹೋಯಿತೆ? ಅಥವಾ ದೈವ ಕೃಪೆ ಏನಾದರೂ ಪರಿಣಾಮ ಬೀರಿತೇ? ಇಲ್ಲ. ಅದ್ಯಾವುದೂ ಅಲ್ಲ. ಇಲ್ಲಿ ಕೊರಗರು ಸಂಘಟಿತರಾಗಲು ಕೈಯಾಡಿಸಿದ್ದು, ಪ್ರೇರಣೆಯಾಗಿರುವುದು ಅದೇ ಸರಕಾರೇತರ ಸ್ವಯಂಸೇವಾ ಸಂಸ್ಥೆಗಳು!

ಜಗತ್ತಿನೆಲ್ಲೆಡೆಯೂ ಈ ಎನ್.ಜಿ.ಓ ಗಳು ಕಾರ್ಯನಿರ್ವಹಿಸುತ್ತಿದ್ದು, ದೀನ ದಲಿತರ ಆಶಾಕಿರಣಗಳಾಗಿವೆ. ವಿದೇಶಿ ಖಾಸಗಿ ದೇಣಿಗೆಗಳನ್ನು ಪಡೆದು, ಹಿಂದುಳಿದ ಪಂಗಡಗಳ ಏಳಿಗೆಗೆ ಶ್ರಮಿಸುತ್ತಿರುವ ಕೆಲವು ಎನ್.ಜಿ.ಓ ಗಳ ಕಾರ್ಯ ವೈಖರಿಗಳ ಬಗ್ಗೆ ಅಪಸ್ವರ,

1994ರಲ್ಲಿ ಜನಾಂಗದ ಸಮಗ್ರ ಅಧ್ಯಯನಕ್ಕೆ ಒತ್ತಾಯಿಸಿ ಮಂಗಳೂರಿನಲ್ಲಿ ಕೊರಗರು ನಡೆಸಿದ ಪ್ರತಿಭಟನಾ ರ್‍ಯಾಲಿ

ಆರೋಪಗಳೂ ಆಗಾಗ ಕೇಳಿ ಬರುವುದಿದೆ. ಇವೆಲ್ಲದರ ನಡುವೆಯೂ, ಸ್ವ ಅಸ್ತಿತ್ವವನ್ನು ಕಳೆದುಕೊಂಡು ದಯನೀಯ ಸ್ಥಿತಿಯಲ್ಲಿರುವ ಕೊರಗ ಸಮುದಾಯಗಳಂತಹ ಅದೆಷ್ಟೋ ಜನರ ಪಾಲಿಗೆ ಈ ಸಂಸ್ಥೆಗಳು ನೀಡುವ ಕೊಡುಗೆ ಮಾತ್ರ ಗಣನೆಗೆ ನಿಲುಕದಿರುವುದು. ಕರ್ನಾಟಕದ ಕರಾವಳಿಯಲ್ಲಿ ಅಳಿವಿನ ಅಂಚಿನಲ್ಲಿರುವ ಕೊರಗರನ್ನು ಸಂಘಟಿಸಿ, ಜಾಗೃತಿ ಮೂಡಿಸುವಲ್ಲಿಯೂ ಇಲ್ಲಿನ ಎನ್.ಜಿ.ಓ ಗಳು ಸ್ಮರಣೀಯ ಕೊಡುಗೆ ನೀಡಿವೆ. ಎಪ್ಪತ್ತರ ದಶಕದಿಂದಲೂ ಕೊರಗರನ್ನು ಸಂಘಟಿಸುವ ಕಾರ್ಯಗಳು ನಡೆದಿರುವುದು ಉಲ್ಲೇಖನೀಯ. ಎಂಬತ್ತರ ದಶಕದಲ್ಲಿ ಈ ಪ್ರಯತ್ನವು ಒಂದು ಹಂತದ ಸಂಘಟನೆಯನ್ನು ಸಾಧಿಸುವಲ್ಲಿ ಸಫಲತೆಯನ್ನು ಕಾಣತೊಡಗಿತು.

ವಿದೇಶಿ ಮೂಲದ 'ಯುನೆಸ್ಕೋ' ಎಂಬ ಸ್ವಯಂ ಸೇವಾ ಸಂಸ್ಥೆಯು ಮೊದಲ ಬಾರಿಗೆ ಕೊರಗರನ್ನು ಸಂಘಟಿಸುವ ಕೆಲಸಕ್ಕೆ ಕೈ ಹಾಕಿತು. ಮಂಗಳೂರಿನ ಫಾದರ್ ಲಾರೆನ್ಸ್ ಡಿ'ಸೋಜಾ ರವರ ನೇತೃತ್ವದ "ಯುನೆಸ್ಕೋ ಕೋ ಆ್ಯಕ್ಷನ್ ಲರ್ನಿಂಗ್ ಸೆಂಟರ್" ಎಂಬ ಈ ಸಂಸ್ಥೆಯು ಮಂಗಳೂರು, ಪುತ್ತೂರು, ಸುಳ್ಯ ಮುಂತಾದೆಡೆ ಕೊರಗರ ಇರುವನ್ನು ಅರಸುತ್ತಾ ಸಂಘಟನೆಗೆ ಮುಂದಡಿ ಇಟ್ಟಿತು. ಮಂಗಳೂರಿನ ವಾಮಂಜೂರು ಸುತ್ತಲಿನ ಕೊರಗರನ್ನು ಸೇರಿಸಿ, ಮೊದಲ ಬಾರಿಗೆ ಗುರುಪುರ ವಲಯ 'ಕೊರಗ ಸಂಘ'ವನ್ನು ಆರಂಭಿಸಿತು. ಸರಸ್ವತಿ ಪಿಲಿಕುಲ, ಲಕ್ಷ್ಮಣ ಮಂಗಳಜ್ಯೋತಿ, ವಿಶ್ವನಾಥ ಎದುರುಪದವು ಮೊದಲಾದವರು ಅಂದಿನ ಸಂಘಟನೆಯ ಕೆಲವು ಲೀಡರುಗಳು.

ಅದಕ್ಕೂ ಮೊದಲು ಸಿ.ಸಿ.ಎಫ್(ಕ್ರಿಶ್ಚಿಯನ್ ಚಿಲ್ಡ್ರನ್ಸ್ ಫಂಡ್) ಎಂಬ ಸಂಸ್ಥೆಯೂ ಕೊರಗ ಸಮುದಾಯದ ಮಕ್ಕಳಿಗೆ ಶಿಕ್ಷಣ ಸಂಬಂಧಿ ಬೆಂಬಲವನ್ನು ನೀಡಿತ್ತು.

1977ರಲ್ಲಿ ರೂಪುಗೊಂಡು 1980 ರಲ್ಲಿ ಕರ್ನಾಟಕ ಸೊಸೈಟೀಸ್ ಕಾಯ್ದೆಯನ್ವಯ ನೋಂದಾಯಿಸಲ್ಪಟ್ಟ ಸೂರಲ್ಪಾಡಿಯ 'ಶುಭದಾ' ಸಂಸ್ಥೆಯು, ನಂತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಸುತ್ತಮುತ್ತ ಕೊರಗರನ್ನು ಸಂಘಟಿಸುವ ಕಾರ್ಯವನ್ನು ಕೈಗೆತ್ತಿಕೊಂಡಿತು. ("ಶುಭಂ ದದಾತಿ" ಎಂದರೆ ಶುಭವನ್ನು ಕೋರುವುದು ಎಂದರ್ಥ). ಮೆ. ಸೆಲಿನ್ ಅರಸ್ಥಾರವರು ಈ ಸಂಸ್ಥೆಯ ನೇತೃತ್ವವನ್ನು ವಹಿಸಿದ್ದು, ಮಹಮ್ಮದ್ ಗುತ್ತಿಗಾರ್, ಐರಿನ್ ವೇಗಸ್ ರಂತಹ ಉನ್ನತ ವ್ಯಕ್ತಿಗಳು ಕೊರಗರ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಸರಿಸುಮಾರು ಅದೇ ಸಮಯದಲ್ಲಿ ಕುಂದಾಪುರದಲ್ಲಿ ಆಶಿಕಾ ಟ್ರಸ್ಟ್ (ಆರೋಗ್ಯ, ಶಿಕ್ಷಣ, ಕಾರ್ಯಕ್ರಮ) ಎಂಬ ಸಂಸ್ಥೆಯನ್ನು ಕಟ್ಟಿಕೊಂಡಿದ್ದ ಶ್ರೀರಾಮ ಕಾರಂತರು ಕೊರಗರ ಸಂಘ, ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸಿದರು. ಜೊತೆ ಜೊತೆಯಲ್ಲೇ 'ಆಶಿಕಾ'ದಿಂದ ಹೊರ ಬಂದಿದ್ದ ಕೇಶವ ಕೋಟೇಶ್ವರ ಹಾಗೂ ಅವರ ಪತ್ನಿ ಪ್ರಮೀಳ ವಾಜ್‌ರ ತಂಡವು 'ಸ್ಫೂರ್ತಿ(ರಿ.)' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಕುಂದಾಪುರ ತಾಲೂಕಿನಲ್ಲಿ ಕೊರಗ ಸಂಘಗಳನ್ನು ಸ್ಥಾಪಿಸಿದರು. ಇನ್ನು ಹಟ್ಟಿಯಂಗಡಿಯ 'ನಮ್ಮ ಭೂಮಿ' ಎಂಬ ಸಂಸ್ಥೆಯೂ ಕೊರಗರೊಂದಿಗೆ ಕೆಲಸ ಮಾಡಿದ ಅನುಭವವನ್ನು ಹೊಂದಿದೆ. ಅದೇ ರೀತಿ ಶೀನ ಶೆಟ್ಟಿ, ಕೃಷ್ಣ ಮೂಲ್ಯರ

‘ಜನಶಿಕ್ಷಣ ಟ್ರಸ್ಟ್’ ಎಂಬ ಸಂಸ್ಥೆಯೂ ಬಂಟ್ವಾಳ, ಮಂಗಳೂರು ಸುತ್ತಮುತ್ತ ಕೊರಗ ಸಮುದಾಯದಲ್ಲಿ ನಾಯಕತ್ವ ಬೆಳವಣಿಗೆಗೆ ಹಾಗೂ ಸರಕಾರಿ ಕಾರ್ಯಕ್ರಮಗಳನ್ನು ಕೊರಗರಿಗೆ ತಲುಪಿಸಲು ಶ್ರಮಿಸಿವೆ.

1987 ಆಗಸ್ಟ್ ಮಾಹೆಯಲ್ಲಿ ಉಡುಪಿ ತಾಲೂಕಿನ ಕಾಪು ಸಮೀಪದ ಮೂಳೂರಿನ ಶ್ಯಾಮ್ ಸುಶೀಲ್ ಕಂಪೌಂಡ್‌ನ ಮನೆಯೊಂದರ ಚಾವಡಿಯ ಮೂಲೆಯಲ್ಲಿ ಕೊರಗರ ಅಭಿವೃದ್ಧಿ ಬಗ್ಗೆ ಕನವರಿಸುತ್ತಾ ಜನ್ಮ ಪಡೆದ ‘ಸಮಗ್ರ ಗ್ರಾಮೀಣ ಆಶ್ರಮ’ ಎಂಬ ಸಂಸ್ಥೆಯು ಕಾರ್ಯಾರಂಭಿಸಿದ್ದು ಕೊರಗರ ಇತಿಹಾಸದಲ್ಲಿಯೇ ಮತ್ತೊಂದು ಮೈಲುಗಲ್ಲು! ದೂರದ ಗುಜರಾತ್ ರಾಜ್ಯದಲ್ಲಿ ಹತ್ತು ವರ್ಷಗಳ ಕಾಲ ‘ಆನಂದ ನಿಕೇತನ ಆಶ್ರಮ’ ಎಂಬ ಸೇವಾ ಸಂಸ್ಥೆಯಲ್ಲಿ ಅಲ್ಲಿನ ಆದಿವಾಸಿಗಳೊಂದಿಗೆ ಕೆಲಸ ನಿರ್ವಹಿಸಿದ ಅನುಭವದೊಂದಿಗೆ ಕಾಪುಗೆ ಮರಳಿದ ಬಲಿಷ್ಠ ಬಂಟ ದೇವದಾಸ ಶೆಟ್ಟಿಯವರ ದೂರ ದೃಷ್ಟಿಯಲ್ಲಿ ಸಮಗ್ರ ಗ್ರಾಮೀಣ ಆಶ್ರಮವು ಹುಟ್ಟಿಕೊಂಡಿತು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಆದರ್ಶ, ವಿಚಾರಗಳಿಂದ ಪ್ರಭಾವಿತರಾದ ದೇವದಾಸ ಶೆಟ್ಟಿಯವರು ಕಾರ್ಯ ಆರಂಭಿಸಿದ್ದು ಕಾಪು ಪರಿಸರದ ಮಜೂರು, ಮಲ್ಲಾರು, ಪಾದೂರು, ಪಾಂಗಾಳ ಹಾಗೂ ಬಂಡಸಾಲೆ ಕೊರಗರ ಬಲೆಪುಗಳಲ್ಲಿ. ಆರಂಭದಲ್ಲಿ ಕೊರಗರೊಂದಿಗೆ ಏನು, ಹೇಗೆ ಕೆಲಸ ಮಾಡಬೇಕೆಂಬ ಸ್ಪಷ್ಟ ಕಲ್ಪನೆ ಇರಲಿಲ್ಲ. ಈ ಮೇಲಿನ ಬಲೆಪುಗಳ ಮನೆಗಳಿಗೆ ಭೇಟಿ ನೀಡಿದಾಗ, ಅಂದಿನ ಕಾರ್ಯಕರ್ತ ತಿಳಿದಿದ್ದು; ಕೊರಗರಿಗೆ ಬುಟ್ಟಿ, ಹೆಡಿಗೆ ಮಾಡಲು ಬೇಕಾದ ಮದೊಡಿ(ತಾಳೆಮರದ ಸೋಗೆಯ ದಂಡು) ಸಿಗುತ್ತಿಲ್ಲ ಎಂಬುವುದು. ಮದೊಡಿ ಪೂರೈಕೆ ಹೇಗೆ ಸಾಧ್ಯ ಎಂಬ ಬಗ್ಗೆ ಕೊರಗರೊಂದಿಗೆ ಚರ್ಚಿಸತೊಡಗಿದರು. ಮಾಹಿತಿ ಪಡೆದರು. ಹೀಗೆ ಹತ್ತು ಹಲವು ಬಾರಿ ಮಾತುಕತೆಗಳು ಮುಂದುವರಿಸಿದಾಗ ಕೆಲವು ಕೊರಗರು ಮಾತನಾಡಲು ಆರಂಭಿಸಿದರು. ಮಾತುಕತೆ ನಡೆಯುತ್ತಿದ್ದಾಗ ಕೊರಗನೊಬ್ಬನ ಬಾಯಿಂದ ಹೊರಬಿದ್ದ ಕ್ಷೀಣ ಧ್ವನಿಯೊಂದು “ಪುಡಾಯಿ ಮಲ್ಪುನಕುಲ್ನ ಸಂಘ ಮಲ್ತುಂಡ...” ಎಂದಿತು. ದೇವದಾಸ ಶೆಟ್ಟಿಯವರ ಕಿವಿ ನೆಟ್ಟಗಾಯಿತು. “ಅಂಚಾಂಡ ನಮ ಎಂಚಿನ ಮಲ್ಪೊಲಿ?” (ಹಾಗಾದರೆ ನಾವೇನು ಮಾಡಬಹುದು?) ಎಂದವರು ಕೇಳಿದರು. ಮಾತುಕತೆ ಮುಂದುವರಿದು ಮಜೂರಿನ ಕಾಡ್ಯ, ಮಲ್ಲಾರಿನ ದೋಗು, ಪಾಂಗಾಳದ ಕುಡ್ಡು, ಬಂಡಸಾಲೆಯ ಶೇಖರ ಹಾಗೂ ಪಾದೂರಿನ ಪೋಂಕ್ರ ಕೊರಗರು ಸೇರಿ ಐದು ಜನರ ತಂಡವನ್ನು ಹೆಸರಿಸಲಾಯಿತು. ಈ ತಂಡವೇ ಮುಂದೆ ಸಂಘಟನೆಗೆ ಪ್ರೇರಣೆಯಾಯಿತು. ನಂತರದ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಸೇರಿಸಿಕೊಳ್ಳುವ ಪ್ರಯತ್ನಗಳು, ಕಾರ್ಯಕ್ರಮಗಳು ಮುಂದುವರಿದವು. ಪಾದೂರಿನ ಪೋಂಕ್ರರವರ ಅಧ್ಯಕ್ಷತೆಯಲ್ಲಿ ಅಧಿಕೃತವಾಗಿ ಸಂಘದ ರಚನೆಯೂ ಆಯಿತು. ಬಳಿಕ ಪಾದೂರಿನ ಕಾಳುರವರು ಸಂಘದ ಅಧ್ಯಕ್ಷರಾದರು. ಒಂದೆರಡು ವರ್ಷಗಳಲ್ಲಿ ಸಂಸ್ಥೆಗೆ ಪರಿಶ್ರಮಿ ಕಾರ್ಯಕರ್ತರು ಸೇರಿಕೊಂಡ ಬಳಿಕ, ಕೊರಗ ಸಂಘದ ನಾಯಕರೊಂದಿಗೆ, ಪಡುಬಿದ್ರೆಯ ಪಂಚಕಾಡಿನಿಂದ, ಪಾಂಗಳದವರೆಗೆ

ಸುಮಾರು ಇಪ್ಪತ್ತೆರಡು ಕೊರಗರ ಗುಂಪುಗಳ ಎಲ್ಲಾ ಕೊರಗ ಕುಟುಂಬಗಳನ್ನು ಸಂಪರ್ಕಿಸಿದರು. ಸಂಘಟನೆಯನ್ನು ಬಲಪಡಿಸಲು ಹೆಚ್ಚಾಗಿ ಯುವಜನರನ್ನು ಬಳಸಿ ಕೊಳ್ಳಲಾಯಿತು. ಹಾಗೂ ಮಲ್ಲಿಗೆ ಕೃಷಿ, ಹುರಿ ಹಗ್ಗ ತಯಾರಿ, ಜೇನು ಸಾಕಣೆ, ಮೊಲ ಸಾಕಣೆ ಮುಂತಾದ ಹಲವು ಕಾರ್ಯಕ್ರಮಗಳಿಗೆ ಜನರನ್ನು ತರಬೇತುಗೊಳಿಸಿ, ಅವರನ್ನೆಲ್ಲ ಒಟ್ಟು ಸೇರಿಸುವ ಪ್ರಯತ್ನ ಮಾಡಲಾಯಿತು. 1990 ರಲ್ಲಿ ಉಡುಪಿ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದ ಎಸ್.ಎ.ಕೃಷ್ಣಯ್ಯರವರ ಸಲಹೆಯಂತೆ ಸಂಘಕ್ಕೆ "ದಕ್ಷಿಣ ಕನ್ನಡ ಜಿಲ್ಲಾ ಕೊರಗ ಸಮುದಾಯ ಪರಿವರ್ತನಾ ಸಮಿತಿ" ಎಂದು ಹೆಸರಿಸಲಾಯಿತು. 1992ರಲ್ಲಿ ಸಂಘವನ್ನು ಅಧಿಕೃತವಾಗಿ ನೋಂದಾಯಿಸಲಾಯಿತು. ಕ್ರಮೇಣ ಬೆಳ್ಮಣ್ಣು, ಮೂಲ್ಕಿ, ಹೆಬ್ರಿ, ಕೊಕ್ಕರ್ಣೆ, ಬಾರ್ಕೂರು ಸಂಘಗಳನ್ನು ರಚಿಸಲಾಯಿತು. 1995 ರಲ್ಲಿ ಸಚ್ಚೇರಿಪೇಟೆಯ ಜಿ. ತನಿಯಪ್ಪರವರ ಅಧ್ಯಕ್ಷತೆಯಲ್ಲಿ ಕೊರಗ ಸಂಘಗಳ ಒಕ್ಕೂಟದ ರಚನೆಯಾಯಿತು. ಈ ಸಂದರ್ಭದಲ್ಲಿ ದೇವದಾಸ ಶೆಟ್ಟಿಯವರೊಂದಿಗೆ ಹಗಲಿಗೆ ಹಗಲು ಕೊಟ್ಟು ದುಡಿದ ದಣಿವರಿಯದ, ನಿಷ್ಕಲ್ಮಶ ಮನಸ್ಸಿನ ಕಾರ್ಯಕರ್ತ ರೆಂದರೆ ಅನಸೂಯ ಬಿ.ಭಟ್, ಲಕ್ಷ್ಮೀ ಮೂಳೂರು, ಕುರಿಯನ್ ಮಥಾಯಸ್ ಅಧಿಕಾರಿತ್ತಿಲ್, ಅಶೋಕ್ ಶೆಟ್ಟಿ ಹಾಗೂ ಪ್ರೇಮಾ ಶೆಟ್ಟಿ ಪ್ರಮುಖರು. 1995ರಲ್ಲಿ ಕೊರಗ ಸಮುದಾಯದ ಸುಶಿಕ್ಷಿತ ಪಳ್ಳಿ ಗೋಕುಲ್‌ದಾಸ್‌ರ ಸಂಘಟನೆಯ ನೇತೃತ್ವವನ್ನು ವಹಿಸಿಕೊಂಡರು. ದೇವದಾಸ ಶೆಟ್ಟಿಯವರ ದೂರದೃಷ್ಟಿಯ ಸಮರ್ಥ ಮಾರ್ಗದರ್ಶನ ದಲ್ಲಿ, ಸಮುದಾಯದಲ್ಲಿ ಹತ್ತು ಹಲವು ನಾಯಕರು ಬೆಳೆದು, ಸಂಘಟನೆಯನ್ನು ಮುನ್ನಡೆಸಿದರು. ಮಹಿಳಾ ನಾಯಕತ್ವಕ್ಕೂ ಆದ್ಯತೆ ನೀಡಲಾಗಿದ್ದು, ಎಲ್ಲೂರಿನ ಭಾರತಿ, ಹೆಬ್ರಿಯ ರಾಜೀವಿ, ಮಂಜರಪಲ್ಕೆಯ ಬೇಬಿ, ಪಾದೂರಿನ ಗೌರಿ ಮುಂತಾದ ನಾಯಕಿಯರೂ ಸಕ್ರೀಯವಾಗಿ ಸಂಘಟನೆಯಲ್ಲಿ ತೊಡಗಿಕೊಂಡರು. 1995ರಲ್ಲಿ ತನಿಯಪ್ಪರ ತರುವಾಯ, ಸಮುದಾಯದ ವಿದ್ಯಾವಂತ ನಾಯಕರಾದ ಪಳ್ಳಿ ಗೋಕುಲ್‌ದಾಸರು ಜಿಲ್ಲಾ ಸಮಿತಿಯ ಅಧ್ಯಕ್ಷರಾದರು. ಅಂದಿನಿಂದ ಸಂಘಟನೆಯು ಹೊಸ ಆಯಾಮವನ್ನು ಪಡೆದುಕೊಂಡಿತು. ಹಿಂದೆಯೇ ಕೈಗೊಂಡಿದ್ದ ಅನೇಕ ಚಳವಳಿಗಳು ತೀವ್ರ ಸ್ವರೂಪವನ್ನು ಪಡೆಯಿತು. ಭೂಮಿ ಚಳವಳಿ ಅಜಲು ಚಳವಳಿಗಳು 1992ರಿಂದಲೇ ಆರಂಭಗೊಂಡಿತ್ತಾದರೂ ಗೋಕುಲ್‌ದಾಸರು ಅದಕ್ಕೊಂದು ಚುರುಕಿನ ಚಿಕಿತ್ಸೆ ನೀಡಿದರು. ಹೆಚ್ಚು ಹೆಚ್ಚು ಯುವಜನತೆಯನ್ನು ಕ್ರೀಯಾಶೀಲಗೊಳಿಸಿದರು. ಸಮಗ್ರ ಗ್ರಾಮೀಣ ಆಶ್ರಮವು ಕಾನೂನು ಚೌಕಟ್ಟು ಹಾಗೂ ಸಾಮಾನ್ಯ ನೀತಿ ನಿಯಮಗಳ ಬಗ್ಗೆಯೂ ಮಾಹಿತಿ ಮತ್ತು ಮಾರ್ಗದರ್ಶನ ಮಾಡುತ್ತಿದ್ದವು. ಹೀಗೆ ಸಂಘಟನೆಯು ಪ್ರಬಲಗೊಳ್ಳುತ್ತಾ, 2000ದ ಸುಮಾರಿಗೆ ನೆರೆಯ ಕೇರಳ ರಾಜ್ಯದವರೆಗೂ ವಿಸ್ತರಿಸಿದ್ದು, ನೂರಾರು ನಾಯಕರನ್ನು ಹುಟ್ಟು ಹಾಕಿದ ಹೆಗ್ಗಳಿಕೆ ಸಮಗ್ರ ಗ್ರಾಮೀಣ ಆಶ್ರಮಕ್ಕೆ ಸಲ್ಲುತ್ತದೆ. ಕರ್ನಾಟಕ ಕೇರಳ ರಾಜ್ಯಗಳ 24 ಕೊರಗ ಸಂಘಟನೆಗಳು ಒಕ್ಕೂಟದೊಂದಿಗೆ ವಿಲೀನವಾಯಿತು. 1995ರಿಂದ 2005ರ ವರೆಗೆ ಸುದೀರ್ಘ ಹತ್ತು ವರ್ಷಗಳ ಕಾಲ

ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಮಹಾಸಭೆ ನಡೆದ ದಿನಾಂಕ ಮತ್ತು ಸ್ಥಳ

ಕ್ರ.ಸಂ	ವರ್ಷ	ಅಧ್ಯಕ್ಷರು	ಕಾರ್ಯದರ್ಶಿ	ಕೋಶಾಧಿಕಾರಿ	ಸಭೆಯ ದಿನಾಂಕ	ಸಭೆಯ ಸ್ಥಳ
1.	2000–2001	ಗೋಕುಲ್‌ದಾಸ್	ಲಕ್ಷ್ಮಿ ಕಂಕನಾಡಿ	ಬಾಬು ಪಾಂಗಾಳ	17–03–2000	ಕಾಪು ಪ್ರವಾಸಿ ಮಂದಿರ
2.	2001–2002	ಗೋಕುಲ್‌ದಾಸ್	ಗೌರಿ ಕೆಂಜೂರು	ಅನಿತಾ ಬಾರ್ಕೂರು	19–08–2001	ಜಂತ್ರ ಬೆಳ್ಮಣ್ಣು
3.	2003–2004	ಗೋಕುಲ್‌ದಾಸ್	ಗೌರಿ ಕೆಂಜೂರು	ಅನಿತಾ ಬಾರ್ಕೂರು	10–08–2003	ಜಂತ್ರ ಬೆಳ್ಮಣ್ಣು
4.	2004–2005	ಗೋಕುಲ್‌ದಾಸ್	–	ಬಾಬುಪಾಂಗಾಳ	26–12–2004	ಜಂತ್ರ ಬೆಳ್ಮಣ್ಣು
5.	2005–2006	ಗೋಕುಲ್‌ದಾಸ್	–	–	–	–
6.	2006–2007	ಗೌರಿ ಕೆಂಜೂರು	ಮತ್ತಡಿ	ಬಾಬುಪಾಂಗಾಳ	12–03–2006	ಗುತ್ತಕಾಡು–ಕಿನ್ನಿಗೋಳಿ
7.	2007–2008	ಗೌರಿ ಕೆಂಜೂರು	ಕೊಗ್ಗ ಕೋಡಿಕಲ್	ವಿನಯ ಅಡ್ವೆ	1–04–2007	ಅಡ್ವೆ ಬಲೆಪು
8.	2008–2009	ಬಾಲ್‌ರಾಜ್ ಕೋಡಿಕಲ್	ವಿನಯ ಅಡ್ವೆ	–	–	–
9.	2009–2010	ಬಾಲ್‌ರಾಜ್ ಕೋಡಿಕಲ್	ವಿನಯ ಅಡ್ವೆ	–	–	–
10.	2010–2011	ಸುಶೀಲಾ ನಾಡಾ	ಸಂಜೀವ ಕೋಡಿಕಲ್	ವಿನಯ ಅಡ್ವೆ	13–06–2010	ಪೆರ್ನಾಲ್–ಶಿರ್ವ
11.	2012–2013	ಸುಶೀಲಾ ನಾಡಾ	ದಿನೇಶ ಕೆಂಜೂರು	–	21–04–2012	ಬೇಲಾ–ಕಾಸರಗೋಡು
12.	2013–2014	ಸುಮತಿ ಬೇಲಾ	ಸಂಜೀವ ಮೂಡಬಿದ್ರೆ	ವಿನಯ ಅಡ್ವೆ	15–06–2013	ಮಾಸ್ತಿಕಟ್ಟೆ–ಮೂಡಬಿದ್ರೆ
13.	2014–2015	ಸುಮತಿ ಬೇಲಾ	ಸಂಜೀವ ಮೂಡಬಿದ್ರೆ	ವಿನಯ ಅಡ್ವೆ	–	–
14.	2016–2017	ಎಂ.ಸುಂದರ	ಗೌರಿ ಕೆಂಜೂರು	ರೋಬರ್ಟ್	17–07–2016	ಕಡಾರಿ–ಬಜಗೋಳಿ
15.	2017–2018	ಎಂ.ಸುಂದರ	ದಿವಾಕರ ಕಳ್ತೂರು	ಸುಮತಿ ಬೇಲಾ	28–05–2017	ಕೋಡಿಕಲ್–ಮಂಗಳೂರು
16.	2018–2019	ಅಮ್ಮಣಿ ಚೋರಾಡಿ	ದಿವಾಕರ	ರೋಬರ್ಟ್	26–05–2018	ಇಂದ್ರಾಳಿ–ಉಡುಪಿ

ಗೋಕುಲ್‌ದಾಸರು ದ.ಕ ಜಿಲ್ಲಾ ಸಮಿತಿ ಹಾಗೂ ಒಕ್ಕೂಟದ ಅಧ್ಯಕ್ಷರಾಗಿ ಸಮುದಾಯದ ಮುಂದಾಳುತನ ವಹಿಸಿದರು. ಆನಂತರ ಗೌರಿ ಕೆಂಜೂರು, ಬಾಲ್‌ರಾಜ್ ಕೋಡಿಕಲ್, ಸುಶೀಲ ಕೊರಗ ನಾಡ, ಕಾಸರಗೋಡು ಬೇಲಾದ ಸುಮತಿ, ಸುಂದರ ಎಂ. ಕಡಂದಲೆ ಯವರು ಈ ಸಂಘಟನೆಯ ನೇತೃತ್ವವನ್ನು ವಹಿಸಿದ್ದಾರೆ. ಇದೀಗ 2018 ರಿಂದ ಅಮ್ಮಣಿ ಚೋರಾಡಿಯವರು ಒಕ್ಕೂಟವನ್ನು ಮುನ್ನಡೆಸುತ್ತಿದ್ದಾರೆ. ಹಲವು ಏಳುಬೀಳುಗಳ ನಡುವೆಯೂ ವಿದ್ಯಾವಂತ ಯುವಜನತೆ ಹೆಚ್ಚಾಗಿ ಸಂಘಟನೆಯ ಕಡೆಗೆ ಒಲವು ತೋರಿಸುತ್ತಿರುವುದು ನಾಳಿನ ಬಗ್ಗೆ ಭರವಸೆ ಮೂಡಿಸಿದೆ. ಸಾರ್ವಜನಿಕ ವಲಯದಲ್ಲಿ ಕೊರಗ ಸಂಘಟನೆಯು ಒಂದು ನೈತಿಕ ತಳಹದಿಯ ಹೋರಾಟದ ತಂಡ ಎಂಬ ಅಭಿಪ್ರಾಯ ಮೂಡಿಸಿದೆ.

ಚಳವಳಿಗಳು

ಕೊರಗ ಸಮುದಾಯವು ಬದುಕುವುದಕ್ಕಾಗಿಯೇ ಶತಶತಮಾನಗಳಿಂದಲೂ ಹೋರಾಡುತ್ತಾ ಬಂದಿದೆ. ಇದೀಗ ಸಮುದಾಯದ ಸಂಘಟನೆಯ ಮೂಲಕ ಚಳವಳಿ ನಡೆಸುವ ಅನಿವಾರ್ಯತೆಯು ಒದಗಿ ಬಂದಿತು. ತನ್ನ ಅಸ್ತಿತ್ವ ರುಜುವಾತು ಪಡಿಸುವುದಕ್ಕಾಗಿ ಮತ್ತು ಭವಿಷ್ಯದ ಕನಸುಗಳ ಸಾಕಾರಕ್ಕಾಗಿ ಪಣ ತೊಟ್ಟ ಸಂಘಟನೆಯು ಹಂತಹಂತವಾಗಿ ಚಳವಳಿಗಳನ್ನು ಹೆಣೆಯ ತೊಡಗಿತು. ಒಂದೊಂದನ್ನೇ ಸಾಧಿಸ ತೊಡಗಿತು. ಈ ಚಳವಳಿಗಳಲ್ಲಿ ಸಾವಿರಾರು ಮಂದಿ ಕೊರಗರು ಸ್ಫೂರ್ತಿಯ ಚಿಲುಮೆಯಾಗಿ ಜಮಾಯಿಸತೊಡಗಿದರು. ಸಾವಿರ ವರ್ಷಗಳ ಶೋಷಣೆಗೆ ಪ್ರತಿಕಾರವೆಂಬಂತೆ ಹತ್ತಾರು ಮಹಿಳೆಯರು ಈ ಹೋರಾಟದ ನೇತೃತ್ವ ವಹಿಸಿದರು. ಎನ್.ಜಿ.ಓ.ಗಳ ಸಹಕಾರ ದೊಂದಿಗೆ ಸ್ವ–ಸಹಾಯ ಸಂಘಗಳನ್ನು ಸ್ಥಾಪಿಸಿದರು. ಕೃಷಿ ಚಟುವಟಿಕೆಗಳನ್ನು ಕೈಗೊಂಡರು. ಕುಲಕಸುಬಿಗೆ ಸೂಕ್ತ ಬೆಲೆ ದೊರೆಯಬೇಕೆಂದು ಐದಾರು ಸಹಕಾರ ಸಂಘಗಳನ್ನು ರಚಿಸಿಕೊಂಡರು. ಸ್ವಾಭಿಮಾನದ ಬದುಕಿಗೆ ಹಂಬಲಿಸಿ ಅನಿಷ್ಟ ಅಜಲು ಚಾಕಿರಿಯ ವಿರುದ್ಧ ಸಿಡಿದೆದ್ದರು. ಭೂಮಿ ಪಡೆದು, ದುಡಿದು ಬದುಕಬೇಕೆಂದು ಭೂಮಿ ಚಳವಳಿ ಆರಂಭಿಸಿದರು. ಮಹಿಳೆ ಮತ್ತು ಮಕ್ಕಳ ಆರೋಗ್ಯ ಸುಧಾರಣೆಯ ದಿಸೆಯಲ್ಲಿ ಪೌಷ್ಟಿಕ ಆಹಾರಕ್ಕಾಗಿ ಹೋರಾಡಿದರು. ಸಮುದಾಯದೊಳಗಿನ ದರಿದ್ರಗಳನ್ನು ತೊಲಗಿಸಲು ಕುಡಿತದ ವಿರುದ್ಧ ಆಂದೋಲನ ಕಟ್ಟಿದರು. ಮಹಿಳೆಯರ ಮಾನ, ಪ್ರಾಣ ರಕ್ಷಣೆಗಾಗಿ ಜಾಗೃತಿ ತುಂಬಿದರು. ಸಮುದಾಯದೊಳಗೆ ಶಿಕ್ಷಣದ ಗಂಧ ಪಸರಿಸಲು ಬೀದಿನಾಟಕಗಳನ್ನು ಮಾಡಿ ಮಾಹಿತಿ ನೀಡಿದರು. ಹೀಗೆ ಹತ್ತಾರು ಚಳವಳಿಗಳನ್ನು ಸಂಘಟಿಸುತ್ತಾ ಮುನ್ನುಗ್ಗಿದ ಕೊರಗರ ಈ ಸಂಘಟನೆ ಇಂದು ಕರ್ನಾಟಕ ರಾಜ್ಯದಲ್ಲಿ ಶ್ರೇಷ್ಠ ಸಾಧನೆ ಮಾಡಿದೆ ಎಂಬುವುದೇ ನಮ್ಮ ಹೆಗ್ಗಳಿಕೆ. ಇವುಗಳಲ್ಲಿ ಪ್ರಮುಖವಾದ ಚಳವಳಿಗಳೆಂದರೆ ಅಜಲು ಪದ್ಧತಿಯ ವಿರುದ್ಧದ ಹೋರಾಟ, ಭೂಮಿಗಾಗಿ ಹೋರಾಟ ಹಾಗೂ ಪೌಷ್ಟಿಕ ಆಹಾರಕ್ಕಾಗಿ ಹೋರಾಟಗಳು.

1. ಅಜಲು ಪದ್ಧತಿಯ ವಿರುದ್ಧದ ಚಳವಳಿ

ಕಾಡಿನಿಂದ ನಾಡಿಗೆ ಪರಿಚಯವಾದಂದಿನಿಂದಲೇ ಈ ಕೊರಗರು ಅಜಲು ಚಾಕಿರಿಯನ್ನು ಮಾಡುತ್ತಿದ್ದರೂ, ಅವರೆಂದೂ ಈ ಸೇವೆಯನ್ನು ಮನಪೂರ್ವಕವಾಗಿ ಮಾಡಿರಲಿಲ್ಲ. ಈ ಸೇವೆಯನ್ನು ಮಾಡಿಸಿಕೊಳ್ಳುವ ಊರವರನ್ನೂ, ಗಣ್ಯರನ್ನೂ ಶಪಿಸುತ್ತಲೇ ದಿನದೂಡುತ್ತಿದ್ದರು. ಪಂಚಮ(ನೀಚ) ದಾನವನ್ನು ಸ್ವೀಕರಿಸುವಾಗಲೂ ಒಂದೆರಡು ಅನ್ನದ ಅಗುಲನ್ನು ಅಂಗಳದಲ್ಲಿಯೇ ಬಿಸಾಡಿ, ಆ ಮನೆಯವರ ಕಾಯಿಲೆಯನ್ನೂ ಸ್ವೀಕರಿಸದೇ ಅನ್ನದ ಗೆರಸೆಯನ್ನು ಎತ್ತಿ ತರುತ್ತಿದ್ದರು. ನಾಜೂಕಾಗಿಯೇ ಯಾಮಾರಿಸಿ ಬಿಡಿಸುತ್ತಿದ್ದರು. ಆದರೆ ಬಹಿರಂಗವಾಗಿ ಪ್ರತಿಭಟಿಸಲು ಮಾತ್ರ ಸಾಧ್ಯವಾಗಿರಲಿಲ್ಲ. ಸಂಘಟನೆ ಬಲಗೊಳ್ಳುತ್ತಲೇ ಸಹನೆಯ ಕಟ್ಟೆಯೊಡೆದು ಬಹಿರಂಗ ಪ್ರತಿಭಟನೆ ಆರಂಭ ಗೊಂಡಿತು. 1998ರ ಫೆಬ್ರವರಿಯಲ್ಲಿ ಕಾಪು ಸಮೀಪದ ಎಲ್ಲೂರಿನ ಕಟ್ಟೆತ್ತು ಎಂಬಲ್ಲಿನ ಬಂಟರ ಮನೆಯ ಉತ್ತರಕ್ರಿಯೆಯಲ್ಲಿ ಕದೊನಿ(ಖದಿನ) ಸ್ಫೋಟಿಸುವಾಗ ಅಜಲಿನ ಕಾಪಿರ ಕೊರಗ ಎಂಬವರು ಸ್ಥಳದಲ್ಲೇ ಸಾವನ್ನಪ್ಪಿದರು. ಸಂಘಟನೆ ಇದನ್ನು ಗಂಭೀರವಾಗಿ ಪರಿಗಣಿಸಿ ಪ್ರತಿಭಟನೆಗೆ ಬದ್ಧವಾಯಿತು. ಕಾಪಿರ ಕೊರಗನ ಮನೆಯಲ್ಲಿಯೇ ಸಾರ್ವಜನಿಕ ವಿಚಾರಣಾ ಸಭೆಯನ್ನು ಆಯೋಜಿಸಿತು. ಸಾರ್ವಜನಿಕರ ಪರವಾಗಿ ಮೋಹನ್ ಶೆಟ್ಟಿ ಎಂಬವರು ಭಾಗವಹಿಸಿ ಅಜಲು ಸೇವೆಯ ವಿರುದ್ಧ ಅಭಿಮತ ಸೂಚಿಸಿದರು. ಸುಮಾರು ನೂರ ಐವತ್ತಕ್ಕೂ ಹೆಚ್ಚು ಕೊರಗ ಬಾಂಧವರು ಭಾಗವಹಿಸಿ ಅಜಲು ಪದ್ಧತಿ ವಿರುದ್ಧ ದನಿಗೂಡಿಸಿದರು.

1998ರ ಎಪ್ರಿಲ್ 25ರಂದು ಬಾರ್ಕೂರಿನ ಪಂಚಾಯತ್ ಭವನದಲ್ಲಿ ಎರಡನೇ ಸಾರ್ವಜನಿಕ ಸಭೆಯನ್ನು ನಡೆಸಿತು. ಮುನ್ನೂರಕ್ಕೂ ಅಧಿಕ ಮಂದಿ ಕೊರಗರು ಭಾಗಿಯಾದರು. ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಮೂಲ್ಕಿ ಪೇಟೆಯಲ್ಲಿ ಮೂರನೇ ಪ್ರತಿಭಟನಾ ಸಭೆ ನಡೆಯಿತು. 1999 ಜನವರಿಯಲ್ಲಿ ಕೊಕ್ಕರ್ಣೆ ಶಾಲಾ ವಠಾರದಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು. ಜುಲೈಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಚೇರಿ ಎದುರು ಅಜಲು ಪದ್ಧತಿ ವಿರೋಧಿಸಿ ಹನ್ನೊಂದು ದಿನಗಳ ಕಾಲ ಧರಣಿಸತ್ಯಾಗ್ರಹ ನಡೆಯಿತು. ಅದೇ ಸಂದರ್ಭದಲ್ಲಿ ಮಂಗಳೂರಿನ ವುಡ್‌ಲ್ಯಾಂಡ್ ಹೋಟೇಲಿನಲ್ಲಿ ಅಜಲು ಪದ್ಧತಿ ವಿರೋಧಿಸಿ ಪತ್ರಿಕಾಗೋಷ್ಠಿ ನಡೆಸಲಾಯಿತು. ಡಿಸೆಂಬರ್‌ನಲ್ಲಿ ಉಡುಪಿ ಕಿದಿಯೂರು ಹೊಟೇಲಿನಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿ ಈ ಪದ್ಧತಿಯನ್ನು ಖಂಡಿಸಲಾಯಿತು. ಅಷ್ಟೇ ಅಲ್ಲದೆ, ಈ ಎರಡು ವರ್ಷಗಳಲ್ಲಿ ಸರಕಾರದ ಪ್ರತಿನಿಧಿಗಳು ಜಿಲ್ಲೆಗೆ ಬಂದಾಗಲೆಲ್ಲ ಈ ಅಜಲು ಪದ್ಧತಿಯನ್ನು ನಿಷೇಧಿಸುವಂತೆ ಮನವಿ ಸಲ್ಲಿಸುವುದು, ಒತ್ತಡ ಹೇರುವುದು ಮಾಡಲಾಯಿತು. ಹಲವು ಬಾರಿ ಬೆಂಗಳೂರಿಗೆ ನಿಯೋಗ ತೆರಳಿ ರಾಜ್ಯಮಟ್ಟದ ಅಧಿಕಾರಿಗಳೊಂದಿಗೆ, ಸಂಬಂಧಿತ ಮಂತ್ರಿ ಮಹೋದಯರೊಂದಿಗೆ ಚರ್ಚಿಸಲಾಯಿತು. ಅಂಚೆಕಾರ್ಡು ಚಳವಳಿಗಳೂ ನಡೆದವು. ಅಜಲು ಚಾಕಿರಿ ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಪ್ರತಿಭಟನೆ ನಡೆಸುವುದು, ಸೇವೆಯನ್ನು ತಡೆಯುವುದು

ಮುಂದುವರಿಸಲಾಯಿತು. ಸಂಘಟನೆಯ ಅಧ್ಯಕ್ಷರಾಗಿದ್ದ ಪಿ. ಗೋಕುಲ್ ದಾಸರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಭೆಯಲ್ಲಿಯೂ ಈ ಪದ್ಧತಿಯನ್ನು ವಿರೋಧಿಸಿ ಹಕ್ಕು ಪ್ರತಿಪಾದಿಸಿದರು. ಈ ಎಲ್ಲಾ ಹೋರಾಟಗಳ ಪ್ರತಿಫಲವಾಗಿ ಕೊನೆಗೂ ಸರಕಾರ ಅಜಲು ಪದ್ಧತಿ ನಿಷೇಧದ ಬಗ್ಗೆ ಕ್ರಮ ಕೈಗೊಂಡಿತು. 2000ನೇ ಇಸವಿಯ ಆಗಸ್ಟ್ 17ರಂದು ಅಂದಿನ ಗೌರವಾನ್ವಿತ ರಾಜ್ಯಪಾಲರಾಗಿದ್ದ ಮಾನ್ಯ ವಿ.ಎಸ್ ರಮಾದೇವಿಯವರು ಈ ಅಜಲು ಪದ್ಧತಿ ನಿಷೇಧ ಕಾಯ್ದೆಗೆ ಸಹಿ ಹಾಕುವುದರೊಂದಿಗೆ ಅಧಿಕೃತವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಿದರು. 2002ರಲ್ಲಿ ಕೆಲವೊಂದು ತಿದ್ದುಪಡಿಗಳೊಂದಿಗೆ ಪೂರ್ಣ ಪ್ರಮಾಣದ ಕಾಯ್ದೆಯಾಗಿ ಜಾರಿಗೊಂಡಿತು. ಆ ಮೂಲಕ ಕೊರಗರ ಹೋರಾಟಕ್ಕೆ ಒಂದು ಹಂತದ ಜಯ ದೊರೆಯಿತು.

2. ಭೂಮಿ ಚಳವಳಿ

ಕೊರಗ ಸಮುದಾಯದ ಇತಿಹಾಸದಲ್ಲೇ ಎರಡನೇ ಪ್ರಮುಖವಾದ ಚಳವಳಿ ಅಂದರೆ, ಭೂಮಿಗಾಗಿ ನಡೆಯುತ್ತಿರುವ ಹೋರಾಟ! 1990-1991ರಿಂದಲೇ ಆರಂಭಗೊಂಡು, ಇಂದಿಗೂ ಹೋರಾಟ ಮುಂದುವರಿದಿದೆ. ಈ ಸುದೀರ್ಘ ಅವಧಿಯಲ್ಲಿ ಹಲವಾರು ಮಂದಿ ಹೋರಾಟದ ನಾಯಕತ್ವವನ್ನು ವಹಿಸಿದ್ದಾರೆ. ಫಲವನ್ನೂ ಕಂಡಿದ್ದಾರೆ. ನಾಳೆಯ ಬಗ್ಗೆ ತಲೆಕೆಡಿಸಿಕೊಳ್ಳದೆ, ಇಂದಿನದ್ದು ಇಂದಿಗೆ ಅಂತಿದ್ದ ಈ ಸಮುದಾಯದ ಮಂದಿಗೆ ಭೂಮಿ ಅಗತ್ಯತೆ ಕಂಡು ಬಂದಿದ್ದು ಸರಕಾರಿ ಯೋಜನೆಗಳ ಅನುಷ್ಠಾನಕ್ಕೆ ಭೂಮಿ ಇಲ್ಲವೆಂದಾಗ. ಎಲ್ಲಾ ಸರಕಾರಿ ಯೋಜನೆಗಳು ಭೂಮಿ ಆಧಾರಿತವಾಗಿದ್ದು, ಭೂಮಿ ಇಲ್ಲದಿರುವ ಕಾರಣಕ್ಕೆ ಇವರಿಗೆ ಆ ಯೋಜನೆಗಳು ಸಿಗುವುದು ದುರ್ಲಭವಾಗಿತ್ತು. ಇದರಿಂದ ಬೇಸತ್ತ ಕೊರಗರು ಸಂಘಟನೆಯ ಮೂಲಕ ಭೂಮಿಗಾಗಿ ಬೇಡಿಕೆ ಸಲ್ಲಿಸಬೇಕಾಯಿತು.

1991 ಅಕ್ಟೋಬರ್ 2ರಂದು ಕಾಪು ಶ್ರೀ ನಾರಾಯಣಗುರು ಸಭಾಭವನದಲ್ಲಿ ಪ್ರಪ್ರಥಮವಾಗಿ ಸಮುದಾಯಕ್ಕೆ ಭೂಮಿ ನೀಡುವಂತೆ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಅಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಅಧ್ಯಕ್ಷರಾಗಿದ್ದ ಮಾನ್ಯ ಸಂಕಪ್ಪ ರೈಯವರು ಮನವಿ ಸ್ವೀಕರಿಸಿ, ಪ್ರತಿಯೊಬ್ಬ ಆಸಕ್ತ ಅರ್ಜಿದಾರನಿಗೂ ತಲಾ ಐದು ಎಕ್ರೆ ಜಮೀನು ನೀಡುವ ಬಗ್ಗೆ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು. ಸುಮಾರು ನೂರರಷ್ಟು ಕೊರಗರು ಸಭೆಯಲ್ಲಿ ಭಾಗವಹಿಸಿದ್ದರು. 1992ರಲ್ಲಿ ಕಾಪು ಪ್ರವಾಸಿ ಮಂದಿರದಲ್ಲಿ ನಡೆದ ಕೊರಗರ ಸಭೆಯಲ್ಲಿ 20 ಜನ ಭೂಮಿ ಹೋರಾಟಗಾರರ ತಂಡವನ್ನು ರಚಿಸಿ, ಪಾಂಗಾಳ ವಿಠಲ ಶೆಣೈಯವರಿಂದ ಪ್ರಮಾಣ ವಚನ ಸ್ವೀಕಾರ ಮಾಡಿಸಲಾಯಿತು. ಅದೇ ವರ್ಷ ಕಾಪು ಬಂಗ್ಲೆ ಮೈದಾನದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್‌ನ ಸಮಾವೇಶದಲ್ಲಿ ಅಂದಿನ ಶಾಸಕರಾದ ಮಾನ್ಯ ವಸಂತ ಸಾಲ್ಯಾನ್‌ರಿಗೆ ಭೂಮಿ ಬೇಡಿಕೆಯ ಮನವಿ ಸಲ್ಲಿಸಲಾಯಿತು.

ಆಕ್ರಮಿಸಿಕೊಂಡಿರುವ ಭೂಮಿಯಲ್ಲಿ ಸೂರು ನಿರ್ಮಿಸಲು ಸಾಮಾಗ್ರಿಗಳನ್ನು ಕೊಂಡುಹೋಗುತ್ತಿರುವ ಹಾಗೂ ಭೂಮಿಗಾಗಿ ಚಳವಳಿ ನಡೆಸುತ್ತಿರುವ ಕೊರಗರು

1993ರ ಆಗಸ್ಟ್‌ನಲ್ಲಿ ಕಾಪು ಸಮೀಪದ ಕಳತ್ತೂರಿನಲ್ಲಿ 7ಎಕ್ರೆ ಸರಕಾರಿ ಜಮೀನಿಗೆ ಬೇಲಿ ಹಾಕುವ ಮೂಲಕ ಚಳವಳಿಗೆ ಹೊಸ ರೂಪ ಕೊಡಲಾಯಿತು. 1993 ಆಗಸ್ಟ್ 18 ರಂದು ಮಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ಸಂಘಟಿಸಿ ಜಿಲ್ಲಾಧಿಕಾರಿ ರಜನೀಶ್ ಗೋಯಲ್‌ಗೆ ಸಮುದಾಯದ ಭೂಮಿ ಬೇಡಿಕೆಯ ಮನವಿ ಸಲ್ಲಿಸಲಾಯಿತು. ಗಾಳಿ ಮಳೆಯನ್ನು ಲೆಕ್ಕಿಸದೆ ಅಂದು ಸಾವಿರಾರು ಮಂದಿ ಕೊರಗರು, ಬಾವುಟಗುಡ್ಡದಿಂದ, ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಿ, ಭೂಮಿಯ ಅಗತ್ಯತೆಯನ್ನು ಸಾರಿ ಹೇಳಿದರು. ಈ ಮನವಿಯ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾಡಳಿತವು ಕೊರಗ ಸಮುದಾಯದ ಸಮಗ್ರ ಅಧ್ಯಯನಕ್ಕೆ ಆದೇಶ ನೀಡಿತು. ಮಂಗಳೂರು

ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ। ಮಹಮ್ಮದ್ ಪೀರ್ ರವರ ನೇತೃತ್ವದಲ್ಲಿ ಅಧ್ಯಯನ ನಡೆದು 1994ರಲ್ಲಿ ಜಿಲ್ಲಾಡಳಿತಕ್ಕೆ ವರದಿಯನ್ನು ಸಲ್ಲಿಸಲಾಯಿತು. ವರದಿಯಲ್ಲಿ ಪ್ರತಿಯೊಬ್ಬ ಆಸಕ್ತ ಕೊರಗ ವ್ಯಕ್ತಿಗೂ 2.50 ಎಕ್ರೆ ಕೃಷಿ ಯೋಗ್ಯ ಭೂಮಿ ವಿತರಿಸುವಂತೆ ಶಿಫಾರಸು ಮಾಡಲಾಯಿತು.

1994 ಜುಲ್ಯಾ ತಿಂಗಳಲ್ಲಿ ಮಂಗಳೂರು ತಾಲೂಕಿನ ಕಿನ್ನಿಗೋಳಿಯ ಗುತ್ತಕಾಡು ಎಂಬಲ್ಲಿ ನಾಲ್ಕು ಎಕ್ರೆ ಸರಕಾರಿ ಜಾಗಕ್ಕೆ ಬೇಲಿ ಹಾಕಲಾಯಿತು. ಹಾಗೂ ಕಿನ್ನಿಗೋಳಿ ಪೇಟೆಯಲ್ಲಿ ನಿರಂತರ 26 ದಿನಗಳ ವರೆಗೆ ವಲಯ ಸಂಘಗಳಿಂದ ಸರದಿ ಪ್ರಕಾರ ಧರಣಿ ಪ್ರತಿಭಟನೆಯನ್ನು ಮಾಡಲಾಯಿತು. ಶಾಸಕ ಅಮರನಾಥ್ ಶೆಟ್ಟಿ ಧರಣಿ ನಿರತರನ್ನು ಭೇಟಿ ಮಾಡಿ ಅಹವಾಲು ಸ್ವೀಕರಿಸಿದ್ದರು.

1996 ರಲ್ಲಿ ಕಾರ್ಕಳ ತಾಲೂಕು ಮುಲ್ಲಡ್ಕದಲ್ಲಿ ಆರು ಎಕ್ರೆ ಸರಕಾರಿ ಭೂಮಿಗೆ ಬೇಲಿ ಹಾಕಲಾಯಿತು.

1997 ಅಕ್ಟೋಬರ್ 2ರಂದು ಉಡುಪಿ ತಾಲೂಕಿನ ಸೂರಾಲ್ ಅರಣ್ಯ ಭೂಮಿಯನ್ನು ಆಕ್ರಮಿಸುವ ಉದ್ದೇಶದಿಂದ ಸೂರಾಲ್ ಚಳವಳಿಯನ್ನು ಸಂಘಟಿಸಲಾಯಿತು. ಒಂದು ಸಾವಿರ ಮಂದಿ ಕೊರಗರು ಕೊಕ್ಕರ್ಣೆ ಪೇಟೆಯಿಂದ ಸೂರಾಲ್ ದೇವಸ್ಥಾನದವರೆಗೆ ಮೆರವಣಿಗೆಯಲ್ಲಿ ಸಾಗಿ ದೇವಾಸ್ಥಾನದ ಎದುರಿನ ಗದ್ದೆಯಲ್ಲಿ ನೆರೆದರು. ಸುದ್ದಿ ತಿಳಿದ ಅಂದಿನ ಉಸ್ತುವಾರಿ ಸಚಿವರಾದ ಮಾನ್ಯ ಜಯಪ್ರಕಾಶ ಹೆಗ್ಡೆಯವರು ಅಲ್ಲಿಗೆ ಬಂದು ಅರಣ್ಯ ಪ್ರವೇಶವನ್ನು ತಡೆದರು. ತಾನು ಈ ಬಗ್ಗೆ ಜಿಲ್ಲಾಡಳಿತ ಹಾಗೂ ಸರಕಾರದೊಂದಿಗೆ ಚರ್ಚಿಸಿ, ಪೀರ್ ವರದಿಯ ಶಿಫಾರಸಿನಂತೆ ಭೂಮಿ ವಿತರಿಸುವ ಕ್ರಿಯೆಗೆ ಚಾಲನೆ ನೀಡುವುದಾಗಿ ಭರವಸೆ ನೀಡಿದರು. ಮುನ್ನೂರಕ್ಕೂ ಅಧಿಕ ಪೊಲೀಸರು ಅರಣ್ಯ ಭೂಮಿಗೆ ಭದ್ರತೆ ವಹಿಸಿದ್ದರು.

1998 ಆಗಸ್ಟ್ 15ರಂದು ಮೊಟ್ಟಮೊದಲ ಬಾರಿಗೆ ಕಾಪು ವಿಧಾನಸಭಾ ಕ್ಷೇತ್ರದ ಇನ್ನಾ ಗ್ರಾಮದ ಐದು ಮಂದಿ ಕೊರಗರಿಗೆ ಶಾಸಕ ವಸಂತ. ವಿ. ಸಾಲ್ಯಾನ್‌ರವರು ತಲಾ ಒಂದು ಎಕ್ರೆ ಜಮೀನಿನ ಹಕ್ಕುಪತ್ರಗಳನ್ನು ನೀಡುವ ಮೂಲಕ ಭೂಮಿ ವಿತರಣಾ ಕಾರ್ಯಕ್ಕೆ ಚಾಲನೆ ನೀಡಿದಂತಾಯಿತು.

2000ನೇ ಇಸವಿಯ ಜೂನ್ 14ರಂದು ಉಡುಪಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ, ಭೂಮಿ ಬೇಡಿಕೆಯ ಬಗ್ಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಯಿತು. ಮಹಮ್ಮದ್ ಪೀರ್ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವಂತೆ ಒತ್ತಾಯಿಸಲಾಯಿತು. ಜೂನ್ 14ರಿಂದ ನಿರಂತರ ಹದಿನಾಲ್ಕು ದಿನಗಳವರೆಗೆ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ಮಾಡಲಾಯಿತು. ಅಂದಿನ ಉಸ್ತುವಾರಿ ಮಂತ್ರಿ ಶ್ರೀಮತಿ ಮೋಟಮ್ಮರವರು ಧರಣಿ ನಿರತರನ್ನು ಭೇಟಿಮಾಡಿ, ಎಲ್ಲಾ ಬೇಡಿಕೆಗಳ ಸರಕಾರ ಗಮನ ಹರಿಸಿದೆ, ಭೂಮಿ ವಿತರಣೆಯ ಬಗ್ಗೆ, ಸರಕಾರ ತೀರ್ಮಾನಿಸಲಿದೆ ಎಂದು ತಿಳಿಸಿದರು.

2001 ಅಕ್ಟೋಬರ್ 2 ರಂದು ಕೊರಗ ಸಂಘಟನೆಗಳು ಒಂದು ನಿರ್ಣಾಯಕವಾದ ಚಳವಳಿಗೆ ಸಿದ್ಧವಾಯಿತು. ಉಡುಪಿ ತಾಲೂಕಿನ 108 ಕಳತ್ತೂರು ಗ್ರಾಮದ ಸುಮಾರು ಆರುನೂರು ಎಕ್ರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲು ತೀರ್ಮಾನಿಸಿತು. ಒಕ್ಕೂಟದ ಅಧ್ಯಕ್ಷರು; ಸಮುದಾಯದ ಹಿರಿಯರೂ ಆದ ಪಿ. ಗೋಕುಲ್‌ದಾಸರ ನೇತೃತ್ವದಲ್ಲಿ ಸರಿಸುಮಾರು ಒಂದೂವರೆ ಸಾವಿರ ಮಂದಿ ಕೊರಗರು ಸೇರಿ, ಸರಿಯಾಗಿ ಮಧ್ಯಾಹ್ನ 12 ಗಂಟೆಗೆ ಸದ್ರಿ ಭೂಮಿಯಲ್ಲಿ ಹಕ್ಕು ಸ್ಥಾಪನೆ ಮಾಡಿದರು. ತೆಂಗಿನ ಸಸಿ ನೆಟ್ಟು, ನೀರೆರೆದು, ತಮ್ಮ ಧ್ವಜ ಹಾರಿಸಿದರು. ಇದೊಂದು ಐತಿಹಾಸಿಕ ಚಳವಳಿಯಾಗಿ ಗುರುತಿಸಲ್ಪಟ್ಟಿತು. ಈ ಚಳವಳಿಗೆ ಪೂರ್ವಭಾವಿಯಗಿ ಆಗಸ್ಟ್ 18ರಿಂದ ಅಕ್ಟೋಬರ್ 2ರ ವರೆಗೆ ಗೋಕುಲ್‌ದಾಸರ ತಂಡವು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪಾದಯಾತ್ರೆ ಹೊರಟು ಕೊರಗ ಕುಟುಂಬಗಳನ್ನು ಚಳವಳಿಯಲ್ಲಿ ತೊಡಗಿಕೊಳ್ಳುವಂತೆ ಜಾಗೃತಿ ಮೂಡಿಸಿತ್ತು. ಅಂತಿಮವಾಗಿ ಕಳತ್ತೂರಿನ ಅರಣ್ಯ ಭೂಮಿಯಲ್ಲಿ ಹಕ್ಕು ಸ್ಥಾಪನೆ ಮಾಡಲಾಯಿತು.

ಅರಣ್ಯ ಭೂಮಿಯನ್ನು ಅತಿಕ್ರಮಿಸಿದ್ದಕ್ಕಾಗಿ ಅರಣ್ಯ ಇಲಾಖೆಯು ಗೋಕುಲ್‌ದಾಸರ ಸಹಿತ 29 ಮಂದಿ ಕೊರಗರನ್ನು ಬಂಧಿಸಿ ಮಂಗಳೂರು ಸಬ್ ಜೈಲಿಗೆ ಹಾಕಲಾಯಿತು. 29 ದಿನಗಳವರೆಗೆ ಜೈಲು ವಾಸದ ಬಳಿಕ, ಗೋಕುಲ್‌ದಾಸರ ಹೆಂಡ್ತಿ ಶ್ರೀಮತಿ ಪ್ರಫುಲ್ಲಾ ಹಾಗೂ ತಂಗಿ ದಯಾವತಿಯವರು ಜಾಮೀನು ನೀಡಿ ಇವರನ್ನು ಬಿಡಿಸಿದರು. ಎಂಟು ತಿಂಗಳ ತುಂಬು ಗರ್ಭಿಣಿ ಮಹಿಳೆ(ಪಾರ್ವತಿ) ಹಾಗೂ ನಾಲ್ಕು ತಿಂಗಳ ಹಸುಗೂಸು (ರಕ್ಷಾ) ಸಮೇತ ಮಹಿಳೆಯರು, ಮಕ್ಕಳು ಎಂಬ ಅಂಜಿಕೆ, ಅಳುಕು ಇಲ್ಲದೆ ಎಲ್ಲರನ್ನೂ ಹೊತ್ತೊಯ್ದು, ಸರಕಾರ ಕಾನೂನು ಕ್ರಮ ಕೈಗೊಂಡಿತು. ಚಳವಳಿಯ ಪರಿಣಾಮವಾಗಿ ಕೆಂಜೂರು ಗ್ರಾಮದಲ್ಲಿ ಆಸಕ್ತ ಕೆಲವು ಕೊರಗರಿಗೆ ಭೂಮಿ ನೀಡುವ ಬಗ್ಗೆ ಚರ್ಚಿಸಲಾಯಿತು. ಉಡುಪಿ ಜಿಲ್ಲಾದ್ಯಂತ ಕಂದಾಯ ಭೂಮಿಯನ್ನು ಗುರುತಿಸುವ ಕಾರ್ಯಕ್ಕೆ ಚಾಲನೆ ಸಿಕ್ಕಿತು. 2005 ಅಕ್ಟೋಬರ್ 2ರಂದು ಮತ್ತೆ ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದ್ರೆ ಸಮೀಪದ ಪಾಲಡ್ಕ ಅರಣ್ಯ ಭೂಮಿಯನ್ನು ಅತಿಕ್ರಮಿಸಲು ಸಂಘಟನೆ ಯೋಜನೆ ಹಾಕಿತು. ಅದರಂತೆ ಮೂಡಬಿದ್ರೆ ಸ್ವರಾಜ್ ಮೈದಾನದಿಂದ ಸಾವಿರಾರು ಸಂಖ್ಯೆಯ ಕೊರಗರು ಪಾಲಡ್ಕ ಅರಣ್ಯ ಭೂಮಿಗೆ ಸುಮಾರು ಹತ್ತು ಕಿ.ಮೀ ದೂರ ಮೆರವಣಿಗೆಯಲ್ಲಿ ಸಾಗಿ ಹಕ್ಕು ಸ್ಥಾಪನೆಗೆ ಮುಂದಾದರು. ಆದರೆ ಸುಮಾರು ಐನೂರಕ್ಕೂ ಮಿಕ್ಕಿದ ಪೊಲೀಸರ ತಂಡವು, ಅರಣ್ಯ ಭೂಮಿಗೆ ಸರ್ಪಗಾವಲನ್ನು ನಿರ್ಮಿಸಿದ್ದರು. ಕೊರಗರಿಂದ ಉದ್ದೇಶಿತ ಭೂಮಿ ಪ್ರವೇಶ ಸಾಧ್ಯವಾಗಲಿಲ್ಲ. ಕೊರಗರು ಜಮೀನಿನ ಪಕ್ಕದಲ್ಲಿ ಕೂತು ಧರಣಿ ಸತ್ಯಾಗ್ರಹ ಆರಂಭಿಸಿದರು. ಕೊನೆಗೆ ಜಿಲ್ಲಾಡಳಿತದ ಉನ್ನತ ಅಧಿಕಾರಿಗಳು ತಡರಾತ್ರಿ ಸ್ಥಳಕ್ಕೆ ಆಗಮಿಸಿ, ನಡೆಸಿದ ಮಾತುಕತೆಯ ಬಳಿಕ ಧರಣಿಯನ್ನು ಹಿಂತೆಗೆದುಕೊಂಡರು. ಚಳವಳಿಯ ಪರಿಣಾಮದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಂದಾಯ ಭೂಮಿಯನ್ನು ಗುರುತಿಸುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿತು.

1991 ರಿಂದ 2005ರ ವರೆಗೆ ನಡೆದ ನಿರಂತರ ಹದಿನಾಲ್ಕು ವರ್ಷಗಳ ಚಳವಳಿಗಳ ಪರಿಣಾಮವಾಗಿ ಉಭಯ ಜಿಲ್ಲೆಗಳಲ್ಲಿ ಸುಮಾರು ಎಂಟುನೂರು ಎಕ್ರೆಗೂ ಹೆಚ್ಚು ಭೂಮಿ ಕೊರಗರ ಪಾಲಾಗಿದೆ. ಅಲ್ಲೆಲ್ಲ ಸಮರೋಪಾದಿಯಲ್ಲಿ ಪುನರ್ ವಸತಿ ಕಾರ್ಯಗಳು ನಡೆಯಬೇಕಾಗಿದೆ. ಸರಕಾರಿ ಭೂಮಿ ಗುರುತಿಸುವುದು, ಅರಣ್ಯ ಇಲಾಖೆಗೆ ಸಂಬಂಧಿಸಿದ ಮರಗಳ ಕಟಾವು ಕಾರ್ಯ, ಭೂಮಿ ಸಮತಟ್ಟುಗೊಳಿಸುವುದು ಇತ್ಯಾದಿ ಕೆಲಸಗಳು ಮುಂದುವರಿದಿದೆ. ಕುಂದಾಪುರ ತಾಲೂಕಿನ ಮುದ್ದೂರಿನಲ್ಲಿ 60 ಎಕ್ರೆ, ಕಾರ್ಕಳ ತಾಲೂಕಿನ ಮುನಿಯಾಲು ಪಡುಕುಡೂರಿನಲ್ಲಿ 7 ಎಕ್ರೆ, ಬೈಲೂರಿನಲ್ಲಿ ಐದು ಎಕ್ರೆ, ಬೆಳ್ಮಣ್ಣಿನಲ್ಲಿ ಮೂರು ಎಕ್ರೆ, ಬೋಳಾದಲ್ಲಿ ಮೂರು ಎಕ್ರೆ, ಇನ್ನಾದಲ್ಲಿ ಒಂಭತ್ತು ಎಕ್ರೆ, ನಿಟ್ಟೆಯಲ್ಲಿ ಮೂರು ಎಕ್ರೆ, ಉಡುಪಿ ತಾಲೂಕಿನ ನೀಲಾವರ, ಆರೂರು, 33ನೇ ಶೀರೂರು, ಬೆಳ್ಳಂಪಳ್ಳಿ, ಚಾಂತ್ಯಾರು ಹಾಗೂ ಇನ್ನೂ ಹಲವು ಕಡೆ ಕೊರಗರಿಗೆ ಭೂಮಿಯ ಹಕ್ಕು ಪತ್ರ ಸಿಕ್ಕಿವೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆ, ಉಳಾಯಿಬೆಟ್ಟುಗಳಲ್ಲಿ ಭೂಮಿ ಗುರುತಿಸಲಾಗಿದೆ.

2011 ಆಗಸ್ಟ್ 10ರಂದು ಉಡುಪಿ ತಾಲೂಕಿನ ಬೊಮ್ಮರಬೆಟ್ಟು ಗ್ರಾಮದ ಸ.ನಂ : 229ರಲ್ಲಿ 2.61ವರೆ ಎಕ್ರೆ, 2015 ಸಪ್ಟೆಂಬರ್ 15ರಂದು ಕುಂದಾಪುರ ತಾಲೂಕಿನ ಕೆಂಚನೂರು ಗ್ರಾಮದ ಸ.ನಂ : 7/1 ರಲ್ಲಿ 2.04 ಹಾಗೂ ಕರ್ಕುಂಜೆ ಗ್ರಾಮದ ಸ.ನಂ : 91/1ಎ1ರಲ್ಲಿ 0.01 ಮುಕ್ಕಾಲು ಎಕ್ರೆ, 2016 ಮೇ 17ರಂದು ಹಳ್ಳಾಡಿ ಹರ್ಕಾಡಿ ಗ್ರಾಮದ ಸ.ನಂ : 18/1ಎ ಮತ್ತು ಸ.ನಂ : 18/2 ರಲ್ಲಿ 1.68 ಎಕ್ರೆ ಜಮೀನುಗಳನ್ನು ಅರ್ಹ ಫಲಾನುಭವಿಗಳಿಗೆ, ಉಡುಪಿ ಜಿಲ್ಲಾಧಿಕಾರಿಯವರು, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1969ರ ನಿಯಮ 7(1) ರಂತೆ ಮತ್ತು ಇದೇ ನಿಯಮಾವಳಿಯ ನಿಯಮ 12(4) ಪ್ರಕಾರ ಸ್ಥಳ ಮೌಲ್ಯ ವಿನಾಯಿತಿಗೊಳಿಸಿ, ಕೆಲವೊಂದು ಶರತ್ತುಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದ್ದಾರೆ.

ಕೊರಗ ಸಮುದಾಯದ 60% ಜನರಿಗೆ ಭೂಮಿ ಹಕ್ಕು ದೊರೆಯುವಂತಾಗಬೇಕು ಎಂಬ ಸಂಘಟನೆಯ ಸ್ಪಷ್ಟ ನಿಲುವಿನ ಪ್ರಕಾರ ಈ ಭೂಮಿ ಹೋರಾಟವು ಇನ್ನೂ ಮುಂದುವರಿದಿದೆ.

ಪೌಷ್ಟಿಕ ಆಹಾರಕ್ಕಾಗಿ ಚಳವಳಿ

'ಅಪೌಷ್ಟಿಕತೆ' ಎಂಬುವುದು ಕೊರಗರಿಗೆ ಹುಟ್ಟಿನಿಂದಲೇ ಬಂದಿರುವ ಕಾಯಿಲೆ. ಏಕೆಂದರೆ ಇವರು ಕಾಡಿನ ಬದುಕಿಗೆ ವಿದಾಯ ಕೋರಿದ ನಂತರ, ಹೊಟ್ಟೆ ತುಂಬ ಉಂಡವರೇ ಅಲ್ಲ. ಅರೆಹೊಟ್ಟೆ ಉಂಡರೂ, ಊರವರು ಉಂಡು ಬಿಸಾಡಿದ ಎಂಜಲನ್ನವನ್ನು ಮಾತ್ರ. ಇವರದ್ದು ಸ್ತ್ರೀ ಮೂಲವೇ ಆಗಿದ್ದರೂ ಹೊಟ್ಟೆಯ ಸಂದರ್ಭ ಬಂದಾಗ ಪುರುಷ ಕಾಯವೇ ಪ್ರಧಾನವಾಗಿರುತ್ತಿತ್ತು. ಮಹಿಳೆ ಮತ್ತು ಮಕ್ಕಳು ಆಹಾರಕ್ಕಾಗಿ ಅಸಹನೀಯವಾಗಿ ಪರದಾಡಬೇಕಿತ್ತು. ಇದರಿಂದಾಗಿ ಸಹಜವಾಗಿಯೇ ಇವರಲ್ಲಿ

ಅಪೌಷ್ಟಿಕತೆಯ ಅಂಟು ಜಾಡ್ಯ ತಗುಲಿತ್ತು. ಹುಟ್ಟುವ ಮಕ್ಕಳಿಗೂ ಇದೇ ಮುಂದುವರಿಯಿತು. ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಎನ್.ಜಿ.ಓ. ಗಳ ಸಹಕಾರದಲ್ಲಿ ಕೊರಗರು ಈ ಬಗ್ಗೆ ಆಲೋಚಿಸುವಂತಾಯಿತು. ಕೊರಗ ಸಂಘಟನೆಗಳು ಪೌಷ್ಟಿಕ ಆಹಾರಕ್ಕಾಗಿ ಸರಕಾರದ ಮುಂದೆ ಬೇಡಿಕೆ ಇಟ್ಟಿತು. ಪ್ರತಿ ವಲಯ ಸಂಘಗಳಲ್ಲಿ ಈ ಬಗ್ಗೆ ಚರ್ಚಿಸಿ, ಹೋರಾಟಕ್ಕೆ ನಾಂದಿ ಹಾಡಿದರು. ಉಡುಪಿ ಜಿಲ್ಲಾ ಪಂಚಾಯತ್‌ನ ಎದುರುಗಡೆ ಒಕ್ಕೂಟದ ವತಿಯಿಂದ ಹನ್ನೆರಡು ದಿನಗಳ ಧರಣಿ ಪ್ರತಿಭಟನೆ ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ನಂತರದ ದಿನಗಳಲ್ಲಿ ಸಂಘ ಸ್ತರದಲ್ಲೂ, ವೈಯಕ್ತಿಕವಾಗಿಯೂ ಪತ್ರ ಚಳವಳಿ ನಡೆಸಲಾಯಿತು. ಕೊನೆಗೆ ಮಾನ್ಯ ವಿ.ಎಸ್. ಆಚಾರ್ಯರವರು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಅವರ ಮುತುವರ್ಜಿಯಲ್ಲಿ ಸರಕಾರವು ಕೊರಗರ ಬೇಡಿಕೆಯನ್ನು ಸ್ವೀಕರಿಸಿತು. ಪ್ರತಿಯೊಂದು ಕೊರಗ ಕುಟುಂಬಕ್ಕೂ ಮಳೆಗಾಲ ಆರು ತಿಂಗಳಿಗೆ ನಿರ್ದಿಷ್ಟ ಪ್ರಮಾಣದ ಅಕ್ಕಿ, ಬೇಳೆ, ಬೆಲ್ಲ, ಕಾಳು, ಮೊಟ್ಟೆಗಳನ್ನು ನೀಡಲು ಒಪ್ಪಿಕೊಂಡಿತು. ಸಂಘಟನೆಗಳು ಯೋಜನೆಯ ಅನುಷ್ಠಾನಕ್ಕೆ ಕೇರಳ ಸರಕಾರದ ಯೋಜನೆಯ ಮಾದರಿಯನ್ನು ನೀಡಿತ್ತು. ಈಗ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಎಲ್ಲಾ ಕೊರಗ ಕುಟುಂಬಳಿಗೆ ಮಳೆಗಾಲದ ಆರು ತಿಂಗಳು ಈ ಪೌಷ್ಟಿಕ ಆಹಾರದ ಪ್ಯಾಕೇಜ್ ತಲುಪುತ್ತಿದೆ. ಈ ಯೋಜನೆಯ ಸದುಪಯೋಗಕ್ಕೆ ಸಂಘಟನೆಗಳು ಕಟ್ಟುನಿಟ್ಟಿನ ಕಣ್ಣು ಇಟ್ಟಿವೆ. ಇದೀಗ ಕೊರಗರ ಈ ಚಳವಳಿಯ ಪರಿಣಾಮವಾಗಿ ಉಳಿದ ಆದಿವಾಸಿಗಳಾದ ಜೇನು ಕುರುಬ, ಮಲೆಕುಡಿಯ ಮುಂತಾದವರಿಗೂ ದೊರೆಯುವಂತಾಗಿದೆ. ಇತರ ಹನ್ನೆರಡು ಅರಣ್ಯ ಮೂಲ ಬುಡಕಟ್ಟು ಸಮುದಾಯಗಳಿಗೂ ಈ ಯೋಜನೆ ವಿಸ್ತರಿಸುವಂತೆ ಹೋರಾಟ ನಡೆಯುತ್ತಿದೆ. ಹಾಗೂ ಆರು ತಿಂಗಳ ಬದಲಿಗೆ ವರ್ಷದ ಹನ್ನೆರಡು ತಿಂಗಳೂ ಯೋಜನೆಯ ಅನುಷ್ಠಾನಕ್ಕೆ ಆಗ್ರಹಿಸಲಾಗುತ್ತಿದೆ. ಆದರೂ ಇದಕ್ಕೊಂದು ತಾರ್ಕಿಕ ಕಾಲಮಿತಿಯು ಇರಬೇಕಾಗುತ್ತದೆ. ಪೌಷ್ಟಿಕತೆ ಎಂಬುವುದು ಸ್ವಾಭಿಮಾನದ ವಿಚಾರವೂ ಆಗಬೇಕಿರುವುದು ಅನಿವಾರ್ಯ.

ಸಂದೇಶ

"…. ಇಲ್ಲಿ ಪ್ರತಿಯೊಬ್ಬನೂ ಸಮರ್ಥನೇ. ಹುಟ್ಟಿದ ಮಗುವಿನಿಂದ ತೊಡಗಿ ಗಂಡಸರು, ಹೆಂಗಸರು, ಎಲ್ಲರೂ ಸಾಯುವ ತನಕ ಸಂಘಟನೆಯ ಸದಸ್ಯರೇ. ನಮ್ಮ ಸಂಘಟನೆಯನ್ನು ಮುಂದುವರಿಸಲು ಸಮರ್ಥರಿದ್ದಾರೆ. ಇಲ್ಲಿ ಅಧಿಕಾರ ಎಂಬುವುದು ಇಲ್ಲ. ಕೇವಲ ಪಾಲುದಾರಿಕೆ ಮಾತ್ರ. ಹಣ ಕೊಡಬೇಕಾಗಿಲ್ಲ. ಇಲ್ಲಿ ಭಾಗವಹಿಸುವಿಕೆ ಮಾತ್ರ ಮುಖ್ಯ."

– **ಪಿ. ಗೋಕುಲ್‌ದಾಸ್** (ಒಕ್ಕೂಟದ ಮಾಜಿ ಅಧ್ಯಕ್ಷರು)

"…. ಈ ಜಿಲ್ಲೆಯಲ್ಲಿ ನಾವು ಯಾರಿಗೂ ಅನ್ಯಾಯ ಮಾಡಿದವರಲ್ಲ. ನಾವು ಇಲ್ಲಿನ ನಿವಾಸಿಗಳು. ನಾವು ಸ್ವಾಭಿಮಾನದಿಂದ ಬದುಕೋಣ. ಇದೇ ನಮ್ಮ ಮಕ್ಕಳಿಗೆ ಕೊಡುವ ಆಸ್ತಿ. ಇದೇ ನಮ್ಮ ಮುಂದಿನ ಬದುಕಿಗೆ ದಾರಿ"

– **ಬಾಲ್‌ರಾಜ್ ಕೋಡಿಕಲ್**

ಅಸಮಾಧಾನದ ಅಲೆಗಳು

ಸ್ವಯಂ ಸೇವಾ ಸಂಸ್ಥೆಗಳ ನೆರಳಲ್ಲಿ ಬೆಳೆದ ಕೊರಗ ಸಂಘಟನೆಯು ಇಡೀ ಕೊರಗ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುವ ಸ್ಪಷ್ಟ ಗುರಿ–ಉದ್ದೇಶಗಳನ್ನು ಹೊಂದಿದೆ. ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರೆಯುವುದು ಸಂಘಟನೆಯ ಮೂಲ ಉದ್ದೇಶ. ಉದ್ದೇಶ ಸಾಧನೆಯತ್ತ ದಿಟ್ಟಹೆಜ್ಜೆ ಇಟ್ಟು ಮುನ್ನಡೆಯುವ ಪ್ರಯತ್ನಗಳೂ ಸಾಗಿ, ಸ್ಪಷ್ಟ ಗುರಿಯನ್ನು ತಲುಪಿದ್ದೂ ಆಗಿದೆ.

ಆದರೆ ಭಗವಂತನ ಇಚ್ಛೆ ಇಲ್ಲದೆ ಜಗತ್ತಿನಲ್ಲಿ ಹುಲ್ಲು ಕಡ್ಡಿಯೂ ಅಲುಗಾಡಲಾರದು ಎಂಬಂತೆ ಎನ್.ಜಿ.ಓ.ಗಳ ಅಪ್ಪಣೆ ಇಲ್ಲದೆ ಕೊರಗ ಸಂಘಟನೆಯಲ್ಲಿ ಏನೂ ನಡೆಯುವುದಿಲ್ಲ, ಎಂಬುವುದಾಗಿ ಕೆಲವರು ಆರೋಪಿಸುತ್ತಲೇ ಬಂದಿದ್ದಾರೆ. ಕೆಲವೊಮ್ಮೆ ಇದು ನಿಜವೇನೋ ಎಂಬಂತಹ ಘಟನೆಗಳೂ ನಡೆಯುತ್ತಿವೆ. ಆ ಕಾರಣಕ್ಕಾಗಿಯೇ ಸಂಘಟನೆಯು ಇಂದಿಗೂ ಇಡೀ ಸಮುದಾಯವನ್ನು ಪ್ರತಿನಿಧಿಸಲು ಸಾಧ್ಯವಾಗಿಲ್ಲ. ಎನ್.ಜಿ.ಓ ಗಳು ಸಮುದಾಯದಲ್ಲಿ ತಾವು ಕಂಡುಕೊಂಡ ಸಮಸ್ಯೆಗಳನ್ನು ಮಾತ್ರ ಪರಿಗಣಿಸಿ, ಕೊರಗರನ್ನು ಅದಕ್ಕೆ ಒಪ್ಪಿಸುವ ಕಾರ್ಯವನ್ನು ನಡೆಸುತ್ತವೆ. ಸಂಘಟನೆಯ ಮುಂಚೂಣಿ ನಾಯಕರ ಮಾತುಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ ಎಂಬುವುದು ಕೊರಗರ ಅಳಲು.

ಒಂದು ಕಡೆ ಅಧಿಕಾರಿಗಳನ್ನು ಓಲೈಸಿಕೊಂಡು ತಾವು ಮಾತ್ರ ಕೊರಗರ ಉದ್ಧಾರ ಮಾಡಲು ಸಾಧ್ಯ ಎಂಬ ಧೋರಣೆಯನ್ನು ಎನ್.ಜಿ.ಓ.ಗಳು ಹೊಂದಿವೆ. ಕೆಲವು ಅಸಹಾಯಕ ಕೊರಗರು ಇವರನ್ನು ದೇವರೆಂದೇ ನಂಬಿ ಎಲ್ಲದಕ್ಕೂ ತಲೆ ಆಡಿಸುತ್ತಾರೆ. ಹಾಗಾಗಿ ಕೆಲವು ವಿದ್ಯಾವಂತರು ಆಗಾಗ ಅಸಮಾಧಾನದ ಅಲೆಗಳನ್ನು ಹೊರಹಾಕುತ್ತಲೇ ಇದ್ದಾರೆ. ಎನ್.ಜಿ.ಓ ಪ್ರೇರಿತ ಈ ಸಂಘಟನೆಯನ್ನು ಒಪ್ಪಿಕೊಳ್ಳದವರು ತಮ್ಮದೇ ಆದ ಸ್ವತಂತ್ರ ಸಂಘಟನೆಗಳನ್ನು ಮಾಡಿಕೊಂಡಿರುವುದೂ ಸುಳ್ಳಲ್ಲ. ಈ ರೀತಿಯ ಸ್ವತಂತ್ರ ಚಿಂತನೆಗಳನ್ನು ಹೊಂದಿರುವವರನ್ನು ಸಮಾಜ ವಿರೋಧಿಗಳು ಎಂದೂ ಈ ಎನ್.ಜಿ.ಓ ಗಳು ಚಿತ್ರಿಸುವ ಪ್ರಯತ್ನಗಳನ್ನು ಮಾಡುತ್ತಿವೆ. ಹಾಗಾಗಿ ಇಲ್ಲಿ ವೈಚಾರಿಕ ಸಂಘರ್ಷಗಳೂ, ಮಾನಸಿಕ ಯುದ್ಧಗಳೂ ನಡೆಯುತ್ತಿವೆ.

ಈ ಎನ್.ಜಿ.ಓ ಗಳು ಇದೇ ರೀತಿ, ಕೊರಗ ಸಮುದಾಯವನ್ನು ದತ್ತು ಪಡೆದವರಂತೆ ನಡೆದುಕೊಂಡರೆ ಮುಂದಕ್ಕೆ ಸ್ವತಂತ್ರ ಸಂಘಟನೆಗಳಿಂದ ತೀವ್ರ ತರದ ಮುಖಭಂಗವನ್ನು ಎದುರಿಸಬೇಕಾಗಬಹುದು. ಈ ಎನ್.ಜಿ.ಓ.ಗಳು ತಮಗೆ ದೇಣಿಗೆ ನೀಡುವ ಇತರ ಸಂಸ್ಥೆಗಳೊಂದಿಗೆ ಏನೇ ಒಪ್ಪಂದ ಮಾಡಿಕೊಂಡಿದ್ದರೂ ಕೊರಗರನ್ನು ಒಡೆದು ಆಳುವ

ನೀತಿಯನ್ನು ಪ್ರಜ್ಞಾವಂತ ಕೊರಗರು ಖಂಡಿಸುವುದು ಸಹಜವೇ ಆಗಿದೆ. ಅದು ಅನಿವಾರ್ಯವೂ ಹೌದು. ಈ ಸಂಸ್ಥೆಗಳು ಸಮುದಾಯದ ಬಗ್ಗೆ ತೀರ್ಮಾನ ಮಾಡಲು ಸಂಘಟನೆಗಳಿಗೆ ಸ್ವಾತಂತ್ರ್ಯ ನೀಡಿ ಅಗತ್ಯ ಬಿದ್ದಾಗ ಮಾತ್ರ ಕಾನೂನು ಸಲಹೆ ಹಾಗೂ ಮಾರ್ಗದರ್ಶನ ನೀಡಬೇಕು. ತುಂಡು ತುಂಡು ಸಂಘಟನೆಗಳನ್ನು ಒಟ್ಟುಗೂಡಿಸಲು ಶ್ರಮಿಸಬೇಕು.

ಮುಂದೆ ಏನು? ಕೆಲವು ಸಲಹೆಗಳು

ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಮೂಲ ಬುಡಕಟ್ಟು ಸಮುದಾಯವು ಇಂದು ವಿನಾಶದ ಅಂಚಿಗೆ ಹೇಗೆ ತಳ್ಳಲ್ಪಟ್ಟಿತು ಎಂಬುವುದನ್ನು ಈಗಾಗಲೇ ಗಮನಿಸಿದ್ದೇವೆ. ಈ ಸಮುದಾಯ ಉಳಿಯಬೇಕಾದರೆ ಸಹೃದಯೀ ಪ್ರಜ್ಞಾವಂತರು ಮುಂದಡಿ ಇಡಲೇಬೇಕು. ಇವರ ಮೂಲ ಸಂಸ್ಕೃತಿ, ಸಂಪ್ರದಾಯಗಳ ಜೊತೆಗೆ ಪ್ರಸಕ್ತ ವಿದ್ಯೆ ಕಲೆಗಳನ್ನೂ ಬೆಳೆಸಿಕೊಳ್ಳಬೇಕು. ಅದಕ್ಕಾಗಿ ವಿಚಾರವಂತರು ವೇದಿಕೆ ಸಜ್ಜುಗೊಳಿಸಬೇಕು

1. ಅವಕಾಶಗಳನ್ನು ಸೃಷ್ಟಿಸಿಕೊಳ್ಳುವ ಅವಕಾಶವಿರಬೇಕು

ಹೇಳಿ ಕೇಳಿ ಕೊರಗರಿಗೆ ಸುಧಾರಿಸಿಕೊಳ್ಳಲು ಸಾಕಷ್ಟು ಸಮಯವಕಾಶ ಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕ ವಲಯದಲ್ಲಿ ಕಾಯುವ ತಾಳ್ಮೆ ಪ್ರದರ್ಶಿತವಾಗಬೇಕು. ಯಾವುದೇ ರೀತಿಯ ಒತ್ತಡಗಳಿಂದ ಬದಲಾವಣೆ ಸಾಧ್ಯವಿಲ್ಲ.

2. ಸಾರ್ವಜನಿಕ ಕ್ಷೇತ್ರಗಳಲ್ಲಿ ಅವಕಾಶಗಳು

ಸಾರ್ವಜನಿಕ ಆಟೋಟ, ಮನೋರಂಜನಾ ಕಾರ್ಯಕ್ರಮಗಳಲ್ಲಿ ಮುಕ್ತ ಅವಕಾಶ ಕಲ್ಪಿಸಿಕೊಡುವುದರಿಂದ ಇವರಲ್ಲಿನ ಕೀಳರಿಮೆ, ಮಂಕು ಕವಿದ ಮನಸ್ಥಿತಿ ಸುಧಾರಣೆಯಾಗ ಬಹುದು. ಸಾರ್ವಜನಿಕ ವಲಯದ ಯುವಕ, ಯುವತಿ, ಕ್ರೀಡಾ ಸಂಘಟನೆಗಳು ಈ ಬಗ್ಗೆ ಗಮನವಹಿಸಬೇಕು.

3. ಸಂವಾದ, ಚರ್ಚೆಗಳು

ಸಮುದಾಯದ ಕುರಿತಾಗಿ ಚರ್ಚಿಸುವ ಸಂದರ್ಭಗಳಲ್ಲಿ ವೈಯಕ್ತಿಕವಾದ ನೆಗೆಟಿವ್ ವಿಚಾರಗಳು ಹೈಲೇಟ್ ಆಗಬಾರದು. ಧನಾತ್ಮಕ ಅಂಶಗಳನ್ನೇ ಎತ್ತಿ ಹಿಡಿಯುವ ಮೂಲಕ ಇವರ ಆತ್ಮಾಭಿಮಾನವನ್ನು ಬೆಳೆಸಬೇಕು. ಶಾಲಾ ಕಾಲೇಜುಗಳಲ್ಲೂ ಈ ವಿಚಾರವನ್ನು ಪರಿಗಣಿಸಬೇಕು. ಎಚ್ಚರಿಸಲೇ ಬೇಕಾದ ಸಂದರ್ಭದಲ್ಲಿ ವ್ಯಕ್ತಿಗತವಾಗಿಯೇ ಚರ್ಚಿಸಿ, ಸೂಕ್ಷ್ಮತೆಗಳನ್ನು ಬಿಡಿಸಿ, ದೃಷ್ಟಾಂತಗಳ ಮೂಲಕ ಸ್ಪಷ್ಟಪಡಿಸಬೇಕು. ಸಂಘಟನೆಗಳು, ಎನ್.ಜಿ.ಓ ಗಳು ಇದನ್ನು ಅನುಸರಿಸಬೇಕು.

4. ಅಸ್ಪೃಶ್ಯತೆ ನಿವಾರಣೆ

ಸಮಾಜದಲ್ಲಿರುವ ಅನಿಷ್ಟ ಅಸ್ಪೃಶ್ಯತೆ ನಿವಾರಣೆಗೆ ಧರ್ಮಸ್ಥಳ ಸ್ವ-ಸಹಾಯ ಗುಂಪುಗಳ ಮಾದರಿಗಳನ್ನು ಅನುಸರಿಸಬಹುದು. ಉದಾಹರಣೆಗೆ ಸಾರ್ವಜನಿಕ ಅನ್ನ ಸಂತರ್ಪಣೆ ಸಮಾರಂಭಗಳಲ್ಲಿ ಊಟ ಬಡಿಸುವ, ನೀರು ಕೊಡುವ ತಂಡಗಳಲ್ಲಿ ಇವರನ್ನು ಸೇರಿಸಿಕೊಳ್ಳಬೇಕು. ಎಲ್ಲಾ ಸರಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಕೊರಗರನ್ನು ಅಡುಗೆ ಕೆಲಸಗಳಿಗೆ ನೇಮಿಸಿಕೊಳ್ಳಬೇಕು. ಜನಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳು ಹಾಗೂ ಊರ ಗಣ್ಯರು, ಕೊರಗರು ಮಾಡಿದ ಅಡುಗೆಯನ್ನು ಊಟ ಮಾಡಬೇಕು. ವೇದಿಕೆಗಳಲ್ಲಿ ಭಾಷಣ ಮಾಡಿ ಕೈತೊಳೆದುಕೊಳ್ಳುವುದಕ್ಕಿಂತ ಇದು ಪ್ರಾಯೋಗಿಕವಾಗುವುದು.

5. ಇವರ ಸಾಂಪ್ರದಾಯಿಕ ವಾದ್ಯ ಪರಿಕರಗಳಿಗೆ(ಡೋಲು, ಕೊಳಲು) ಸಾರ್ವಜನಿಕ ಮನ್ನಣೆ ಸಿಗಬೇಕು. ಧಾರ್ಮಿಕ ಕೇಂದ್ರಗಳ ಒಳಾಂಗಣದಲ್ಲಿ ಅದು ಮೊಳಗಬೇಕು. ಹಾಗೂ ಈ ಪರಿಕರಗಳ ವಾದನದಲ್ಲಿ ಪರಿಣಿತರನ್ನು ಗುರುತಿಸಿ ಗೌರವಿಸಬೇಕು. ವಾದ್ಯ ಪರಿಕರಗಳ ತಯಾರಿ ಮತ್ತು ಖರೀದಿಗೆ ಸರಕಾರದಿಂದ ಅನುದಾನ ಲಭಿಸಬೇಕು. ವಾರ್ಷಿಕ ಕಲಾ ಹಬ್ಬಗಳನ್ನು ಆಯೋಜಿಸುವುದು.

6. ಮೂಲಭೂತ ಸೌಕರ್ಯಗಳು

ಸರಕಾರವು ಮೂಲಭೂತ ಸೌಕರ್ಯಗಳನ್ನು ಶೀಘ್ರವಾಗಿ ಪೂರೈಸಬೇಕು. ದಾರಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕದ ಜೊತೆಗೆ ಇತರ ಬೇಡಿಕೆಗಳಿಗೂ ಆದ್ಯತೆ ನೀಡಬೇಕು. ಶೌಚಾಲಯ, ಹೊಸ ಮನೆಗಳ ನಿರ್ಮಾಣವಾಗಬೇಕು. ಮನೆಗಳ ನಿರ್ಮಾಣ ವೆಚ್ಚದ ಅನುದಾನವು ಕಾಲಕಾಲಕ್ಕೆ ಪರಿಷ್ಕರಣೆಗೊಳ್ಳಬೇಕು. ಯಾಕೆಂದರೆ ಮನೆ ನಿರ್ಮಾಣದ ಸಾಮಾಗ್ರಿಗಳ ದರಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಗುತ್ತದೆ.

7. ಸ್ವ-ಉದ್ಯೋಗ

ಯುವ ಜನರ ಸ್ವ-ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕನಿಷ್ಠ 10ನೇ ತರಗತಿ ಪಾಸಾದ/ಫೇಲಾದ ಯುವ ಜನರಿಗೆ ನಿರ್ದಿಷ್ಟ ಉದ್ಯೋಗ ಕ್ಷೇತ್ರಗಳಲ್ಲಿ ತರಬೇತಿ ನೀಡಿ, ಉದ್ಯೋಗ ನೀಡಬೇಕು. ಮಾರಾಟ ಕೌಶಲ್ಯ, ಮೊಬೈಲ್ ರಿಪೇರಿ, ಲ್ಯಾಂಡ್ ಲಿಂಕ್ ವ್ಯವಹಾರ, ಪಿಗ್ಮಿ ಸಂಗ್ರಹ ಇತ್ಯಾದಿಗಳ ಜೊತೆಗೆ ವೈಚಾರಿಕ ವಿಚಾರಗಳ ಮಂಡನೆ, ಭಾಷಣ ಕಲೆ, ಚಿತ್ರ ಕಲೆ, ವಾಹನ ಬಿಡಿ ಭಾಗಗಳ ಪರಿಚಯ, ವೆಲ್ಡಿಂಗ್ ಮುಂತಾದ ಸರಳ ವಿಧಾನದ ತರಬೇತಿಗಳ ಮೂಲಕ ಉದ್ಯೋಗ ಕ್ಷೇತ್ರದ ಭರ್ತಿ ಮಾಡುವುದು.

8. ಸರಕಾರಿ ಉದ್ಯೋಗ

ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ವಿವಿಧ ಇಲಾಖೆಗಳಲ್ಲಿ

ಗುಮಾಸ್ತ, ಕಂಪ್ಯೂಟರ್ ಅಪರೇಟರ್, ಲೈಬ್ರೇರಿಯನ್ಸ್ ಮುಂತಾದ ಉದ್ಯೋಗಗಳಿಗೆ ನೇರ ನೇಮಕಾತಿ ಮೂಲಕ ಅವಕಾಶ ನೀಡುವುದು. ನಿರುದ್ಯೋಗ ಭತ್ಯೆ ಅಗತ್ಯವಿಲ್ಲ.

9. ಮಾದರಿ ಬಲೆಪುಗಳ ನಿರ್ಮಾಣ

ಕನಿಷ್ಟ ಇಪ್ಪತ್ತೈದು ಕುಟುಂಬಗಳು ವಾಸವಿರುವ ನಿರ್ದಿಷ್ಟವಾದ ಬಲೆಪುಗಳನ್ನು ಆಯ್ಕೆ ಮಾಡಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಸುಸಜ್ಜಿತವಾದ ವಿವಿಧೋದ್ದೇಶ ಸಭಾಭವನ, ಆಟದ ಮೈದಾನ ಸಹಿತ ಮಾದರಿ ಬಲೆಪುಗಳನ್ನು ನಿರ್ಮಿಸಬೇಕು. ವಿವಿಧ ಕೌಶಲ್ಯಾಭಿವೃದ್ಧಿಗೆ ಅಲ್ಲೇ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಬಹುದು.

10. ಮಹಮ್ಮದ್ ಪೀರ್ ವರದಿಯ ಸಲಹೆಯಂತೆ ಆಸಕ್ತ ವ್ಯಕ್ತಿಗಳಿಗೆ ಕೃಷಿ ಭೂಮಿ ಒದಗಿಸಿ ಪುನರ್ ವಸತಿಗೊಳಿಸುವುದು.
11. ಸಮುದಾಯದ ಮುಖಂಡರು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳ ಸಮಿತಿ ಯೊಂದನ್ನು ರಚಿಸಿ, ಕಾಲಕಾಲಕ್ಕೆ ಸಭೆ ನಡೆಸಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನ ಮಾಡುವುದು. ಐಟಿಡಿಸಿ ಅಧಿಕಾರಿ ಈ ಸಮಿತಿಯ ಕಾರ್ಯದರ್ಶಿ ಯಾಗಿಯೂ, ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುವುದು.
12. ಪಿ.ಯು.ಸಿ ಹಾಗೂ ನಂತರದ(ಎಲ್ಲಾ ವಿಷಯಗಳು) ಶಿಕ್ಷಣವನ್ನೂ ಸಂಪೂರ್ಣ ಉಚಿತವಾಗಿ ನೀಡುವುದು. ಎಸ್.ಎಸ್.ಎಲ್.ಸಿ ವರೆಗಿನ ಡ್ರಾಪ್ ಔಟ್ ಮಕ್ಕಳ ಪುನರ್ ವಸತಿಗೆ ವಿಶೇಷ ಗಮನ ನೀಡಬೇಕು.
13. ಪ್ರತಿ ತಿಂಗಳು ನಿಗದಿತ ದಿನಾಂಕದಂದು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದವರು ಪ್ರತೀ ಕೊರಗ ಗುಂಪುಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಆರೋಗ್ಯ ತಪಾಸಣೆ ನಡೆಸಬೇಕು.
14. ಪೌಷ್ಟಿಕ ಆಹಾರವನ್ನು ಕುಟುಂಬದ ಆದಾಯವನ್ನು ಪರಿಗಣಿಸಿ ಪೂರೈಸಬಹುದು.
15. 14ರಿಂದ 24ರ ವಯೋಮಾನದವರಿಗಾಗಿ ವಿಶೇಷ ರೀತಿಯ (ತಲ್ಲಣ–ಸಂತೃಪ್ತಿ) ಕಾರ್ಯಕ್ರಮಗಳನ್ನು ಆಯೋಜಿಸುವುದು.
16. ಗಿಡಮೂಲಿಕೆಗಳ ಬಗ್ಗೆ ವೈಜ್ಞಾನಿಕ ಕಾರ್ಯಗಾರಗಳನ್ನು ಆಯೋಜಿಸುವುದು.
17. ವಿಶೇಷ ಮಹಿಳಾ ಅದಾಲತ್‌ಳನ್ನು ಸಂಘಟನೆಗಳ ಮೂಲಕ ಏರ್ಪಡಿಸುವುದು.
18. ಭಾಷೆಯ ಉಳಿವಿಗಾಗಿ ವಿಶೇಷ ಕಾರ್ಯಗಾರಗಳನ್ನು ಆಯೋಜಿಸುವುದು. ನಾಲ್ಕು ಉಪಭಾಷೆಗಳ ವೈಜ್ಞಾನಿಕ ಅಧ್ಯಯನ, ಪ್ರಕಟಣೆ ಹಾಗೂ ಪ್ರಚಾರ ಮಾಡುವುದು. ಶಾಲಾ ಪಠ್ಯಗಳಲ್ಲಿ ಕೊರಗ ಸಮುದಾಯದ ಪರಿಚಯ ಪಾಠ ಬರುವಂತೆ ಕಾರ್ಯಸೂಚಿ ರೂಪಿಸುವುದು.
19. ಕೊರಗ ಸಮುದಾಯದ ಇತಿಹಾಸದ ಬಗ್ಗೆ ಸಮಗ್ರ ಅಧ್ಯಯನಕ್ಕೆ ತಜ್ಞರ ಸಮಿತಿ

ರಚನೆ ಮತ್ತು ಅಧ್ಯಯನ ನಡೆಸುವುದು.

20. ಸಮುದಾಯದ ಯುವ ಬರಹಗಾರರ ಕಮ್ಮಟಗಳನ್ನು ಏರ್ಪಡಿಸುವುದು.
21. ಮೌಲ್ಯಯುತ, ಬಲಿಷ್ಟವಾದ ಸ್ವತಂತ್ರ ಕೊರಗ ಸಮಾಜದ ನಿರ್ಮಾಣಕ್ಕೆ ಬದ್ಧತೆ ಇರುವ ಸಮುದಾಯದ ಮುಖಂಡರು ಒಂದೇ ವೇದಿಕೆಗೆ ಬಂದು ಒಗ್ಗಟ್ಟು ಪ್ರದರ್ಶಿಸುವುದು.

ಸಮುದಾಯದ ಸಂಘಟನೆಯ ಪ್ರಸಕ್ತ ಮುಂಚೂಣಿ ನಾಯಕರು

1. ಗೌರಿ ಕೆಂಜೂರು, ಕೆಂಜೂರು – ಉಡುಪಿ, (ಮೊಬೈಲ್ ಸಂ: 9481749026)
2. ಸುಶೀಲಾ ನಾಡ, ನಾಡಾ – ಕುಂದಾಪುರ, (ಮೊ.ಸಂ: 9902199267)
3. ಸುಮತಿ – ಬೇಳಾ, ಬೇಳಾ – ಕಾಸರಗೋಡು, (ಮೊ.ಸಂ: 8129885388)
4. ಪಿ. ಶಶಿಕಲಾ, ಸಚ್ಚೇರಿಪೇಟೆ – ಕಾರ್ಕಳ, (ಮೊ.ಸಂ: 8748032282)
5. ಮತ್ತಡಿ ಕಾಯರ್‌ಪಲ್ಕೆ, ಸರಪಾಡಿ – ಬಂಟ್ವಾಳ, (ಮೊ.ಸಂ : 9449452255)
6. ಗಣೇಶ ವಿ. ಕೊರಗ, ಕುಂದಾಪುರ, (ಮೊ.ಸಂ: 9845857701)
7. ಮೋಹನ್ ಅಡ್ವೆ. ನಂದಿಕೂರು – ಉಡುಪಿ, (ಮೊ.ಸಂ: 9449857288)
8. ಎಂ. ಸುಂದರ್ ಬೆಳುವಾಯಿ, ವಾಮಂಜೂರು – ಮಂಗಳೂರು (ಮೊ.ಸಂ: 7259470252)
9. ಗಣೇಶ ಕೊರಗ, ಬಾರ್ಕೂರು – ಉಡುಪಿ, (ಮೊ.ಸಂ: 9481143959)
10. ಕೊಗ್ಗ ಕೋಡಿಕಲ್, ಕೋಡಿಕಲ್ – ಮಂಗಳೂರು, (ಮೊ.ಸಂ: 9900996465)
11. ಸಂಜೀವ ಮೂಡಬಿದ್ರೆ, ಮೂಡಬಿದ್ರೆ, (ಮೊ.ಸಂ: 9071574415)
12. ಪುತ್ರ. ಕೆ ಬಡಾಗುಡ್ಡೆ, ಹೆಬ್ರಿ – ಕಾರ್ಕಳ, (ಮೊ.ಸಂ: 9980768603)
13. ನೀಲು ಕಳ್ತೂರು, ಕಳ್ತೂರು – ಉಡುಪಿ, (ಮೊ.ಸಂ: 9980768552)
14. ಸುಶೀಲಾ ಕೆಂಜೂರು, ಕೆಂಜೂರು – ಉಡುಪಿ
15. ಶಶಿಕಲಾ ಕೋಡಿಕಲ್, ಕೋಡಿಕಲ್ – ಮಂಗಳೂರು, (ಮೊ.ಸಂ: 9164415852)
16. ಸುಶೀಲ ಕೆಮ್ಮಡೆ, ಮೆನ್ನಬೆಟ್ಟು – ಕಿನ್ನಿಗೋಳಿ
17. ಬಾಲ್‌ರಾಜ್ ಕೋಡಿಕಲ್, ಕೋಡಿಕಲ್ – ಮಂಗಳೂರು, (ಮೊ.ಸಂ: 9008218221)
18. ಸುರೇಶ ತಜೆ, ಎಲ್ಲೂರು – ಉಡುಪಿ, (ಮೊ.ಸಂ: 9513945204)
19. ರಂಗ ಬೆಳ್ಮಣ್ಣು, ಇನ್ನಾ – ಕಾರ್ಕಳ, (ಮೊ.ಸಂ: 9480231027)
20. ರಮೇಶ್ ಕೆ. ಮಂಚಕಲ್ಲು, ಪಿಲಿಕುಲ – ಮಂಗಳೂರು, (ಮೊ.ಸಂ: 9148731073)
21. ಅಮ್ಮಣಿ ಅಬ್ಲಿಕಟ್ಟೆ, ಅಬ್ಲಿಕಟ್ಟೆ – ಕುಂದಾಪುರ, (ಮೊ.ಸಂ: 9663531106)
22. ಸುಮಂಗಳ ಮಧುವನ, ಕೋಟಾ – ಉಡುಪಿ, (ಮೊ.ಸಂ: 7022091453)
23. ದಿವಾಕರ ಕಳ್ತೂರು, 108 ಕಳ್ತೂರು – ಉಡುಪಿ, (ಮೊ.ಸಂ: 9611799262)
24. ರಮೇಶ ಗುಂಡಾವು, ಬಜ್ಪೆ – ಮಂಗಳೂರು, (ಮೊ.ಸಂ: 9449936755)

25. ಕುಡುಪ ಸಚ್ಚೇರಿಪೇಟೆ, ಮುಂಡ್ಕೂರು – ಕಾರ್ಕಳ, (ಮೊ.ಸಂ: 9731659815)
26. ಪಿ. ಶಂಕರ ಕಾಡಬೆಟ್ಟು, ಕಾಡಬೆಟ್ಟು – ಉಡುಪಿ, (ಮೊ.ಸಂ: 7760242024)
27. ಲಕ್ಷ್ಮಣ್ ಬೈಂದೂರು, ಬೈಂದೂರು – ಕುಂದಾಪುರ, (ಮೊ.ಸಂ: 9986446332)
28. ಶೇಖರ ಮರವಂತೆ , ಮರವಂತೆ – ಕುಂದಾಪುರ, (ಮೊ.ಸಂ: 9844989469)
29. ಲಕ್ಷ್ಮಣ್ ವಾಮಂಜೂರ್, ವಾಮಂಜೂರು – ಮಂಗಳೂರು (ಮೊ.ಸಂ : 9481346088)
30. ದಿನೇಶ ಕೆಂಜೂರು, ಕೆಂಜೂರು – ಉಡುಪಿ, (ಮೊ.ಸಂ: 9740937633)
31. ಮನೋಜ್ ಕೋಡಿಕಲ್, ಕೋಡಿಕಲ್ – ಮಂಗಳೂರು, (ಮೊ.ಸಂ: 9743467713)
32. ಸಂದೀಪ್ ಕೋಡಿಕಲ್, ಕೋಡಿಕಲ್–ಮಂಗಳೂರು, (ಮೊ.ಸಂ: 9880230051)
33. ಗೌತಮ್ ಕಾರ್ಕಳ, ಬೊಬ್ಬಳ – ಕಾರ್ಕಳ, (ಮೊ.ಸಂ: 8748027591)
34. ಬೊಗ್ರ ಕೊರಗ, ಕೊಕ್ಕರ್ಣೆ – ಉಡುಪಿ, (ಮೊ.ಸಂ: 8970390133)
35. ವಿಶ್ವನಾಥ ಪಿಲಿಕುಲ, ಎದುರುಪದವು – ಮಂಗಳೂರು (ಮೊ.ಸಂ: 9480063406)
36. ಸಂಜೀವ ನೇಜಾರ್, ಜಕಲ್ಯಾಣಪುರ – ಉಡುಪಿ, (ಮೊ.ಸಂ: 9945796588)
37. ರೋಬರ್ಟ್ ಕೊರಗ, ಪಾವೂರು – ಮಂಜೇಶ್ವರ (ಕೇರಳ) (ಮೊ.ಸಂ: 09995514362)
38. ಕುಮಾರ್‌ದಾಸ್, ಹಾಲಾಡಿ – ಕುಂದಾಪುರ, (ಮೊ.ಸಂ: 9448911413)
39. ಅಶೋಕ ಕಡಾರಿ, ಬಜಗೋಳಿ – ಕಾರ್ಕಳ,
40. ಸುಂದರ ಗುತ್ತಕಾಡು, ಕಿನ್ನಿಗೋಳಿ – ಮಂಗಳೂರು, (ಮೊ.ಸಂ: 9945219962)
41. ಸುರೇಶ ಯಳಜಿತ್, ಯಳಜಿತ್ – ಕುಂದಾಪುರ, (ಮೊ.ಸಂ: 9611607363)
42. ರಮೇಶ ಕಡಾರಿ, ಬಜಗೋಳಿ – ಕಾರ್ಕಳ, (ಮೊ.ಸಂ: 9972718511)

ಭಾರತದಲ್ಲಿರುವ ಪ್ರಿಮಿಟಿವ್ ಟ್ರೈಬ್ಸ್ ಗ್ರೂಪ್

1. ಆಂಧ್ರ ಪ್ರದೇಶ – ಬೋಡೊ ಗಡಬ, ಬೋಂಡ್ ಪೊರಾಜ, ಕೋಂದ್ ಪೊರಾಜ, ಡೊಗಂರಿಯಾ ಕೋಂದ್, ಗುಟೋಬ್ ಗಡಬ, ಚೆಂಚು, ಕೋಲಂ, ಕೊಂಡರೆಡ್ಡಿ, ಕೊಂಡ ಸವರ, ಕುಟ್ಟಿಯಾ ಕೋಂದ್, ಪಾರಂಗಿ ಪೆರ್ಜ, ತೋಟಿ
2. ಬಿಹಾರ್ / ಜಾರ್ಖಂಡ್ – ಅಸುರ, ಬಿರ್‌ಹೋರ್, ಬಿರ್ಜಿಯಾ, ಬೆಟ್ಟಕಾರಿಯ, ಕೊರ್ವಾ, ಪಹಾರಿಯಾ, ಸಾವುರಿಯಾ ಪಹಾರಿಯಾ, ಸವರ
3. ಗುಜಾರಾತ್ – ಕತೋಡಿ, ಕೊತ್ವಾಲಿಯ, ಪಧಾರ, ಸಿದ್ಧಿ, ಕೋಲ್ಘ
4. ಕರ್ನಾಟಕ – ಜೇನು ಕುರುಬ, ಕೊರಗ
5. ಕೇರಳ – ಚೋಳನಾಯಕನ್, ಕಟ್ಟು ನಾಯಕನ್, ಕುರುಂಬರು, ಕೊರಗ
6. ಮಧ್ಯಪ್ರದೇಶ / ಚತ್ತೀಸ್‌ಗಡ – ಅಬುಝು ಮರಿಯ, ಬೈಗ, ಭಾರಿಯ, ಬೆಟ್ಟ ಕೊರವ, ಕಮಾರ, ಸಹಾರಿಯಾ, ಬಿಹೋರ್
7. ಮಹಾರಾಷ್ಟ್ರ – ಕಟ್‌ಕಾರಿಯಾ (ಕತೋಡಿ), ಕೋಲಂ. ಮರಿಯಗೋಂಡ್
8. ಮಣಿಪುರ – ಮಾರಂನಾಗ
9. ಒರಿಸ್ಸಾ – ಬಿಹೋರ್, ಬೋಂಡೋ ದಿದಾಯಿ, ಡೋಂಗ್ರಿಯಾ ಕೋಂದ್, ಜಾಂಗ್, ಖಾರಿಯಾ, ಕುಟಿಯಾ ಕೋಂದ್, ಲಾಂಜಿಯಾ ಸಾವುರ, ಲೋಡ, ಮಂಕಿರ್ಡಿಯಾ, ಪೌಡಿಭೂಯಾನ್, ಸಾವುರ, ಚುಕ್ಟಿಯಾ ಭುಂಜಿಯಾ
10. ರಾಜಸ್ಥಾನ – ಸೆಹರಿಯಾ
11. ತಮಿಳುನಡು – ಕಟ್ಟು ನಿಖಾನ್, ಕೋಟ, ಕುರುಂಬ, ಇರುಳ, ಪಣಿಯನ್, ತೋಡ
12. ತ್ರಿಪುರ – ರಿಯಾಂಗ್
13. ಉತ್ತರಪ್ರದೇಶ/ಉತ್ತರಾಂಚಲ – ಬುಕ್ಸಾ, ರಾಜಿ
14. ಪಶ್ಚಿಮ ಬಂಗಾಲ – ಬಿಹೋರ್, ಲೋಡ, ತೋಟೋ
15. ಅಂಡಮಾನ್/ನಿಕೋಬಾರ್ – ಅಂಡಮಾನ್, ಜಾರವ, ಓಂಗೆ, ಸೆಂಟೆನೆಲ್, ಶೋಂಪೆನ್

ಕೃಪೆ : Dr. N.C SAXENA, MR. S.R SANKARAN. COMMISSIONERS OF THE SUPREME COURT. IN THE CASE : PUCL V/S UOI & ORS, WRIT PITITION. (Eivil) No : 196 of 2001

ಆಧಾರ ಗ್ರಂಥಗಳು

1. ತುಳು ಪಾತೆರೊ

– ಬುಧಾನಂದ ಶಿವಳ್ಳಿ

2. ಬುಡಕಟ್ಟು ಅಧ್ಯಯನ – ಸಂಪುಟ 6.

– ಪ್ರೊಫೆಸರ್ ಕೇಶವನ್ ಪ್ರಸಾದ್ ಕೆ. ಮರವಟ್ಟಿ

3. ಕೊರಗ ಸಮುದಾಯದಲ್ಲಿ ಶಿಕ್ಷಣ

– ಸಂಜು (ಸ. ಗ್ರಾ. ಆಶ್ರಮ)

4. ಕೊರಗ ಸಮುದಾಯ – ಆಧುನಿಕ ಮುಖಾಮುಖಿ

– ಡಾ। ಎಚ್. ನಾಗವೇಣಿ (ಪುಸ್ತಕ : ಬುಡಕಟ್ಟು ಅಧ್ಯಯನ ಸಂಪುಟ – 4)

5. ಬುಡಕಟ್ಟು ಅಧ್ಯಯನ – ಸಂಪುಟ 3, ಸಂಚಿಕೆ 2

– ಡಾ। ಕೆ. ಎಂ. ಮೈತ್ರಿ

6. ಐಟಿಡಿಪಿ ಉಡುಪಿ ಮತ್ತು ಸಮಗ್ರ ಗ್ರಾಮೀಣ ಆಶ್ರಮ – ಕಾಪು

– ಜಂಟಿಯಾಗಿ ನಡೆಸಿದ ಜನಗಣತಿ ವರದಿ–2007

7. ಮೌನ ಮಾತಾದಾಗ

– ಗುಣಪಾಲ ಶೆಟ್ಟಿ

8. ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ

– ಪಿ. ಕಮಲಾಕ್ಷ

9. ತುಳುನಾಡಿನ ಜಲಪ್ರಳಯ ಹಾಗೂ 'ಕೊರ' ಜನಾಂಗ (ಲೇಖನ)

– ಇರ್ವತ್ತೂರು ಗೋವಿಂದ ಭಂಡಾರಿ

10. ಸಮುದಾಯದ ಹಿರಿಯರು, ನಾಯಕರು ಹೇಳಿದ ಬಾಯ್ದೆರೆ ಕತೆಗಳು, ಮಾಹಿತಿಗಳು.

ಉಡುಪಿ ತಾಲೂಕಿನ ಪಾಂಗಾಳದಲ್ಲಿ ಜನಿಸಿದ ಇವರು ಇನ್ನಂಜೆ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸದ ಬಳಿಕ ಮಂಗಳೂರಿನ ಗೋಕರ್ಣನಾಥೇಶ್ವರ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದವರು. ವಿದ್ಯಾಭ್ಯಾಸದ ಬಳಿಕ ಬೆಳ್ಮಣ್ಣಿನ ಕೊರಗ ಮಹಿಳೆಯರ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಕೆಲವು ವರ್ಷ ಕಾರ್ಯದರ್ಶಿಯಾಗಿ ದುಡಿದು ಪ್ರಸ್ತುತ ಮಲ್ಲಿಗೆ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗಿ ಕೊರಗ ಸಂಘಟನೆಗಳಲ್ಲಿ ಸಕ್ರೀಯವಾಗಿದ್ದು ಕೊರಗರ ಅಭಿವೃದ್ಧಿ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿಯೂ, ಕೋಶಾಧಿಕಾರಿಯಾಗಿಯೂ ಸೇವೆಸಲ್ಲಿಸಿದ ಇವರು ಮಂಗಳೂರಿನ ಪ್ರತಿಷ್ಠಿತ ಕೊರಲ್ ಕಲಾ ತಂಡದ ಸದಸ್ಯರಾಗಿಯೂ, ಉಡುಪಿಯ ನವೋದಯ ಕೊರಗರ ಸಾಂಸ್ಕೃತಿಕ ಕಲಾ ತಂಡದ ಮುಖ್ಯಸ್ಥರಾಗಿ ಸೇವೆಸಲ್ಲಿಸುತ್ತಿದ್ದು ಸಮುದಾಯದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುತ್ತಾರೆ.

ಹಲವಾರು ಲೇಖನಗಳನ್ನು ಪ್ರಕಟಿಸಿರುವ ಇವರು ಕೊರಗರ ಅಜಲು (2001) ಹಾಗೂ ಕೊರ್‍ರೆನ ಬಾಸೆ (2011) ಎಂಬ ಕೃತಿಗಳನ್ನು ಹೊರ ತಂದಿದ್ದಾರೆ. 'ಬೆಳಗಿದ ಬಲೆಪು' ಎಂಬ ಕಾದಂಬರಿಯು ಪ್ರಕಟಣೆಗೆ ಸಿದ್ಧವಿದೆ.

ಆದಿ ಬುಡ ಮೂಲ ಸಮುದಾಯ ಕೊರಗರು(ಸಮಗ್ರ ಚಿತ್ರಣ) ಎಂಬ ಕೃತಿಯು ಅವರ ಸಮುದಾಯದ ಬದುಕಿನ ಚಿತ್ರಣವಾಗಿದೆ. ತನ್ನ ಸಮುದಾಯದ ನೋವು ನಲಿವುಗಳ ಮಧ್ಯೆ ಜೀವನ ಮಾಡಿರುವ ಇವರು ಹಿರಿಯರಿಂದ ತಿಳಿದ ತನ್ನ ಸಮುದಾಯದ ಚಿತ್ರಣದ ಜೊತೆಗೆ ತಾನು ಸಮುದಾಯದ ಬಗ್ಗೆ ಅಭ್ಯಸಿಸಿ ದಾಖಲೀಕರಿಸಿದ ಕೃತಿ ಇದಾಗಿದೆ. ಸಮುದಾಯದ ಅಳಿವು ಉಳಿವುಗಳ ಬಗ್ಗೆ ಚಿಂತನೆ ಹುಟ್ಟಿಸುವುದರ ಬಗ್ಗೆ ಮಾತ್ರವಲ್ಲದೆ ಸಮುದಾಯದ ಬೆಳವಣಿಗೆಗೆ ಈ ಕೃತಿ ಒಂದು ಮಾದರಿಯಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ.

ಬೆನೆಟ್ ಜಿ. ಅಮ್ಮನ್ನ
ಪತ್ರಾಗಾರ ಸಹಾಯಕ
ಕರ್ನಾಟಕ ತಿಯೊಲಾಜಿಕಲ್ ಕಾಲೇಜ್, ಮಂಗಳೂರು

ಬೆಲೆ ರೂ. 175